" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

# ಕರ್ನಾಟಕ ವಿಧಾನ ಪರಿಷತ್ತು

19ನೇ ಫೆಬ್ರವರಿ 2020
ಬುಧವಾರ

## ವಿಷಯಾನುಕ್ರಮಣಿಕೆ

1. ನೂತರ ಸಚಿವರ ಪರಿಚಯ
2. ಮಂಗಳೂರಿನ ಗಲಭೆಯಲ್ಲಿ ಮೃತರಾದ ಕುಟುಂಬದವರಿಗೆ ಪರಿಹಾರ ನೀಡುವ ಬಗ್ಗೆ
   ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
   ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

3. ಸಭೆಯ ಮುಂದಿಡಲಾದ ಕಾಗದಪತ್ರಗಳು
4. ಪ್ರಕಟಣೆ
5. ನಿಯಮ 330ಎ ಅಡಿಯಲ್ಲಿ ವಿಶೇಷ ಪ್ರಸ್ತಾವಗಳು

ಅ) ಶ್ರೀ ಕ್ಷೇತ್ರ ಮಲೈಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಹಬ್ಬದ ವೇಳೆ ಲಕ್ಷಾಂತರ ಜನರು ಭೇಟಿ ನೀಡುವ ಹಿನ್ನೆಲೆಯಲ್ಲಿ ಭಕ್ತಾದಿಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸುವ ಬಗ್ಗೆ.

ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಆ) ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯದೆ ನಿಲ್ಲಿಸಿರುವುದರಿಂದ ಕಬ್ಬು ಬೆಳೆಗಾರರು ಆತಂಕಕ್ಕೆ ಒಳಗಾಗಿರುವ ಬಗ್ಗೆ.

ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಇ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ರೇಬಿಸ್ ಕಾಯಿಲೆಯಿಂದ ಐದು ಜನರು ಬಲಿಯಾಗಿರುವುದರಿಂದ, ಬಾಕಿ ಉಳಿದಿರುವ ನಾಯಿಗಳಿಗೆ ಆಂಟಿ ವೈರಸ್ ವ್ಯಾಕ್ಸಿನ್ ಲಸಿಕೆಯನ್ನು ಹಾಕುವ ಬಗ್ಗೆ.

ಡಾ:ಜಯಮಾಲ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಈ) ಕಾರವಾರ ಮತ್ತು ಶಿರಸಿ ಶೈಕ್ಷಣಿಕ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ಶಾಲಾ ಉಪಾಧ್ಯಾಯರುಗಳು ಏಪ್ರಾನ್ ಖರೀದಿ ಮಾಡಿರುವ ಬಗ್ಗೆ.

ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉ) ಉಕ್ಕಿ ಹರಿದ ನೆರೆಗೆ ಬದುಕು ಕಳೆದುಕೊಂಡ ನೆರೆ ಸಂತ್ರಸ್ಥರಿಗೆ ದಾನಿಗಳು ಕೊಟ್ಟಿದ್ದನ್ನು ತಲುಪಿಸುವಲ್ಲಿ ಧಾರವಾಡ ಜಿಲ್ಲಾಧಿಕಾರಿ ವಿಫಲವಾಗಿರುವ ಬಗ್ಗೆ.**

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಮಾನೆ ಶ್ರೀನಿವಾಸ್
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**6. <u>ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ</u>**

**ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

ಡಾ: ಜಯಮಾಲ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ತಿಪ್ಪಣ್ಣ ಕಮಕನೂರ
ಶ್ರೀ ಆರ್.ಬಿ.ತಿಮ್ಮಾಪೂರ

**7. ನೂತನ ಸಚಿವರ ಪರಿಚಯ**

**8. <u>ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ</u>**

**ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

ಶ್ರೀ ನಸೀರ್ ಅಹ್ಮದ್
ಶ್ರೀ ಬಿ.ಎಂ.ಫಾರೂಖ್
ಶ್ರೀ ಪ್ರಕಾಶ್ ಕೆ.ರಾಥೋಡ್
ಶ್ರೀ ಸಿ.ಎಂ.ಇಬ್ರಾಹಿಂ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಪಿ.ಆರ್.ರಮೇಶ್

**9. ಸದನದಲ್ಲಿ ಹಾಜರಿರಬೇಕಾದ ಅಧಿಕಾರಿಗಳ ಪಟ್ಟಿಯಂತೆ ಅಧಿಕಾರಿಗಳು ಹಾಜರಿಲ್ಲದಿರುವ ಬಗ್ಗೆ.**

ಶ್ರೀ ಐವನ್ ಡಿ'ಸೋಜಾ
ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**10. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ**

**ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

ಶ್ರೀ ಪಿ.ಆರ್.ರಮೇಶ್
ಶ್ರೀ ಎಂ.ಕೆ.ಪ್ರಾಣೇಶ್

**11. ನಿಯಮ 330ಎ ಅಡಿಯಲ್ಲಿ ಪ್ರಸ್ತಾಪಿಸಲಾಗಿದ್ದ ವಿಶೇಷ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ.**

**ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ತೊಗರಿ ಖರೀದಿಯನ್ನು 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್‌ಗೆ ಹೆಚ್ಚಿಸುವ ಬಗ್ಗೆ.**

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಸಹಕಾರ ಸಚಿವರ ಪರವಾಗಿ)

**12. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ**

**ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

ಶ್ರೀ ಎಂ.ನಾರಾಯಣಸ್ವಾಮಿ
ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)
ಶ್ರೀ ಅರುಣ ಶಹಾಪುರ
ಶ್ರೀ ಎಂ.ಕೆ.ಪ್ರಾಣೇಶ್
ಶ್ರೀ ಹೆಚ್.ಎಂ.ರೇವಣ್ಣ
ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)
ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವರು)
ಶ್ರೀ ಲಹರ್ ಸಿಂಗ್ ಸಿರೋಯಾ
ಶ್ರೀ ಪ್ರಕಾಶ್ ಕೆ.ರಾಥೋಡ್
ಶ್ರೀ ಹೆಚ್.ಎಂ.ರಮೇಶ್ ಗೌಡ

**13. ಅರ್ಜಿಯನ್ನೊಪ್ಪಿಸುವುದು**
**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**14.** **ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ**

**ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

ಶ್ರೀ ಆಯನೂರು ಮಂಜುನಾಥ್
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

~~~~~~~~

(45)19–2–2020/11.10/ಎಂ.ಎಂ–ಜಿ.ಆರ್

**ಕರ್ನಾಟಕ ವಿಧಾನ ಪರಿಷತ್ತು**

***ಬುಧವಾರ, 19ನೇ ಫೆಬ್ರವರಿ 2020***

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”
~~~~~~~~

## 1. ನೂತನ ಸಚಿವರ ಪರಿಚಯ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರಾದ ಶ್ರೀ ರಮೇಶ್ ಲಕ್ಷ್ಮಣರಾವ್ ಜಾರಕಿಹೊಳಿ ಅವರು ಸದನಕ್ಕೆ ಬಂದಿದ್ದಾರೆ ಅವರನ್ನು ತಮ್ಮ ಮುಖಾಂತರ ಸದನಕ್ಕೆ ಪರಿಚಯಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಮತ್ತು ಶ್ರೀ ಕೆ. ಹರೀಶ್ ಕುಮಾರ್‌ರವರು ಮಂಗಳೂರಿನಲ್ಲಿ ನಡೆದ ಗೋಲಿಬಾರ್‌ನಲ್ಲಿ ಯಾರು ಮೃತರಾಗಿದ್ದಾರೆಯೋ ಅವರ ಕುಟುಂಬ ವರ್ಗದವರಿಗೆ ಪರಿಹಾರವನ್ನು ಕೊಡಬೇಕೆಂದು ನೆನ್ನೆಯ ದಿವಸ ಕೇಳಿದ್ದವು, ಇದಕ್ಕೆ ಸರ್ಕಾರ ಉತ್ತರ ಕೊಡಬೇಕೆಂದು ಪ್ರತಿಭಟಿಸಿ ಸದನದ ಬಾವಿಗೆ ಬಂದರು)**

## 2. ಮಂಗಳೂರಿನ ಗಲಭೆಯಲ್ಲಿ ಮೃತರಾದ ಕುಟುಂಬದವರಿಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮ ನಿಯಮಗಳ ಪ್ರಕಾರ ಬಾವಿಯಲ್ಲಿ ನಿಂತುಕೊಂಡು ಮಾತನಾಡುವ ಸಂಪ್ರದಾಯಗಳು ಸರಿಯಲ್ಲ ದಯವಿಟ್ಟು ತಾವು ಆದೇಶ ಕೊಡಬೇಕು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, I will speak.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇದನ್ನು ತಾವೇ ಹೇಳಿಕೊಟ್ಟಿರುವುದು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಾವು ಏನಾದರೂ ಮಾತನಾಡುವುದಕ್ಕೆ ಅವಕಾಶವಿದ್ದರೆ;

**ಶ್ರೀ ಎಸ್.ಆರ್. ಪಾಟೀಲ್:–** ನಾವು ಯಾವಾಗಲಾದರೂ ಒಮ್ಮೆ ಬಾವಿಯಲ್ಲಿ ನಿಂತುಕೊಂಡು ಮಾತನಾಡಿದ್ದೇವೆ, ಆದರೆ ತಾವು ಖಾಯಂ ಆಗಿ ಬಾವಿಯಲ್ಲಿ ನಿಂತು ಮಾತನಾಡಿದ್ದೀರಿ ಆ ಮಾತು ಬೇರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮೊದಲು ನೀವು ಹೇಳಿಕೊಟ್ಟ ರೀತಿ ಯಾರಾದರೂ ಮಾತನಾಡಬೇಕಾದರೆ ಮಾನ್ಯ ಸಭಾಪತಿಯವರ ಅನುಮತಿ ಪಡೆದುಕೊಂಡು ಅವರ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸ್ಥಾನಕ್ಕೆ ಹೋಗಿ ಮಾತನಾಡಬೇಕು ಎಂದು ಹೇಳಿದ್ದೀರಿ. ಅದನ್ನು ನೆನಪು ಮಾಡುತ್ತಿದ್ದೇನೆ ಅಷ್ಟೇ ಹೊಸದೇನೂ ಹೇಳಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಎಷ್ಟು ಸಲ ಹೇಳಿದರೂ ಆಗ ನಮ್ಮ ಮಾತನ್ನು ನೀವು ಕೇಳಲೇ ಇಲ್ಲ. ನಿನ್ನೆ ಮುಗ್ಧರು ಎಂದು ಏನು ಮಾತನಾಡಿದ್ದೆವು ಅವರ ಬಗ್ಗೆ ಶ್ರೀ ರವಿಕುಮಾರ್‌ರವರು ಕೂಡ ತಮ್ಮ ಮಾತನ್ನು ಹಿಂಪಡೆದುಕೊಂಡು regret express ಮಾಡಿದ್ದಾರೆ. ಆ ಮುಗ್ಧರ ಮೇಲೆ ಕೇಸ್ ರಿಜಿಸ್ಟರ್ ಆಗಿದ್ದಕ್ಕೆ ಅವರಿಗೆ compensation withhold ಮಾಡಿದ್ದಾರೆ ಮಾನ್ಯ ಮುಖ್ಯಮಂತ್ರಿಯವರು ದಿನಾಂಕ 21–12–2019ರಂದು ಘೋಷಣೆ ಮಾಡಿದ್ದಾರೆ. ದಿನಾಂಕ 24–12–2019ಕ್ಕೆ ಅದೇ ಮುಖ್ಯಮಂತ್ರಿಯವರು ಅವರಿಗೆ ನಾವು ಪರಿಹಾರ ಧನವನ್ನು ಕೊಡುವುದಿಲ್ಲ ಎಂದು ಹೇಳಿದರು. ಏಕೆ ಪರಿಹಾರ ಕೊಡುವುದಿಲ್ಲ? They are entitled for compensation. Nobody is paying from their pocket. They are paying it from the state exchequer. They are innocent, ಅವರು ಅನಾವಶ್ಯಕವಾಗಿ ಸತ್ತು ಹೋಗಿದ್ದಾರೆ. ಆ ಮುಗ್ಧರಿಬ್ಬರಲ್ಲಿ ಒಬ್ಬರು ಗ್ಯಾರೇಜ್‌ನಲ್ಲಿ ಕೆಲಸ ಮಾಡುವವರು ಇನ್ನೊಬ್ಬರು ಮೀನು ಹೊರುವ ಕೆಲಸ ಮಾಡುವ ವ್ಯಕ್ತಿಯಾಗಿದ್ದಾರೆ. ಅವರು ಬಡವರು earning hand of that family ಇಲ್ಲದಂತಾಗಿದೆ. ಮನೆಯಲ್ಲಿ ಯಾರೂ ದುಡಿಯುವವರಿಲ್ಲದೇ ಕುಟುಂಬದ ಯಜಮಾನನೇ ಸತ್ತು ಹೋಗಿದ್ದಾನೆ. Actually, both the families are virtually on the street. ಅವರು ರಸ್ತೆ ಮೇಲೆ ಬಂದಂತಾಗಿದೆ. ಅದಕ್ಕೆ ಅವರಿಗೆ ಕೊಡಬೇಕಾಗಿರುವ ಪರಿಹಾರಧನವನ್ನು ಸರ್ಕಾರ ಘೋಷಣೆ ಮಾಡಬೇಕೆಂದು ಆ ವಿಚಾರವನ್ನಿಟ್ಟುಕೊಂಡು ಶ್ರೀ ಐವನ್ ಡಿ'ಸೋಜಾರವರು ಮತ್ತು ಸ್ನೇಹಿತರು ಬಾವಿಯಲ್ಲಿ ಇಳಿದಿದ್ದಾರೆ. ಮಾನ್ಯ ಸಭಾನಾಯಕರು ಸರ್ಕಾರದ ಪರವಾಗಿ ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಿನ್ನೆ ಕೂಡ ಸರ್ಕಾರ ಸ್ಪಷ್ಟವಾಗಿ ಹೇಳಿದೆ. ನಿಲುವಳಿ ಸೂಚನೆ ಬಗ್ಗೆ ಮಾನ್ಯ ಗೃಹಸಚಿವರು ಉತ್ತರ ಕೊಡುತ್ತಾರೆ ಆಗ ಇದನ್ನು ಅವರ ಗಮನಕ್ಕೆ ತಂದು ಇವರ ಬೇಡಿಕೆಯನ್ನಿಡುತ್ತೇವೆ ಸರ್ಕಾರ ಪರಿಶೀಲನೆ ಮಾಡಿ ಉತ್ತರ ಕೊಡುತ್ತದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ತಾವು ನಿನ್ನೆ ಏನು ಹೇಳಿದಿರಿ ಅದೆಲ್ಲವನ್ನೂ ಗಮನಿಸಲಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾನಾಯಕರೇ ಈ ವಿಷಯದ ಬಗ್ಗೆ ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುತ್ತೀರಾ?

**ಶ್ರೀ ಎಸ್.ಆರ್. ಪಾಟೀಲ್:–** ಕನಿಷ್ಟ ಪಕ್ಷ ನಿಮ್ಮ ಜವಾಬ್ದಾರಿಯನ್ನಾದರೂ ತೆಗೆದುಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಇವರ ಬಗ್ಗೆ ಮಾನ್ಯ ಸದಸ್ಯರು ಎತ್ತಿರುವ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿಸುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಗೃಹ ಸಚಿವರಿಗೆ ಈ ಘಟನೆ ಬಗ್ಗೆ ವರದಿ ಕೊಟ್ಟು ಖಂಡಿತವಾಗಿ ಉತ್ತರ ಕೊಡಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಮ್ಮ ಸ್ಥಾನಗಳಿಗೆ ಮರಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಉತ್ತರ ಕೊಡುವಂತಹ ಸಂದರ್ಭದಲ್ಲಿ positive ಆಗಿ reply ಮಾಡುತ್ತೇವೆ ಎಂದು ಸಭಾನಾಯಕರು ಹೇಳಿದ್ದಾರೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಅವರು ಮತ್ತು ಶ್ರೀ ಕೆ. ಹರೀಶ್ ಕುಮಾರ್‌ರವರು ಸದನದ ಬಾವಿಯಿಂದ ಸ್ವಸ್ಥಾನಕ್ಕೆ ತೆರಳಿದರು)**

## 3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಭಾರತದ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು 31ನೇ ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ವರದಿಯನ್ನು 2019ನೇ ವರ್ಷದ ವರದಿ ಸಂಖ್ಯೆ–5 ನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

## 4. ಪ್ರಕಟಣೆ

**ಸಭಾಪತಿಯವರು:–** ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ಪ್ರಕಾರ ಸದನದಲ್ಲಿ ನಿಯಮ 330ಎ ಅಡಿಯಲ್ಲಿ ಪ್ರಸ್ತಾಪಿಸಲು ಸಲ್ಲಿಸಿರುವ ವಿಶೇಷ ಪ್ರಸ್ತಾವನೆಗಳನ್ನು 200 ಪದಗಳಿಗೆ ಮೀರದಂತೆ ಹಾಗೂ ಇತ್ತೀಚಿನ ಘಟನೆಗಳ ಪ್ರಮುಖ ವಿಷಯಗಳ ಸೂಕ್ತ ದಾಖಲಾತಿಗಳೊಂದಿಗೆ ಮಾತ್ರ ಮಂಡಿಸುವಂತೆ ಈ ಮೂಲಕ ಎಲ್ಲಾ ಸದಸ್ಯರಿಗೆ ಮಾಹಿತಿ ನೀಡಬಯಸುತ್ತೇನೆ. ತಪ್ಪಿದಲ್ಲಿ ಅಂತಹ ಪ್ರಸ್ತಾವನೆಗಳನ್ನು ಪರಿಗಣಿಸುವುದಿಲ್ಲ. ಆದರೆ, ಇಂದು ತಾವು ಕೊಟ್ಟಿರುವ ಮನವಿಗಳಿಗೆ ಅವಕಾಶ ಕಲ್ಪಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 5. ನಿಯಮ 330–ಎ ಅಡಿಯಲ್ಲಿ ವಿಶೇಷ ಪ್ರಸ್ತಾವಗಳು

ಅ) ಶ್ರೀ ಕ್ಷೇತ್ರ ಮಲೈ ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಹಬ್ಬದ ವೇಳೆ ಲಕ್ಷಾಂತರ ಜನರು ಭೇಟಿ ನೀಡುವ ಹಿನ್ನೆಲೆಯಲ್ಲಿ ಭಕ್ತಾದಿಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸುವ ಬಗ್ಗೆ.

– – – – –

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀ ಕ್ಷೇತ್ರ ಮಲೆಮಹದೇಶ್ವರ ಬೆಟ್ಟವು ನಮ್ಮ ರಾಜ್ಯದ ಅತ್ಯಂತ ಪ್ರಸಿದ್ಧವಾದ ಹಾಗೂ ದಾಖಲೆ ಸಂಖ್ಯೆಯ ಭಕ್ತಾದಿಗಳು ಭೇಟಿ ನೀಡಿ ದೇವರ ದರ್ಶನ ಮಾಡುವ, ತಂಗುವ ಸ್ಥಳವಾಗಿದೆ. ಮಲೈ ಮಹದೇಶ್ವರ ಬೆಟ್ಟದಲ್ಲಿ ಭಕ್ತಾದಿಗಳು, ಸಾರ್ವಜನಿಕರು, ಅಲ್ಲಿನ ನಿವಾಸಿಗಳು ಹೆಚ್ಚಾಗಿ ಓಡಾಡುವ ಕಡೆ ಹಾಕಿರುವ ಸೋಲಾರ್ ವಿದ್ಯುತ್ ದೀಪಗಳು ವರ್ಷಾನುಗಟ್ಟಲೆಯಿಂದ ಕೆಟ್ಟು ಹೋಗಿದ್ದು, ತುಕ್ಕು ಹಿಡಿದಿವೆ.

ಪ್ರಮುಖವಾಗಿ ಜನನಿಬಿಡ ಪ್ರದೇಶಗಳಾದ ಮಾಸ್ಟರ್ ಪ್ಲಾನ್ ಆವರಣ, ದಾಸೋಹ ಭವನ, ತಂಬಡಿಗೆರೆಗೆ ಹೋಗುವ ರಸ್ತೆ, ಬೊಮ್ಮೇಶ್ವರ ದೇವಾಲಯ, ರಾಷ್ಟ್ರಪತಿ ಭವನ, ಮಹದೇಶ್ವರ ಕಲ್ಯಾಣ ಮಂಟಪ, ಭಕ್ತಾದಿಗಳು ತಂಗುವ ವಸತಿ ನಿಲಯದ ಮುಂಭಾಗದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಸೋಲಾರ್ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿತ್ತು. ಆದರೆ ಸರಿಯಾದ ನಿರ್ವಹಣೆ ಇಲ್ಲದೆ, ಸೋಲಾರ್ ಬ್ಯಾಟರಿಗಳು, ಬಲ್ಬ್‌ಗಳು ಹಾಳಾಗಿವೆ. ರಾತ್ರಿ ವೇಳೆ ಸಾರ್ವಜನಿಕರು ಓಡಾಡಲು ಬಹಳ ತೊಂದರೆ ಆಗಿದೆ. ರಾತ್ರಿ ವೇಳೆ ಹಾವುಗಳು ಹಾಗೂ ವನ್ಯ ಮೃಗಗಳ ಕಾಟ ಕೂಡಾ ಇರುತ್ತದೆ. ಆದಕಾರಣ ಪ್ರಖರವಾದ ದೀಪಗಳ ಅಗತ್ಯ ಬಹಳವಾಗಿದೆ. ಆದರೂ ಕೂಡ ಮಹದೇಶ್ವರ ಬೆಟ್ಟದ ಅಭಿವೃದ್ಧಿ ಮಂಡಲಿಯ ಅಧಿಕಾರಿಗಳು ಈ ಕಡೆ ಗಮನಹರಿಸಿದಂತೆ ಕಾಣುತ್ತಿಲ್ಲ. ಕತ್ತಲೆ ಕವಿದಿರುತ್ತದೆ.

ಸದ್ಯದಲ್ಲಿಯೇ ಶಿವರಾತ್ರಿ ಹಬ್ಬದ ವೇಳೆಗೆ ಅಂದರೆ ನಾಳೆ ನಾಡಿದ್ದು, ಲಕ್ಷಾಂತರ ಭಕ್ತರು ಬೆಟ್ಟಕ್ಕೆ ಭೇಟಿ ನೀಡಲಿದ್ದಾರೆ. ಆದಕಾರಣ ಕೂಡಲೇ ಮಹದೇಶ್ವರ ಬೆಟ್ಟದಲ್ಲಿರುವ ಸೋಲಾರ್ ದೀಪಗಳನ್ನು ದುರಸ್ತಿ ಮಾಡಿ ರಾತ್ರಿಯಿಡೀ ಬೆಳಗುವಂತೆ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ದಿನ ಶೂನ್ಯ ವೇಳೆಯಲ್ಲಿ ಮುಜರಾಯಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಮುಂದು)

(46) 19–02–2020/ 11–20/ ಕೆಹೆಚ್–ಎಂಡಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಹತ್ವಪೂರ್ಣವಾದ ವಿಚಾರಗಳನ್ನು ಮಾನ್ಯ ಸಂದೇಶ್ ನಾಗರಾಜ್ ರವರು ಶೂನ್ಯ ವೇಳೆಯ ಮೂಲಕ ಪ್ರಸ್ತಾಪಿಸಿದ್ದಾರೆ. ಶ್ರೀ

ಮಲೆಮಹದೇಶ್ವರ ಕ್ಷೇತ್ರಕ್ಕೆ ತಕ್ಷಣ ನಮ್ಮ ಅಧಿಕಾರಿಗಳನ್ನು ಕಳುಹಿಸಿ, ಅಲ್ಲಿರುವ ಸಮಸ್ಯೆಗಳನ್ನು ಪರಿಹಾರ ಮಾಡುವುದರ ಬಗ್ಗೆ ಸೂಚನೆಯನ್ನು ಕೊಡುತ್ತೇನೆ ಮತ್ತು ಅಗತ್ಯತೆ ಬಿದ್ದರೆ ನಾನು ಕೂಡ ವಿಶೇಷವಾದ ಗಮನವನ್ನು ಕೊಟ್ಟು, ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನಪಡುತ್ತೇನೆ.

**ಶ್ರೀ ಎಸ್.ನಾಗರಾಜು(ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೇ, ಶಿವರಾತ್ರಿ ಹಬ್ಬದ ಪ್ರಯುಕ್ತ ಶ್ರೀ ಕ್ಷೇತ್ರ ಮಲೆಮಹದೇಶ್ವರ ಬೆಟ್ಟಕ್ಕೆ ಲಕ್ಷಾಂತರ ಜನರು ಭೇಟಿ ಕೊಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರೇ, ತಾವು ತುಂಬಾ ವಿಸ್ತಾರವಾಗಿ ಇದರ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇವತ್ತೇ ಅಧಿಕಾರಿಗಳನ್ನು ಕಳುಹಿಸಿ, ನಮ್ಮ ಕಡೆಯಿಂದ ಏನೇನು ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಾಧ್ಯತೆ ಇದೆಯೋ, ಅದರ ಬಗ್ಗೆ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು:–** ಈ ಸೋಲಾರ್ ವಿದ್ಯುತ್ ದೀಪ ಎಷ್ಟು ವರ್ಷದ ಬಾಳಿಕೆ ಬರುತ್ತದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನನಗೆ ಗೊತ್ತಿರುವಂತೆ ಸೋಲಾರ್ ವಿದ್ಯುತ್ ದೀಪಗಳನ್ನು ಯಾರು ಅಳವಡಿಸುತ್ತಾರೆ, ಅದರ ನಿರ್ವಹಣೆಗಳಿಗೆ 3 ವರ್ಷ, 5 ವರ್ಷ ಎಂದು ಷರತ್ತುಗಳನ್ನು ಟೆಂಡರ್‌ನಲ್ಲಿ ಹಾಕಿರುತ್ತಾರೆ. ಇವತ್ತಿನ ದಿವಸ ಅನೇಕ ಸೋಲಾರ್ ವಿದ್ಯುತ್ ದೀಪಗಳ ಸ್ಥಿತಿ ಏನಾಗಿದೆ ಎಂದರೆ ಈ ದೀಪಗಳನ್ನು ಅಳವಡಿಸಲು ಯಾವುದೋ ಒಂದು ಕಂಪನಿಯನ್ನು ನೇಮಿಸಿದ ನಂತರ ಅವರು ಸೋಲಾರ್ ವಿದ್ಯುತ್ ದೀಪಗಳನ್ನು ಅಳವಡಿಸಿ, ಆ ದೀಪಗಳು ಬೆಳಗಿದ ಕೂಡಲೇ ಹಣ ಪಾವತಿ ಮಾಡಿಕೊಂಡು ಹೋಗುತ್ತಾರೆ. ಅವರನ್ನು ಮತ್ತೆ ಸಂಪರ್ಕಿಸುವುದಕ್ಕೂ ಸಹ ಸಾಧ್ಯವಾಗುವುದಿಲ್ಲ. ಹಾಗಾಗಿ ಸೋಲಾರ್ ವಿದ್ಯುತ್ ದೀಪಗಳನ್ನು ಅಳವಡಿಸುವ ಬಗ್ಗೆ ಟೆಂಡರ್‌ನ್ನು ಕರೆಯುವಾಗ ಏಜೆನ್ಸಿಯವರಿಗೆ 5 ವರ್ಷ ನಿರ್ವಹಣೆ ಮಾಡುವ ಸೋಲಾರ್ ವಿದ್ಯುತ್ ದೀಪಗಳನ್ನು ಅಳವಡಿಸಬೇಕೆಂದು ಷರತ್ತು ಹಾಕಬೇಕು ಮತ್ತು ಇದರ ಬಗ್ಗೆ ದೂರನ್ನು ನೀಡುವ ಸಲುವಾಗಿ ಸ್ಥಳೀಯವಾಗಿ ಆ ಊರಿನಲ್ಲಿ ಒಂದು ಕಂಪನಿಯನ್ನು ಹೊಂದಿರಬೇಕು. ಈ ಎಲ್ಲಾ ಅಂಶಗಳನ್ನು ಗಮನಿಸಿ ಅವರಿಗೆ ಟೆಂಡರ್‌ನ್ನು ಕೊಡಬೇಕು. ಕೆಲವು ಕಡೆಗಳಲ್ಲಿ ಸೋಲಾರ್ ವಿದ್ಯುತ್ ದೀಪಗಳನ್ನು ಅಳವಡಿಸಿದ್ದರೂ ಕೂಡ ಅವುಗಳು ಪೂರ್ಣವಾಗಿ ಕೆಟ್ಟು ಹೋಗಿರುವಂತಹ ಸ್ಥಿತಿಯಲ್ಲಿದೆ. ಇದನ್ನು ಮತ್ತೆ ಯಾರು ಬಂದು ಸರಿಪಡಿಸುವುದಿಲ್ಲ. ಇದರ ನಿರ್ವಹಣೆಯನ್ನು ಕೆಲವು ಕಡೆಗಳಲ್ಲಿ ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಈ ರೀತಿಯ ನಿರ್ವಹಣೆಯನ್ನು ಇಡೀ ರಾಜ್ಯದಲ್ಲಿ 3–4 ಸಂಸ್ಥೆಗಳು ಮಾತ್ರ ಬಹಳ ಚೆನ್ನಾಗಿ ಮಾಡುತ್ತಿದೆ. ಅದನ್ನು ಬಿಟ್ಟರೆ ಉಳಿದ ಕಂಪನಿಗಳು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಇದರ ಬಗ್ಗೆ ಸರ್ಕಾರವು ವಿಶೇಷವಾದ ಗಮನವನ್ನು ಕೊಡುತ್ತದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಆ) ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯದೇ ನಿಲ್ಲಿಸಿರುವುದರಿಂದ ಕಬ್ಬು ಬೆಳೆಗಾರರು ಆತಂಕಕ್ಕೆ ಒಳಗಾಗಿರುವ ಬಗ್ಗೆ.**

– – – –

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿನ ಕಬ್ಬು ಬೆಳೆಗಾರರು ಈ ಸಾಲಿನಲ್ಲಿ ಭಾರಿ ನಷ್ಟವನ್ನು ಅನುಭವಿಸುತ್ತಿದ್ದಾರೆ. ಜಿಲ್ಲೆಯಲ್ಲಿನ ಮಂಡ್ಯ ಮೈಶುಗರ್ ಸಕ್ಕರೆ ಕಾರ್ಖಾನೆ ಮತ್ತು ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಗಳು ಈ ವರ್ಷ ಕಬ್ಬನ್ನು ಅರೆಯದೇ ಕಾರ್ಖಾನೆಗಳು ಮುಚ್ಚಿರುವುದರಿಂದ ಜಿಲ್ಲೆಯ ಕಬ್ಬು ಬೆಳೆಗಾರರು ಜನವರಿ ತಿಂಗಳು ಮುಗಿದರೂ ಕಳೆದ ವರ್ಷ 6,7,8,9,10ನೇ ತಿಂಗಳುಗಳಲ್ಲಿ ಕಟಾವು ಮಾಡಬೇಕಾಗಿದ್ದ ಕಬ್ಬನ್ನು ಕಡೆಯಲಾಗದೆ, 16–17 ತಿಂಗಳುಗಳಾದರೂ ಜಮೀನಿನಲ್ಲಿಯೇ ಉಳಿದಿದ್ದು, ರೈತರ ಪರದಾಟ ಹೆಚ್ಚಾಗಿದೆ. ಕಬ್ಬು ಖಾಲಿ ಮಾಡಲು ಹರಸಹಾಸ ಮಾಡುತ್ತಿರುವ ರೈತರಿಗೆ ಕಾರ್ಮಿಕರ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ. ಇಲ್ಲಿನ ಕಾರ್ಖಾನೆಗಳು ಮುಚ್ಚಿರುವುದರಿಂದ ತಮಿಳುನಾಡಿನ ಕಾರ್ಖಾನೆಗಳಿಗೆ ಕಬ್ಬನ್ನು ಸರಬರಾಜು ಮಾಡಬೇಕಾಗಿದೆ. ಅಲ್ಲದೆ ತಮಿಳುನಾಡಿನ ಕಾರ್ಖಾನೆಗಳು ರೈತರಿಗೆ ಪರ್ಮಿಟ್ ಕೊಡುವ ಬದಲಿಗೆ ದಲ್ಲಾಳಿಗಳನ್ನು ಬಿಟ್ಟು ಟನ್ ಕಬ್ಬಿಗೆ ಕೇವಲ ರೂ.800 ರಿಂದ 1000 ಕೊಟ್ಟು ಖರೀದಿಸುತ್ತಿದ್ದಾರೆ. ರೈತರು ಅನಿವಾರ್ಯವಾಗಿ ಇಲ್ಲಿನ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿ ನಷ್ಟವನ್ನು ಅನುಭವಿಸುವ ಪರಿಸ್ಥಿತಿ ಬಂದಿದೆ. ಇದರಿಂದ ರೈತರು ಆತ್ಮಹತ್ಯೆಯಂತಹ ಮಾರ್ಗವನ್ನು ಹಿಡಿಯುವ ಸಂದರ್ಭ ಸೃಷ್ಟಿಯಾಗಿದೆ.

ಈ ಹಿಂದೆ ಸದನದಲ್ಲಿ ಹೊರ ರಾಜ್ಯಗಳಿಗೆ ಕಬ್ಬನ್ನು ಸಾಗಿಸುವ ಸಂಬಂಧ ಸಾಗಾಣಿಕೆ ವೆಚ್ಚವನ್ನು ಸರ್ಕಾರದಿಂದ ಭರಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ ಈವರೆಗೆ ಸಾಗಾಣಿಕೆ ವೆಚ್ಚವನ್ನು ಸರ್ಕಾರ ನೀಡಿರುವುದಿಲ್ಲ. ಈ ಎಲ್ಲಾ ಸಮಸ್ಯೆಗಳಿಂದಾಗಿ ರೈತರು ಸಾಲದ ಸುಳಿಗೆ ಸಿಕ್ಕಿ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಆದ್ದರಿಂದ ಸರ್ಕಾರ ಈ ಬಗ್ಗೆ ತೀವ್ರ ಗಮನಹರಿಸಿ ಜಿಲ್ಲೆಯ ಕಬ್ಬುಗಳನ್ನು ಇಲ್ಲಿನ ಕಾರ್ಖಾನೆಗಳಲ್ಲಿ ಅರೆಯುವಂತೆ ವ್ಯವಸ್ಥೆ ಮಾಡಿ ಹೊರ ರಾಜ್ಯಗಳಿಗೆ ಹೋಗುವ ಕಬ್ಬುಗಳಿಗೆ ಸಾಗಾಣಿಕೆ ವೆಚ್ಚವನ್ನು ಭರಿಸಿ ಮತ್ತು ಜಿಲ್ಲೆಯ ಕಾರ್ಖಾನೆಗಳನ್ನು ಆರಂಭಿಸುವ ದಿಸೆಯಲ್ಲಿ ಕ್ರಮವಹಿಸಬೇಕಾಗಿ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯದೇ ನಿಲ್ಲಿಸಿರುವುದರಿಂದ ಕಬ್ಬು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳೆಗಾರರ ಆತಂಕದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ. ನಾಳೆ ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರ ಕಡೆಯಿಂದ ಸಮರ್ಪಕವಾದ ಉತ್ತರವನ್ನು ಕೊಡಿಸುತ್ತೇನೆ.

**ಇ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ರೇಬಿಸ್ ಕಾಯಿಲೆಯಿಂದ 5 ಜನರು ಬಲಿ ಆಗಿರುವುದರಿಂದ, ಬಾಕಿ ಉಳಿದಿರುವ ನಾಯಿಗಳಿಗೆ ಆ್ಯಂಟಿ ವೈರಸ್ ವ್ಯಾಕ್ಸಿನ್ ಲಸಿಕೆಯನ್ನು ಹಾಕುವ ಕುರಿತು.**

– – – –

**ಡಾ॥ ಜಯಮಾಲ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೆ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ವಿಶ್ವದಾದ್ಯಂತ ಚೀನಾದ ಕೊರೋನಾ ವೈರಸ್‌ಗೆ ನೂರಾರು ಜನರು ಬಲಿಯಾಗುತ್ತಿದ್ದು, ಈ ವೈರಸ್‌ಗೆ ಸೂಕ್ತ ಲಸಿಕೆ ಇನ್ನೂ ಸರಿಯಾಗಿ ಕಂಡು ಹಿಡಿಯಲು ಸಾಧ್ಯವಾಗದೇ ಇರುವ ಈ ಆಘಾತಕಾರಿ ಸಮಯದಲ್ಲಿ ಬೆಂಗಳೂರಿನಲ್ಲಿರುವ ಬೀದಿ ನಾಯಿಗಳಿಗೆ ಬಿ.ಬಿ.ಎಂ.ಪಿ ವತಿಯಿಂದ ರೇಬಿಸ್ ಲಸಿಕೆಯನ್ನು ನೀಡದೇ ಇರುವುದು ಆತಂಕಕಾರಿ ವಿಷಯವಾಗಿದ್ದು, ಇದನ್ನು ಪ್ರಸ್ತಾಪಿಸಲು ಸದನದಲ್ಲಿ ಅನುಮತಿಯನ್ನು ಕೋರುತ್ತೇನೆ.

ಪ್ರತಿ ವರ್ಷ ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡುವ ಸಂದರ್ಭದಲ್ಲಿ ರೇಬಿಸ್ ರೋಗ ನಿರೋಧಕ ಚುಚ್ಚುಮದ್ದನ್ನು ಪಾಲಿಕೆ ನೀಡುತ್ತಿದೆ. ಕಳೆದ ವರ್ಷ ಅನಿಮಲ್ ಬರ್ಥ್ ಕಂಟ್ರೋಲ್ (ಎಬಿಸಿ) ಸಮಯದಲ್ಲಿ 28,872 ನಾಯಿಗಳಿಗೆ ವಿವಿಧ ಸ್ವಯಂ ಸೇವಾ ಸಂಸ್ಥೆಯಿಂದ 309 ಹಾಗೂ ನಾಯಿಗಳ ಎಬಿಸಿ ಮಾಡುವವರು ಈ ವರ್ಷ 28,864 ನಾಯಿಗಳಿಗೆ ಆ್ಯಂಟಿ ರೇಬಿಸ್ ವ್ಯಾಕ್ಸಿನ್ (ಎಆರ್‌ವಿ) ನೀಡಿದ್ದಾರೆ. ಇದರ ಹೊರತಾಗಿ ಅಂದಾಜು 2.50 ಲಕ್ಷ ನಾಯಿಗಳಿಗೆ ಎಆರ್‌ವಿ ನೀಡುವುದು ಬಾಕಿ ಇದೆ ಎಂದು ಬಿಬಿಎಂಪಿಯ ಅಧಿಕಾರಿಗಳು ತಿಳಿಸಿದ್ದಾರೆ. ಈ ಅಂಕಿ–ಅಂಶಗಳು ಆತಂಕಕ್ಕೆ ಕಾರಣವಾಗಿದೆ.

ಈ ರೇಬಿಸ್ ಕಾಯಿಲೆಯಿಂದ ರಾಜ್ಯದಲ್ಲಿ ಕಳೆದ ಒಂದು ತಿಂಗಳಿಂದ 5 ಜನರು ಬಲಿಯಾಗಿರುವುದು ತಿಳಿದು ಬಂದಿರುತ್ತದೆ. ಬಹುಮುಖ್ಯವಾಗಿ ಅದರಲ್ಲೂ ಕೂಡ ರಾಜಧಾನಿಯಲ್ಲಿ 2 ಜನರು ಬಲಿಯಾಗಿದ್ದಾರೆ. ಹೀಗೆ ಎಆರ್‌ವಿ ಚುಚ್ಚುಮದ್ದು ನೀಡುವುದು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿರುವುದರಿಂದ, ಲಸಿಕೆಯನ್ನು ಹಾಕಿದ ಬೀದಿ ನಾಯಿಗಳಿಗೆ ಸರಿಯಾದ ಅಳಿಸಿ ಹೋಗದಂತಹ ಬಣ್ಣವನ್ನು ಬಳಿಯಲು ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದರಿಂದ ಯಾವ ನಾಯಿಗೆ ಚುಚ್ಚುಮದ್ದು ನೀಡಲಾಗಿದೆ ಅಥವಾ ಇಲ್ಲವೆಂದು ಖಚಿತವಾಗಿ ಹೇಳಲಾಗುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆದುದರಿಂದ ಈ ಸದನದಲ್ಲಿ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಈ ರೇಬಿಸ್ ಕಾಯಿಲೆಗೆ ಬೀದಿ ನಾಯಿಗಳಿಗೆ ಲಸಿಕೆಗಳನ್ನು ನೀಡಿದ ನಂತರ ಶಾಶ್ವತವಾಗಿ ಉಳಿಯುವ ಬಣ್ಣಗಳನ್ನು ಬಳಿದು ರೇಬಿಸ್‌ನಿಂದ ಆಗುವ ಪರಿಣಾಮಗಳು ಹಾಗೂ ಎಚ್ಚರಿಕೆಯ ಬಗ್ಗೆ ಸಾರ್ವಜನಿಕರಿಗೆ ಸೂಕ್ತ ಪ್ರಕಟಣೆಗಳ ಮೂಲಕ ಅರಿವು ಮೂಡಿಸಲು ಸೂಕ್ತ ಕ್ರಮ ಕೈಗೊಳ್ಳಲು ಈ ಸದನದ ಮೂಲಕ ಸರ್ಕಾರವನ್ನು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಡಾ॥ ಜೈಮಾಲ ರಾಮಚಂದ್ರರವರು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ರೇಬಿಸ್ ಕಾಯಿಲೆಯಿಂದ 5 ಜನರು ಬಲಿ ಆಗಿರುವಂತಹ ಅನಾಹುತ ಮತ್ತು ಸಂಬಂಧಪಟ್ಟ ನಾಯಿಗಳಿಗೆ ಆ್ಯಂಟಿ ವೈರಸ್ ವ್ಯಾಕ್ಸಿನ್ ಲಸಿಕೆಯನ್ನು ಹಾಕದಿರುವ ಕುರಿತು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ನಾಳೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಈ) ಕಾರವಾರ ಮತ್ತು ಶಿರಸಿ ಶೈಕ್ಷಣಿಕ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮುಖ್ಯೋಪಾಧ್ಯಾಯರುಗಳು ಏಪ್ರಾನ್ ಖರೀದಿ ಮಾಡಿರುವ ಬಗ್ಗೆ.**

– – – – –

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. 2014–15ನೇ ಸಾಲಿನಲ್ಲಿ ಕಾರವಾರ ಹಾಗೂ ಶಿರಸಿ ಶೈಕ್ಷಣಿಕ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರಿಗೆ ಅಕ್ಷರದಾಸೋಹ ಯೋಜನೆಯಡಿ ಅಡುಗೆ ಸಿಬ್ಬಂದಿಗೆ ಏಪ್ರಾನ್ ಖರೀದಿಗಾಗಿ ಪ್ರತಿ ಏಪ್ರಾನ್‌ಗೆ ರೂ.1000 ದಂತೆ ಹಣ ಬಿಡುಗಡೆ ಮಾಡಲಾಗಿತ್ತು.

ಈ ಏಪ್ರಾನ್ ಖರೀದಿಯಲ್ಲಿ ಅವ್ಯವಹಾರ ಆಗಿದೆಯೆಂದು ಜಿಲ್ಲಾ ಪಂಚಾಯಿತಿ ಉತ್ತರ ಕನ್ನಡ ಜಿಲ್ಲೆಯ ಸಾಮಾನ್ಯ ಸಭೆಯಲ್ಲಿ ಚರ್ಚೆ ಹಾಗೂ ತನಿಖೆ ನಡೆಸಿ ಶಿಕ್ಷಕರು/ಮುಖ್ಯೋಪಾಧ್ಯಾಯರಿಂದ ಹೆಚ್ಚುವರಿಯಾಗಿ ನೀಡಿದ ಹಣವನ್ನು ಪುನರ್ಭರಣ ಮಾಡಬೇಕೆಂದು ನಿರ್ಣಯಿಸಿರುವರು. ಈ ಹಿನ್ನಲೆಯಲ್ಲಿ ಜಂಟಿ ನಿರ್ದೇಶಕರು ಮಧ್ಯಾಹ್ನದ ಉಪಹಾರ ಯೋಜನೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರು ದಿನಾಂಕ:15–12–2019ರಂದು ಹೆಚ್ಚುವರಿಯಾಗಿ ನೀಡಿದ ಹಣವನ್ನು ಮರುಪಾವತಿ ಮಾಡಲು ನಿರ್ದೇಶನ ನೀಡಿರುವರು. ಅದರಂತೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ನೋಟಿಸ್ ನೀಡಿ ಪ್ರತಿ ಏಪ್ರಾನ್‌ನ ಬೆಲೆ ರೂ.315 ಇದ್ದು, ಅದಕ್ಕಿಂತ ಹೆಚ್ಚಿನ ಬೆಲೆಗೆ ಖರೀದಿಸಿದ್ದೀರಿ ಎಂದು ಆಪಾದಿಸಿ, ಹೀಗೆ ಹೆಚ್ಚುವರಿಯಾಗಿ ನೀಡಿದ ಹಣವನ್ನು ದಿನಾಂಕ:15–02–2020ರೊಳಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮರುಪಾವತಿಸಬೇಕು ಇಲ್ಲದಿದ್ದರೆ ಫೆಬ್ರವರಿ ತಿಂಗಳ ವೇತನದಲ್ಲಿ ಕಟಾವು ಮಾಡಲಾಗುವುದು ಎಂದು ಎಚ್ಚರಿಕೆ ನೋಟಿಸ್ ನೀಡಿರುವರು.

ಈ ವಿಚಾರಕ್ಕೆ ಸಂಬಂಧಿಸಿದಂತೆ, ಏಪ್ರಾನ್ ಖರೀದಿಯಲ್ಲಿ ನಡೆದಂತಹ ನಿಜ ಸಂಗತಿ ಏನೆಂದರೆ, ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಂಬಂಧಪಟ್ಟ ಸಿಆರ್‌ಪಿ/ಬಿಆರ್‌ಪಿ ಗಳು ಏಪ್ರಾನ್ ಪೂರೈಸುವ ಏಜೆನ್ಸಿಗಳನ್ನು ನೇರವಾಗಿ ಶಾಲೆಗೆ ಕರೆತಂದು ಏಪ್ರಾನ್ ವಿತರಿಸಿ ಸಂಬಂಧಪಟ್ಟವರಿಗೆ ಚೆಕ್ ಮೂಲಕ ಹಣವನ್ನು ನೀಡುವಂತೆ ಒತ್ತಾಯಿಸಿದ ಹಿನ್ನಲೆಯಲ್ಲಿ ಸಂಬಂಧಪಟ್ಟ ಮುಖ್ಯೋಪಾಧ್ಯಾಯರು/ಶಿಕ್ಷಕರು ಚೆಕ್ ನೀಡಿದ್ದುಂಟು. ಹೀಗಾಗಿ ಮುಖ್ಯೋಪಾಧ್ಯಾಯರು/ಶಿಕ್ಷಕರು ಈ ಖರೀದಿಯ ವ್ಯವಹಾರದಲ್ಲಿ ಯಾವುದೇ ಪಾತ್ರ ಇರುವುದಿಲ್ಲ.

ಆದ್ದರಿಂದ ನೇರವಾಗಿ ಮುಖ್ಯೋಪಾಧ್ಯಾಯರನ್ನು ಅವ್ಯವಹಾರದಲ್ಲಿ ತೊಡಗಿದ್ದೀರಿ ಎಂದು ಆಪಾದಿಸುವುದು ಸರಿಯಾದ ಕ್ರಮ ಆಗಿರುವುದಿಲ್ಲ. ಹೀಗಿರುವಾಗ ಮುಖ್ಯೋಪಾಧ್ಯಾಯರು ಹೆಚ್ಚುವರಿ ಹಣವನ್ನು ಮರುಭರಣ ಮಾಡಬೇಕೆಂದು ಆದೇಶಿಸಿದ ಆಜ್ಞೆಗೆ ಕೂಡಲೇ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ತಡೆಯಾಜ್ಞೆ ನೀಡಬೇಕೆಂದು ಕೋರುತ್ತೇನೆ. ಇದಲ್ಲದೆ ಈ ಕುರಿತು ಸಂಬಂಧಪಟ್ಟವರಿಗೆ ಮರು ವಿಚಾರಣೆ ನಡೆಸಿ ನಿಜವಾದ ಅಪರಾಧ ಮಾಡಿದವರ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಮಾನ್ಯ ಎಸ್.ವ್ಹಿ.ಸಂಕನೂರರವರು ಕಾರವಾರ ಮತ್ತು ಶಿರಸಿ ಶೈಕ್ಷಣಿಕ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮುಖ್ಯೋಪಾಧ್ಯಾಯಗಳು ಏಪ್ರಾನ್ ಖರೀದಿಯಲ್ಲಿ ಆಗಿರುವ ಗೊಂದಲದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

(ಮುಂದು)

**(47) 19/02/2020/11:00/ಎಸ್‌ಪಿಆರ್/ಎಂಡಿ**

**ಉ) ಉಕ್ಕಿ ಹರಿದ ನೆರೆಗೆ ಬದುಕು ಕಳೆದುಕೊಂಡ ನೆರೆ ಸಂತ್ರಸ್ಥರಿಗೆ ದಾನಿಗಳು ಕೊಟ್ಟಿದ್ದನ್ನು ತಲುಪಿಸುವಲ್ಲಿ ಧಾರವಾಡ ಜಿಲ್ಲಾಡಳಿತ ವಿಫಲವಾಗಿರುವ ಬಗ್ಗೆ.**

– – – –

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉಕ್ಕಿ ಹರಿದ ನೆರೆಗೆ ಬದುಕು ಕಳೆದುಕೊಂಡು ಸೂರು, ಅನ್ನ, ಬಟ್ಟೆ, ಹೊದಿಕೆ ಇಲ್ಲದೇ ಅತಂತ್ರರಾಗಿದ್ದ ನೆರೆ ಸಂತ್ರಸ್ಥರಿಗೆ ನೆರವಾಗಲೆಂದು ರಾಜ್ಯದ ದಾನಿಗಳು ಕೊಟ್ಟ ದವಸ–ಧಾನ್ಯಗಳನ್ನು ಸಂತ್ರಸ್ತರಿಗೆ ತಲುಪಿಸುವಲ್ಲಿ ಧಾರವಾಡ ಜಿಲ್ಲಾಡಳಿತವು ಸಂಪೂರ್ಣ ವಿಫಲವಾಗಿದ್ದು ಇವುಗಳ ಕಂಡವರ ಪಾಲಾಗಿವೆ ಎಂದು ಇಂದಿನ ಕನ್ನಡಪ್ರಭ ದೈನಂದಿನ ಪತ್ರಿಕೆಯಲ್ಲಿ ವರದಿಯಾಗಿದ್ದು ಕಳೆದ ನಾಲ್ಕು ತಿಂಗಳಿನಿಂದ ಕೂಡಿಟ್ಟ ಅಕ್ಕಿ ಪ್ಯಾಕೆಟ್ ಈಗ ಹಾಸ್ಟೆಲ್‌ಗಳ ಪಾಲಾಗಿವೆ. ನೆರೆ ಸಂತ್ರಸ್ತರ ಬದಲು ಆ ಧಾನ್ಯಗಳು ನೌಕರರ ಮನೆಗೆ ಹೋಗಿವೆ. ಕಳಪೆ ಅಕ್ಕಿಯು ಹಾಸ್ಟೆಲ್‌ಗಳಿಗೆ ಪೂರೈಕೆಯಾಗಿವೆ. ನೆರೆ ಸಂತ್ರಸ್ಥರಿಗೆ ಇದನ್ನೆಲ್ಲ ಏಕೆ ವಿತರಿಸಲಿಲ್ಲ? ಸಂತ್ರಸ್ಥರು ಈ ಅಕ್ಕಿ ತಿರಸ್ಕರಿಸಿದ್ದರೆ? ಇತ್ಯಾದಿ ಪ್ರಶ್ನೆಗಳಿಗೆ ಜಿಲ್ಲೆಯ ಯಾವುದೇ ಅಧಿಕಾರಿಗಳಿಂದ ಸಮರ್ಪಕ ಉತ್ತರ ಸಿಗುತ್ತಿಲ್ಲ. ಅಲ್ಲಿನ ಜಿಲ್ಲಾಡಳಿತವು ಬೇಜವಾಬ್ದಾರಿ ಕೆಲಸ ಮಾಡುತ್ತಿರುವುದೇ ಈ ರೀತಿಯ ಪರಿಣಾಮವಾಗಿದೆ. ಇದನ್ನು ಸರ್ಕಾರವು ಪರಿಶೀಲಿಸಿ, ಅಧಿಕಾರಿಗಳ ಮನೆಗೆ ಹೋಗಿರುವ ದವಸ–ಧಾನ್ಯಗಳನ್ನು ವಾಪಸ್ಸು ಕೊಟ್ಟು, ಈಗಾಗಿರುವ ಪ್ರಮಾದವನ್ನು ಸರಿಪಡಿಸಿ ನೆರೆ ಸಂತ್ರಸ್ಥರಿಗೆ ಶೀಘ್ರವೇ ಪರಿಹಾರವನ್ನು ನೀಡುವಂತೆ ನಾನು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಮಾನೆ ಶ್ರೀನಿವಾಸ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ನಾನು ಹೇಳಬಯಸುವುದೇನೆಂದರೆ, ಇವತ್ತಿನ ದಿವಸ ಸಂತ್ರಸ್ಥರ ನೆರವಿಗೆ ಹೋಗುವ ಸಂದರ್ಭದಲ್ಲಿ ಸರ್ಕಾರದಿಂದ ಪರಿಹಾರ ಬರುವುದು ತಡವಾಗುತ್ತದೆ. ಹೀಗಾಗಿ ಸಾಕಷ್ಟು ದಾನಿಗಳು ಬಹಳ ದೊಡ್ಡ ಮನಸ್ಸಿನಿಂದ ಸಹಾಯ ಮಾಡಲು ಮುಂದೆ ಬರುತ್ತಾರೆ. ಇವುಗಳನ್ನು ಕೆಳಹಂತದ ಅಧಿಕಾರಿಗಳು ದುರುಪಯೋಗ ಪಡಿಸಿಕೊಳ್ಳುವುದು ಹಾಗೂ ಸಂತ್ರಸ್ಥರಿಗೆ ಅದನ್ನು ಮುಟ್ಟಿಸುವಂತಹ ಕಾರ್ಯವನ್ನು ಮಾಡದೇ ದುರ್ಬಳಕೆ ಮಾಡಿಕೊಂಡರೆ, ನಮ್ಮ ಜನಪ್ರತಿನಿಧಿಗಳಿಗೂ ಸಹ ಒಂದು ರೀತಿಯ ಅವಮಾನ ಮಾಡಿದಂತಾಗುತ್ತದೆ ಮತ್ತು ಸಂತ್ರಸ್ಥರು ನಮ್ಮನ್ನೂ ಸಹ ಸಂಶಯದಿಂದ ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹೀಗಾಗಿ ಈ ವಿಷಯದಲ್ಲಿ ಕೂಲಂಕುಷವಾಗಿ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಉಗ್ರವಾದ ಕ್ರಮಕೈಗೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನೆರೆ ಸಂತ್ರಸ್ಥರ ಬದುಕಿಗೆ ನೆಲೆ ಕಟ್ಟಿಕೊಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ವಿಷಯದಲ್ಲಿ ಹಿರಿಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಕಂದಾಯ ಮಂತ್ರಿಗಳೊಂದಿಗೆ ಮಾತನಾಡಿ, ಈ ಸಮಸ್ಯೆಯನ್ನು ಬಗೆಹರಿಸಲು ಸಮರ್ಪಕವಾದ ಉತ್ತರವನ್ನು ತರಿಸಿಕೊಡುತ್ತೇನೆ.

## 6. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ

**ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

– – – – –

**ಡಾ॥ ಜಯಮಾಲ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ನಿನ್ನೆಯ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಗೌರವಾನ್ವಿತ ಸದಸ್ಯರು ಪ್ರಸ್ತುತ ವಿಷಯದ ಬಗ್ಗೆ ವಿವರವಾದ ಮಾಹಿತಿಗಳನ್ನು ನೀಡಿದ್ದಾರೆ. ಇದೇ ವಿಷಯವಾಗಿ ಬಿಟ್ಟುಹೋದ ಒಂದೆರೆಡು ಮಾಹಿತಿಗಳನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದೇ ಸದನದಲ್ಲಿ ಸಹೋದ್ಯೋಗಿಯಾಗಿ, ಸಚಿವರಾಗಿ, ಶಾಸಕರಾಗಿ ಈ ರಾಜ್ಯದ ಅನೇಕ ಸಮಸ್ಯೆಗಳಿಗೆ ಹೆಗಲು ಕೊಟ್ಟಿರುವ ಹಾಗೂ ಎಲ್ಲರ ಜೊತೆಯಲ್ಲಿ ಅತ್ಯಂತ ಅಭಿಮಾನ ಹಾಗೂ ವಿಶ್ವಾಸಗಳಿಂದ ನಮ್ಮ ಶಾಸಕರಾದ ಶ್ರೀ ಯು.ಟಿ.ಖಾದರ್‌ರವರು ಇದ್ದರು. ಇವತ್ತಿನ ದಿವಸ ಅಂತಹ ನಮ್ಮ ಸಹೋದ್ಯೋಗಿಗಳಿಗೆ ದೇಶದ್ರೋಹದ ಹಣೆಪಟ್ಟಿಯನ್ನು ನೀಡಿದ್ದಾರೆ ಮತ್ತು ಅವರ ವಿರುದ್ಧ ಆ ರೀತಿಯಾದ ಪ್ರಕರಣವನ್ನು ದಾಖಲಿಸಿದ್ದಾರೆ. ದೇಶದ್ರೋಹದ ಹಣೆಪಟ್ಟಿಯನ್ನು ಕಟ್ಟುವಾಗ ಅತ್ಯಂತ ಅವಶ್ಯವಾಗಿ ನಾವು ಮೊದಲು ತಿಳಿದುಕೊಳ್ಳಬೇಕಾದುದೇನೆಂದರೆ, ದೇಶದ್ರೋಹ ಎನ್ನುವಂಥದ್ದು ಯಾವುದು? ನನ್ನ ತಿಳಿವಳಿಕೆಯ ಪ್ರಕಾರ ಕಾನೂನಿನಲ್ಲಿ ಉಲ್ಲೇಖಿಸಿರುವ ದೇಶದ್ರೋಹಗಳು ಎಂದರೆ ಭಯೋತ್ಪಾದನೆ ಅಥವಾ ದೇಶ–ವಿದೇಶಗಳಿಂದ ಒಳಸಂಚು, ಪಿತೂರಿಗಳನ್ನು ಮಾಡುವಂತಹ ಕೃತ್ಯಗಳು ಅಥವಾ ಈ ದೇಶ ಹಾಗೂ ದೇಶದ ಜನರನ್ನು ಇಕ್ಕಟ್ಟಿಗೆ ಸಿಕ್ಕಿಸುವ ಅನೇಕ ವಿಕೃತವಾದ ಕೃತ್ಯಗಳನ್ನು ಮಾಡುವಂತಹ ಕೃತ್ಯಗಳಿರಬಹುದು. ಇಂತಹ ಯಾವುದೇ ವಿಷಯಗಳನ್ನು ನೋಡಿದಾಗ ಈ ದೇಶದ್ರೋಹದ ಪ್ರಕರಣಗಳನ್ನು ಯಾರ ವಿರುದ್ಧ ದಾಖಲು ಮಾಡಲಾಗಿದೆಯೋ ಅವರೂ ಯಾರೂ ಸಹ ಅವರು ಮಾತನಾಡಿರುವ ಮಾತುಗಳಲ್ಲಿ ದೇಶದ್ರೋಹದ ಒಂದೇ ಒಂದು ಸುಳಿವು ನೀಡಿರುವುದು ನಮ್ಮ ಕಣ್ಣಿಗೆ ಕಾಣಿಸುತ್ತಿಲ್ಲ ಹಾಗೂ ಅವರ ಮಾತುಗಳಲ್ಲಿ ದೇಶದ್ರೋಹದ ಮಾತುಗಳು ಎಲ್ಲಿವೆ? ಸಿ.ಎ.ಎ. ಕಾಯ್ದೆಯನ್ನು ಜಾರಿಗೆ ತಂದರೆ ದೇಶದ ಜನರು ಅತಂತ್ರರಾಗುತ್ತಾರೆ ಹಾಗೂ ತಮ್ಮ ನಂಬಿಕೆಯನ್ನು ಕಳೆದುಕೊಂಡು ಬಿಡುತ್ತಾರೆ; ದೇಶದಲ್ಲಿ ಬೆಂಕಿಯನ್ನು ಹಚ್ಚುವಂತಹ ಇಂತಹ ಮಾತುಗಳನ್ನು ಇವತ್ತಿನ ದಿವಸ ನೀವು ಹೇಳಿದ್ದೀರಾ, ದಯವಿಟ್ಟು ಜನರಿಗೆ ಈ ಬಗ್ಗೆ ಸ್ಪಷ್ಟಪಡಿಸಿ ಹಾಗೂ ಅವರನ್ನು ಅತಂತ್ರತೆಗೆ ತಳ್ಳಬೇಡಿ ಎಂಬುದಾಗಿ ಮಾನ್ಯ ಖಾದರ್‌ರವರು ಹೇಳಿದ್ದಾರೆ. ಸಿ.ಎ.ಎ.ಕಾಯ್ದೆಯನ್ನು ಜಾರಿಗೆ ತಂದರೆ ಜನರಿಗೆ ತೊಂದರೆಯಾಗುತ್ತದೆ ಎನ್ನುವ ವಿಚಾರವನ್ನು ಮಾನ್ಯ ಖಾದರ್‌ರವರು ಹೇಳಿದ್ದಾರೆ. ಅದು ನಮ್ಮ ಕಣ್ಣಮುಂದೆ ಇದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಖಾದರ್‌ರವರು ಬೆಂಕಿಯನ್ನು ಹಚ್ಚುವಂತಹ ಕೆಲಸವನ್ನು ಮಾಡಬೇಡಿ ಎಂಬುದಾಗಿ ಹೇಳಿದರು. ಬೆಂಕಿಯನ್ನು ಹಚ್ಚುವಂತಹ ಕೆಲಸವನ್ನು ಮಾಡಬೇಡಿ ಎನ್ನುವುದು ದೇಶದ್ರೋಹ ಕೃತ್ಯ

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎನ್ನುವುದೇ ಆದರೆ, ಅಲ್ಲಿದ್ದ ಮತ್ತೋರ್ವರು ಅಂದರೆ ಭಾರತೀಯ ಜನತಾ ಪಕ್ಷದ ಅಧ್ಯಕ್ಷರು ಬೆಂಕಿಯನ್ನೇ ಹಚ್ಚುವುದಾಗಿ ಹೇಳಿದರು. ಬೆಂಕಿಯನ್ನು ಹಚ್ಚಬೇಡಿ, ಪರಿಸ್ಥಿತಿ ಹೀಗಾಗಬಹುದು ಎಂದು ಹೇಳುವುದಕ್ಕೂ ಹಾಗೂ ಬೆಂಕಿಯನ್ನೇ ಹಚ್ಚುತ್ತೇನೆ ಎಂದು ಹೇಳುವುದಕ್ಕೂ ಬಹಳ ವ್ಯತ್ಯಾಸಗಳಿವೆ. ಆದರೆ ನಾನು ಹಾಗೆ ಹೇಳಿದವರ ವಿರುದ್ಧವೂ ಸಹ ದೇಶದ್ರೋಹದ ಪ್ರಕರಣವನ್ನು ದಾಖಲಿಸಿ ಎಂಬುದಾಗಿ ಹೇಳುವುದಿಲ್ಲ. ದೇಶದ್ರೋಹ ಪ್ರಕರಣದ ವ್ಯಾಪ್ತಿಗೆ ಅವರೂ ಸಹ ಬರುವುದಿಲ್ಲ. ಇವರಿಬ್ಬರೂ ಸಹ ದೇಶದ್ರೋಹ ಪ್ರಕರಣದ ವ್ಯಾಪ್ತಿಗೆ ಒಳಪಡುವುದಿಲ್ಲ. ಆದರೆ ಇದು ಒಂದು ರೀತಿಯ criminal activities ಗೆ ದಾರಿ ಮಾಡಿ ಕೊಡುತ್ತದೆ. ಮಾನ್ಯ ಖಾದರ್‌ರವರು ತಡೆಹಿಡಿಯಿರಿ, ಹೀಗೆ ಮಾಡಬೇಡಿ ಎನ್ನುವಂಥಹ ಮಾತುಗಳಾಗಿರುತ್ತವೆ. ಆದರೆ ಸರ್ಕಾರವು ಅಂತಹವರ ವಿರುದ್ಧ ದೇಶದ್ರೋಹದ ಪ್ರಕರಣವನ್ನು ದಾಖಲು ಮಾಡುತ್ತದೆ. ಈ ಸಂದರ್ಭದಲ್ಲಿ ನನ್ನ ಪ್ರಶ್ನೆ ಏನೆಂದರೆ, ಅದೇ ಮಂಗಳೂರು ನಗರಕ್ಕೆ ಕೇಂದ್ರದ ಮಂತ್ರಿಗಳಾದ ಮಾನ್ಯ ರಾಜನಾಥ್‌ಸಿಂಗ್‌ರವರು ಭೇಟಿ ನೀಡಿದಾಗ, ಪಕ್ಷದ ಅನೇಕ ಕಾರ್ಯಕರ್ತರುಗಳು ಅಲ್ಲಿ ಹೋರಾಟವನ್ನು ಮಾಡುತ್ತಾ, ಕೇಕೆ ಹಾಕಿ ನೃತ್ಯಗಳನ್ನು ಮಾಡುತ್ತಿರುವ ಸಂದರ್ಭದಲ್ಲಿ ಮಾನ್ಯ ಖಾದರ್‌ರವರ ಬಗ್ಗೆ ಆಘಾತಕಾರಿಯಾದ ಹೇಳಿಕೆಯೊಂದನ್ನು ನೀಡಿದರು ಹಾಗೂ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, "ಏ ಖಾದರ್, ನೀನೇನಾದರೂ ಹೀಗೆ ಮಾಡುತ್ತಿದ್ದರೆ, ನಿನ್ನ ಕೈ ಮತ್ತು ಕಾಲುಗಳನ್ನು ಮುರಿಯುತ್ತೇವೆ, ಹೆಚ್ಚಿಗೆ ಮಾತನಾಡಿದರೆ, ನಿನ್ನ ರುಂಡವನ್ನು ಕತ್ತರಿಸುತ್ತೇವೆ" ಎಂಬುದಾಗಿ ಹೇಳಿದರು. ಇದೇ ಶಬ್ದಗಳನ್ನು ಅವತ್ತಿನ ದಿವಸ ಆ ಸಂದರ್ಭದಲ್ಲಿ ಹೇಳಿದರು. "ರುಂಡವನ್ನು ಕತ್ತರಿಸುತ್ತೇವೆ, ಕೈ–ಕಾಲುಗಳನ್ನು ತುಂಡು ಮಾಡುತ್ತೇವೆ" ಎಂಬಂತಹ ಅವಾಚ್ಯ ಶಬ್ದಗಳನ್ನು ಉಪಯೋಗಿಸಿದರು. ಆದರೆ ಇಲ್ಲಿರುವ ನನ್ನ ಪ್ರಶ್ನೆ ಏನೆಂದರೆ, ಇವತ್ತಿನ ದಿವಸದವರೆಗೆ ಅಂತಹ ಹೇಳಿಕೆ ನೀಡಿದವರ ವಿರುದ್ಧ ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಹಾಗೂ ಯಾವ ರೀತಿಯ ಶಿಕ್ಷೆಯನ್ನು ನೀಡಲಾಗಿದೆ? ನಗರದ ಬೀದಿಯಲ್ಲಿ ನಿಂತುಕೊಂಡು ಕೇಕೆ ಹಾಕುತ್ತಾ ಒಬ್ಬ ಶಾಸಕರನ್ನು ಅವರ ರುಂಡ ಹಾಗೂ ಕೈ–ಕಾಲುಗಳನ್ನು ತುಂಡರಿಸುತ್ತೇವೆ ಎಂಬುದಾಗಿ ಹೇಳಿದ್ದವರ ವಿರುದ್ಧ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವುದು ನಮಗೆ ಇಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ...

**ಡಾ|| ಜಯಮಾಲ:–** ಮಾನ್ಯ ಸಭಾನಾಯಕರೇ, ನಾನು ಮಾತನಾಡುವ flow cut ಆಗುತ್ತದೆ. ನಾನು yield ಆಗುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ರೀತಿಯಾಗಿ ಮಾತನಾಡಿದರೆ, ತಪ್ಪು ಸಂದೇಶ ಹೋಗುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ಜಯಮಾಲ:–** ಮಾನ್ಯ ಸಭಾನಾಯಕರೇ, ಮಾನ್ಯ ಸಭಾನಾಯಕರ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ನೀವು ಎಲ್ಲವನ್ನೂ ದಾಖಲು ಮಾಡಿಕೊಳ್ಳಿ. ನಂತರದಲ್ಲಿ ನೀವು ಹೇಳಿ. ತಮಗೆ ತಿಳಿದಿರುವಂತೆ ನಾನು ಮಾತನಾಡುವುದು ಕಡಿಮೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಸಭಾನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲವೆಂದರೆ ಹೇಗೆ?

**ಡಾ॥ಜಯಮಾಲ:–** ಮಾನ್ಯ ಸಭಾಪತಿಯವರೇ, Please, ನಾನು ಮಾನ್ಯ ಸಭಾನಾಯಕರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶ ನೀಡಿ. ಕೊನೆಯಲ್ಲಿ ಉತ್ತರ ನೀಡಬೇಕಾದ ಸಂದರ್ಭದಲ್ಲಿ ಅವರು ಮಾತನಾಡಲಿ. ಸದಸ್ಯರು ಮಾತನಾಡುವಾಗ ನೀವು ಏಕೆ ಮಧ್ಯದಲ್ಲಿ ಅಡ್ಡಿಪಡಿಸುತ್ತಾರೆ?

**ಡಾ॥ ಜಯಮಾಲ:–** ಸಭಾನಾಯಕರೇ, ತಾವು ಕೊನೆಯಲ್ಲಿ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವುದೇ ರೀತಿಯಾದ ಚರ್ಚೆಗಳು ಬಂದಾಗ...

**ಡಾ॥ಜಯಮಾಲ:–** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಸಭಾನಾಯಕರು ಕೊನೆಯದಾಗಿ ಉತ್ತರ ಕೊಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಬೇಕು. ಅವರು ಮಾತನಾಡುವುದನ್ನು ಮುಂದುವರೆಸುತ್ತೀರೋ ಅಥವಾ ಬಿಡುತ್ತೀರೋ, ನಾನು ಹೇಳುವುದನ್ನು ಕೇಳಲಿ. ಯಾವುದೇ ರೀತಿಯಾದ ಚರ್ಚೆಗಳು ಬಂದಾಗ, ಅದಕ್ಕೆ ಉತ್ತರಿಸುವುದು ಸರ್ಕಾರದ ಜವಾಬ್ದಾರಿ. ಜನರಿಗೆ ತಪ್ಪು ಮಾಹಿತಿ ಹೋಗಬಾರದು. ಯಾರೇ ಒಬ್ಬ ಶಾಸಕರಿಗೆ ತೊಂದರೆಯಾದರೆ, . . .

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರಿಗೆ ಬೆಟ್ಟದ್ದಷ್ಟು ಅವಕಾಶ ದೊರೆಯುತ್ತದೆ. ಆದರೆ ಮಾನ್ಯ ಸದಸ್ಯರಿಗೆ ಸ್ವಲ್ಪವೇ ಅವಕಾಶ ದೊರೆಯುತ್ತದೆ. ದಯಮಾಡಿ ಮಾನ್ಯ ಸಭಾನಾಯಕರು ಸದಸ್ಯರು ಹೇಳುವ ವಿಚಾರವನ್ನು ಕೇಳಬೇಕು.

(ಮುಂದು)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(048)/19–2–2020/11–40/ಎಲ್ಎಂ/ಎಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಇಲ್ಲಿ ಬೆಟ್ಟ ಗುಡ್ಡದ ಪ್ರಶ್ನೆಯಲ್ಲ, ಮಾನ್ಯ ಸದಸ್ಯರು ಮಾತನಾಡುವಾಗ ಮಧ್ಯೆ ಪ್ರವೇಶ ಮಾಡುವ ಜವಾಬ್ದಾರಿ ಸರ್ಕಾರಕ್ಕೆ ಇರುತ್ತದೆ. ಮಾನ್ಯ ಸದಸ್ಯರಾದ ಖಾದರ್‌ರವರನ್ನು ಯಾರೊ ಯುವಕರು ಅಪಮಾನ ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಈಗ ಮಾತನಾಡುತ್ತಾ ಹೇಳಿದ್ದಾರೆ. ಅದರ ಬಗ್ಗೆ ಅಪಮಾನಕ್ಕೆ ಒಳಗಾದ ಶಾಸಕರು ದೂರು ಕೊಟ್ಟು ಪೊಲೀಸ್‌ನವರು ಏನು ಕ್ರಮ ತೆಗೆದುಕೊಂಡಿಲ್ಲ ಎನ್ನುವುದಾದರೆ ಅದರ ಬಗ್ಗೆ ಮಾನ್ಯ ಸದಸ್ಯರು ಹೇಳಲಿ. ದೂರು ಕೊಟ್ಟಿದ್ದಾರೊ ಇಲ್ಲವೊ ಎನ್ನುವುದನ್ನು ಕೇಳಿಕೊಳ್ಳಬೇಕು. ಅಲ್ಲಿ ಏನು ಆಗಿದೆ ಎನ್ನುವುದನ್ನು ಊಹೆ ಮಾಡಿಕೊಂಡು ಇಲ್ಲಿ ಮಾತನಾಡಬಾರದು ಎನ್ನುವುದು ನನ್ನ ವಿನಂತಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ಏನು ಪತ್ರಿಕೆಗಳಲ್ಲಿ ಅದನ್ನು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯದ ಮುಖಾಂತರ ಮಂಡಿಸುತ್ತಿದ್ದಾರೆ, ಅದನ್ನು ಮಾನ್ಯ ಸಭಾನಾಯಕರು ನೋಟ್ ಮಾಡಿಕೊಂಡು ಸರಿ ತಪ್ಪು ಎನ್ನುವುದನ್ನು ಉತ್ತರ ಕೊಡುವ ಸಮಯದಲ್ಲಿ ಹೇಳಲಿ. ಪ್ರತಿಯೊಂದು ವಿಷಯಕ್ಕೂ ಏಕೆ ಅಡ್ಡಿಪಡಿಸುತ್ತೀರಿ?

**ಶ್ರೀ ಕೆ.ಹರೀಶ್ ಕುಮಾರ್:–** ಜಿಲ್ಲಾ ಕಾಂಗ್ರೆಸ್ ವತಿಯಿಂದ ಪೊಲೀಸ್ ಕಮೀಶನರ್‌ರವರಿಗೆ ಲಿಖಿತವಾಗಿ ದೂರನ್ನು ಕೊಟ್ಟಿದ್ದೇವೆ.

**ಡಾ: ಜಯಮಾಲ:–** ಮಾನ್ಯ ಸಭಾಪತಿಗಳೆ, ದೇಶದ್ರೋಹದ ಕೇಸ್‌ಗಳನ್ನು ಹಾಕುವುದಾದರೆ, ಬಹುಷ: ಈ ಭಾಗದ 50% ಜನರ ಮೇಲೆ ಕೇಸ್ ಹಾಕಬಹುದು. ಆದರೆ ಆ ದೇಶದ್ರೋಹದ ಕೇಸ್‌ಗಳು fit in ಆಗುವುದಿಲ್ಲ. ಇದರ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಬೀದರ್ ಕೇಸ್ ಬಗ್ಗೆ ಹೇಳಬೇಕಾಗುತ್ತದೆ. ಅಲ್ಲಿ 9 ವರ್ಷದ ಒಂದು ಮಗುವಿನಿಂದ CAA [Citizenship (Amendment) Act] ಗೆ ಸಂಬಂಧಪಟ್ಟ ಹಾಗೆ ಒಂದು ನಾಟಕವನ್ನು ಮಾಡಿಸುತ್ತಾರೆ. ಆ ನಾಟಕ ವಿಡಂಬನೆಯಾಗಿರುತ್ತದೆ. ಆ ನಾಟಕದಲ್ಲಿ ಆ ಮಗು ಒಂದು ಮಾತನ್ನು ಹೇಳುತ್ತದೆ, ಅದೇನೆಂದರೆ, "ಸಿಎಎ ಬಗ್ಗೆ ಕೇಳಲು ಬರುವವರನ್ನು ಮೈ ಚಪ್ಪಲ್‌ಸೆ ಮಾರುಂಗಿ" ಎಂದು ಹೇಳುತ್ತದೆ. 9 ವರ್ಷದ ಮಗುವಿನ ಬಾಯಿಯಿಂದ ಈ ರೀತಿ ಶಬ್ದಗಳನ್ನು ಹೇಳಿಸಿರುವುದನ್ನು ನಾನು ಖಂಡಿತವಾಗಿ ಒಪ್ಪುವುದಿಲ್ಲ. ಇಲ್ಲಿ ಒಂದು ವಿಚಾರವನ್ನು ನಾನು ಹೇಳಬಯಸುತ್ತೇನೆ. ನಾನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿದ್ದಾಗ ಮಕ್ಕಳ ಗ್ರಾಮಸಭೆಯನ್ನು ಜಾರಿಗೆ ತರಲಾಯಿತು. ಅದರಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಪ್ರತಿ ತಿಂಗಳು ಗ್ರಾಮಸಭೆಯನ್ನು ಮಾಡಿ ಅದರಲ್ಲಿ ಮಕ್ಕಳಿಂದ ನಾಟಕವನ್ನು ಮಾಡಿಸಲಾಗುತ್ತಿತ್ತು. ನಾಟಕದಿಂದ ಕುಟುಂಬ ವ್ಯವಸ್ಥೆಯನ್ನು ಮಕ್ಕಳಿಗೆ ಅರ್ಥ ಮಾಡಿಸಲಾಗುತ್ತಿತ್ತು. ನಾಟಕದಲ್ಲಿ ಮಕ್ಕಳು "ನೋಡು ಅವರ ಅಪ್ಪ ತುಂಬಾ ಕುಡಿದು ಅವರ ಹೆಂಡತಿಗೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಡೆಯುತ್ತಾರಂತೆ" "ನನ್ನ friend ತಂಗಿಯನ್ನು ಶಾಲೆಗೆ ಕಳುಹಿಸುತ್ತಿಲ್ಲ, ಅವರ ತಂದೆ ಹೋಗಿಬಿಟ್ಟರಂತೆ" ಈ ರೀತಿಯ ಮಾತುಗಳನ್ನು ಮಕ್ಕಳಿಂದ ಹೇಳಿಸಿ, ಕುಟುಂಬದ ಪರಿಸ್ಥಿತಿಯನ್ನು, ಸಮಾಜವನ್ನು ಮಕ್ಕಳು ತಿಳಿದುಕೊಳ್ಳಲು ಸಾಧ್ಯವಾಗುತ್ತಿತ್ತು. ಇದರಿಂದ ದೊಡ್ಡ ಮಾಹಿತಿಯನ್ನು ಗ್ರಾಮಸಭೆಯಿಂದ ಪಡೆಯಬಹುದಾಗಿತ್ತು. ಸಮಾಜವನ್ನು ಸರ್ಕಾರ ಅರ್ಥ ಮಾಡಿಕೊಂಡು, ಸಮಾಜವನ್ನು ಪರಿಸರವನ್ನು ಸುಧಾರಣೆ ಮಾಡುವಂತಹ ಕೆಲಸಗಳು ಆ ಗ್ರಾಮಸಭೆಗಳ ಮುಖಾಂತರ ನಡೆಯುತ್ತಿದೆ. ಈ ರೀತಿಯ ಮಾತನ್ನು ಹೇಳುವಾಗ ಆ 9 ವರ್ಷದ ಮಗು ತಂದೆ–ತಾಯಿ, ಸಮುದಾಯ, ಸಮಾಜದ ನಡುವೆ ತನಗೆ ಇಷ್ಟ ಇಲ್ಲದಂತಹ ಮನಸ್ಥಿತಿಯನ್ನು ಅನುಭವಿಸಿದೆ." ಎಂತಹ ಮನಸ್ಥಿತಿಯನ್ನು ಆ ಮಗು ಅನುಭವಿಸಿದೆ ಎನ್ನುವುದನ್ನು ನಾವು ಇವತ್ತು ಆಲೋಚನೆ ಮಾಡಬೇಕಾಗಿದೆ. ಆ ಮಗುವಿನ ತಾಯಿಯನ್ನು ಕರೆಯಿಸಿ ತನಿಖೆಯನ್ನು ಮಾಡುತ್ತಾರೆ. ಆ ತನಿಖೆಯಲ್ಲಿ ಕೇಳಿದ ಪ್ರಶ್ನೆಯನ್ನೆ ಪದೇ–ಪದೇ ಕೇಳುತ್ತಾರೆ. ಆ ತಾಯಿ ಅತ್ಯಂತ ಕಡುಬಡವಿ, ಒಂದು ಅಕ್ಷರವನ್ನು ಕಲಿಯದೆ ಇರುವ ಅವಿದ್ಯಾವಂತೆ, ಗಂಡನನ್ನು ಕಳೆದುಕೊಂಡಿರುವಂತಹ ವಿಧವೆ. ಆಕೆಯ ಜೀವನದ ಆಸರೆ ಎಂದರೆ, ಆ 9 ವರ್ಷದ ಮಗು ಮಾತ್ರ. ಆ ಮಗುವಿಗಾಗಿ ತಾಯಿ ನೀವು ಏನು ಹೇಳಿದರೂ ಮಾಡುತ್ತೇನೆ ಎನ್ನುವ ಸ್ಥಿತಿಗೆ ಬರುತ್ತಾರೆ. ಅವಳ ಮೇಲೆ ದೇಶದ್ರೋಹದ ಕೇಸ್ ಹಾಕಿ ಜೈಲಿಗೆ ಹಾಕುತ್ತಾರೆ. ಇಬ್ಬರು ಹೆಣ್ಣುಮಕ್ಕಳನ್ನು ಜೈಲಿಗೆ ಹಾಕುತ್ತಾರೆ. ಕೋರ್ಟ್‌ಗೆ ಹಾಜರುಪಡಿಸಿದಾಗ ಇವರಿಗೆ ಜಾಮೀನು ಸಿಗುತ್ತದೆ. ಆದರೆ ಜಾಮೀನು ನೀಡಲು surety ಗೆ 2 ಲಕ್ಷ ರೂ.ಗಳ bond ನ್ನು ಕೊಡಬೇಕು ಎಂದು ಕೋರ್ಟ್ ಹೇಳುತ್ತದೆ. ಆ ಕಡು ಬಡವಿ ಬಾಂಡ್‌ಗಾಗಿ ಎರಡು ಲಕ್ಷ ರೂ.ಗಳ ವ್ಯವಸ್ಥೆ ಮಾಡಬೇಕಾಗುತ್ತದೆ. ಇಂದಿನ ವ್ಯವಸ್ಥೆ ಬಗ್ಗೆ ನಾನು ಮಾತನಾಡುತ್ತಿದ್ದೇನೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ**:– ಮಾನ್ಯ ಸಭಾಪತಿಗಳೆ, ನನ್ನ point of order ಇದೆ. ದಯಮಾಡಿ ಅವಕಾಶ ಮಾಡಿಕೊಡಿ. ಮಾನ್ಯ ಸಹೋದರಿಯವರು ಬೀದರ್ ನಗರದ ಶಾಹೀನ ಶಿಕ್ಷಣ ಸಂಸ್ಥೆ ಬಗ್ಗೆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಸ್ಥಳೀಯ ಶಾಸಕ. ಸಹೋದರಿಯವರು ಮಾತನಾಡುವಾಗ ಮಧ್ಯೆ ಪ್ರವೇಶ ಮಾಡಲು ನನಗೆ ಇಷ್ಟವಿಲ್ಲ. ಆದರೂ ತಪ್ಪು ಮಾಹಿತಿ ರೆಕಾರ್ಡ್‌ಗೆ ಹೋಗಬಾರದು ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ.

**ಸಭಾಪತಿಯವರು**:– ನಿಮ್ಮ point of order ಏನು ಹೇಳಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ**:– ಮಾನ್ಯ ಸಭಾಪತಿಗಳೆ, point of order ಏನು ಎಂದರೆ, ಶಾಹೀನ್ ಶಿಕ್ಷಣ ಸಂಸ್ಥೆ ಮೇಲೆ ಹಾಕಿರುವ ಕೇಸ್ ವಿಚಾರವಾಗಿ, ಮಾನ್ಯ ಸಹೋದರಿಯವರು ಒಂದು ಮಗುವಿಗೆ ಸಿಮೀತವಾಗಿ ಮತ್ತು ತಾಯಿಗೆ ಸಿಮೀತವಾಗಿ ಮಾತ್ರ ಮಾತನಾಡುತ್ತಿದ್ದಾರೆ. ಒಂದು ಶಾಲೆಯಲ್ಲಿ Annual Day ಇರುತ್ತದೆ, ಆ ಸಂದರ್ಭದಲ್ಲಿ ಒಂದು ನಾಟಕವನ್ನು ಮಾಡಿಸಿದ್ದಾರೆ. ಆ ನಾಟಕದಲ್ಲಿ ಈ ರೀತಿ ಮಾತುಗಳು ಬಂದಿವೆ ಎಂದು ಅವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತಿದ್ದಾರೆ. ನನ್ನ objection ಏನು ಎಂದರೆ ಇದು ಆ ಮಗು ಮಾಡಿರುವ ಕೃತ್ಯವಲ್ಲ. ಮಗುವಿನ ಕೈಯಿಂದ ಆ ಕೃತ್ಯವನ್ನು ಮಾಡಿಸಲಾಗಿದೆ. ಇದರ ಸಂಪೂರ್ಣ ಜವಾಬ್ದಾರಿ ಆ ಸಂಸ್ಥೆಯ ಆಡಳಿತ ಮಂಡಳಿ ಮೇಲೆ, ಅಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಮೇಲೆ ಇದೆ.

**ಡಾ: ಜಯಮಾಲ:-** ನನ್ನ ಮಾತುಗಳು ಮುಗಿದ ಮೇಲೆ ತಾವು ತಮ್ಮ ವಿಚಾರವನ್ನು ಹೇಳಬಹುದಲ್ಲವೆ?

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ನಾನು ಹೇಳಿ ಮುಗಿಸಿಬಿಡುತ್ತೇನೆ. ನಿಮಗೆ ಅಡ್ಡಿಪಡಿಸಬೇಕು ಎನ್ನುವ ಉದ್ದೇಶ ನನಗೆ ಇಲ್ಲ. ಈ ಸಂಸ್ಥೆಯ ಆಡಳಿತ ಮಂಡಳಿಯಲ್ಲಿರುವವರ ಜವಾಬ್ದಾರಿ ಬಗ್ಗೆ ಹೇಳಬೇಕಾಗಿದೆ. ಅಲ್ಲಿ ಇರುವವರು ನಾವು ಒಂದೇ ಊರಿನಲ್ಲಿದ್ದವರು, ನಾವು ಹಿಂದೂ ಆಗಿರಬಹುದು, ಅವರು ಮುಸ್ಲಿಂ ಆಗಿರಬಹುದು ನಾವು ಒಂದೇ ತಾಯಿ ಮಕ್ಕಳಂತೆ ಇದ್ದವರು, ಯಾವುದೆ ಬೇಧ-ಭಾವ ನಮ್ಮಲ್ಲಿ ಇರಲಿಲ್ಲ. ಈ ಶಾಲೆಯಲ್ಲಿ ಬೀದರ್ ನಗರದ ಸುಮಾರು 8000 ಮಕ್ಕಳು ಓದುತ್ತಿದ್ದಾರೆ. ಅದರಲ್ಲಿ ಸುಮಾರು 6000 ಮಕ್ಕಳು ಹಿಂದೂ ಧರ್ಮದವರು. ನಾವು ಕೂಡಾ ಆ ಸಂಸ್ಥೆ ಬಗ್ಗೆ ಯಾವತ್ತು ಅನುಮಾನಪಟ್ಟಿರಲಿಲ್ಲ. ಆದರೆ ತನಿಖೆ ಪ್ರಾರಂಭವಾದ ಮೇಲೆ ಗೊತ್ತಾಗುತ್ತಿದೆ, ಈ ಶಿಕ್ಷಣ ಸಂಸ್ಥೆಯಲ್ಲಿ ಬರಿ ಶಿಕ್ಷಣವನ್ನು ಕೊಡುತ್ತಿಲ್ಲ, ಧಾರ್ಮಿಕ ಪ್ರಚೋದನೆ ಮತ್ತು ಧಾರ್ಮಿಕ ಜೀವನ ಪದ್ಧತಿಯನ್ನು ಮಕ್ಕಳಿಗೆ ಕಲಿಸುತ್ತಿದ್ದಾರೆ ಎನ್ನುವುದು ತಿಳಿದು ಬರುತ್ತಿದೆ. ಅದರ pamphlet ನ್ನು ತಮಗೆ ಕೊಡುತ್ತೇನೆ.

**ಡಾ: ಜಯಮಾಲ:-** ನೀವು point of order ಗೆ ಸಂಬಂಧಪಟ್ಟ ಹಾಗೆ ಮಾತ್ರ ಹೇಳಿ. ನಿಮಗೆ ಮಾತನಾಡಲು ಅವಕಾಶ ಕೊಟ್ಟಾಗ ನೀವು ಮಾತನಾಡಿ. ಈಗ ನನಗೆ ಮಾತನಾಡಲು ಅವಕಾಶ ಕೊಡಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ನಾನು point of order ಬಗ್ಗೆಯೇ ಹೇಳುತ್ತಿದ್ದೇನೆ. The pamphlet says that this school has strict Islamic environment.

**ಶ್ರೀ ಎಸ್.ಆರ್.ಪಾಟೀಲ್:-** ಏನು point of order ಏನು ಎನ್ನುವುದನ್ನು ಹೇಳಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ತಪ್ಪು ವಿಚಾರವನ್ನು ಮಂಡಿಸುತ್ತಿದ್ದಾರೆ ಎನ್ನುವುದೇ ನನ್ನ point of order.

**Sri S.R. PATIL:** Mr. Chairman, Sir, this point of order cannot be sustained.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಪೊಲೀಸ್ ಇಲಾಖೆ ತನಿಖೆ ಮಾಡುತ್ತಿರುವಾಗ ನೀವು ಏಕೆ ಮಧ್ಯಪ್ರವೇಶ ಮಾಡುತ್ತಿದ್ದೀರಿ?

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಅವರು point of order ಬಗ್ಗೆ ಮಾತನಾಡುತ್ತಿಲ್ಲ. ಭಾಷಣ ಮಾಡುತ್ತಿದ್ದಾರೆ.

**ಶ್ರೀ ಶರಣಪ್ಪ ಮಟ್ಟೂರ:** ನೀವು ನಿಮ್ಮ point of order ಬಗ್ಗೆ ಹೇಳಿ.

(ಗೊಂದಲ)

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಗಳೆ, ಧರ್ಮದ ಬಗ್ಗೆ ಹೇಳಬೇಕಾದರೆ ಮದರಸಾಗಳನ್ನು ಪ್ರಾರಂಭ ಮಾಡಲಿ. ಕನ್ನಡ ಮಾಧ್ಯಮಿಕ ಶಾಲೆ ಎಂದು ಸರ್ಕಾರದಿಂದ ಅನುಮತಿಯನ್ನು ಪಡೆದು, ಸರ್ಕಾರದಿಂದ ಅನುದಾನವನ್ನು ತೆಗೆದುಕೊಂಡು ಧರ್ಮದ ಬಗ್ಗೆ ಬೋಧನೆ ಮಾಡುತ್ತಿದ್ದಾರೆ. This is not my pamphlet. This is the pamphlet of that institution.

(ಗೊಂದಲ)

**ಡಾ: ಜಯಮಾಲ:–** ಮಾನ್ಯ ಸಭಾಪತಿಗಳೆ, ನನಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

**Sri RAGHUNATHRAO MALKAPURE:** It is a government recognized high school.

(ಗೊಂದಲ)

**ಶ್ರೀ ನಸೀರ್ ಅಹ್ಮದ್:–** ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ Islamic studies ಬಗ್ಗೆ ಬೋಧನೆ ಮಾಡುತ್ತಾರೆ.

(ಗೊಂದಲ)

**Sri RAGHUNATHRAO MALKAPURE:** It is a government recognized high school.... (ಗೊಂದಲ)... It is also given in the pamphlet that "After completion of the course girls can understand Quran in Arabic Language", "Strict Islamic Environment". ಈ ಕಂಡೀಶನ್ ಮೇಲೆ ಹೈಸ್ಕೂಲ್ ನಡೆಸಲು ರಾಜ್ಯ ಸರ್ಕಾರ ಅನುಮತಿ ಕೊಟ್ಟಿದೆಯೇ? ಇವರು ತಪ್ಪು ವಿಷಯವನ್ನು ಹೇಳುತ್ತಿದ್ದಾರೆ. ಅದಕ್ಕಾಗಿಯೇ ನಾನು point of order ಎಂದು ಹೇಳಿರುವುದು.

**Sri S.R. PATIL:** There is no point of order.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ: ಜಯಮಾಲ:–** ಮಾನ್ಯ ಸಭಾಪತಿಗಳೆ, ನನಗೆ ಮಾತನಾಡಲು ಅವಕಾಶ ಮಾಡಿಕೊಡಿ. ನನ್ನ ಮಾತುಗಳು ಮುಗಿದ ಮೇಲೆ ಅವರು ಮಾತನಾಡಲಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ತನಿಖೆ ನಡೆಯುತ್ತಿರುವಾಗ ಮಧ್ಯಪ್ರವೇಶ ಮಾಡಿ ತನಿಖೆಗೆ ಅಡ್ಡಿಪಡಿಸುತ್ತಿದ್ದಾರೆ.

(ಗೊಂದಲ)

**Sri S.R. PATIL:** The Hon. Member cannot substantiate the point of order. He is unable to substantiate the point of order.

(ಗೊಂದಲ)

**ಡಾ: ಜಯಮಾಲ:–** ಮಾನ್ಯ ಸಭಾಪತಿಗಳೆ, ನನ್ನ ಮಾತು ಸಂಪೂರ್ಣವಾಗುವವರೆಗೆ ಅವರು ತಾಳ್ಮೆಯಿಂದ ಇರಲಿ.

(ಗೊಂದಲ)

**Sri NASEER AHMED:** Islamic studies is there in all universities.

(ಗೊಂದಲ)

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ನಾಯಕಿ Brinda Karat ರವರು ಬೀದರ್‌ಗೆ ಬರುತ್ತಾರೆ. ಹೈದ್ರಾಬಾದ್‌ನಿಂದ ಓವೈಸಿ ರವರು ಬರುತ್ತಾರೆ. ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಭೇಟಿ ಮಾಡುತ್ತಾರೆ.

(ಗೊಂದಲ)

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಹೋದರಿಯವರಲ್ಲಿ ವಾಸ್ತವಿಕ ಸ್ಥಿತಿ ಏನು ಇದೆ ಅದನ್ನು ಸರ್ಕಾರದ ಗಮನಕ್ಕೆ ತನ್ನಿ ಎಂದು ವಿನಂತಿಸಿಕೊಳ್ಳುತ್ತೇನೆ. ದಯಮಾಡಿ ತಪ್ಪು ಸಂದೇಶ ಕೊಡುವುದು ಬೇಡ.

(ಮುಂದು)

049/19–02–2020/11–50/ಬಿಎಸ್‌ಡಿ–ಏಕೆ

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕ್ರಿಯಾಲೋಪದ ನಿಯಮವನ್ನು ಓದಬೇಕು. ಅವರು ಕ್ರಿಯಾಲೋಪ ಏನು ಎಂದು ಹೇಳುವುದಿಲ್ಲ. ಸುಮ್ಮನೆ ಇತಿಹಾಸ ಹೇಳಿಕೊಂಡು ಹೋಗುತ್ತಾರೆ. ಅವರು ಕ್ರಿಯಾಲೋಪದ ಬಗ್ಗೆ ಪ್ರಸ್ತಾಪ ಮಾಡಿದರು. The Hon. Member has got a right to raise it. ನಂತರ ಮಾನ್ಯ ಸಭಾಪತಿಯವರು ರೂಲಿಂಗ್ ಕೊಡಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಈಗ point of order ಏನಾಯಿತು? ಮಾನ್ಯ ಸದಸ್ಯರು ಹೇಳಬೇಕು. ಅಲ್ಲಿ ಸುಮ್ಮನೆ ಮಾತನಾಡಿದರೆ ಕಡತಕ್ಕೆ ಹೋಗುವುದಿಲ್ಲ. ನಾನು point of order raise ಮಾಡಲು ಅವಕಾಶ ಕೊಟ್ಟನೇ ಹೊರತು ಭಾಷಣ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. Point of order ಏನೆಂದು ಹೇಳಿ. ನಿಮಗೆ ಭಾಷಣ ಮಾಡಲು ಅವಕಾಶ ಕೇಳಿದರೆ ಅವಕಾಶ ಕೊಡುತ್ತೇನೆ. ಆದರೆ point of order ಎಂದು ಹೇಳಿ ಭಾಷಣ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಅಲ್ಲಿ ನಡೆದ ವಿಷಯವು ಒಂದು ಮಗು ಅಥವಾ ಆ ಮಗುವಿನ ತಾಯಿಗೆ ಮಾತ್ರ ಸೀಮಿತವಲ್ಲ, ತಪ್ಪು ಸಂದೇಶ ಹೋಗುವುದು ಬೇಡ, ಅದನ್ನು ಸರಿಮಾಡಿಕೊಳ್ಳಿ ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ನಿಯಮವನ್ನು ಸರಿಯಾಗಿ ತಿಳಿದುಕೊಳ್ಳಬೇಕು. Is it a point of order?

**ಸಭಾಪತಿಯವರು:–** ಸರಿ, ತಪ್ಪು ಯಾವುದು ಎಂದು ಅಲ್ಲಿ ಕುಳಿತುಕೊಂಡು ಹೇಳುವುದಕ್ಕೆ ಆಗುತ್ತದೆಯೇ?

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ದಯಮಾಡಿ ಕ್ರಿಯಾಲೋಪ ಏನು ಎಂದು ಹೇಳಬೇಕು.

**(ಗೊಂದಲ)**

**Sri S.R. PATIL:** Point of order ಎಂದು ಅವರು ಭಾಷಣ ಮಾಡುತ್ತಿದ್ದಾರೆ. ಹೀಗಾದರೆ ಹೇಗೆ? ತಪ್ಪು ದಾರಿಗೆ ಎಳೆದಂತಾಗುತ್ತದೆ. There is no point of order in his case. ಅವರು ನಿಯಮಗಳನ್ನು ಓದಿ point of order raise ಮಾಡಬೇಕು. As a Member, he has got a right to raise a point of order.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ಹೇಳಿರುವುದರಲ್ಲಿ ಪಾಯಿಂಟೂ ಇಲ್ಲ, ಆರ್ಡರ್ರೂ ಇಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಅದೆಲ್ಲವೂ ದಾಖಲೆಗೆ ಹೋಗುವುದು ಬೇಡ.

**ಸಭಾಪತಿಯವರು:–** ತಾವು ಏಕೆ yield ಆಗುತ್ತೀರಿ?

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ: ಜಯಮಾಲ:–** ಮಾನ್ಯ ಸಭಾಪತಿಯವರೇ, ಇನ್ನು ಯಾರೇ ಮಾತನಾಡಿದರೂ yield ಆಗುವುದಿಲ್ಲ. 5 ದಿನಗಳ ಕಾಲ ಪೊಲೀಸ್‌ನವರು 52 ಮಕ್ಕಳನ್ನು ನಾಲ್ಕರಿಂದ 5 ಗಂಟೆಗಳವರೆಗೆ investigate ಮಾಡುತ್ತಾರೆ. ಮಕ್ಕಳಿಗೆ ಪದೇ ಪದೇ ಪ್ರಶ್ನೆಗಳನ್ನು ಕೇಳಿ, ಮಕ್ಕಳಿಗೆ ಯಾವ ರೀತಿ ಭಯ ಆವರಿಸಿದೆ ಎಂದರೆ ಅ ಮಕ್ಕಳು ಶಾಲೆಗೆ ಹೋಗುವುದಿಲ್ಲ ಎನ್ನುವ ಭಯದಲ್ಲಿದ್ದಾರೆ. ಪೊಲೀಸ್‌ನವರು ನಾಲ್ಕೈದು ಗಂಟೆಗಳ ಕಾಲ investigate ಮಾಡಿದರೆ ಮಕ್ಕಳು ಶಾಲೆಗೆ ಹೋಗುತ್ತಾರೆಯೇ? ನಾವು ಸದನದಲ್ಲಿ dropout ಆದ ಮಕ್ಕಳನ್ನು ಶಾಲೆಗೆ ಸೇರಿಸಿ, ಮಕ್ಕಳನ್ನು ಕರೆತನ್ನಿ ಎಂದು ಮಾತನಾಡುತ್ತೇವೆ, ಇದಕ್ಕೆ ಅನೇಕ ಕಾನೂನುಗಳನ್ನು ಮಾಡಿಕೊಂಡಿದ್ದೇವೆ. ಆದರೆ ಆ ಮಕ್ಕಳ ತಂದೆ–ತಾಯಿಗಳ ಅನುಮತಿ ತೆಗೆದುಕೊಳ್ಳದೇ, Child Rights Act ಅನ್ನು ಪಾಲನೆ ಮಾಡದೇ, uniform ನಲ್ಲಿ ಪೊಲೀಸ್‌ನವರು ಮಕ್ಕಳನ್ನು investigate ಮಾಡಿದ್ದಾರೆ. ಅವರು ನಾಳೆ ದಿವಸ ಶಾಲೆಗೆ ಹೋಗುತ್ತಾರೆಯೇ? ಆ ಮಕ್ಕಳು ಖಿನ್ನತೆಗೆ ಹೋಗುವುದಿಲ್ಲವೇ? ಆ ಮಕ್ಕಳ ಭವಿಷ್ಯ ಏನು? ಇವುಗಳ ಬಗ್ಗೆ ಸರ್ಕಾರ ಮತ್ತು ಪೊಲೀಸ್‌ನವರು ಚಿಂತನೆ ಮಾಡಿದ್ದಾರೆಯೇ? ಇವತ್ತಿನ ದಿವಸ child rights ಎನ್ನುವುದು ಎಲ್ಲಿದೆ? Child rights ಅನ್ನುವುದೇ ಇಲ್ಲ. Women rights ಎನ್ನುವುದೂ ಇದ್ದರೂ ಬಾಯಿ ಇಲ್ಲದೇ ಸತ್ತ ಹಾಗೆ ಇದೆ. ಮಾನವ ಹಕ್ಕುಗಳು ಸಹ ಇವತ್ತು ನಡೆಯುತ್ತಿರುವ ಅನ್ಯಾಯ ಮತ್ತು ದೇಶದ್ರೋಹದ ಕೇಸ್‌ಗಳನ್ನು ಹಾಕಿಸಿಕೊಂಡವರಿಗೆ ರಕ್ಷಣೆ ಕೊಡಲು ಅಥವಾ ಅವರ ಬಗ್ಗೆ ಮಾತನಾಡಲೂ ಇಲ್ಲದಂತಾಗಿದೆ. ಇದು ನಿಜಕ್ಕೂ ಶೋಚನೀಯವಾಗಿದೆ. ಇದೊಂದು ರೀತಿಯ ಕೇಸ್ ಆದರೆ ಇನ್ನೂ ಅನೇಕ ರೀತಿಯ ಕೇಸ್‌ಗಳನ್ನು ಹಾಕಿದ್ದಾರೆ. ನಾನು ಇನ್ನೊಂದು ರೀತಿಯ ಕೇಸ್ ಬಗ್ಗೆ ಹೇಳುತ್ತೇನೆ. ನಮ್ಮಲ್ಲಿ ಒಂದು hit and run ಕೇಸ್ ಆಯಿತು. ಕೆಳಮನೆಯ ಶಾಸಕರೊಬ್ಬರು ' ಏನೂ ಆತಂಕ ಪಡಬೇಡಿ, hit and run ಮಾಡಿರುವ ನನ್ನ ಮಗನನ್ನು ನಾನೇ ಠಾಣೆಗೆ ಕರೆದುಕೊಂಡು ಬರುತ್ತೇನೆ ಎಂದು ಹೇಳಿದರು. ನಾನು ಅವರನ್ನು appreciate ಮಾಡುತ್ತೇನೆ. Hit and run ಅನ್ನು ನಿಜವಾಗಲೂ ಮಾಡಬಾರದು. ಅದು ಕಾನೂನಿನಲ್ಲಿ ತಪ್ಪು. ಆದರೆ ತಂದೆ ಕರೆದುಕೊಂಡು ಬಂದು ತಪ್ಪಾಯಿತು ಎಂದು ಹೇಳಿದರು. ಆ ಕೇಸ್‌ನಲ್ಲಿ ಅವರ ಪ್ರಾಮಾಣಿಕತೆಯನ್ನು ಪ್ರದರ್ಶನ ಮಾಡಿದರು. ಆದರೆ ಪ್ರಶ್ನೆ ಏನೆಂದರೆ ಇದು ಎರಡು ಜೀವಗಳನ್ನು ಬಲಿ ತೆಗೆದುಕೊಂಡಿರುವ ಪ್ರಕರಣವಾಗಿದೆ. ನಾನು ಯಾವ ಶಾಸಕರ ಹೆಸರನ್ನು ಹೇಳುವುದಿಲ್ಲ. ಒಬ್ಬ ಸಚಿವರ ಮಗ ಎಂದು ಇಟ್ಟುಕೊಳ್ಳಿ. ನಾನು ಹೆಸರನ್ನು ಹೇಳುವುದಿಲ್ಲ. ಆದರೆ ಇವತ್ತಿಗೂ ಯಾರು ಡ್ರೈವ್ ಮಾಡುತ್ತಿದ್ದರು ಎಂಬ ದಾಖಲೆಗಳನ್ನು ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಯವರು ' ನನಗೆ ವಿಷಯವೇ ಗೊತ್ತಿಲ್ಲ, ನಂತರ ವಿವರಿಸಿ ಹೇಳುತ್ತೇನೆ' ಎಂದರು. ಅದಾದ ನಂತರ Home Minister ಸೇರಿದಂತೆ ಸಂಬಂಧಪಟ್ಟ ಸಚಿವರು ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಂಡು ಹೇಳುತ್ತೇನೆ ಎಂದು ಹೇಳಿದ್ದಾರೆ. ಅವರು ತಿಳಿದುಕೊಂಡು ಹೇಳಲಿ ಎಂದು ನಾವು ಕಾಯುತ್ತಿದ್ದೇವೆ. ಪೊಲೀಸ್ ಇಲಾಖೆಯವರು ಮಾಡುವಂತಹ ತನಿಖೆಗಳನ್ನು ಮಾಡದೇ ಇರುವುದನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಿರಂಗಗೊಳಿಸಿದ ಮಾಧ್ಯಮಗಳಿಗೆ ಈ ಸದನದ ಮೂಲಕ ಒಂದು salute ಕೊಡಲು ಇಷ್ಟಪಡುತ್ತೇನೆ. ಇಡೀ ಮಾಹಿತಿಯನ್ನು ಹೆಕ್ಕಿ ಹೆಕ್ಕಿ ಪ್ರಕಟ ಮಾಡುವ ಕೆಲಸವನ್ನು ಮಾಧ್ಯಮಗಳು ಮಾಡಿವೆ. ಇಂತಹ ಪರಿಸ್ಥಿತಿ ನಿರ್ಮಾಣವಾಗುವುದು ಬೇಕಾಗಿತ್ತೇ? ನಮಗೆ ರಕ್ಷಣೆಯನ್ನು ಕೊಡಬೇಕಾದವರೇ ರಕ್ಷಣೆಯನ್ನು ಕೊಡದಿದ್ದರೆ ಹೇಗೆ? ಕೇಸ್ ದಾಖಲಿಸುವ ಕೆಲಸವನ್ನು ಮಾಡುವವರೇ ಕೇಸ್ ದಾಖಲಿಸದೇ ಎಫ್.ಐ.ಆರ್ ಹಾಕದಿದ್ದರೆ ಹೇಗೆ? ಯಾರು ಡ್ರೈವ್ ಮಾಡುತ್ತಿದ್ದರು ಎಂಬುದನ್ನು ಹೇಳುವುದಿಲ್ಲ. ಹಿಂಭಾಗಿಲಿನಿಂದ ಕಾರನ್ನು ತೆಗೆದುಕೊಂಡು ಹೋಗುತ್ತಾರೆ. ಒಂದು ಆಸ್ಪತ್ರೆಗೆ ಆಕ್ಸಿಡೆಂಟ್ ಆಗಿರುವವರನ್ನು ಕರೆದುಕೊಂಡು ಹೋಗುತ್ತಾರೆ, ಅಲ್ಲಿ stretcher ಕೊಟ್ಟಿರುವವಳು ಫೋಟೋ ನೋಡಿ ' ಇವರೇ ಬಂದು stretcher ಕೊಡಿ ಎಂದು ಕೇಳಿದರು. ನಂತರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು' ಎಂದು ಹೇಳುತ್ತಾಳೆ. ಸರ್ಕಾರಿ ಆಸ್ಪತ್ರೆಯಲ್ಲಿ ಒಂದೂಕಾಲು ಗಂಟೆಯ ರಾತ್ರೋರಾತ್ರಿಯಲ್ಲಿ postmortem ಮಾಡುತ್ತಾರೆ. Postmortem ಮಾಡಿರುವ ವೈದ್ಯರು ಪ್ರಭಾರಿ ಸಚಿವರು ಹೇಳಿರುವುದರಿಂದ ರಾತ್ರಿ ಒಂದೂಕಾಲು ಗಂಟೆಯಲ್ಲಿ ಕೆಲಸ ಮಾಡಬೇಕಾಗಿ ಬಂತು ಎಂದು ಹೇಳಿ ಮಾಧ್ಯಮಗಳಿಗೆ ದಾಖಲೆಗಳನ್ನು ಕೊಡುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಯಾವುದೇ ಮಂತ್ರಿ ಮಗ ಕಾರಿನಲ್ಲಿದ್ದುಕೊಂಡು ಆಕ್ಸಿಡೆಂಟ್ ಮಾಡಿದರೆ ಅದನ್ನು ಮುಚ್ಚಿಕೊಳ್ಳುವುದು ಏಕೆ? ಬೇಕಾದ್ದು ಆಗಿದ್ದರೂ ಸತ್ಯ ಹೇಳಲಿ ಬಿಡಿ. ಮಂತ್ರಿ ಮಗ ಕುಳಿತಿರುವ ಕಾರಿನ್ನು ಯಾರೋ ಡ್ರೈವ್ ಮಾಡುತ್ತಿರುವಾಗ ಆಕ್ಸಿಡೆಂಟ್ ಆಗುತ್ತದೆ. ನಾವು ಹೋಗುವಾಗಲೂ ಆಕ್ಸಿಡೆಂಟ್ ಆಗುತ್ತದೆ. ಆದರೆ ಆಕ್ಸಿಡೆಂಟ್ ಆದ ನಂತರ ಏಕೆ ಮುಚ್ಚಿಡುತ್ತಾರೆ ಎಂಬುದು ಅರ್ಥವಾಗುತ್ತಿಲ್ಲ. ಇದರಲ್ಲಿ ತಪ್ಪೇನಿದೆ? ದಿನನಿತ್ಯ ಎಷ್ಟೋ ಆಕ್ಸಿಡೆಂಟ್‌ಗಳು ಆಗುತ್ತವೆ.

**ಡಾ: ಜಯಮಾಲ:–** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಆಗಿರುವಾಗ ನಮ್ಮ ಆತಂಕ ಏನೆಂದರೆ, ಆಕ್ಸಿಡೆಂಟ್ ಆಗಿರುವ ಕಾರು ಅದಲ್ಲ ಎಂದು ಇನ್ನೊಂದು ಕಾರಿನ ಹೆಸರನ್ನು ಕೊಡುವುದು. ಡ್ರೈವ್ ಮಾಡಿರುವವರು ಯಾರು ಎಂದು ಹೇಳದೇ ಕೇಸ್‌ನ್ನು ದಾಖಲೆ ಮಾಡದೇ ಇರುವುದು, ಎಫ್.ಐ.ಆರ್ ಹಾಕದೇ ಇರುವುದನ್ನು ನೋಡಿದರೆ ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಹಾಕುತ್ತಾರೆ ಎನ್ನುವುದು ಕಾಣುತ್ತದೆ. ನಾವು ಸದನದಲ್ಲಿ ಇಂತಹ ವಿಚಾರಗಳನ್ನು ಮಾತನಾಡಬೇಕೆಂದು expect ಮಾಡುವುದಿಲ್ಲ. ನಾನು expect ಮಾಡುವುದೇನೆಂದರೆ, ಕಲ್ಯಾಣ ಕರ್ನಾಟಕದ ಬಗ್ಗೆ 371(ಜೆ) ಅನುಷ್ಠಾನದ ಬಗ್ಗೆ, ನಮ್ಮಲ್ಲಿನ ಬರ–ನೆರೆ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ಇಂತಹ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಅಂದರೆ ನಮ್ಮನ್ನು ರಕ್ಷಣೆ ಮಾಡುವ ಪೊಲೀಸರ ಬಗ್ಗೆ ಮಾತನಾಡುವ ಸ್ಥಿತಿಗೆ ಬಂದಿದ್ದೇವೆ. ಈ ರೀತಿ ಮಾತನಾಡಲು ಕಾರಣ ಏನು? ಇವತ್ತು ಎಲ್ಲಾ ವ್ಯವಸ್ಥೆಗಳು ಸರಿಯಾಗಿ ಆಗುತ್ತಿವೆಯೇ? ಮಹಿಳೆಯರಿಗೆ ಸಿಗುವ ಸ್ಥಾನಮಾನಗಳು ಸಿಗುತ್ತಿವೆಯೇ? ವಿದ್ಯಾವಂತರಿಗೆ ಉದ್ಯೋಗಗಳು ಸಿಗುತ್ತಿವೆಯೇ? ರೈತರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರದಿಂದ ಕೊಡುವ ಸವಲತ್ತುಗಳು ಸಿಗುತ್ತಿವೆಯೇ? ರಸ್ತೆಗಳು ಆಗಿವೆಯೇ? ಯಾವ ರೀತಿ ರಾಜ್ಯದ ಕಲ್ಯಾಣ ಮತ್ತು ಅಭಿವೃದ್ಧಿಯಾಗಿದೆ ಎಂದು ಚರ್ಚೆ ಮಾಡುವುದನ್ನು ಬಿಟ್ಟು ಇಂತಹ ಹೀನ ಸ್ಥಿತಿಗೆ ಬಂದಿದ್ದೇವೆ.

(ಮುಂದು)

(50)/19.02.2020/12.00/ಹೆಚ್‌ವಿ–ಆರ್‌ಎನ್
**ಡಾಃ ಜಯಮಾಲ (ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಯಾವ ರೀತಿಯ ಅಭಿವೃದ್ಧಿಯಾಗಿದೆ ಎನ್ನುವುದರ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು, ಪೊಲೀಸಿನವರ ಬಗ್ಗೆ, ಸರ್ಕಾರ ಪೊಲೀಸಿನವರನ್ನು ಬಳಸಿಕೊಂಡಿರುವ ಮತ್ತು ಸರ್ಕಾರ ಪೊಲೀಸ್‌ನವರನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುವ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವಂತಹ ಹೀನಸ್ಥಿತಿಗೆ ನಾವು ಬಂದಿದ್ದೇವೆ. ಕೆಲವು ವಿಚಾರಗಳು ಮಾಧ್ಯಮಗಳಲ್ಲಿ ಪ್ರಕಟವಾದಾಗ, ನನ್ನ ಮನಸ್ಸಿಗೆ ಬಹಳ ನೋವಾಯಿತು. ಗೃಹ ಸಚಿವರು ಯಾವ ಪಕ್ಷದವರು ಎನ್ನುವುದು ಪ್ರಶ್ನೆಯಲ್ಲ. ನಾನು ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ಪತಿಯನ್ನು ಕಳೆದುಕೊಂಡ ಮೃತನ ಹೆಂಡತಿ ವಿಧವೆಯಾಗಿದ್ದಾಳೆ, ಆಕೆ 15 ದಿನಗಳ ಹಿಂದೆಯಷ್ಟೇ ಒಂದು ಮಗುವನ್ನು ಕಳೆದುಕೊಂಡಿದ್ದಳು. ಆತನನ್ನು ಹೆತ್ತು–ಹೊತ್ತು ಸಾಕಿ–ಸಲುಹಿದ ತಾಯಿಗೆ 'ಅವ್ವಾ ನಾನು ನಿನ್ನನ್ನು ಸಾಕುತ್ತೇನೆ' ಎಂದು ಹೇಳಿ, ಕುಟುಂಬಕ್ಕೆ ಆಧಾರವಾಗಿದ್ದ ಮಗ ಅಪಘಾತದಲ್ಲಿ ಸತ್ತು ಹೋದಾಗ ಆ ತಾಯಿಯ ಪರಿಸ್ಥಿತಿ ಯಾವ ರೀತಿ ಇರಬಹುದು ಎನ್ನುವುದನ್ನು ನಾವು ಊಹಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಈ ಇಬ್ಬರು ಹೆಣ್ಣು ಮಕ್ಕಳಿಗೆ ಪರಿಹಾರಧನವಾಗಿ 2 ಲಕ್ಷ ರೂಪಾಯಿಗಳನ್ನು ನೀಡುವುದಕ್ಕೆ ಸರ್ಕಾರದಲ್ಲಿ ಹಣವಿಲ್ಲ. ಸರ್ಕಾರ ಕಡು ಬಡವರಿಗೆ ಸಹಾಯ ಮಾಡಬೇಕಾಗಿದೆ. ಅಪಘಾತವಾಗಿರುವುದು ಆಕಸ್ಮಿಕ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಪಘಾತ ಎಲ್ಲಿ ಬೇಕಾದರೂ ಆಗಬಹುದು. ಆದರೆ, ಸತ್ಯವನ್ನು ತಿರುಚುವಂತಹ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ ಎನ್ನುವ ಅಂಶ ಕಂಡುಬಂದಾಗ ನಮಗೆ ಆತಂಕವುಂಟಾಗಿದೆ. ಸಿ.ಎ.ಎ. ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ನಾನು ಈ ಎಲ್ಲ ವಿಚಾರಗಳನ್ನು ಮಾತನಾಡುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, 'ನೆರೆ ಪರಿಹಾರ ಕಾರ್ಯಕ್ಕಾಗಿ 35 ಸಾವಿರ ಕೋಟಿ ರೂಪಾಯಿಗಳು ಬೇಕಾಗಿದೆ ಕೊಡಿ' ಎಂದು ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರವನ್ನು ಕೇಳಿದ್ದರು. ನಂತರ ತುಮಕೂರಿಗೆ ಮಾನ್ಯ ಪ್ರಧಾನ ಮಂತ್ರಿಗಳು ಬಂದಂತಹ ಸಂದರ್ಭದಲ್ಲಿ 'ನೆರೆ ಪರಿಹಾರಕ್ಕಾಗಿ 50 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಷ್ಟು ಪ್ರಮಾಣದ ನಷ್ಟವುಂಟಾಗಿದೆ' ಎಂದು ಕೇಳಿದ್ದರು. ಮಾನ್ಯ ಮುಖ್ಯಮಂತ್ರಿಗಳ ಎದೆಗಾರಿಕೆಯನ್ನು ನಾನು ಈ ಸದನದಲ್ಲಿ ಅತ್ಯಂತ ಗೌರವಯುತವಾಗಿ ಮೆಚ್ಚಿಕೊಳ್ಳುತ್ತೇನೆ. ನೆರೆ ಪರಿಹಾರಕ್ಕಾಗಿ ರಾಜ್ಯಕ್ಕೆ 50 ಸಾವಿರ ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಘನತೆವೆತ್ತ ರಾಜ್ಯಪಾಲರು ದಯಪಾಲಿಸಿರುವ ಭಾಷಣದಲ್ಲಿ ಕೊಟ್ಟಿರುವ ಒಂದು ಮಾಹಿತಿ ಮಾತ್ರ ಸರಿಯಾಗಿದೆ. ಈ ಬಗ್ಗೆ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಉಲ್ಲೇಖ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರ ವಿಷಯವನ್ನು ಒಂದು ಕಡೆ divert ಮಾಡುತ್ತಿದೆ. ಮತ್ತೊಂದು ಕಡೆ strategy ಮಾಡುತ್ತಿದೆ. ನಡೆದಿರುವ ವಿಷಯವನ್ನು ಮುಚ್ಚಿ ಹಾಕುವಂತಹ ಪ್ರಯತ್ನ ನಡೆಯುತ್ತಿದೆ. ಸರ್ಕಾರದ ಬೊಕ್ಕಸ ಖಾಲಿಯಾಗಿದೆ. ಕೇಂದ್ರ ಸರ್ಕಾರದಿಂದ ರಾಜ್ಯದ ಅಭಿವೃದ್ಧಿಗಾಗಿ ನಮಗೆ ಬರಬೇಕಾಗಿರುವ ಜಿ.ಎಸ್.ಟಿ ಮತ್ತು ತೆರಿಗೆಯ ಮೊತ್ತವಾಗಿರುವ ಸುಮಾರು 90 ಸಾವಿರ ಕೋಟಿ ರೂಪಾಯಿಗಳು ನಮಗೆ ಬಂದಿಲ್ಲ. ಇವುಗಳನ್ನು ಮರೆಮಾಚುವುದಕ್ಕಾಗಿ ಇಂತಹ ಒಂದು strategyಯನ್ನು ಮಾಡಲಾಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ. ನಮ್ಮ ಪೊಲೀಸಿನವರ ಬಗ್ಗೆ ನನಗೆ ಗೌರವವಿದೆ. ಎಲ್ಲರನ್ನು ಒಂದೇ ತಕ್ಕಡಿಯಲ್ಲಿ ಹಾಕಿ ತೂಗುವಂತಹ ಮನೋಭಾವ ನನಗಿಲ್ಲ. ಪೊಲೀಸ್ ಇಲಾಖೆ ಈ ದೇಶಕ್ಕೆ ಮತ್ತು ಈ ರಾಜ್ಯಕ್ಕೆ ಬೇಕಾದಷ್ಟು ಕೊಡುಗೆಗಳನ್ನು ನೀಡಿದೆ ಎನ್ನುವ ಅಂಶವನ್ನು ನಾವು ಸ್ಮರಿಸಬೇಕಾಗಿದೆ. ಆದರೆ, ತಪ್ಪು ಮಾಡಿರುವವರಿಗೆ ಶಿಕ್ಷೆ ಆಗಬೇಕಾಗಿದೆ. ಮಂಗಳೂರು ಪ್ರಕರಣದಲ್ಲಿ ಜೀವ ಕಳೆದುಕೊಂಡವರಿಗೆ ಪರಿಹಾರವನ್ನು ನೀಡಬೇಕಾಗಿದೆ. 'ಪಾಕಿಸ್ತಾನ ಜಿಂದಾಬಾದ್' ಎನ್ನುವ ಘೋಷಣೆ ಕೂಗಿದವರ ವಿರುದ್ಧ ದೇಶದ್ರೋಹದ ಕೇಸನ್ನು ದಾಖಲು ಮಾಡುವಂತಹ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ರಾಜಕಾರಣ ಮಾಡುವುದನ್ನು ಬಿಟ್ಟು ರಾಜ್ಯದ ಜನರ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾವುದೇ ಪಕ್ಷ ಅಧಿಕಾರಕ್ಕೆ ಬರಬಹುದು ಅಧಿಕಾರವನ್ನು ಕಳೆದುಕೊಳ್ಳಬಹುದು ಆದರೆ, ಜನತೆಯ ಹಿತವನ್ನು ಕಾಪಾಡುವುದರ ಬಗ್ಗೆ ಮಾತ್ರ ನಾವು ಚಿಂತನೆ ಮಾಡಬೇಕಾಗುತ್ತದೆ. ಇಷ್ಟು ಮಾತನಾಡಲು ನನಗೆ ಅವಕಾಶವನ್ನು ನೀಡಿದ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ತಿಪ್ಪಣ್ಣ ಕಮಕನೂರ(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರು ಉಭಯ ಸದನವನ್ನುದ್ದೇಶಿಸಿ ಮಾಡಿದಂತಹ ಭಾಷಣಕ್ಕೆ ಸಲ್ಲಿಸುವಂತಹ ವಂದನಾ ನಿರ್ಣಯಕ್ಕೆ ನಾನು ಗೌರವವನ್ನು ಸಲ್ಲಿಸುತ್ತಾ, ನನಗೆ ಮಾತನಾಡಲು ಅವಕಾಶವನ್ನು ನೀಡಿದ ತಮಗೂ ವಂದನೆಗಳನ್ನು ಸಲ್ಲಿಸುತಿದ್ದೇನೆ.

**ಶ್ರೀ ಆಯನೂರು ಮಂಜುನಾಥ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನನ್ನ ಮಾಹಿತಿಗೋಸ್ಕರ ಪೀಠಕ್ಕೊಂದು ಪ್ರಶ್ನೆಯನ್ನು ಕೇಳಲು ಬಯಸುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಯಡಿಯಲ್ಲಿ ಬಹಳ ಮಹತ್ವವಾಗಿರುವ ಮತ್ತು ತುರ್ತು ವಿಚಾರದ ಮೇಲೆ ಚರ್ಚೆ ನಡೆಸಲು ನೋಟೀಸ್ ಅನ್ನು ನೀಡಿದ್ದರು. ಚರ್ಚೆಗೆ ತಾವು ಅವಕಾಶವನ್ನು ನೀಡಿದ್ದೀರಿ. ಇದು ಸರ್ಕಾರ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಳಿ ತಪ್ಪಿದಂತಹ ಸಂದರ್ಭದಲ್ಲಿ ಸರಿ ದಾರಿಗೆ ತರುವಂತಹ ಒಂದು ಅವಕಾಶವಾಗಿದೆ. ನಿಯಮ 68ರಡಿಯಲ್ಲಿ 'ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿರುವುದರಿಂದ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ' ಎನ್ನುವುದು ವಿಷಯವಾಗಿದೆ. ನಾನು ನಿನ್ನೆಯಿಂದಲೂ ಗಮನಿಸುತ್ತಿದ್ದೇನೆ. ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ ಕುಸಿದು ಬಿದ್ದಿರುವ ಪರಿಣಾಮ ರಾಜ್ಯದ ಅಭಿವೃದ್ಧಿಯ ಮೇಲೆ ಯಾವ ರೀತಿಯ ಪರಿಣಾಮವುಂಟು ಮಾಡಿದೆ ಎನ್ನುವುದರ ಬಗ್ಗೆ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಬೆಳಕು ಚೆಲ್ಲಿದರೆ ಸರ್ಕಾರ ತನ್ನ ತಪ್ಪನ್ನು ತಿದ್ದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಸದನದ ವೇಳೆ ಬಹಳ ಮಹತ್ವವಾಗಿದೆ. ಸದನದ ಮುಂದಿರುವ ಚರ್ಚೆಯ ವಿಷಯವೇ ಬೇರೆ, ಚರ್ಚೆಯಾಗುತ್ತಿರುವ ವಿಷಯವೇ ಬೇರೆಯಾಗಿದೆ. ಅಭಿವೃದ್ಧಿಯ ಕೆಲಸಗಳು ಹೇಗೆ ಕುಂಠಿತವಾಗುತ್ತಿವೆ ಎನ್ನುವುದನ್ನು ಸದನದ ಗಮನಕ್ಕೆ ತರುತ್ತಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಇವರಿಗೆ ಈ ಜ್ಞಾನೋದಯ ನಿನ್ನೆ ಏತಕ್ಕೋಸ್ಕರ ಆಗಲಿಲ್ಲ?

**ಶ್ರೀ ಆಯನೂರು ಮಂಜುನಾಥ:–** ಸನ್ಮಾನ್ಯ ಸಭಾಪತಿಯವರೇ, ಅವರ ಪ್ರಶ್ನೆ ಸರಿಯಿದೆ. ನಿನ್ನೆ ನಮಗೆ ಜ್ಞಾನೋದಯವಾಗಿರಲಿಲ್ಲ. ಆದರೆ, ಇವರಿಗೆ ಈ ಕ್ಷಣದವರೆಗೂ ಜ್ಞಾನೋದಯವಾಗಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಮಗೆ ಜ್ಞಾನೋದಯವಾಗಿದೆ. ಆದರೆ, ಸರ್ಕಾರದ ಮಂದಗತಿಯನ್ನು ನೋಡುವುದಕ್ಕೆ ಸುಮ್ಮನಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿ ಚರ್ಚೆಯಾದಂತಹ ವಿಚಾರಗಳು ಸರ್ಕಾರಕ್ಕೆ ಪಾಠವಾಗಬೇಕು. ಕೇವಲ ಒಣ ಚರ್ಚೆಯ ಆಗರವಾಗಬಾರದು. ಸುಮ್ಮನೆ ದಾರಿ ತಪ್ಪಿಸುವಂತಹ ಚರ್ಚೆ ಆಗಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಸದರಿ ವಿಚಾರವನ್ನು ನಿಯಮ 59ರಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ನಿಯಮ 68ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ ಎನ್ನುವ ಪೀಠದ ಆದೇಶವನ್ನು ನಾವು ಒಪ್ಪಿಕೊಂಡಿದ್ದೇವೆ. ಆದ್ದರಿಂದ ನಿರ್ದಿಷ್ಟವಾಗಿ ವಿಚಾರದ ಬಗ್ಗೆ ಮಾತ್ರ ಚರ್ಚೆ ನಡೆಯಬೇಕಾಗಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ತಿಪ್ಪಣ್ಣ ಕಮಕನೂರ(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಅವರೆಲ್ಲರೂ ಬಹಳ ಹಿರಿಯ ಸದಸ್ಯರಾಗಿದ್ದಾರೆ. ಅವರುಗಳು ನನ್ನಂತಹ ಕಿರಿಯ ಸದಸ್ಯನಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕಾಗಿದೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ನಿಷ್ಠೆ ಮತ್ತು ಪ್ರಾಮಾಣಿಕತೆಗೆ ಹೆಸರುವಾಸಿಯಾದವರು. ನಮ್ಮಂಥ ಕಿರಿಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ದಯವಿಟ್ಟು ಅವರು ಮಧ್ಯೆ ಎದ್ದು ನಿಂತು ತೊಂದರೆ ಕೊಡಬಾರದೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಾನು ಪ್ರಾಮಾಣಿಕವಾಗಿ ಜನರ ಸಮಸ್ಯೆಗಳ ಬಗ್ಗೆ ಮಾತನಾಡುತ್ತೇನೆ. ಅದಕ್ಕೆ ಅವರುಗಳು ಅವಕಾಶ ಮಾಡಿಕೊಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳಾಗಿದ್ದ ಶಿವರಾಜ್ ಪಾಟೀಲ್‌ರವರ ಹೆಸರು ಎಲ್ಲರಿಗೂ ಗೊತ್ತಿದೆ. ಅವರು ಕೋರ್ಟ್‌ನ ಕಲಾಪ ನಡೆಯುವಂತಹ ಸಂದರ್ಭದಲ್ಲಿ ಹಿರಿಯ ವಕೀಲರ ಜೊತೆಗಿರುವ ಕಿರಿಯ ವಕೀಲರಿಗೆ 'ನೀವು ಮೊದಲು ಮಾತನಾಡಿ' ಎಂದು ಅವಕಾಶವನ್ನು ನೀಡುತ್ತಿದ್ದರು. ಅದೇ ರೀತಿಯಲ್ಲಿ ನಮಗೂ ಅವಕಾಶ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು, ಮಾನ್ಯ ಬಸವರಾಜ ಹೊರಟ್ಟಿಯವರು, ಶ್ರೀ ಸಿ.ಎಂ.ಇಬ್ರಾಹಿಂರವರು ಮಾನ್ಯ ಐವನ್ ಡಿ'ಸೋಜಾರವರು ಮತ್ತು ಶ್ರೀಮತಿ ಜೈಮಾಲರವರು  ಮಂಗಳೂರಿನಲ್ಲಿ ಆದಂತಹ ಘಟನೆ ಮತ್ತು ಕೆ.ಎಲ್.ಇ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಆದಂತಹ ಘಟನೆಗಳ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಹೋದಂತಹ ಜೀವಗಳ ಬಗ್ಗೆ ನಾವು ಮಾತನಾಡುವಂತಹ ಸಂದರ್ಭದಲ್ಲಿ ಕರುಣೆಯಿಂದ ಕೇಳಬೇಕೆಂದು ನಾನು ಆಡಳಿತ ಪಕ್ಷದವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅದಕ್ಕೂ ಕೂಡ ವಾದವಿವಾದ ಮಾಡುವುದು ಒಳ್ಳೆಯದಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಕಲ್ಯಾಣ ಕರ್ನಾಟಕ ಭಾಗದಿಂದ ಬಂದಿರುವವನು. ಮಾನ್ಯ ಸಿ.ಎಂ.ಇಬ್ರಾಹಿಂರವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಮಾನ್ಯ ವೀರೇಂದ್ರ ಪಾಟೀಲ್‌ರವರ ಬಗ್ಗೆ, ಡಾ:ನಿಜಲಿಂಗಪ್ಪನವರ ಬಗ್ಗೆ ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

(ಮುಂದುವರಿದಿದೆ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(51) 19.2.2020 12.10 ಪಿಕೆ:ಆರ್‌ಎನ್

**ಶ್ರೀ ತಿಪ್ಪಣ್ಣ ಕಮಕನೂರ(ಮುಂದುವರೆದಿದೆ)**

ಅದೇರೀತಿ ನಾನೂ ಕೂಡ ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಬಗ್ಗೆ ಮತ್ತು ಕೆಲವು ಮಾರ್ಮಿಕ ವಿಚಾರಗಳನ್ನು ಮಾತನಾಡಿದ ಮೇಲೆ ನೇರವಾಗಿ ವಿಚಾರಕ್ಕೆ ಬರುತ್ತೇನೆ.  ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಪ್ರಧಾನ

ಮಂತ್ರಿಯಾಗಿದ್ದ ಸಂದರ್ಭದಲ್ಲಿ, ಅವರ ಕೈಕೆಳಗಿದ್ದ ಕಾರಕೂನ ಅವರ ಹತ್ತಿರ ಹೋಗಿ, ನನ್ನ ಮಗನ ಲಗ್ನ ಇದೆ; ರೂ. 500 ಕೊಡಬೇಕು ಎಂದು ಕೇಳಿಕೊಂಡಾಗ ಮಾನ್ಯ ಶಾಸ್ತ್ರಿಯವರು ಆ ಕುರಿತು ಏನೂ ಮಾತನಾಡದೇ ಅವರ ಕಚೇರಿಗೆ ತೆರಳಿದರು. ನಂತರ ಆ ಕಾರಕೂನ ಮಾನ್ಯ ಶಾಸ್ತ್ರಿಜಿಯವರ ಮನೆಗೆ ಹೋಗಿ ಅವರ ಧರ್ಮಪತ್ನಿಯವರ ಹತ್ತಿರ, ನನಗೆ ರೂ. 500/– ಬೇಕು, ಸಾಹೇಬರಿಗೆ ಹೇಳಿ ಕೊಡಿಸಿ ಎಂದು ಕೇಳಿಕೊಂಡ. ನನ್ನ ಹತ್ತಿರ ರೂ.500 ಇದೆ, ಅದನ್ನು ತೆಗೆದುಕೊಂಡು ಹೋಗು ಎಂದು ಆಕೆ ಕೊಟ್ಟು ಕಳುಹಿಸುತ್ತಾರೆ. ಆ ಹುಡುಗನ ಲಗ್ನ ಮುಗಿದ ಮೇಲೆ, ಆ ಕಾರಕೂನ ಒಂದು ಸಲ ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರಿಗೆ ಅವರ ಧರ್ಮಪತ್ನಿ ತನಗೆ ಮದುವೆಗೆಂದು ಕೊಟ್ಟಿದ್ದ ರೂ. 500ರ ಬಗ್ಗೆ ಮನವರಿಕೆ ಮಾಡಿಕೊಟ್ಟ. ಆಗ ನೇರವಾಗಿ ಮಾನ್ಯ ಶಾಸ್ತ್ರಿಯವರು ತಮ್ಮ ಮನೆಗೆ ಬಂದು, ಆ ಕಾರಕೂನನಿಗೆ ರೂ. 500 ಕೊಟ್ಟಿರುವೆ, ಎಲ್ಲಿಂದ ಅಷ್ಟು ದುಡ್ಡು ಕೊಟ್ಟೆ ಎಂದು ಕೇಳಿದಾಗ ಆಕೆ, ತಾವು ತರಕಾರಿಗೆಂದು ಏನು ದುಡ್ಡು ಕೊಡುತ್ತಿದ್ದಿರೋ ಆ ದುಡ್ಡಿನಲ್ಲಿ ಸ್ವಲ್ಪ ಸ್ವಲ್ಪ ಉಳಿಸಿ ಇಟ್ಟಿದ್ದೆ. ಅದು ರೂ.500 ಆಗಿತ್ತು, ಅದನ್ನು ಕೊಟ್ಟೆ ಎಂದು ಹೇಳಿದರು. ಆ ಸಂದರ್ಭದಲ್ಲಿ ಮಾನ್ಯ ಶಾಸ್ತ್ರಿಯವರು ತಮ್ಮ ಕಚೇರಿಗೆ ನೇರವಾಗಿ ಪತ್ರ ಬರೆದು, ನನಗೇನು ಸಂಬಳ ಕೊಡುತ್ತಿದ್ದಿರೋ ಆ ಮೊತ್ತದಲ್ಲಿ ರೂ. 500 ಕಟ್ ಮಾಡಿಕೊಳ್ಳಿ ಎಂದು ತಿಳಿಸಿದ್ದರು. ಅಂತಹ ಒಂದು ಪ್ರಾಮಾಣಿಕತೆ ಸರ್ಕಾರವೂ ಇರಬೇಕೆಂದು ನಾವು ನಿರೀಕ್ಷೆ ಮಾಡುತ್ತೇವೆ. ಈಗ ಅಂತಹ ಸರ್ಕಾರ ಇದೆಯೇ? ಮಾನ್ಯ ಸಿ.ಎಂ.ಇಬ್ರಾಹಿಂರವರು ಲಿಂಗಾಯತ ಧರ್ಮದವರು ಭದ್ರವಾಗಿ ಹಿಂದೆ ನಿಂತುಕೊಂಡಿದ್ದರಿಂದ ಈ ಸರ್ಕಾರ ಅಧಿಕಾರಕ್ಕೆ ಬಂತು ಎನ್ನುವ ಮಾತನ್ನು ಹೇಳಿದರು. ಲಿಂಗಾಯತ ಧರ್ಮದವರೊಬ್ಬರಿಂದಲೇ ಬಂದಿಲ್ಲ. ಲಿಂಗಾಯತ ಧರ್ಮದವರು ನಮ್ಮ ಪಕ್ಷದಲ್ಲೂ ಇದ್ದಾರೆ, ಅತ್ಯಂತ ಭದ್ರವಾಗಿದ್ದಾರೆ. ಜೆಡಿ(ಎಸ್) ಪಕ್ಷದಲ್ಲೂ ಇದ್ದಾರೆ. ಲಿಂಗಾಯತರು ಒಂದೇ ಕಡೆ ಇಲ್ಲ. "ಅಜ್ಮೀರ್ ಕೋ ಜಾವೋ" ಎಂದು ಪತ್ರ ಬರೆದರೆ "ಆಜ್ ಅಜ್ಮೀರ್ ಮೇ ಮರ್‌ಗಯಾ" ಎಂದು ಓದಿದ ಹಾಗೆ, ಬಿಜೆಪಿ ಪಕ್ಷದವರು ನಡೆದುಕೊಂಡರು. ಮಾನ್ಯ ಸಭಾಪತಿಯವರೇ, ನಮ್ಮ ಭಾಗದಲ್ಲಿ ಕೋಲಿ ಸಮಾಜ ಅತ್ಯಂತ ಪ್ರಬಲವಾದ ಸಮಾಜವಾಗಿದೆ. ಕೋಲಿ ಸಮಾಜ, ಗಂಗಾಮತಸ್ಥ ಸಮಾಜ, ಮೊಗೇರ, ಮೊಗವೀರ ಎಂದು ಸುಮಾರು 39 ಪರ್ಯಾಯ ಹೆಸರುಗಳಿಂದ ಈ ಸಮಾಜವನ್ನು ಕರೆಯಲಾಗುತ್ತದೆ. ಚುನಾವಣೆಯ ಸಂದರ್ಭದಲ್ಲಿ, ನಿಮ್ಮ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುತ್ತೇವೆ, ಈ ಕೆಲಸವನ್ನು 15 ದಿವಸದ ಒಳಗೆ ಮಾಡದೇ ಇದ್ದರೆ ನಮ್ಮನ್ನು ನೇಣಿಗೆ ಹಾಕಿ ಎಂದು ಹೇಳಿದರು. ಆ ಒಂದು ಸಂದರ್ಭದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಅಲ್ಲಿಗೆ ಬಂದು, " ತುಮ್ಹಾರ ಸಮಾಜ್ ಕೋ ಯಾದ್ ರಖ್ಖುಂಗಾ" ಎಂಬ ಮಾತನ್ನು ಹೇಳಿದರು. ಶೀಘ್ರವಾಗಿ ನಿಮ್ಮ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುತ್ತೇವೆ ಎಂದು ಹೇಳಿದರು. ಕೆಲವು ಬಿಜೆಪಿ ನಾಯಕರು, ನಿಮ್ಮ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಿಸಿ, ಅದರ ಆದೇಶದ ಪ್ರತಿಯನ್ನು ದಿವಂಗತ ವಿಠ್ಠಲ್ ಹೇರೂರುರವರ ಸಮಾಧಿ ಮೇಲೆ ಇಡುತ್ತೇವೆ ಎಂದು ಹೇಳಿದರು. ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರು ಈಗ ಸದನದಲ್ಲಿ ಇರಬೇಕಾಗಿತ್ತು. ಅವರು, ಈ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕೆಲಸ ಮಾಡುತ್ತೇವೆ ಎಂದು ನನ್ನ ರಕ್ತದಲ್ಲಿ ಬರೆದು ಕೊಡುತ್ತೇನೆ ಎಂಬ ಮಾತನ್ನು ಹೇಳಿದ್ದರು. ಇಷ್ಟೆಲ್ಲ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿ ವಾಮಮಾರ್ಗದಿಂದ, ನಮ್ಮಂಥ ಹಿಂದುಳಿದ ಜನಾಂಗಗಳ ಮತಗಳನ್ನು ತೆಗೆದುಕೊಂಡು ಬಿಜೆಪಿ ಅಧಿಕಾರಕ್ಕೆ ಬಂತು.

**ಸಭಾಪತಿಯವರು:–** ನಿಯಮ 68ರ ಅಡಿಯಲ್ಲಿರುವ ವಿಷಯದ ಬಗ್ಗೆ ಮಾತನಾಡಿ.

**ಶ್ರೀ ತಿಪ್ಪಣ್ಣ ಕಮಕನೂರ:–** ನಾನು ಹೊಸದಾಗಿ ಬಂದಿದ್ದೇನೆ. ಮಾನ್ಯ ಸವದಿಯವರು ನಮಗೆ ಬಹಳ ಬೇಕಾದವರು. ನಾನು ಮೊದಲನೇ ಸಲ ಮಾತನಾಡುತ್ತಿದ್ದೇನೆ. ಏನಾದರೂ ತಪ್ಪಾದರೆ ನನ್ನ ಬಗ್ಗೆ ತಪ್ಪು ತಿಳಿದುಕೊಳ್ಳಬೇಡಿ. ನಾನು ಮಾತನಾಡಿದ ಮೇಲೆ ಇಂಥದ್ದು ತಪ್ಪು ಮಾತನಾಡಿದಿರಿ ಎಂದು ಹೇಳಿ.

ಮಾನ್ಯ ಸಭಾಪತಿಯವರೇ, ಮಾನ್ಯ ಸವದಿಯವರು ಬಹಳ ಒಳ್ಳೆಯವರು. ಈಗೇಕೋ ಮಾತನಾಡುತ್ತಿಲ್ಲ. ಹೈದರಾಬಾದ್–ಕರ್ನಾಟಕದ ಭಾಗಕ್ಕೆ ಸರ್ಕಾರ ಇದೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತಿದೆ. ಆ ಭಾಗವನ್ನು "ಕಲ್ಯಾಣ ಕರ್ನಾಟಕ" ಎಂದು ನಾಮಕರಣ ಮಾಡಿರುವುದನ್ನು ಬಿಟ್ಟು ಬೇರೇನೂ ಸೌಲಭ್ಯ ಕೊಡಲಿಲ್ಲ. ಒಬ್ಬ ಮನುಷ್ಯನಿಗೆ ಸಂಪತ್ತು ಕುಮಾರ್ ಎಂದು ಹೆಸರಿಡುತ್ತೇವೆ, ಆತ ಬೇರೊಬ್ಬರ ಮನೆಯಲ್ಲಿ ನೌಕರಿ ಮಾಡುತ್ತಿರುತ್ತಾನೆ. ಅಂದರೆ, ಹೆಸರಿಟ್ಟ ಮಾತ್ರಕ್ಕೆ ಆತ ಶ್ರೀಮಂತನಾಗುವುದಿಲ್ಲ. ಅದೇರೀತಿ ಹೈದರಾಬಾದ್–ಕರ್ನಾಟಕ ಎಂದು ಕರೆಯುತ್ತಿದ್ದ ಭಾಗಕ್ಕೆ "ಕಲ್ಯಾಣ ಕರ್ನಾಟಕ" ಎಂದು ನಾಮಕರಣ ಮಾಡಿದಿರಿ, ಆ ರೀತಿ ನಾಮಕರಣ ಮಾಡಿದ ದಿವಸವೇ ರೂ. 5000 ಕೋಟಿ ಹಣ ಬಿಡುಗಡೆ ಮಾಡಬೇಕಾಗಿತ್ತು. ತಕ್ಷಣ ಅಧ್ಯಕ್ಷರನ್ನು ನೇಮಕ ಮಾಡಬೇಕಾಗಿತ್ತು. ಆ ಭಾಗದ 20–25 ಮಂದಿ ಶಾಸಕರು, ಒಬ್ಬ ಅಧ್ಯಕ್ಷರನ್ನು ನೇಮಕ ಮಾಡಿ ಎಂದು ಸಹಿ ಮಾಡಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟಿದ್ದಾರೆ. 5–6 ತಿಂಗಳಾದರೂ ಅಲ್ಲಿ ಯಾವುದೇ ಕೆಲಸವಾಗುತ್ತಿಲ್ಲ. ಅಲ್ಲಿ ಸಿಬ್ಬಂದಿ ಕೊರತೆ ಇದೆ. ಆ ಭಾಗದ ರೀಜಿನಲ್ ಸೆಕ್ರೆಟರಿಯವರು, ನಾನು ಅಸಹಾಯಕನಾಗಿದ್ದೇನೆ; ನಮ್ಮಲ್ಲಿ ಸಿಬ್ಬಂದಿ ಕೊರತೆ ಇದೆ, ನನಗೆ ಯಾವುದೇ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ, ಸುಮಾರು ರೂ.500–1000 ಕೋಟಿ ಹಣವನ್ನು ವಾಪಸ್ಸು ಕಳುಹಿಸುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ ಎಂಬ ಮಾತು ಹೆಚ್.ಕೆ.ಡಿ.ಬಿ.ಯಲ್ಲಿ ಕೇಳಿ ಬರುತ್ತಿದೆ. 6 ಜಿಲ್ಲೆಗಳನ್ನು ಪ್ರತಿನಿಧಿಸುವ ಮಂಡಳಿಗೆ ಒಬ್ಬ ಅಧ್ಯಕ್ಷರನ್ನು ನೇಮಕ ಮಾಡುವುದಿಲ್ಲ ಎಂದರೆ ನೀವು ಸರ್ಕಾರವನ್ನು ಹೇಗೆ ನಡೆಸುತ್ತೀರಿ? ಕಲ್ಯಾಣ ಕರ್ನಾಟಕದ ಭಾಗದಲ್ಲಿ ಅಭಿವೃದ್ಧಿ ಕೆಲಸಗಳು ಆಗಬೇಕು. ಆ ಭಾಗದಲ್ಲಿ ಬರ ಇದೆ ಮತ್ತು ಅತಿವೃಷ್ಟಿ–ಅನಾವೃಷ್ಟಿಗಳೂ ಇವೆ. ಇಂತಹ ಸಂದರ್ಭದಲ್ಲಿ ನಿಮ್ಮ ಉಸ್ತುವಾರಿ ಮಂತ್ರಿಗಳು 6 ತಿಂಗಳಲ್ಲಿ ಒಂದೇ ಒಂದು ಸಲ ಬಂದು ಒಂದು ಕೆಡಿಪಿ ಮೀಟಿಂಗ್ ಮಾಡಿ ಹೋಗಿದ್ದಾರೆ. 34 ವರ್ಷಗಳು ಕಳೆದ ಮೇಲೆ ಅಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಂದು ಅದೇ ದಿನ ಫ್ಲೈಟ್‌ನಿಂದ ವಾಪಸ್ಸು ಹೋದರು. ಇದುವರೆಗೂ ಒಬ್ಬ ಅಧ್ಯಕ್ಷರನ್ನು ನೇಮಕ ಮಾಡುವುದಕ್ಕೆ ಆಗಿಲ್ಲ, ಸಿಬ್ಬಂದಿಗಳ ಕೊರತೆ ಕೂಡ ಇದೆ. ಕೇವಲ ಹೆಸರನ್ನಿಡುವ ಸಲುವಾಗಿ ಈ ರೀತಿ ಮಾಡಿದರೆ ಅದರಿಂದ ಏನು ಪ್ರಯೋಜನವಾಗುತ್ತದೆ? ಆ ಭಾಗದಲ್ಲಿರುವ ಎಲ್ಲಾ ಶಾಸಕರಿಗೂ ಇದೇ ಕೊರಗು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇರಬಹುದು ಎಂದು ನಾನು ಭಾವಿಸಿದ್ದೇನೆ. ಸರ್ಕಾರ ತಕ್ಷಣ ರೂ. 5000 ಕೋಟಿ ಹಣ ಬಿಡುಗಡೆ ಮಾಡಿ, ಅಧ್ಯಕ್ಷರನ್ನು ನೇಮಕ ಮಾಡುವ ಕೆಲಸ ಮಾಡಬೇಕು.

**ಸಭಾಪತಿಯವರು:–** ದಯವಿಟ್ಟು ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ.

**ಶ್ರೀ ತಿಪ್ಪಣ್ಣ ಕಮಕನೂರ:–**ಮಾನ್ಯ ಸಭಾಪತಿಯವರೇ, ಹಿಂದೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ವಿ.ಸೋಮಣ್ಣನವರು ವಸತಿ ಸಚಿವರಾಗಿದ್ದರು. ಈಗಲೂ ಬಹುಶಃ ಅದೇ ಖಾತೆಯನ್ನು ಹೊಂದಿದ್ದಾರೆಂದು ಕಾಣಿಸುತ್ತದೆ. ಅವರಿಗೆ ಧನ್ಯವಾದಗಳು. ಅವರು ನಮ್ಮ ಕಡೆ ಬಂದಾಗ ಗುಲ್ಬಾರ್ಗದಲ್ಲಿ ಗಂಗಾಮತಸ್ಥರ ಸುಮಾರು 10 ಸಾವಿರ ಜನರ ದೊಡ್ಡ ಸಮಾವೇಶ ಮಾಡಿದ್ದರು. ಕೊಳಚೆ ನಿರ್ಮೂಲನ ಮಂಡಳಿಯಿಂದ ಏನು ಮನೆಗಳನ್ನು ಕಟ್ಟಿದ್ದರೋ ಅವುಗಳ ಹಕ್ಕುಪತ್ರಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ 5–10 ಜನರಿಗೆ ಹಕ್ಕುಪತ್ರ ಕೊಟ್ಟರು. ಇನ್ನು ಯಾರ್‍ಯಾರಿಗೆ ಹಕ್ಕುಪತ್ರ ಕೊಡಬೇಕಾಗಿತ್ತೋ ಅವರ್‍ಯಾರಿಗೂ ಹಕ್ಕು ಪತ್ರ ಕೊಟ್ಟಿಲ್ಲ. ಅವರಿಗೆ ಕೊಡಬೇಕಾದ ಜಾಗವೂ ಹೋಯಿತು. ಸದರಿಯವರಿಗೆ ಹಕ್ಕುಪತ್ರ ಕೊಟ್ಟಿದ್ದರೆ, ಅದನ್ನು ಆಧಾರವಾಗಿಟ್ಟುಕೊಂಡು ಏನು ಸಾಲ ತೆಗೆದುಕೊಳ್ಳಬಹುದಾಗಿತ್ತೋ ಅದರಿಂದಲೂ ಈ ಜನ ವಂಚಿತರಾದರು. ರಾಜ್ಯಪಾಲರ ಭಾಷಣದಲ್ಲಿ, ಹೈದರಾಬಾದ್–ಕರ್ನಾಟಕ ಭಾಗದ ಅಭಿವೃದ್ಧಿಗೆ, ಕೊಳಚೆ ನಿರ್ಮೂಲನ ಅಭಿವೃದ್ಧಿ ಮಂಡಳಿಯಿಂದ ಸೂಕ್ತ ಸೌಲಭ್ಯ ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ ಎಂದು ಸರ್ಕಾರ ಹೇಳಿದೆ. ಆದರೆ ಇದುವರೆಗೂ ಒಳ್ಳೆಯದಾಗಿರುವುದು ಕಾಣುತ್ತಿಲ್ಲ. ಸಮ್ಮಿಶ್ರ ಸರ್ಕಾರದಲ್ಲಿ ಆದ ಕೆಲವು ಸಂಗತಿಗಳನ್ನು ಮಾತ್ರ ರಾಜ್ಯಪಾಲರ ಭಾಷಣದಲ್ಲಿ ಅಳವಡಿಸಿಕೊಂಡಿದ್ದಾರೆ. ಮಾನ್ಯ ಸಭಾಪತಿಯವರೇ, ಸರ್ಕಾರ ತಕ್ಷಣ ಹಕ್ಕು ಪತ್ರ ಕೊಡುವ ಕೆಲಸವನ್ನು ಮಾಡಬೇಕು.

ಮಾನ್ಯ ರಾಜ್ಯಪಾಲರ ಭಾಷಣದಲ್ಲಿ, ಕಲ್ಬುರ್ಗಿಯಲ್ಲಿ ವಿಮಾನ ನಿಲ್ದಾಣ ಉದ್ಘಾಟನೆ ಮಾಡಿದ್ದೇವೆ, ಎಲ್ಲರಿಗೂ ಅನುಕೂಲ ಮಾಡಿಕೊಟ್ಟಿದ್ದೇವೆ ಎಂದಿದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ ಮಾಡಬಯಸುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶ ಕೊಟ್ಟಾಗ ಈ ವಿಷಯಗಳನ್ನು ಮಾತನಾಡಲಿ. ಆದರೆ ಈಗ ನಿಯಮ 68ರ ಅಡಿಯಲ್ಲಿ ಏನು ವಿಚಾರ ಇದೆಯೋ ಅದರ ಬಗ್ಗೆ ಮಾತನಾಡಲಿ ಎಂದು ಕೇಳಿಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ನೀವು ಏನು ಹೇಳಿದಿರೋ ಆ ವಿಷಯಗಳನ್ನು ಮಾನ್ಯ ಸದಸ್ಯರಿಗೆ ಹೇಳಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮೊದಲು ನಿಯಮ 68ರ ಅಡಿಯಲ್ಲಿರುವ ವಿಷಯವನ್ನು ಮಾತನಾಡಿ ಮುಗಿಸಿದ ಮೇಲೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಸೂಚನೆ ಕೊಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ತಿಪ್ಪಣ್ಣ ಕಮಕನೂರ:–**ಮಾನ್ಯ ಸಭಾಪತಿಯವರೇ, ಗುಲ್ಬರ್ಗಾದಲ್ಲಿ ಪೊಲೀಸ್ ದೌರ್ಜನ್ಯ ಹೆಚ್ಚಿಗೆ ಆಗಿದೆ. ಅಮಾಯಕರ ಮೇಲೆ ದೌರ್ಜನ್ಯದ ಪ್ರಕರಣಗಳನ್ನು ದಾಖಲು ಮಾಡುತ್ತಿದ್ದಾರೆ.

(ಮುಂದು)

(52)19–02–2020 12.20 ಡಿಎಸ್–ವಿಕೆ
**ಶ್ರೀ ತಿಪ್ಪಣ್ಣ ಕಮಕನೂರ (ಮುಂದು)**

ನಮ್ಮಲ್ಲಿ ಪೊಲೀಸ್ ದೌರ್ಜನ್ಯ ಹೆಚ್ಚಾಗಿದೆ. ಹೇಳುವವರಿಲ್ಲ, ಕೇಳುವವರಿಲ್ಲ; ನಮ್ಮಲ್ಲಿ ಸರ್ಕಾರ ಇಲ್ಲ. ಈ ಸರ್ಕಾರದಲ್ಲಿ ನಾವೇನಾದರೂ ಕೇಳಿಕೊಂಡು ಹೋದರೆ ನಮಗೆ ಸಹಾಯ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಅವರಿಲ್ಲ. ಈ ಸರ್ಕಾರ ವಾಮಮಾರ್ಗದಿಂದ ಬಂದಂತಹ ಸರ್ಕಾರ. ಇದಕ್ಕೆ ನಾವೇನು ಹೇಳುವ ಪರಿಸ್ಥಿತಿಯಲ್ಲಿಲ್ಲ. ಇವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಂದವರಲ್ಲ. ಅದಕ್ಕಾಗಿ ಯಾರ ಬಗ್ಗೆಯೂ ಏನು ಮರ್ಯಾದೆ ಇಲ್ಲ. ಹಿಂದುಳಿದ ಜನಾಂಗದವರು, ದಲಿತರು ಇವರಿಗೆ ಮತ ಹಾಕುವುದಕ್ಕೆ ಬೇಕು. ಆದರೆ ಇವರು ಅಧಿಕಾರಕ್ಕೆ ಬಂದ ಮೇಲೆ ಹಿಂದುಳಿದ ಜನಾಂಗದವರು, ದಲಿತರು ನೆನಪಿಗೆ ಬರುವುದಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಭೂಮಿ ಪೂಜೆ ಮಾಡಿದರು, ಆದರೆ ಮಾನ್ಯ ಯಡಿಯೂರಪ್ಪನವರು ಅದನ್ನು ಉದ್ಘಾಟನೆ ಮಾಡಿದರು. ಸಾಂಕೇತಿಕವಾಗಿ ವಿಮಾನ ಹಾರಾಟವನ್ನು ನಾವು ಮಾಡಿದ್ದೇವೆ. ಉದ್ಘಾಟನೆ ಮಾಡುವ ಸಮಯದಲ್ಲಿ ಇವೆಲ್ಲಾ ಕೆಲಸ ಮಾಡಿದಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಬಗ್ಗೆ ಒಂದು ಮಾತನ್ನು ಕೂಡ ಈ ಸರ್ಕಾರದವರು ಹೇಳಲಿಲ್ಲ. ಅವರನ್ನು ಈ ಸರ್ಕಾರ ನೆನಪಿಸಿಕೊಳ್ಳಲಿಲ್ಲ. ಅದಕ್ಕಾಗಿ ಗುಲ್ಬರ್ಗಾದಲ್ಲಿ ವಾತಾವರಣ ಪೂರ್ಣವಾಗಿ ಹದಗೆಟ್ಟಿದೆ, ಕಾನೂನು ಸುವ್ಯವಸ್ಥೆ ಕೆಟ್ಟು ಹೋಗಿದೆ. ಇದರ ಬಗ್ಗೆ ಸರ್ಕಾರ ನಿರ್ದಿಷ್ಟವಾಗಿ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಜನಾಂಗ, ನಾವು ಕೋಳಿ ಸಮಾಜದವರು. ನಮ್ಮ ಜನಾಂಗದವರ ಮೇಲೆ ನಿರಂತರವಾಗಿ ಹಲ್ಲೆ ನಡೆದಿದೆ. Atrocity case ಹಾಕಿ ನಮ್ಮ ಜನಾಂಗದವರನ್ನು ಬೀದಿಗೆ ತಳ್ಳಿದ್ದಾರೆ. ಮಂಗಳೂರಿನಲ್ಲಿ ಗೋಲಿಬಾರ್‌ನಲ್ಲಿ ಸತ್ತು ಹೋದರು, ಬೀದರ್‌ನಲ್ಲಿ ಅಮಾಯಕರನ್ನು ಜೈಲಿಗೆ ಹಾಕಿದರು. ಅದೇ ಪ್ರಕರಣದಲ್ಲಿ ಜೀವಂತ ಇದ್ದವರಿಗೆ atrocity case ಹಾಕಿ, ಇನ್ನಿತರ ದೌರ್ಜನ್ಯಗಳ ಕೇಸ್ ಹಾಕಿ ನಮ್ಮ ಜನರನ್ನು ಜೈಲಿಗೆ ಹಾಕುತ್ತಿದ್ದಾರೆ. ಮಾನವೀಯತೆ ಆಧಾರದ ಮೇಲೆ ಪರಿಗಣಿಸಿ ತಕ್ಷಣ ನಮ್ಮ ಜನರ ಮೇಲಿರುವ ಕೇಸ್‌ಗಳನ್ನು ವಾಪಸ್

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಳ್ಳುವಂತಹ ಕೆಲಸಗಳಾಗಬೇಕು. ರಾಜ್ಯಪಾಲರ ನಿರ್ಣಯ ಕೇವಲ ಕಣ್ಣೊರೆಸುವ ತಂತ್ರವಾಗಿದ್ದು, ಅದು ಕೆಲಸಕ್ಕೆ ಬಾರದ ಭಾಷಣವಾಗಬಾರದು. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

**7. ನೂತನ ಸಚಿವರ ಪರಿಚಯ**

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕೃಷಿ ಸಚಿವರಾದ ಮಾನ್ಯ ಬಿ.ಸಿ.ಪಾಟೀಲ್‌ರವರು ನೂತನ ಸಚಿವರಾಗಿ ಆಯ್ಕೆಯಾಗಿ ಇದೇ ಪ್ರಥಮ ಬಾರಿಗೆ ನಮ್ಮ ಸದನಕ್ಕೆ ಬಂದಿದ್ದಾರೆ. ಅವರನ್ನು ನಾನು ಸ್ವಾಗತ ಮಾಡುತ್ತೇನೆ.

**8. <u>ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ</u>**

**ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

– – – –

**ಶ್ರೀ ಆರ್.ಬಿ.ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎನ್ನುವ ವಿಚಾರವನ್ನು ನಾನು ಹೇಳಬೇಕಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವ ರೀತಿ ನಡೆಯುತ್ತಿದೆ ಎಂದರೆ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಮಾಡುವುದಕ್ಕೆ ಈ ಸರ್ಕಾರ ಸಜ್ಜಾಗಿ ನಿಂತಿದೆ. ಯಾರು ಮಾತನಾಡುತ್ತಾರೆ ಅವರನ್ನು ದೇಶದ್ರೋಹಿಗಳೆಂದು ಬಿಂಬಿಸಿ ಅವರ ವಿರುದ್ಧ ಕೇಸ್‌ಗಳನ್ನು ಹಾಕತಕ್ಕಂಥಾದ್ದು, ಮಾತನಾಡತಕ್ಕಂಥವರಿಗೆ ದಿಗ್ಬಂಧನ ಹಾಕತಕ್ಕಂಥ ಕೆಲಸದಲ್ಲಿ ಇವರು ತೊಡಗಿದ್ದಾರೆ. ಸಂವಿಧಾನದ ಮುನ್ನುಡಿಯಲ್ಲಿ ಭಾರತ ಸಾರ್ವಭೌಮತ್ವ, ಪ್ರಜಾಪ್ರಭುತ್ವ, ಸಮಾಜವಾದಿ, ಜಾತ್ಯಾತೀತ, ಗಣರಾಜ್ಯೋತ್ಸವವನ್ನಾಗಿ ಪ್ರತಿಪಾದಿಸಿರುತ್ತಾರೆ. ಇದರಲ್ಲಿ ಪ್ರತಿಭಟನೆಯನ್ನು ಶಾಂತ ರೀತಿಯಿಂದ ಮಾಡತಕ್ಕಂಥ ವಿಚಾರದಲ್ಲಿ ಹಲವಾರು ಲೋಪದೋಷಗಳು ಪೊಲೀಸ್ ಇಲಾಖೆಯಿಂದ ನಡೆಯುತ್ತಿವೆ, ಪೊಲೀಸರಿಂದ ನಡೆಯುತ್ತಿವೆ. ಒಂದು ಕಡೆ ಮಂಗಳೂರಿನಲ್ಲಿ ನಡೆದ ಗೋಲಿಬಾರ್ ಪ್ರಕರಣವನ್ನು ತೆಗೆದುಕೊಳ್ಳುವುದಾದರೆ, ಮಂಗಳೂರಿನಲ್ಲಿ ಗೋಲಿಬಾರ್ ತಡೆಯುವುದಕ್ಕೆ ಮುಂಜಾಗ್ರತಾ ಕ್ರಮ ಏನು ತೆಗೆದುಕೊಂಡಿದ್ದರು? ಕೇರಳದಿಂದ ಬಂದರು ಎಂದು ಹೇಳಿದ್ದಾರಲ್ಲಾ, ಹಾಗಿದ್ದಲ್ಲಿ ಚೆಕ್‌ಪೋಸ್ಟ್‌ಗಳನ್ನು ಹಾಕಿ ಎಷ್ಟು ಮಂದಿ ಕೇರಳದಿಂದ ಬಂದರು ಎಂದು ಅಂಕಿಸಂಖ್ಯೆಗಳನ್ನು ಇಟ್ಟುಕೊಂಡಿದ್ದಾರೆಯೇ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಹಾಗಾದರೆ ಆ ಸಂದರ್ಭದಲ್ಲಿ ಇವರ Intelligence ವಿಭಾಗ ಏನಾಗಿತ್ತು? ಗಲಾಟೆ ಮಾಡುವುದಕ್ಕಿಂತ ಪೂರ್ವದಲ್ಲೇ ಎಷ್ಟು ಮಂದಿಯನ್ನು ಇವರು ಅರೆಸ್ಟ್ ಮಾಡಿದ್ದರು? ಗಲಾಟೆ, ಗದ್ದಲಗಳ ನಡುವೆ ಪ್ರತಿಭಟನೆ ನಡೆಯುತ್ತಿದೆ, ಸೆಕ್ಷನ್ 144 ವಿಧಿಸಿದ್ದಾರೆ. ಆಗ ಇವರು ಎಷ್ಟು ಮಂದಿ ಕಿಡಿಗೇಡಿಗಳನ್ನು ಅರೆಸ್ಟ್

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿದ್ದಾರೆ? ರಾಜ್ಯದಲ್ಲಿ ಹಾಗೂ ಸ್ಥಳೀಯವಾಗಿ Intelligence ಇರುತ್ತದೆ. ಅವರೆಲ್ಲಾ ಏನು ಕೆಲಸ ಮಾಡುತ್ತಿದ್ದಾರೆ? ಇವತ್ತು ಅಮಾಯಕರನ್ನು ಕೊಲ್ಲುವಂತಹ ಕೆಲಸ ಸರ್ಕಾರದಿಂದ ನಡೆಯುತ್ತಿದೆ. ಪೊಲೀಸರು ಜನರ ರಕ್ಷಣೆಯನ್ನು ಮಾಡಬೇಕಾಗಿತ್ತು. ಅವರ ತಪ್ಪಿನಿಂದ ಆ ಪ್ರಕರಣ ಇವತ್ತು ಎರಡು ಜೀವವನ್ನು ಬಲಿ ತೆಗೆದುಕೊಂಡಿದೆ. ಇವರು ಒಂದು ಕಡೆ ಲಾಠಿ ಚಾರ್ಜ್ ಮಾಡುತ್ತಾರೆ, ಮತ್ತೊಂದು ಕಡೆ ಅಶ್ರುವಾಯು ಸಿಡಿಸುತ್ತಾರೆ, ಮತ್ತೊಂದು ಕಡೆ ಗೋಲಿಬಾರ್ ಮಾಡುತ್ತಾರೆ. ಗುಂಪನ್ನು ಚದುರಿಸಿ ಜನರನ್ನು ಓಡಿಸಬೇಕಾದಂಥವರು, ವಿಭಿನ್ನವಾಗಿ ನಡೆಯುತ್ತಿರುವಂತಹ ವಿಚಾರಗಳನ್ನು ನೋಡಿದಾಗ ಎಲ್ಲೋ ಒಂದು ಕಡೆ ಪೊಲೀಸರು ಯಾರ ಕೈಗೊಂಬೆಯಾಗಿ ಈ ಕೋಮುಗಲಭೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ರೀತಿ ಮಾಡಿದ್ದಾರೆ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಇವರಿಗೆ ಏನಾಗಿತ್ತು, ಇವರು ಪೂರ್ವಭಾವಿಯಾಗಿ ಮುಂಜಾಗ್ರತ ಕ್ರಮವನ್ನು ಏನೇನು ತೆಗೆದುಕೊಂಡಿದ್ದರು? ಈಗ ಎಲ್ಲವೂ ವಿಫಲವಾಗಿದೆ. ಇವತ್ತು ಕಾನೂನು ಸುವ್ಯವಸ್ಥೆ ಏಕೆ ವಿಫವಾಗುತ್ತಿದೆ ಎಂದರೆ, ಮಾನ್ಯ ಗೃಹ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ, ಬಹುಶಃ ಅಲ್ಲಿಗೆ ಅಧಿಕಾರಿಗಳು ಬೇರೆಯವರ ಶಿಫಾರಸ್ಸಿನ ಮೇರೆಗೆ ಹಾಕುತ್ತಿದ್ದಾರೆ ಎಂದು ನನಗನಿಸುತ್ತಿದೆ. ಇವತ್ತು ಗೃಹ ಮಂತ್ರಿಗಳಾದವರಿಗೆ ಅಧಿಕಾರಿಗಳು ಯಾರ್‍ಯಾರು ಬೇಕು, ಯಾರ್‍ಯಾರನ್ನು ತರಬೇಕು ಎನ್ನತಕ್ಕಂಥಾದ್ದು ಅವರ ಕೈಯಲ್ಲಿ ಇಲ್ಲವೇನೋ ಎನ್ನುವ ಭಾವನೆ ನಮ್ಮನ್ನು ಕಾಡುತ್ತಿದೆ. ಏಕೆಂದರೆ, ಆ ಗೋಲಿಬಾರ್ ಏನು ನಡೆಯಿತು, ಇದಕ್ಕೆ ಯಾರು ಅನುಮತಿ ಕೊಟ್ಟರು? ಪೊಲೀಸರು ತಾನಾಗಿಯೇ ಹೊಡೆದರೋ ಅಥವಾ ಅಧಿಕಾರಿಗಳು ಅವರಿಗೆ ಅನುಮತಿ ಕೊಟ್ಟಿದ್ದಾರೆಯೇ? ಹೀಗೆ ಹಲವಾರು ಲೋಪದೋಷಗಳಿಂದ ಎರಡು ಜೀವವನ್ನು ಬಲಿ ತೆಗೆದುಕೊಂಡಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಾನು ಮಾಧ್ಯಮದ ಮೂಲಕ ನೋಡಿದ್ದೇನೆ, ಎಲ್ಲವೂ different ಆಗಿದೆ, ಗೋಲಿಬಾರ್ ಎಲ್ಲಿ ನಡೆಯುತ್ತಿತ್ತು, ಅಶ್ರುವಾಯು ಸಿಡಿಸುವ ಕಾರ್ಯ ಎಲ್ಲಿ ನಡೆಯುತ್ತಿತ್ತು, ಲಾಠಿ ಚಾರ್ಜ್ ಎಲ್ಲಿ ನಡೆಯುತ್ತಿತ್ತು, ಪೊಲೀಸ್ ಇಲಾಖೆಯಲ್ಲಿ ಏನು ನಡೆಯುತ್ತಿದೆ, ಪೊಲೀಸ್ ಇಲಾಖೆ ಯಾರ ನಿಯಂತ್ರಣದಲ್ಲಿದೆ, ಮುಖ್ಯಮಂತ್ರಿಗಳ ನಿಯಂತ್ರಣದಲ್ಲಿದೆಯೇ, ಗೃಹ ಮಂತ್ರಿಗಳ ನಿಯಂತ್ರಣದಲ್ಲಿದೆಯೇ, ಯಾವುದೋ ಒಂದು ಶಕ್ತಿ ಮಂಗಳೂರಿನಲ್ಲಿ ಕುಳಿತುಕೊಂಡು ಇವರನ್ನು ಆಟ ಆಡಿಸುವಂತಹ ಕೆಲಸ ಇವತ್ತು ನಡೆಯುತ್ತಿದೆ. ವಿಮಾನ ನಿಲ್ದಾಣದಲ್ಲಿ ಬಾಂಬ್ ಹಾಕುವುದಕ್ಕೆ ಬರುತ್ತಾರೆ. ಅವನು ಮಾನಸಿಕ ಅಸ್ವಸ್ಥ ಎಂದು ಮಾರನೆಯ ದಿವಸ ಮಾನ್ಯ ಗೃಹ ಮಂತ್ರಿಗಳು ಹೇಳುತ್ತಾರೆ. ಅಷ್ಟು ದಿಢೀರ್ ಆಗಿ ಗೃಹ ಮಂತ್ರಿಗಳು ಅವನು ಮಾನಸಿಕ ಅಸ್ವಸ್ಥ ಎನ್ನುವ ನಿರ್ಣಯಕ್ಕೆ ಹೇಗೆ ಬಂದರು? ಇದರಲ್ಲಿ ಏನೋ ಗೊಂದಲ ಇದೆ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ವಿಶ್ವವೇ ನೋಡಕ್ಕಂಥ ಏನಾದರೂ ಅನಾಹುತ ಆಗಿದ್ದರೆ ನಮ್ಮ ಮಾನ ಮರ್ಯಾದೆಯೆಲ್ಲಾ ವಿಶ್ವದಲ್ಲೇ ಹರಾಜು ಆಗುತ್ತಿತ್ತು. ಇವತ್ತು ಅವರೇನಾದರೂ minority ಯವರಾಗಿದ್ದರೆ ಏನಾಗುತ್ತಿತ್ತು ಎಂದು ಮಾನ್ಯ ಸಿ.ಎಂ.ಇಬ್ರಾಹಿಂ ರವರು ಹೇಳಿದ್ದಾರೆ. ಹೀಗೆ ಈ ರಾಜ್ಯದಲ್ಲಿ ಗೋಲಿಬಾರ್, strikes ನಡೆಯುವುದರಿಂದ ಅಭಿವೃದ್ಧಿ ಕಾರ್ಯಗಳು ಆಗುತ್ತದೆಯೇ? ಈ ರೀತಿ ನಡೆಯುವುದರಿಂದ ಅಭಿವೃದ್ಧಿ ಕುಂಠಿತವಾಗುವುದಿಲ್ಲವೇ? ಈ ರೀತಿ ಗೋಲಿಬಾರ್ ನಡೆದರೆ ಯಾರಾದರೂ ವ್ಯಾಪಾರ ಮಾಡುವುದಕ್ಕೆ ವ್ಯಾಪಾರಸ್ಥರು ಬರುತ್ತಾರೆಯೇ? ಸಾಮಾನ್ಯವಾಗಿ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಾಂತ ರೀತಿಯಲ್ಲಿ ಇರತಕ್ಕಂಥ ಪ್ರದೇಶದಲ್ಲಿ ಮಾತ್ರ ವ್ಯಾಪಾರ, ವಹಿವಾಟು ನಡೆಯುತ್ತದೆ. ನಾವು ನೋಡಿದ ಹಾಗೆ ಮಂಗಳೂರಿನಲ್ಲಿ ಪ್ರತಿನಿತ್ಯ ಏನಾದರೂ ಸಾವು ನೋವುಗಳಾದರೆ ಅದನ್ನು ಯಾವುದಾದರೂ ಒಂದು ಕೋಮಿನ ಮೇಲೆ ಹಾಕಿಬಿಡುವಂಥಾದ್ದು. ಈ ರೀತಿಯಾದರೆ ಮಂಗಳೂರು ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿದೆಯೇ? ಅಶಾಂತಿ ತರತಕ್ಕಂಥವರಿಗೆ ಶಿಕ್ಷೆಯಾಗದಿದ್ದರೆ ಮಂಗಳೂರು ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲ. ಯಾವ ಶಕ್ತಿ ಅಲ್ಲಿ ಕೆಲಸ ಮಾಡುತ್ತಿದೆ ಎಂಬುದನ್ನು ಸರ್ಕಾರದವರು ಸರಿಯಾಗಿ ನೋಡಬೇಕಾಗುತ್ತದೆ. ಯಾರು ನಾಟಕವನ್ನು ಅಭಿವ್ಯಕ್ತಗೊಳಿಸುತ್ತಾರೆ, ಪ್ರಧಾನಿಗಳ ಬಗ್ಗೆ ಏನೋ ಒಂದು ಕೆಟ್ಟದಾಗಿ ಮಾತನಾಡುತ್ತಾರೆ, ಅವರ ಮೇಲೆ ದೇಶದ್ರೋಹಿ ಕೇಸ್ ಹಾಕುವುದು. ಬಹಳಷ್ಟು ಜನ ಪ್ರಧಾನ ಮಂತ್ರಿಗಳ ಬಗ್ಗೆ ಮಾತನಾಡಿರುವಂತಹ ಉದಾಹರಣೆಗಳಿವೆ. ಆದರೆ ಅವರ ಮೇಲೆ ದೇಶದ್ರೋಹಿ ಕೇಸ್ ಹಾಕಿರುವಂತಹ ಉದಾಹರಣೆಗಳು ಇವೆಯೇ? ಸಾರ್ವಜನಿಕರ ಎದುರಿನಲ್ಲಿಯೇ ಮುಖ್ಯಮಂತ್ರಿಗಳ ಮೇಲೆ ಕಲ್ಲು, ಚಪ್ಪಲಿಗಳನ್ನು ಎಸೆದಿದ್ದಾರೆ. ಅವರು ಸಾರ್ವಜನಿಕ ಆಸ್ತಿ. ಅವರೇನಾದರೂ ತಪ್ಪು ಮಾಡುತ್ತಿದ್ದರೆ ತಿದ್ದಿಕೊಳ್ಳಲಿ, ಈ ರೀತಿಯಾದರೆ ಸರಿಯಾಗುವುದಿಲ್ಲವೆಂದು ನಾಟಕದ ಮೂಲಕ, ವಿಡಂಬನೆ ಮೂಲಕ ತೋರಿಸುತ್ತಾರೆ. ಅದರಲ್ಲಿರುವಂಥವರು ಶಾಲೆಯ ಮಕ್ಕಳು. ಆ ಶಾಲೆ ಮಕ್ಕಳಿಗೆ ಇವರು ಸೂಟು-ಬೂಟು ಹಾಕಿಕೊಂಡು ಪೊಲೀಸರು ಹೋದರೆ ಮಕ್ಕಳ ಮೇಲೆ ಏನು ಪರಿಣಾಮ ಬೀರುತ್ತದೆ? ನಾಳೆ ಆ ಮಕ್ಕಳು ಏನು ತಿಳಿದುಕೊಳ್ಳುತ್ತಾರೆ? ಆದ್ದರಿಂದ ಯಾರು NRC (National Register of Citizens), CAA (Citizenship Amendment Act) ವಿರುದ್ಧ ಹೋಗುತ್ತಾರೋ ಅವರನ್ನು ಹತ್ತಿಕ್ಕಬೇಕು. ಯಾವುದಾದರೂ ರೂಪದಲ್ಲಿ ಅವರನ್ನು ಮುಗಿಸಬೇಕು ಎನ್ನುವ ವಿಚಾರ ಇವರಲ್ಲಿ ಇದ್ದರೆ ಅದು ಇವರಿಗೆ ಗೊತ್ತಿರಲಿ.

(ಮುಂದು)

53/19-02-2020/12-30/ ಬಿಕೆಪಿ-ವಿಕೆ
**ಶ್ರೀ ಆರ್.ಬಿ.ತಿಮ್ಮಾಪೂರ**(ಮುಂದು)

ಅವರುಗಳನ್ನು ಮುಗಿಸಬೇಕೆನ್ನುವ ವಿಚಾರ ತಮ್ಮಲ್ಲಿ ಇದ್ದರೆ ಒಂದು ವಿಚಾರ ನಿಮಗೆ ಗೊತ್ತಿರಲಿ. ಗೋಲಿಬಾರ್ ಮಾಡಿದಂತಹ ಸರ್ಕಾರಗಳು ಏನೇನು ಆಗಿವೆ ಸ್ವಲ್ಪ ಪುಟವನ್ನು ತೆಗೆದು ನೋಡಿಕೊಳ್ಳಿ. ಹಾವೇರಿಯಲ್ಲಿ ಗೋಲಿಬಾರ್ ನಡೆದಂತಹ ಸಂದರ್ಭದಲ್ಲಿ ಏನಾಗಿದೆ, ನರಗುಂದದಲ್ಲಿ ಗೋಲಿಬಾರ್ ಆದಂತಹ ಸಮಯದಲ್ಲಿ ನಮಗೆ ಏನಾಗಿದೆ ಎಂದು ನೋಡಿಕೊಳ್ಳಿ. ಈಗ 17 ಮಂದಿ ಚೆನ್ನಾಗಿರುತ್ತೇವೆಂದು ನಿಮ್ಮಲ್ಲಿಗೆ ಬಂದಿದ್ದಾರೆ. ಗೋಲಿಬಾರ್ ಆದಂತಹ ಸರ್ಕಾರಗಳು ಯಾವುದೂ ಉಳಿದಿಲ್ಲ. ಎಲ್ಲಾ ಸರ್ಕಾರಗಳು ಮುಗಿದು ಹೋಗಿವೆ.

**ಶ್ರೀ ಐವನ್ ಡಿ'ಸೋಜಾ:-** ಈ ಸರ್ಕಾರವೂ ಮುಗಿಯುತ್ತದೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ನಾನು ನರಗುಂದದ ಬಗ್ಗೆಯೂ ಹೇಳಿದ್ದೇನೆ. ಹಾವೇರಿಯ ಬಗ್ಗೆಯೂ ಹೇಳಿದ್ದೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸದಸ್ಯರಾದ ಶ್ರೀ ಆರ್.ಬಿ.ತಿಮ್ಮಾಪುರ ರವರು ಗಮನಿಸಬೇಕು. ಈ ಸರ್ಕಾರವೂ ಮುಗಿಯುತ್ತದೆ. ಏಕೆಂದರೆ ಈ ವಿಚಾರವಾಗಿ ಸಭೆಗಳು ನಡೆಯುತ್ತಿವೆ ಎಂದು ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ಗೋಲಿಬಾರ್ ಮಾಡಿದಂತಹ ಸರ್ಕಾರಗಳು ಉಳಿಯುವುದಿಲ್ಲವೆನ್ನುವುದು ಸತ್ಯ ಇದೆ. ಹಳಬರು ಸೇರಿದ್ದಾರೆ. ಹೊಸಬರನ್ನು ಇದರಲ್ಲಿ ಸೇರಿಸುವುದಿಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಅನರ್ಹರ ಸರ್ಕಾರವಾಗಿದ್ದು, ಯಾವಾಗ ಬೇಕಾದರೂ ಬಿದ್ದು ಹೋಗಬಹುದು. **(ಗೊಂದಲ)** ಅನರ್ಹರು ಯಾವತ್ತು ಇದ್ದರೂ ಸಹ ಅವರು ಅನರ್ಹರೇ. ಅವರು ಪವಿತ್ರರಾಗಲಿಕ್ಕೆ ಸಾಧ್ಯವಿಲ್ಲ. ಗಂಗಾಜಲವನ್ನು ತಂದು ಇವರ ಮೇಲೆ ಸುರಿದರೂ ಸಹ ಇವರು ಅನರ್ಹರೆ. ಇವರು ಪವಿತ್ರರಾಗಲಿಕ್ಕೆ ಸಾಧ್ಯವಿಲ್ಲ. ಗಂಗಾನದಿಯ ನೀರನ್ನು ತಂದು ಇವರ ಮೇಲೆ ಸುರಿದರೂ ಕೂಡ ಅನರ್ಹ ಎನ್ನುವ ಪದ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಅನರ್ಹರು ಎನ್ನುವ ಪದವನ್ನು ನಾವು ಹೇಳಿದ್ದಲ್ಲ, ಸುಪ್ರೀಂ ಕೋರ್ಟ್ ಹೇಳಿದ್ದು.

**(ಗೊಂದಲ)**

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು):–** ಜನತೆ ತೀರ್ಪು ಕೊಟ್ಟಿರುವುದರಿಂದಲೇ ನಾವು ಮತ್ತು ನೀವು ಇಲ್ಲಿ ಇರುವುದಾಗಿದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾಜಿ ಶಾಸಕರಾದ ಶ್ರೀ ಹೆಚ್. ವಿಶ್ವನಾಥ್‌ರವರು ಮಂತ್ರಿ ಸ್ಥಾನ ಕೇಳಿದಂತಹ ಸಂದರ್ಭದಲ್ಲಿ ನೀವು ಅನರ್ಹ ಶಾಸಕರಿದ್ದೀರಿ, ನಿಮಗೆ ಮಂತ್ರಿ ಸ್ಥಾನ ಕೊಡಲಿಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ.

**ಶ್ರೀ. ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಅನರ್ಹ ಶಾಸಕರು ಎನ್ನುವುದು ಒಂದು ಕಡೆಯಾದರೆ 3 ದಿನಗಳ ಹಿಂದೆ ಬಿ.ಜೆ.ಪಿ.ಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯವರು ಏನು ಇವರು 17 ಜನರು ಬಂದಿದ್ದಾರೆ, ವೈರಸ್ ಎಂದು ಹೇಳಿದ್ದಾರೆ. ಅದು ಕರೋನಾ ವೈರಸ್ ಎಂತಲೋ ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ. ಆಧಾರ ಇಲ್ಲದೇ ಈ ರೀತಿ ಬಾಯಿಗೆ ಬಂದಂತೆ ಮಾತನಾಡಬೇಡಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್:–** ಮಾನ್ಯ ಸದಸ್ಯರು ಘನತೆ–ಗೌರವ ಇಟ್ಟುಕೊಂಡು ಮಾತನಾಡಬೇಕು.

**(ಗೊಂದಲ)**

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಕರೋನಾ ಇರಬಹುದು, ಅನರ್ಹರು ಇರಬಹುದು. ನಮ್ಮ ಕತೆ ಇವರಿಗೆ ಏತಕ್ಕೆ ಬೇಕು? ಅವರದ್ದನ್ನು ಅವರು ನೋಡಿಕೊಳ್ಳಬೇಕು. ನಿಮ್ಮ ತಟ್ಟೆಯಲ್ಲಿ ಹೆಣ ಬಿದ್ದಿದೆ ನೋಡಿಕೊಳ್ಳಲಿ. ಕಾಂಗ್ರೆಸ್ ಒಂದು ರೋಗ ಇದ್ದಂತೆ. ನಮಗೆ ಏತಕ್ಕೆ ಹೇಳುತ್ತಿದ್ದೀರಿ?

**(ಗೊಂದಲ)**

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್:–** ಅಧಿಕಾರ ಕಳೆದುಕೊಂಡು ಹತಾಶ ಭಾವನೆಯಿಂದ ಈ ರೀತಿ ಮಾತನಾಡುತ್ತಿದ್ದಾರೆ. ಕಾಂಗ್ರೆಸ್ ನೋಡಿ ಬಂದಿದ್ದೇವೆ. ದೊಡ್ಡ ಕರೋನಾ ಇದೆ ಎಂದು ಹೇಳಿ ಅಲ್ಲಿಂದ ಬಿಟ್ಟು ಇಲ್ಲಿಗೆ ಬಂದಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಮುಖ್ಯಮಂತ್ರಿಗಳು ಈ 17 ಜನ ಶಾಸಕರಿಗೆ ಪೂರ್ಣ ಗೌರವವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇಲ್ಲಿ ಯಾವುದೇ ತೊಂದರೆ ಇಲ್ಲ.

**ಶ್ರೀ ಎಂ. ನಾರಾಯಣಸ್ವಾಮಿ:–** ಈ ಶಾಸಕರುಗಳು ನಮ್ಮ ಸ್ನೇಹಿತರು.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಅವರು ನಮ್ಮ ಸ್ನೇಹಿತರಲ್ಲ. ಅವರು ನಮ್ಮ ದುಶ್ಮನ್‌ಗಳು.

(ಗೊಂದಲ)

**ಸಭಾಪತಿಯವರು:–** ಇದು ಯಾವುದೂ ಸಹ ರೆಕಾರ್ಡ್ ಹೋಗುವುದಿಲ್ಲ. ಮಾತನಾಡಲಿಕ್ಕೆ ಯಾರನ್ನು ಕರೆದಿದ್ದೇನೆ, ಅವರು ಮಾತನಾಡಿದ್ದು ಮಾತ್ರ ರೆಕಾರ್ಡ್‌ಗೆ ಹೋಗುತ್ತದೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಸಭಾಪತಿಯವರೇ, ಈ ದ್ವಂದ್ವತೆ. .

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ನೀವು ಮಾತನಾಡಿ ಆಗಿದೆ, ಬೇರೆಯವರಿಗೆ ಉಪದ್ರವ ಕೊಡಬೇಡಿ ಕುಳಿತುಕೊಳ್ಳಿ. ನೀವು ಒಬ್ಬರು ಚೆನ್ನಾಗಿ ಮಾತನಾಡಿದರೆ ಸಾಕಾಗುವುದಿಲ್ಲ.

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಬಿ.ತಿಮ್ಮಾಪೂರ:–** ಸಭಾಪತಿಯವರೇ, ಎಲ್ಲಿಯೋ ಒಂದು ಕಡೆ ವಿರೋಧ ಪಕ್ಷದಲ್ಲಿ ಇರತಕ್ಕಂತಹವರನ್ನು ದಮನ ಮಾಡಬೇಕೆಂದು ಇವರು ನಡೆಸುತ್ತಿರುವಂತಹ ಇವರ ನಡವಳಿಕೆಗಳು ಏನಿವೆ, ಅದು ಸರಿ ಕಾಣುತ್ತಿಲ್ಲ. ವಿರೋಧ ಪಕ್ಷದ ನಾಯಕರು ಮಂಗಳೂರಿನಲ್ಲಿ ಏನು ನಡೆಯುತ್ತಿದೆ, ಎಂದು ನೋಡಲಿಕ್ಕೆ ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ವಿಮಾನ ನಿಲ್ದಾಣದಿಂದಲೇ ಇವರನ್ನು ಏಕೆ ವಾಪಸ್ಸು ಕಳುಹಿಸಿದರು, ಅಂತಹ ಭಯ ಇವರಿಗೆ ಏನಿತ್ತು? ಅಲ್ಲಿ ಪೊಲೀಸ್‌ನವರು ಇರಲಿಲ್ಲವೇ, ಅಲ್ಲಿಗೆ ವಿರೋಧ ಪಕ್ಷದ ನಾಯಕರು ಹೋಗಿ ಬಂದಿದ್ದರೆ ಏನು ಗಲಾಟೆ ಆಗುತ್ತಿತ್ತು? ಅಲ್ಲಿಗೆ ಮುಖ್ಯಮಂತ್ರಿಯವರು ಹೋದರೆ ಗಲಾಟೆ ಆಗುವುದಿಲ್ಲವೇ? ಅವರಿಗೆ ಬೇಕಾದವರು ಅವರ ಜೊತೆಯಲ್ಲಿ ಅಲ್ಲಿಗೆ ಹೋದರೆ ಗಲಾಟೆ ಆಗುವುದಿಲ್ಲವೇ? ಸೆಕ್ಷನ್ 144 ಜಾರಿಯಲ್ಲಿದ್ದಾಗ ಅವರು ಹೋಗಬಹುದು, ವಿರೋಧ ಪಕ್ಷದವರು ಹೋಗುವಂತಿಲ್ಲ. ಇದು ಯಾವ ನ್ಯಾಯ? ಅಂದರೆ ಇದರ ಉದ್ದೇಶ ಏನೆಂದರೆ, ಯಾರ್‍ಯಾರು CAA (Citizenship Amendment Act) ಬಗ್ಗೆ ಹೋರಾಟ ಮಾಡುತ್ತಾರೆ. ಅವರನ್ನು ಹತ್ತಿಕ್ಕಲೇಬೇಕೆನ್ನುವ ಭಾವನೆ ಇದೆ ಎಂದು ಕಾಣುತ್ತದೆ. ಅದರ ಜೊತೆಯಲ್ಲಿ Shaheen School, Bidar ನಲ್ಲಿ ಪ್ರತಿಭಟನೆಯಾದಾಗ ಕ್ರಮ ಕೈಗೊಳ್ಳುತ್ತೀರಿ. ಆದರೆ ಕೆಎಲ್‌ಇ ಸಂಸ್ಥೆಯಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಅಲ್ಲಿ ಹೇಳಲಿಲ್ಲವೇ? ಅವರ ಹಿನ್ನೆಲೆ ಬಗ್ಗೆ ಇವರು ಏನು ಚರ್ಚೆ ಮಾಡಿದರು? ಈ ವಿಚಾರವಾಗಿ department ನಲ್ಲಿ ಏನು ನಡೆಯುತ್ತಿದೆ? 'ಪಾಕಿಸ್ತಾನ ಜಿಂದಾಬಾದ್' ಎಂದವರಿಗೆ ಇವತ್ತು ಬಿಟ್ಟು ನಾಳೆ ಮನೆಗೆ ಕಳುಹಿಸುವುದು, ಮತ್ತೆ ಈ ವಿಚಾರವಾಗಿ ಕೆಚ್ಚು ಬಂದರೆ ಮತ್ತೆ ಕರೆದುಕೊಂಡು ಬರುವುದು. ಅವರಿಗೆ ಬಾಂಡ್ ಕೊಟ್ಟವರು ಯಾರು ಎಂದು ಹೇಳಬೇಕಲ್ಲವೇ, ಏತಕ್ಕೆ ಅವರನ್ನು ಬಿಟ್ಟರು, ಮತ್ತೆ ಏತಕ್ಕೆ ಆರೆಸ್ಟ್ ಮಾಡಿದರು, Shaheen School, Bidar ನಲ್ಲಿ ನಡೆದ ಘಟನೆಗೆ ಕ್ರಮ ಕೈಗೊಳ್ಳುತ್ತೀರಿ. ಆದರೆ, ಕೆಎಲ್‌ಎ ಸ್ಕೂಲ್‌ನಲ್ಲಿ ಏನೋ ಮಾಡಿದ್ದಾರೆನ್ನುವ ಭಾವನೆ ನಮಗೆ ಇದ್ದರೂ ಸಹ ನಾನು ಅಂತಹ ವಿಚಾರವಾಗಿ ನಾನು ಏನೂ ಹೇಳುವುದಿಲ್ಲ. ನಾನು ಕೆ.ಎಲ್.ಎ ಶಿಕ್ಷಣ ಸಂಸ್ಥೆಯವರ ಮೇಲೆ ಕೇಸ್ ಹಾಕಿ ಎಂದು ನಾನು ಹೇಳುವುದಿಲ್ಲ. ಆದರೆ, ನಿಮ್ಮ ನಡವಳಿ ಏನಿದೆ, ಯಾರೇ ಅಲ್ಪಸಂಖ್ಯಾತರ ವಿಚಾರ ಬಂದರೆ, ಅವರ ಮೇಲೆ ಕೇಸ್ ಹಾಕುವುದಾಗಿದೆ. ಕೇಸ್ ವಿಚಾರ ಬಂದಾಗ ಯಾವ್ಯಾವ ಸಂದರ್ಭದಲ್ಲಿ ಕೇಸ್ ಹಾಕಬೇಕೆಂದು ಹೇಳಿ. ಸಣ್ಣ ಮಕ್ಕಳ ವಿಡಂಬನೆಯ ನಾಟಕ ಮಾಡಿದರೆ ಅವರ ಮೇಲೆ ಕೇಸ್ ಹಾಕುವುದೇ, ಶಾಲೆಯಲ್ಲಿ ಕಲಿಸುವಂತಹ ಟೀಚರ್ ಮೇಲೆ ಕೇಸ್ ಹಾಕುವುದೇ?

ಆದರೆ, ನಮ್ಮ ಸೋನಿಯಾ ಗಾಂಧಿಯವರ ವಿಚಾರವಾಗಿ ಹೇಳುವುದಾದರೆ, ದಿ: ರಾಜೀವ್ ಗಾಂಧಿಯವರ ಹತ್ಯೆ ಆಗಿದ್ದರೂ ಸಹ ಹತ್ಯೆ ಮಾಡಿದವರ ಬಗ್ಗೆ ಸೋನಿಯಾಜಿಯವರಿಗೆ ಅನುಕಂಪ ಇದೆ. ಅವರಿಗೆ ಕ್ಷಮಾಪಣೆ ನೀಡಿ ಎನ್ನುವಂತಹ ನಡೆ ನಮ್ಮ ಕಾಂಗ್ರೆಸ್‌ನಲ್ಲಿ ಇದೆ. ಅಂತಹ ಪಕ್ಷವನ್ನು ನೀವು ಏನಾದರೂ ಹತ್ತಿಕ್ಕಬೇಕೆನ್ನುವ ಭಾವನೆ ಇಟ್ಟುಕೊಂಡು ನಿಮ್ಮ ನಡವಳಿಕೆ ನಡೆಸಿದರೆ ಅದು ತಪ್ಪಾಗುತ್ತದೆ. ಇದು ಶಾಶ್ವತವಾದುದು ಎಂದು ನೀವು ಏನು ತಿಳಿದುಕೊಂಡಿದ್ದೀರಿ, ಅದು ನಿಮ್ಮ ತಪ್ಪು ತಿಳುವಳಿಕೆ. ಅಧಿಕಾರಿಗಳು ಬೇಕಾದರೆ, ಒಬ್ಬ ಮಂತ್ರಿಯವರ ಮಾತನ್ನು ಕೇಳಿ, ಮುಖ್ಯಮಂತ್ರಿಯವರ ಮಾತನ್ನು ಕೇಳಿ ಕೆಲಸ ಮಾಡಿ. ಆದರೆ, ಒಂದು ಸಂಘಟನೆಯವರ ಮಾತನ್ನು ಕೇಳಿದರೆ ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೇಶಕ್ಕೆ ಹಾನಿ ಇದೆ. ರಾಜ್ಯಕ್ಕೆ ಹಾನಿ ಇದೆ. ಯಾವುದೋ ಒಂದು ಸಂಘಟನೆಯವರು Police Department ಅನ್ನು control ಮಾಡತಕ್ಕಂತಹ ಗುಮಾನಿ ಕೇಳಿ ಬರುತ್ತಿದೆ. ಆ ಗುಮಾನಿ ಏನಾದರೂ ಸತ್ಯವಾದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ದಕ್ಕೆ ಬರುತ್ತದೆ. ಪ್ರಜಾಪ್ರಬುತ್ವ ವ್ಯವಸ್ಥೆಯಿಂದ ಆಯ್ಕೆಯಾದವರು ಕುಳಿತುಕೊಳ್ಳಬೇಕಾಗುತ್ತದೆ. ಯಾರೋ ಒಬ್ಬರು ಇವತ್ತು ಆಡಳಿತ ನಡೆಸುವಂತಹ ವ್ಯವಸ್ಥೆ ಆಗುತ್ತಿದೆ. ಹಲವಾರು ವಿಚಾರಗಳಲ್ಲಿ ಪತ್ರಕರ್ತರನ್ನು ಹೊಡೆಯುವಂತಹದ್ದು, ದುಡಿಯುತ್ತಿರುವಂತಹ ಆ ಮೀನುಗಾರರನ್ನು ಕೊಂದಿದ್ದಾರಲ್ಲ, ಅವರಿಗೆ ಪರಿಹಾರವನ್ನು ಕೊಟ್ಟರೆ ನಿಮಗೆ ಏನಾಗುತ್ತದೆ? ಅವರು ಏನಾದರೂ ದೇಶದ್ರೋಹಿಗಳಾ, ಟೆರರಿಸ್ಟ್‌ಗಳಾ? ಅವರ ಮೇಲೆ ಏನಾದರೂ ಕೇಸ್‌ಗಳು ಇವೆಯೇ? ಪಾಪ, ದುಡಿಯುತ್ತಿದ್ದಂತಹ ಮೀನುಗಾರರನ್ನು ಕೊಂದ ನಂತರ ಮುಖ್ಯಮಂತ್ರಿಗಳು ಅವರಿಗೆ ಪರಿಹಾರವನ್ನು ಘೋಷಣೆ ಮಾಡುತ್ತಾರೆ. ಆದರೆ, ಎರಡು ದಿನಗಳ ನಂತರ ಅವರು ಕೊಡಲಿಕ್ಕೆ ಆಗುವುದಿಲ್ಲವೆಂದರೆ, ಯಾವ ಒಂದು ಶಕ್ತಿ ನಿಮ್ಮನ್ನು ಆಟ ಆಡಿಸುತ್ತಿದೆ ಎನ್ನುವುದನ್ನು ಹೇಳಿ. ನಿಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರನ್ನು ಆರಿಸಿ ಕಳುಹಿಸಿದ್ದಾರೆ, ಅವರ ಕೆಲಸವನ್ನು ಮಾಡಿ. ಈ ಕೇಸ್‌ಗಳನ್ನು ಯಾರು ಹಾಕಿದ್ದಾರೆ? ಸಂಘಟನೆಯವರು ಕೇಸ್ ಹಾಕಿದ್ದಾರೆಯೇ? ಬಿ.ಜೆ.ಪಿ.ಯವರು ಕೇಸ್ ಹಾಕಿದ್ದಾರೆಯೇ? ಅಥವಾ ಸಾರ್ವಜನಿಕರು ಕೇಸ್ ಹಾಕಿದ್ದಾರೆಯೇ ಎನ್ನುವುದರ ಬಗ್ಗೆ ಚರ್ಚೆ ಆಗಬೇಕಲ್ಲವೇ? Shaheen School, Bidar ಬಗ್ಗೆ ಕೇಸ್ ಹಾಕಿರುವವರು ಯಾರು?

(ಮುಂದು)

**(054) 19.02.2020 12.40 ಎಸ್‌ವಿ–ಬಿಎನ್‌ಎಸ್**
**ಶ್ರೀ ಆರ್.ಬಿ.ತಿಮ್ಮಾಪೂರ (ಮುಂದು)**

ಸಂಘಟನೆಯವರು ಕೇಸ್ ಹಾಕಿದ್ದಾರೆಯೇ ಅಥವಾ ಜನರು ಕೇಸ್ ಹಾಕಿದ್ದಾರೆಯೇ? ನಳಿನಿ ಬಾಲಕುಮಾರ್ ಪ್ರಕರಣದಲ್ಲಿ ಕೇಸ್ ಯಾರು ಹಾಕಿದರು? ಖಾದರ್ ವಿರುದ್ಧ ಯಾರು ಕೇಸ್ ಹಾಕಿದರು? ಅವರ ಪಕ್ಷದ ಕಾರ್ಯಕರ್ತರ ಕೆಲಸವನ್ನು ಮಾಡಿಕೊಡಲಿ. ನಾನು ಬೇಡ ಎನ್ನುವುದಿಲ್ಲ. ಆದರೆ ಪೊಲೀಸ್ ಇಲಾಖೆಯ ಹಿಡಿತವನ್ನು ಅವರ ಕೈಯಲ್ಲಿ ಕೊಡುವಂತಹ ಕೆಲಸ ಆಗಬಾರದು. ಮೇಲಿನ ಎಲ್ಲಾ ಪ್ರಕರಣಗಳಲ್ಲಿ ಕೇಸ್ ಯಾರು ಹಾಕಿದ್ದಾರೆ ಎಂಬ ವರದಿಯನ್ನು ಕೊಡಲಿ. ಒಂದು ಪಕ್ಷದ ಕಾರ್ಯಕರ್ತರ ಮಾತಿಗೆ ಪೊಲೀಸ್ ಇಲಾಖೆಯು ಅಂಜುತ್ತಿದೆ. ನಮಗೆ ಪೊಲೀಸ್ ಇಲಾಖೆಯ ಬಗ್ಗೆ ಬಹಳ ಅಭಿಮಾನ. ನಮ್ಮ ರಾಜ್ಯದಲ್ಲಿರುವಂತಹ ಪೊಲೀಸ್ ಅಧಿಕಾರಿಗಳು ಬೇರೆ ರಾಜ್ಯಗಳಲ್ಲಿ ಇಲ್ಲ ಎಂಬ ಮಾತನ್ನು ನಾವು ಬಹಳ ಕಡೆಗಳಲ್ಲಿ ಕೇಳಿದ್ದೇವೆ. ಈಗ ಇವರಿಗೆ ಏನಾಗಿದೆ? ಮುಂಬಡ್ತಿಗಾಗಿ ಅಥವಾ ಏತಕ್ಕಾಗಿ ಕೆಲವು ಸಂಘಟನೆಗಳ ಮಾತನ್ನು ಪೊಲೀಸರು ಕೇಳುತ್ತಿದ್ದಾರೆ ಎಂಬುದು ತಿಳಿಯಬೇಕು. ಈ ರೀತಿ ಆಗಬಾರದು. ಶಾಸಕರಾದ ಮಾನ್ಯ ಖಾದರ್‌ರವರು ಉತ್ತರ ಪ್ರದೇಶದ ಮಾದರಿಯಲ್ಲಿ ಕರ್ನಾಟಕ ಆಗಬಾರದು ಎಂದು ಹೇಳಿದರೆ, ಅದನ್ನು ತಿರುಚಿ ಕರ್ನಾಟಕ ಉತ್ತರ ಪ್ರದೇಶವಾಗುತ್ತದೆ ಎಂದು ಹೇಳಲಾಯಿತು. ಬಳ್ಳಾರಿಯಲ್ಲಿ ಮಾತನಾಡಿದ ಶಾಸಕರ ವಿರುದ್ಧ ಏಕೆ ದೇಶದ್ರೋಹದ ಕೇಸ್ ಅನ್ನು ಹಾಕಲಿಲ್ಲ? ವಿಜಯಪುರದಲ್ಲಿ ಒಬ್ಬ ಶಾಸಕರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾತನಾಡಿದರು. ಅವರ ಮೇಲೆ ಏಕೆ ಕೇಸ್ ಅನ್ನು ಹಾಕಲಿಲ್ಲ? ಪೊಲೀಸ್ ಇಲಾಖೆ ಎಂದರೆ ಇವರ ಮನೆಯ ಆಸ್ತಿ ಎಂದು ತಿಳಿದುಕೊಂಡಿದ್ದಾರೆಯೇ? ಪೊಲೀಸ್ ಇಲಾಖೆಯವರಿಗೆ ಏನಾಗಿದೆ? ಯಾರೋ ಹೇಳುತ್ತಾರೆಂದು ಕೇಸ್‌ಗಳನ್ನು ಹಾಕುತ್ತಾ ಹೋದರೆ ಆ ಇಲಾಖೆಗೆ ಮಾನ–ಮರ್ಯಾದೆ ಇರುತ್ತದೆಯೇ? ಬೇಕಾದವರ ಮೇಲೆ ಕೇಸ್ ಹಾಕುವುದು, ಬೇಡವಾದವರನ್ನು ಬಿಟ್ಟುಬಿಡುವುದು. ಸರ್ಕಾರ ನಡೆಸುತ್ತಿರುವವರಿಗೆ ಮಾಧ್ಯಮದ ಮೂಲಕ ಗಮನಕ್ಕೆ ಬಂದಿಲ್ಲವೆ? ಈ ರೀತಿಯ ದಮನಕಾರಿ ನೀತಿಯನ್ನು ಅನುಸರಿಸಿದರೆ ಜನ ತಕ್ಕ ಪಾಠವನ್ನು ಕಲಿಸುತ್ತಾರೆ. ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ವಾಕ್ ಸ್ವಾತಂತ್ರ್ಯವನ್ನು ಕಸಿದುಕೊಂಡು ತುರ್ತುಪರಿಸ್ಥಿತಿಯ ಮಾದರಿಯಲ್ಲಿ ತಾವು ನಡೆಸಿಕೊಳ್ಳುತ್ತಿರುವ ರೀತಿಯನ್ನು ಕಂಟ್ರೋಲ್ ಮಾಡಬೇಕು. ಜನ ದಂಗೆ ಎದ್ದಾಗ ಸಾರ್ವಜನಿಕ ಬದುಕು ಬಹಳ ದುಸ್ತರವಾಗುತ್ತದೆ ಎಂಬುದನ್ನು ಅರಿವಿನಲ್ಲಿಟ್ಟುಕೊಂಡು ಸರ್ಕಾರವನ್ನು ನಡೆಸಬೇಕೆನ್ನುವಂತಹ ಮಾತನ್ನು ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಇಲ್ಲಿ ಹಲವಾರು ವಿಚಾರಗಳು ಚರ್ಚೆಯಾಗಿವೆ. ಭಾವಚಿತ್ರಗಳನ್ನು ತೋರಿಸುವಂತಹ ಕೆಲಸವಾಗಿದೆ. ನಮಗೆ ಪೊಲೀಸ್ ಇಲಾಖೆಯ ಮೇಲೆ ನಂಬಿಕೆಯೇ ಹೊರಟು ಹೋದಂತಾಗಿದೆ. ಆದ್ದರಿಂದ ಈಗಿರತಕ್ಕಂತಹ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಂದ ಇದರ ತನಿಖೆಯಾಗಬೇಕು. ಆ ಮೂಲಕ ಸತ್ಯಾಸತ್ಯತೆಗಳು ಹೊರಬರಬೇಕು. ಯಾರ್‍ಯಾರು ಕೇಸ್‌ಗಳನ್ನು ದಾಖಲಿಸಿದ್ದಾರೆ ಎಂಬುದು ತಿಳಿಯಬೇಕು. ಹುಬ್ಬಳ್ಳಿ ಪ್ರಕರಣದಿಂದ ಪ್ರಾರಂಭಿಸಿ ಮಂಗಳೂರು ವಿಮಾನ ನಿಲ್ದಾಣದಲ್ಲಿ ಬಾಂಬ್ ಅನ್ನು ಸ್ಫೋಟ ಮಾಡಲು ಹೋದವನವರೆಗೆ ಎಲ್ಲಾ ವಿಷಯಗಳ ವಿಚಾರಣೆಯಾಗಬೇಕು. ಅವನನ್ನು ಮಾನಸಿಕ ಅಸ್ವಸ್ಥ ಎಂದು ಏಕೆ ಹೇಳಲಾಯಿತು? ಇದರ ಹಿಂದೆ ಏನಿದೆ? ಎಂಬುದನ್ನು ನಮಗೆ ತಿಳಿಸಬೇಕು. ಗಲಭೆ–ಗದ್ದಲಗಳಿರುವುದರಿಂದ ಅಭಿವೃದ್ಧಿ ಸಂಪೂರ್ಣವಾಗಿ ಕುಸಿದು ಹೋಗಿದೆ. ಬೇಕಾಬಿಟ್ಟಿ ಅಧಿಕಾರವನ್ನು ಚಲಾಯಿಸಲಾಗುತ್ತಿದೆ. ದಯಮಾಡಿ ಇದನ್ನು ಕಂಟ್ರೋಲ್‌ಗೆ ತರಲು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಸಭಾಪತಿಯವರು:–** ಮುಂದಿನ ಸರದಿ ಶ್ರೀ ನಸೀರ್ ಅಹ್ಮದ್ ಅವರದ್ದು.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿಯಮ 68ರ ಅಡಿಯಲ್ಲಿ ಮಾತನಾಡಲು ಅವಕಾಶವನ್ನು ನೀಡಿದ್ದಕ್ಕಾಗಿ ಧನ್ಯವಾದಗಳು. ನಿಜವಾಗಿಯೂ ನನಗೆ ಬೇಸರ ಎನ್ನಿಸುತ್ತದೆ. ಸುಮಾರು ವರ್ಷಗಳಿಂದ ನಾವು ರಾಜಕಾರಣದಲ್ಲಿದ್ದು, ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದೇವೆ. ಇಂದು ಚರ್ಚೆ ಮಾಡುವ ಸಂದರ್ಭದಲ್ಲಿ ಸಮಾಜದಲ್ಲಿ ನಮ್ಮ ಕಣ್ಣೆದುರಿಗೆ ನಡೆಯುತ್ತಿರುವ ತಾರತಮ್ಯವನ್ನು ನೋಡುತ್ತಿದ್ದೇವೆ. ಒಂದು ಕಡೆಯಲ್ಲಿ ಚುನಾವಣೆಗೆ ನಾಮಪತ್ರಗಳನ್ನು ಸಲ್ಲಿಸುವಾಗ ಸಂವಿಧಾನದ ಪ್ರಸ್ತಾವನೆಯನ್ನು ಓದಿ ನಾಮಪತ್ರವನ್ನು ಸಲ್ಲಿಸುತ್ತೇವೆ. ಮತ್ತೊಂದೆಡೆ ಚುನಾವಣೆಯನ್ನು ಗೆದ್ದ ನಂತರ ಸಂವಿಧಾನದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೇಲೆ ಪ್ರಮಾಣವನ್ನು ಮಾಡಿ ಇಲ್ಲಿ ಬಂದು ಕೂರುತ್ತೇವೆ. ನಂತರ ಆ ಜವಾಬ್ದಾರಿಯನ್ನು ನಾವು ಮರೆತು ಬಿಡುತ್ತೇವೆ. ಅಧಿಕಾರಕ್ಕೆ ಬರುವಾಗ ನಾವು ಯಾವ ಸತ್ಯಗಳನ್ನು ನುಡಿದು ಇಲ್ಲಿಗೆ ಬಂದಿರುತ್ತೇವೆಯೋ ಅದರ ಬಗ್ಗೆ ಕೂಡ ಗಮನವನ್ನು ಕೊಡಬೇಕಾದುದು ನಮ್ಮ ಜವಾಬ್ದಾರಿ ಆಗಿರುತ್ತದೆ. ನಮ್ಮ ಸ್ನೇಹಿತರಾದ ಮಾನ್ಯ ರೇಣುಕಾಚಾರ್ಯ ಅವರಾಗಿರಬಹುದು ಅಥವಾ ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್ ಅವರಾಗಿರಬಹುದು, ಅವರು ಆಡಿರುವ ಮಾತುಗಳನ್ನು ಗಮನಿಸಬೇಕು. ನಮ್ಮ ಯಾವುದೇ ಸಭೆಗೆ ಟೋಪಿ ಹಾಕಿಕೊಡಂತಹ ಜನ, ಬುರ್ಖಾ ಹಾಕಿಕೊಂಡಂತಹ ಜನ ಬರಬಾರದು ಎಂದು ಮಾನ್ಯ ಯತ್ನಾಳ್ ಅವರು ಒಂದು ಕಡೆಯಲ್ಲಿ ಹೇಳುತ್ತಾರೆ. ಮುಸಲ್ಮಾನರು ನಮಗೆ ಮತ ಹಾಕಿರದ ಕಾರಣ ಅವರಿಗೆ ಅಭಿವೃದ್ಧಿ ಕೆಲಸಗಳನ್ನು ಮಾಡಲು ನಾವು ಸಿದ್ಧರಿಲ್ಲ ಎಂದು ಮಾನ್ಯ ರೇಣುಕಾಚಾರ್ಯರವರು ಒಂದು ಕಡೆಯಲ್ಲಿ ಹೇಳುತ್ತಾರೆ. ಇದನ್ನು ಕೇಳಿದಾಗ ನಮಗೆ ನೋವಾಗುತ್ತದೆ. ನಮ್ಮಲ್ಲಿ "ಜಿಸ್‌ಕೀ ಲಾಠೀ, ಉಸ್‌ಕೀ ಭೈಂಸ್" ಎಂದು ಒಂದು ಗಾದೆಯನ್ನು ಹೇಳುತ್ತಾರೆ. ಅಂದರೆ ಯಾರ ಬಳಿ ದಂಡ ಇರುತ್ತದೆಯೋ ಅವರದ್ದೇ ಎಮ್ಮೆ ಎಂದು ಅದರ ಅರ್ಥ. ತಾವು ಕೂಡ ಅದೇ ಜಿಲ್ಲೆಯಿಂದ ಬಂದವರಾಗಿದ್ದೀರಿ.

ಇಂದು ನಮ್ಮ ಸ್ನೇಹಿತರೊಬ್ಬರು ಇಸ್ಲಾಮಿಕ್ ಸ್ಟಡೀಸ್ ಎಂದು ಜಾಹೀರಾತು ಬಂದಿದೆಯೆಂದು ಹೇಳಿದಾಗ ನನಗೆ ಒಮ್ಮೆ ಬಹಳ ಆಶ್ಚರ್ಯವಾಯಿತು. ನಮ್ಮ ರಾಷ್ಟ್ರದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಸಾವಿರಾರು ಮದರಸಾಗಳು ಇವೆ. ಅಲ್ಲಿ ಅರಾಬಿಕ್ ಸ್ಟಡೀಸ್, ಇಸ್ಲಾಮಿಕ್ ಸ್ಟಡೀಸ್ ಅನ್ನು ಬೋಧಿಸಲಾಗುತ್ತದೆ. ಅದು ನಮ್ಮ fundamental right. ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಅರಾಬಿಕ್ ಭಾಷೆಯಿದೆ. ಅರಾಬಿಕ್ ಭಾಷೆಯಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪಿ.ಹೆಚ್.ಡಿ. ಪದವಿಯನ್ನು ವ್ಯಾಸಂಗ ಮಾಡಲು ಅವಕಾಶವಿದೆ. ಇಂದು ಅರಾಬಿಕ್ ಸ್ಟಡೀಸ್ ಮತ್ತು ಇಸ್ಲಾಮಿಕ್ ಸ್ಟಡೀಸ್ ಆಗಬಾರದೆಂದು ಚರ್ಚೆ ಮಾಡುತ್ತಿದ್ದಾರೆ. ನಾವು ಯಾವ ಧಾಟಿಯಲ್ಲಿ ಹೋಗುತ್ತಿದ್ದೇವೆ? ಈ ರಾಷ್ಟ್ರದಲ್ಲಿರುವ 20 ಕೋಟಿ ಜನರನ್ನು ನಾವು ಇರಬೇಕೆ ಅಥವಾ ಬೇಡವೇ ಎನ್ನುವ ತೀರ್ಮಾನಕ್ಕೆ ಬರುತ್ತಿದ್ದಾರೆಯೇ ಎನ್ನುವ ಅನುಮಾನ ನಮಗೆ ಈಗಾಗಲೇ ಬರುತ್ತಿದೆ.

ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಮ ಜನ್ಮಭೂಮಿ ಪ್ರಕರಣದ ವಿಚಾರಣೆ ಪ್ರಕ್ರಿಯೆಯು ನಡೆಯುತ್ತಿದ್ದಾಗ ಯಾರೂ ರಾಮಜನ್ಮಭೂಮಿಯ ಬಗ್ಗೆ ಆಗಲೀ ಅಥವಾ ಬಾಬ್ರಿ ಮಸೀದಿಯ ಬಗ್ಗೆ ಆಗಲೀ ಪ್ರಸ್ತಾಪ ಮಾಡಬಾರದು ಎಂದು ಆದೇಶ ನೀಡಲಾಗಿತ್ತು. ಸರ್ವೋಚ್ಚ ನ್ಯಾಯಾಲಯದ ಆದೇಶವಿದ್ದರೂ ಸಹ ನಿಮ್ಮ ಜಿಲ್ಲೆಯ ಒಂದು ಶಾಲಾ ವಾರ್ಷಿಕೋತ್ಸವದಲ್ಲಿ ನೂರಾರು ಮಕ್ಕಳಿಂದ ಬಾಬ್ರಿ ಮಸೀದಿ ಧ್ವಂಸ ಮಾಡುವಂತಹ ಒಂದು ಕಾರ್ಯಕ್ರಮವನ್ನು ನಡೆಸಲಾಯಿತು. ಆಗ ಆ ಕಾರ್ಯಕ್ರಮದಲ್ಲಿ ಪೊಲೀಸ್ ಅಧಿಕಾರಿಗಳು, ಕೇಂದ್ರ ಸಚಿವರು, ರಾಜ್ಯ ಸಚಿವರು ಎಲ್ಲರೂ ಇದ್ದರು. ಅದೇ ರೀತಿಯಾಗಿ ಬೀದರ್‌ನ ಶಾಹಿನ್ ಶಾಲೆಯಲ್ಲಿ ಒಂದು ನಾಟಕ ನಡೆಸಿದಾಗ ಅಲ್ಲಿ ಕೂಡಲೇ ಕ್ರಮವನ್ನು ಕೈಗೊಂಡು ಅವರನ್ನು ಜೈಲಿಗೆ ಕಳುಹಿಸಲಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಕೇವಲ ಒಂದು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಫ್.ಐ.ಆರ್. ಹಾಕಿ ಬಿಟ್ಟು ಬಿಡುತ್ತಾರೆ. ಅದೂ ಸಹ ಒತ್ತಡವನ್ನು ಹಾಕಿದ ನಂತರ ಎಫ್.ಐ.ಆರ್. ಹಾಕಿದರು. ಈಗಾಗಲೇ ಸಾಕಷ್ಟು ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಶ್ರೀ ರಾಜೀವ್ ಗೌಡ, ಮಾನ್ಯ ರಾಜ್ಯಸಭಾ ಸದಸ್ಯರು ಮತ್ತು ಶ್ರೀಮತಿ ಸೌಮ್ಯಾ ರೆಡ್ಡಿ, ಮಾನ್ಯ ಶಾಸಕರು, ಜಯನಗರ ವಿಧಾನ ಸಭಾ ಕ್ಷೇತ್ರ ಇವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸೆಕ್ಷನ್ 144ರ ಬಗ್ಗೆ ದಾಖಲಿಸಿದ್ದ ಒಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಬಗ್ಗೆ ದಿನಾಂಕ 13.02.2020ರಂದು 'It is the fundamental right of the citizens of this Country' ಎಂದು ತೀರ್ಪು ನೀಡಿದೆ. ಇವತ್ತಿನ ದಿವಸ ಏನಾದರೂ ಪ್ರತಿಭಟನೆ ಮಾಡಬೇಕಾದರೆ ರೂ.10 ಲಕ್ಷಗಳ ಬಾಂಡ್ ಅನ್ನು ನೀಡಬೇಕೆಂದು ಪೊಲೀಸರು ಕೇಳುತ್ತಾರೆ. ಬಡಜನರು, ದಲಿತರು ಅಥವಾ ಯಾವುದೇ ಒಂದು ಇಲಾಖೆಯ ಕಾರ್ಮಿಕರಾಗಿರುವವರು ಪ್ರತಿಭಟನೆ ಮಾಡಬೇಕೆಂದರೆ ಅವರ ಹತ್ತಿರ ರೂ.10 ಲಕ್ಷಗಳಷ್ಟು ದುಡ್ಡು ಎಲ್ಲಿ ಇರುತ್ತದೆ? ಯಾವ ಒಂದು ನಿಯಮಗಳಡಿಯಲ್ಲಿ ಅದನ್ನು ಕೇಳಬಹುದು? ಪ್ರತಿಭಟನೆ ಮಾಡುವುದಕ್ಕೂ undertaking ಅನ್ನು ಕೇಳುತ್ತಾರೆ. ಯಾವ ನಿಯಮದಡಿ undertaking ಅನ್ನು ಕೊಡಬೇಕೆಂದು ಅವರು ಕೇಳುತ್ತಾರೆ? "Undertaking ಅನ್ನು ಕೇಳುವುದು ತಪ್ಪು. It is the fundamental right of the people. They can protest against the Government. The Government should have humility to listen to their demands and it should call them for negotiation" ಎಂದು ಬಾಂಬೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ಎರಡು ದಿನಗಳ ಹಿಂದಷ್ಟೇ ತೀರ್ಪು ನೀಡಿದೆ.

**(ಮುಂದು)**

(55) 19.02.2020 KG.BNS 12.50

**ಶ್ರೀ ನಸೀರ್ ಅಹ್ಮದ್ (ಮುಂದು)**

ಮೊನ್ನೆ ಬೀದರ್‌ನ ಶಾಹೀನ್ ಶಾಲೆಯ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು, ಆ remarks ಅನ್ನು ನೋಡಿರಬಹುದು. ಮಾನ್ಯ ಸರ್ವೋಚ್ಚ ನ್ಯಾಯಾಲಯ ಏತಕ್ಕಾಗಿ interlocutory ಯನ್ನು ನೀಡಿದರು? ಸರ್ಕಾರ ಅವರ ಜೊತೆಗೆ ಚರ್ಚೆ ಮಾಡಬೇಕೆಂದು ಒಂದು ಅವಕಾಶ ಕೊಡಬಾರದಾಗಿತ್ತಾ? ಇವತ್ತು ನಮ್ಮ ಇಡೀ ದೇಶದಲ್ಲಿ, ಅದರಲ್ಲೂ ಬೆಂಗಳೂರಿನ ಚಿಕ್ಕ ಲಾಲ್‌ಬಾಗ್‌ನ ಬಳಿ ಸಾವಿರಾರು ಜನ ಹೆಣ್ಣು ಮಕ್ಕಳು ಸುಮಾರು 11 ದಿವಸಗಳಿಂದ ಕುಳಿತಿದ್ದಾರೆ.,

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇಂತಹ ವಿಷಯಗಳಲ್ಲಿ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ.,

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಅವರಿಗೆ yield ಆಗುವುದಿಲ್ಲ. ನಾನು ಮಾತನಾಡಿದ ಮೇಲೆ ಅವರು ಮಾತನಾಡಲಿ. ನಾನು ಮಾತನಾಡಬೇಕಾದರೆ ಅವರು ಏಕೆ ಮಧ್ಯೆ ಪ್ರವೇಶ ಮಾಡುತ್ತಾರೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಸದಸ್ಯರ ಅನುಮತಿಯನ್ನು ಕೇಳಿಲ್ಲ.,

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದನ್ನು ಅವರು ಕೇಳಲಿ. ಅವರು ಆನಂತರ ಉತ್ತರ ಕೊಡಲಿ. **"ಜಿಸ್‌ಕೀ ಲಾಠೀ, ಉಸ್‌ಕೀ ಭೈಂಸ್"** ಎಂದು ಇದಕ್ಕೇ ಹೇಳುವುದು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಅನುಮತಿಯನ್ನು ಕೇಳಬೇಕಾಗುತ್ತದೆ. ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ. ಕೆಲವೊಂದು ಬಾರಿ ಏನಾಗುತ್ತದೆ ಎಂದರೆ.,

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಯಾವ ಸಂದರ್ಭದಲ್ಲಿ ಹೇಳಿ?

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಅವರಿಗೆ ಅವಕಾಶ ಕೊಟ್ಟಾಗ ಅವರು ಉತ್ತರ ಕೊಡಲಿ.,

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಚರ್ಚೆಗಳಲ್ಲಿ ಸರ್ಕಾರದ ಮೇಲೆ ಆರೋಪಗಳು ಬಂದಂತಹ ಸಂದರ್ಭದಲ್ಲಿ, ಸರ್ಕಾರದ ಕಡೆಯಿಂದ ಎದ್ದು ನಿಂತು ಒಂದು ನಿಮಿಷ ಮಾತನಾಡಬೇಕೆಂದು ತಮ್ಮ ಅನುಮತಿಯನ್ನು ಕೇಳಬೇಕಾಗುತ್ತದೆ.,

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಅವರು unparliamentary ಯಾಗಿ ಏನಾದರೂ ಮಾತನಾಡಿದ್ದಾಗ ಮಾತ್ರ ನೀವು ಕೇಳಬಹುದು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ಅನುಮತಿಯನ್ನು ಏಕೆ ಕೇಳುತ್ತೇವೆಂದರೆ, undertaking ಏಕೆ ಕೇಳುತ್ತೀರಿ, ಸ್ವೇಚ್ಛಾಚಾರವನ್ನು ಕೊಡಬೇಕು. ನ್ಯಾಯಾಲಯ ಹೇಳಿದೆ ಎಂದಾಗ, ಕೇಳಬೇಕು. ಕರ್ನಾಟಕ ರಾಜ್ಯದ ಎಲ್ಲಾ ಭಾಗದಲ್ಲಿಯೂ ಪ್ರತಿಭಟನೆಗಳು ಶಾಂತಿಯುತವಾಗಿ ನಡೆದಿವೆ. ಏಕೆಂದರೆ, ಸರ್ಕಾರದಿಂದ, ಪೊಲೀಸ್ ಇಲಾಖೆಯಿಂದ ಪೂರ್ವಾನುಮತಿಯನ್ನು ಪಡೆಯಲಾಗಿತ್ತು ಮತ್ತು ಬೇಕಾದಂತಹ Undertaking

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತೆಗೆದುಕೊಳ್ಳಲಾಗಿತ್ತು. ಬೇಕಾದಂತಹ Affidavit ಅನ್ನು ಸಹ ಕೊಡಲಾಗಿತ್ತು. ನಾವು ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತೇವೆ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುತ್ತೇವೆ ಎಂಬ ಮಾತನ್ನು ಹೇಳಿದ್ದರು.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆ ಗಲಭೆಯಾಗಿದೆ. ಎಲ್ಲೆಲ್ಲಿ ಬಿ.ಜೆ.ಪಿ., ಸರ್ಕಾರ ಇದೆ, ಅಲ್ಲಿ ಗಲಾಟೆಗಳು ಆಗಿವೆ. ಯು.ಪಿ.,ಯಲ್ಲಿ ಗಲಾಟೆಯಾಗಿದೆ. ಗಲಭೆ ಮಾಡಿರುವವರೇ ಬಿಜೆಪಿಯವರು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಎಲ್ಲೆಲ್ಲಿ ಬಿ.ಜೆ.ಪಿ., ಸರ್ಕಾರ ಆಡಳಿತದಲ್ಲಿದೆ ಅಲ್ಲೆಲ್ಲಾ ಗಲಭೆಗಳು ಆಗಿವೆ. ಯು.ಪಿ.ಯಲ್ಲಿ ಗಲಭೆ ಆಗಿದೆ. ಕರ್ನಾಟಕದಲ್ಲಿ ಆಗಿದೆ. ಆದರೆ, ಮಹಾರಾಷ್ಟ್ರ, ಛತ್ತೀಸ್‌ಗಡ್, ಮಧ್ಯಪ್ರದೇಶ, ಹಿಮಾಚಲಪ್ರದೇಶದ ಇಲ್ಲಿ ಎಲ್ಲಿಯೂ ಗಲಭೆಗಳಾಗಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಮತ್ತು ಬಸವರಾಜ ಹೊರಟ್ಟಿಯವರು ಬಹಳ ಸುಧೀರ್ಘವಾದಂತಹ ರಾಜಕೀಯ ಅನುಭವಗಳನ್ನು ಪಡೆದವರು. ನಾನು ಹೇಳುವುದೇನೆಂದರೆ, ವಾದಗಳಲ್ಲಿ ಎರಡು ವಿಧಗಳಿವೆ. ಅದು ವಿರೋಧ ಪಕ್ಷದವರಾಗಿರಲಿ ಅಥವಾ ಆಡಳಿತ ಪಕ್ಷದವರಾಗಿಲಿ, ಒಂದು ವಾದದ ಮೂಲಕ ಬಲವಂತ ಮಾಡುವುದು. ವಾದ ವಿಷಯಗಳನ್ನು ಮಂಡನೆ ಮಾಡುತ್ತದೆ. ಮತ್ತೊಂದು ಗಲಾಟೆ ಮೂಲಕ ವಾದ ಮಾಡುವುದು. ನಾನು ಹೇಳುವುದೇನೆಂದರೆ, ವಾದದ ಮೂಲಕವೇ ಚರ್ಚೆಯಾಗಲಿ, ಬಲವಂತ ಬೇಡ. ವಿಚಾರಗಳ ಮೂಲಕವೇ ಚರ್ಚೆ ಮಾಡಿ. ವಿಷಯಗಳನ್ನು ಹೇಳಿ. ಸರಿ ತಪ್ಪುಗಳನ್ನು ವಿಮರ್ಶೆ ಮಾಡಿ. ಆದರೆ, ಪೂರ್ವಗ್ರಹಪೀಡಿತರಾಗಿ ಮಾತನಾಡಬಾರದು. ಈ ರಾಜ್ಯದಲ್ಲಿ ನಡೆದ ಎಲ್ಲಾ ಪ್ರತಿಭಟನೆಗಳು ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡಿವೆ. ಏಕೆಂದರೆ, ಪೊಲೀಸ್ ಇಲಾಖೆಯಿಂದ ಪೂರ್ವಾನುಮತಿಯನ್ನು ಪಡೆದುಕೊಂಡಿವೆ. ಮಂಗಳೂರಿನಲ್ಲಿ 18ನೇ ತಾರೀಖಿನಂದು ಅಲ್ಲಿನ 'ಖಾಜಿ' ಅಂದರೆ, 'ಮುಖ್ಯಸ್ಥರು' ನಾವು ನಾಳೆ ದಿವಸ ಯಾವುದೇ ಪ್ರತಿಭಟನೆಯನ್ನು ಮಾಡುವುದಿಲ್ಲ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಅವರು ಹೇಳುವುದನ್ನು ಕೇಳುವುದಕ್ಕೆ ನಾವು ಇಲ್ಲಿ ನಿಂತಿಲ್ಲ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದೀರಿ. ನಾನು ಅವರಿಗೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿಲ್ಲ. ಹಾಗಾಗಿ, ಅವರು ಎಷ್ಟು ಹೊತ್ತು ಬೇಕಾದರೂ ಮಾತನಾಡುವುದಕ್ಕೆ ಅಧಿಕಾರ ಇದೆ. ಇಂತಹ ಸಂದರ್ಭಗಳಲ್ಲಿ ಸರ್ಕಾರ ತನ್ನ ಅಭಿಪ್ರಾಯಗಳನ್ನು ಹೇಳುವುದಕ್ಕೆ ಮಧ್ಯೆ ಎದ್ದು ನಿಂತುಕೊಳ್ಳುವಂತಹ ಪರಂಪರೆ ಹಿಂದಿನಿಂದಿಲೂ ಇದೆ. ಈಗಲೂ ಇದೆ. ಕಳೆದ 19ನೇ ತಾರೀಖಿನಂದು ಖಾಜಿಯವರು ನಮ್ಮದು ಯಾವುದೇ ಪ್ರತಿಭಟನೆ ಇಲ್ಲವೆಂದು ಹೇಳುತ್ತಾರೆ. ಸರ್ಕಾರ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಸೆಕ್ಷನ್ 144 ಅನ್ನು ಪೊಲೀಸ್ ಮೂಲಕ ಜಾರಿ ಮಾಡಿರುತ್ತದೆ. ಅಲ್ಲಿ ಬಂದಿರುವಂತಹ ಚರ್ಚೆ ಏನೆಂದರೆ, ಪೂರ್ವಾನುಮತಿಯನ್ನು ಪಡೆಯದೇ ಸಾವಿರಾರು ಜನ ನುಗ್ಗಿ ಬಂದಂತಹ ಸಂದರ್ಭಗಳಲ್ಲಿ ಪೊಲೀಸರು ಅಸಹಾಯಕರಾಗುತ್ತಾರೆ. ನಾಲ್ಕು ದಿಕ್ಕುಗಳಿಂದ ದಿಗ್ಬಂಧನ ಮಾಡಲಾಗಿರುತ್ತದೆ. ಮಧ್ಯದಲ್ಲಿರುವಂತಹ ಪೊಲೀಸರು ಸಶಸ್ತ್ರ ಪಡೆಗಳಿಂದ ಹೊಡೆದು ಬಿಡುತ್ತಾರೆ. ಅದಕ್ಕೆ ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಹೇಳುವಂತಹ ಕಾರಣ ಅಲ್ಲ. ಉದ್ರಿಕ್ತ ಜನ ಕಾನೂನನ್ನು ಕೈಗೆತ್ತಿಕೊಂಡಂತ ಸಂದರ್ಭಗಳಲ್ಲಿ ಕೆಲವು ನಿರ್ಧಾರಗಳನ್ನು ತೆಗೆದುಕೊಂಡಿದ್ದು ನಿಜ. ಅದರ ಬಗ್ಗೆ ಚರ್ಚೆ ಮಾಡೋಣ. ಅವರು ತನಿಖೆಯಾಗಬೇಕೆಂದು ಹೇಳಿದ್ದಾರೆ. ಸರ್ಕಾರದ ಮಟ್ಟದಲ್ಲಿ ಏನು ತನಿಖೆ ಆಗಬೇಕಿತ್ತೋ, ಆ ತನಿಖೆ ಆಗಿದೆ. ಈಗ ಅದರ ಬಗ್ಗೆಯೇ ಚರ್ಚೆ ಆಗುತ್ತಿದೆ. ಅವರು ಪೂರ್ವಗ್ರಹ ಇಲ್ಲದೇ ಯಾವುದೇ ಚರ್ಚೆಗಳನ್ನು ಮಾಡುತ್ತಿದ್ದರೂ ಸಹ ತಿಳಿದುಕೊಳ್ಳಬೇಕು. ಅದಕ್ಕೆ ನನ್ನ ವಿನಂತಿ. ಶಾಂತಿಯುತವಾದ ಪ್ರತಿಭಟನೆ ಮಾಡುತ್ತೇವೆ, ವಾದದ ಮೂಲಕ ಮಾಡುತ್ತೇವೆಂದರೆ ಸರಿ. ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಪೊಲೀಸರಿಗೆ ಕಲ್ಲು ಹೊಡೆಯುವವರನ್ನು ಮುಗ್ಧರು ಎಂದು ಹೇಳುತ್ತೀರಾ, ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರ ಹತ್ತಿರ ಕೇಳುತ್ತೇನೆ, ಅವರು ನಾವು ಹೊರಗಡೆ ಹೋದರೆ ಗೆಳೆಯರು. ಇಲ್ಲಿಯೂ ಗೆಳೆಯರು,

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಆಯಿತು ಕುಳಿತುಕೊಳ್ಳಿ, ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ನಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.,

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ದಯವಿಟ್ಟು ಕೇಳಿ, ನಮ್ಮ ಮೇಲೆ ಟೀಕೆ ಮಾಡಿದರೆ ಕೇಳೋಣ. ಈಗ ಮಾನ್ಯ ಸದಸ್ಯರಾದ ತಿಮ್ಮಾಪುರರವರು ಮಾತನಾಡಬೇಕಾದರೆ ನಮ್ಮ ಮೇಲೆ ಟೀಕೆ ಮಾಡಿದರು ಅದನ್ನು ಕೇಳೋಣ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯರೇ, ಒಂದು ನಿಮಿಷ. ಈಗ ಅವರಿಗೆ ಅನುಮತಿ ಕೊಟ್ಟರು. Clarify ಮಾಡಿದ್ದಾರೆ, ಅಲ್ಲಿಗೆ ಮುಗಿಯಿತು..

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಸರ್ಕಾರಕ್ಕೆ ಉತ್ತರ ಕೊಡುವಂತಹ ಅವಕಾಶ ಇದೆ. ಅದನ್ನು ಯಾವತ್ತು ಬೇಕಾದರೂ ಕೊಡಬಹುದು., ನಸೀರ್ ಅಹ್ಮದ್‌ರವರೇ ತಾವು ತಮ್ಮ ಮಾತನ್ನು ಮುಂದುವರಿಸಿ.,

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಕೇರಳದಿಂದ ಬಂದವರು ಪ್ರತಿಭಟನೆ ಮಾಡಿದ್ದಾರೆ, ಪೊಲೀಸರ ಮೇಲೆ ದಬ್ಬಾಳಿಕೆ ಮಾಡಿದ್ದಾರೆ. ಪ್ರಚೋದನೆ ಮಾಡಿದ್ದಾರೆ. ಮುಖಕ್ಕೆ ಕಪ್ಪು ಬಟ್ಟೆ ಕಟ್ಟಿಕೊಂಡು ಪೊಲೀಸರ ಮೇಲೆ ಹಲ್ಲೆ ಮಾಡಿದ್ದಾರೆ. Terrorists ಬಂದಿದ್ದಾರೆ, ನಾವು ಇದೆಲ್ಲವನ್ನು ಒಪ್ಪುತ್ತೇವೆ. ನಾವು ಕೇಳುವುದೇನೆಂದರೆ, ಒಂದು Judicial Enquiry ಅನ್ನು ಮಾಡಿ ಅಥವಾ ಒಂದು ಸದನ ಸಮಿತಿಯನ್ನು ಮಾಡಿ. ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸಿ. ಸರ್ಕಾರ ಏಕೆ ನಮ್ಮ ಬೇಡಿಕೆಯನ್ನು ಒಪ್ಪುತ್ತಿಲ್ಲ? ತಪ್ಪು ಅವರದ್ದು ಆಗಿದೆಯಲ್ಲ, ನಿನ್ನೆ ದಿವಸ ಪೋಟೋಗಳನ್ನು ಸಹ ತೋರಿಸಿದ್ದೀರಿ. ಅದೆಲ್ಲಾ ಸತ್ಯವಾಗಿದ್ದರೆ, ಸರ್ಕಾರದವರು ಏಕೆ ಹಿಂದಕ್ಕೆ ಹೋಗುತ್ತಿದ್ದಾರೆ? Sitting Judge of the High Court ಅವರಿಂದ Judicial Enquiry ಅನ್ನು ಮಾಡಿಸಿ. ತಪ್ಪಿತಸ್ಥರನ್ನು ಜೈಲಿಗೆ ಕಳುಹಿಸಿ. ನಾವು ನಿಮ್ಮ ಜೊತೆಗೆ ಇರುತ್ತೇವೆ. This is an open secret. ಅಲ್ಲಿ ಇದ್ದಿದ್ದು 150 ಜನರು. ಸೆಕ್ಷನ್ 144 ವಿಧಿಸಲು ಮೊದಲು ಅನುಮತಿ ಕೊಟ್ಟಿದ್ದು ಯಾರು? ಅದೇ ಪೊಲೀಸ್ ಇಲಾಖೆಯವರು. ಮತ್ತೆ ಅನುಮತಿ ವಾಪಸ್ಸ್ ಪಡೆದವರು ಯಾರು? ಅದೇ ಪೊಲೀಸ್ ಇಲಾಖೆಯವರು. ಆ ಗಲಭೆಯಲ್ಲಿ ಸೇರಿದ್ದ 100 ರಿಂದ 150 ಜನರು ಇರಬಹುದು. ಅಲ್ಲಿದ್ದ 2000 ಪೊಲೀಸ್ ಸಿಬ್ಬಂದಿಯವರಿಗೆ 150 ಜನರನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿರಲಿಲ್ಲವೇ? ಬಂದರು ಪೊಲೀಸ್ ಠಾಣೆ ಎಲ್ಲಿದೆ? ಎಲ್ಲಿ ಗೋಲಿಬಾರ್ ಆಗಿದೆ? ಅದಕ್ಕೂ ಇದಕ್ಕೂ ಸುಮಾರು ಒಂದೂವರೆ ಕೀಲೋಮೀಟರ್ ಅಂತರ ಇದೆ. ಬಂದರು ಪೊಲೀಸ್ ಠಾಣೆಯನ್ನು ಅಟ್ಯಾಕ್ ಮಾಡಲು ಬಂದರು ಎಂದು ಪೋಲೀಸರ ಹೇಳಿಕೆ ಇದೆ. ಬಂದರು ಪೊಲೀಸ್ ಠಾಣೆ ಇರುವಂಥದ್ದು ಮತ್ತು ಶ್ರೀ ಜಮೀಲ್ ಮತ್ತು ಶ್ರೀ ನೌಶೀರ್ ಗೋಲಿಬಾರ್ ಆಗಿರುವಂಥದ್ದು ಸುಮಾರು ಒಂದೂವರೆ ಕೀಲೋಮೀಟರ್ ದೂರ ಇದೆ. 150 ಜನರನ್ನು ಕಂಟ್ರೋಲ್ ಮಾಡುವುದಕ್ಕೆ ಪೊಲೀಸ್‌ನವರಿಗೆ ಆಗುತ್ತಿರಲಿಲ್ಲವೇ? ಇದು ಒಂದೇ ಘಟನೆ ಅಲ್ಲ. ಜಿಲ್ಲಾಧಿಕಾರಿಯವರ ಕಛೇರಿಗೆ ಹೋದಂತಹ ಸಂದರ್ಭದಲ್ಲಿ ಅವರು ಸಾಯ ಬೇಕು ಆ ರೀತಿಯಲ್ಲಿ ಲಾಠಿಚಾರ್ಜ್ ಮಾಡುತ್ತಾರೆ. ನಾವು ಬದುಕಬೇಕು, ನಾವು ನಿಮ್ಮ ರೀತಿ ಈ ರಾಷ್ಟ್ರದ ಪ್ರಜೆಗಳು. ನಮಗೂ ಅಧಿಕಾರ ಇದೆ. ಪೊಲೀಸ್ ಇದ್ದಾರೆ ಎಂದು ನಮ್ಮನ್ನು ಹೊಡೆಸುವುದೇ ಕೆಲಸ ಆಯಿತಾ? Jamia Millia Library ಯಲ್ಲಿ ಕುಳಿತಿರುವಂತಹ ಮಕ್ಕಳನ್ನು ಯಾವ ರೀತಿ ಹೊಡೆದಿದ್ದಾರೆಂದು ಇವತ್ತು ಇಡೀ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದೇಶ ನೋಡುತ್ತಿದೆ. ಯು.ಪಿ.ಯಲ್ಲಿ ಮನೆಗೆ ನುಗ್ಗಿ ಮನೆಯಲ್ಲಿದ್ದ T.V., Refrigerator, Microwave oven, ಈ ರೀತಿಯ ವಸ್ತುಗಳನ್ನು ಯಾರು ಹೊಡೆದು ಹಾಕಿದವರು? ಹೊಡೆದವರು ಪೋಲೀಸರೆ. ಸರ್ಕಾರ ಅವರಿಗೆ ಏಕೆ ಅಧಿಕಾರವನ್ನು ಕೊಡುತ್ತೀರಿ?

ಮಾನ್ಯ ಸಭಾಪತಿಯವರೇ, ಸರ್ಕಾರ ನಡೆಸುವವರ ಬೆಂಬಲವಿಲ್ಲದಯೇ ಪೋಲೀಸ್‌ನವರು ಈ ತೀರ್ಮಾನಕ್ಕೆ ಬರುತ್ತಾರೆಯೇ? ನಮಗೆ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರ ಬಗ್ಗೆ ಬಹಳ ಗೌರವ ಇದೆ. ಅವರು ಇದರಲ್ಲಿ ಯಾವುದೇ ರೀತಿಯ ತಾರತಮ್ಯ ತರುವುದಿಲ್ಲವೆಂದು ಹೇಳುತ್ತಾರೆ. ಅದಕ್ಕೆ ದಯವಿಟ್ಟು ಅವರು ಉತ್ತರ ಕೊಡಬೇಕಾದರೆ, ಧೈರ್ಯವಾಗಿ Judicial Enquiry ಮಾಡುತ್ತೇವೆ ಅಥವಾ ಸದನ ಸಮಿತಿಯನ್ನು ಮಾಡುತ್ತೇವೆ. ಅವರು ತಪ್ಪು ಮಾಡಿದ್ದಾರೆ, ಅವರಿಗೆ ಶಿಕ್ಷೆ ಕೊಡಬೇಕೆಂದು ಹೇಳಲಿ. ನಾವು ಅವರ ಜೊತೆಗೆ ಇರುತ್ತೇವೆ. ಅವರು ಮಂಗಳೂರಿನಲ್ಲಿ ಆಗಿರುವಂತಹ ಘಟನೆಯನ್ನು ಇಡೀ ದೇಶ ನೋಡಿದೆ. 'ಆಶ್ರಫ್' ಇವರು ಮಂಗಳೂರಿನ ಮಾಜಿ ಮೇಯರ್ ಅವರನ್ನು Highland hospital ನ ICU Ward ಗೆ ಹೋಗಿ ಲಾಠಿಚಾರ್ಜ್ ಮಾಡಿದ್ದಾರೆ. ಅದು ಮಾನ್ಯ ಶ್ರೀನಿವಾಸ ಪೂಜಾರಿಯವರು ನೋಡಿರಬಹುದು. ಇದಕ್ಕೆ ಅವರಿಗೆ ಯಾರಿಗೆ ಅನುಮತಿ ಕೊಡುತ್ತಾರೆ?

(ಮುಂದು.)

(56)19–02–2020(1–00)ಎಂವಿ–ಕೆಎಸ್

**ಶ್ರೀ ನಸೀರ್ ಅಹ್ಮದ್ (ಮುಂದು)**

ತಾವು ದಯವಿಟ್ಟು ಆಮೇಲೆ ಉತ್ತರ ನೀಡಿ. ಸ್ವಾಮಿ ಅವರಿಗೆ ಅನುಮತಿ ಕೊಟ್ಟವರು ಯಾರು? ಇದು ಅವರಿಗೆ ಗೊತ್ತಿರುವಂತಹ ಸಮಾಚಾರ. ಈಗ ಆ ವಿಡಿಯೋ ವೈರಲ್ ಆಗಿದೆ ಮತ್ತು ಇಡೀ ರಾಜ್ಯದ ಜನರು ಅದನ್ನು ನೋಡಿದ್ದಾರೆ. ಇವತ್ತಿನ ದಿವಸ ಸ್ಕೂಲ್‌ನಲ್ಲಿ ನಡೆದಿರುವಂತಹ ಘಟನೆ ಅವರ ಗಮನಕ್ಕೆ ಬಂದಿಲ್ಲವೆ?

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನಿಮ್ಮ ಮಾತನ್ನು ಮುಗಿಸಿ.

**ಶ್ರೀ ನಸೀರ್ ಅಹ್ಮದ್ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆಯಿತು, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶ್ರೀ ಅಶ್ರಫ್‌ರವರು ಬಂದಾಗ ಪೊಲೀಸ್ ಇಲಾಖೆಯವರು ಅವರ ಮನವೊಲಿಸಿ ಉದ್ರಿಕ್ತ ಗುಂಪುಗಳ ಬಗ್ಗೆ ಒಂದಷ್ಟು ಸಮಯವನ್ನು ನೀಡಿ ಎಂದು ಹೇಳುತ್ತಾರೆ. ಶ್ರೀ ಅಶ್ರಫ್‌ರವರು ಬಂದಾಗ ಆ ಉದ್ರಿಕ್ತ ಗುಂಪಿನವರೇ ಅವರಿಗೆ ಹೊಡೆದುಬಿಡುತ್ತಾರೆ. ಆದರೆ, ಅವರಿಗೆ ಪೊಲೀಸ್‌ನವರು ಹೊಡೆದಿಲ್ಲ.

(ಗೊಂದಲ)

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಇವತ್ತು ಮಂಗಳೂರಿನಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಆಸ್ಪತ್ರೆಯಲ್ಲಿ ಗಲಾಟೆಯಾದಾಗ ಅವರನ್ನು ನೂಕಬೇಕಾಗುತ್ತದೆ. ಅದನ್ನು ಪೊಲೀಸರು ವಿನಾಕಾರಣ ಮಾಡುತ್ತಾರೆಯೇ? ನೀವು ಗೋಲಿಬಾರ್ ಬಗ್ಗೆ ತನಿಖೆ ಆಗಲಿ ಎಂದು ಹೇಳುತ್ತಿದ್ದೀರಿ.

**ಶ್ರೀ ನಸೀರ್ ಅಹ್ಮದ್ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅದನ್ನು ತನಿಖೆ ಮಾಡಿದರೆ ಯಾರು ಮಾಡಿದರು ಎಂದು ಗೊತ್ತಾಗುತ್ತದೆ. ಈಗ ಅಲ್ಲಿ ಸುಮಾರು 32 ಪ್ರಕರಣಗಳು ದಾಖಲಾಗಿವೆ. ದಾಖಲಾಗಿರುವಂತಹ 32 ಪ್ರಕರಣಗಳಲ್ಲಿ ಅಲ್ಲಿನ ನಾಗರಿಕರು ಎಷ್ಟು ಜನ ದೂರು ನೀಡಿದ್ದಾರೆ? ಈಗ ಇರುವ ಪ್ರಕರಣಗಳಲ್ಲಿ ಸುಮಾರು 29 ಪ್ರಕರಣಗಳನ್ನು ಪೊಲೀಸ್‌ನವರು ದಾಖಲು ಮಾಡಿದ್ದಾರೆ. ಇವತ್ತು ತಾವು ನೋಡಿರಬಹುದು, ನಿನ್ನೆಯ ದಿವಸ ಹೈಕೋರ್ಟ್‌ನಿಂದ ಒಂದು ತೀರ್ಪು ಬಂದಿದೆ. ಪೊಲೀಸ್‌ನವರ ಬಗ್ಗೆ ಹೈಕೋರ್ಟ್‌ನವರಿಗೂ ಅನುಮಾನ ಬಂದಿದೆ. The Hon'ble High Court has already taken cognizance of this matter. ಈಗ ಅಲ್ಲಿರುವಂತಹ ನಿವಾಸಿಗಳು ಹೋಗಿ ದೂರು ನೀಡಿದರೆ, ಅದಕ್ಕೆ ಎಫ್.ಐ.ಆರ್. ದಾಖಲಿಸಬೇಕೆಂದು ಹೈಕೋರ್ಟ್‌ನಿಂದ ತೀರ್ಪು ಬಂದಿದೆ. ದಯವಿಟ್ಟು ಈ ಘಟನೆ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಆಗಿದೆ ಎಂದು ನಾನು ಮಾತನಾಡುತ್ತಿಲ್ಲ. ನಾವು ಈ ಸಮಾಜದಲ್ಲಿ ಬಾಳಬೇಕೆಂದು ಆಸೆ ಇಟ್ಟುಕೊಂಡಿರುವಂತಹವರು. ಜನರು ನಮಗೂ ಸಹ ಸಮಾನ ಹಕ್ಕು ಇದೆ ಎಂದು ತಿಳಿದುಕೊಂಡಿದ್ದಾರೆ. ನಿಮ್ಮಲ್ಲಿ ಈ ರೀತಿಯ ಭಾವನೆ ಬರಬೇಕು. ಆ ಹನ್ನೊಂದು ವರ್ಷದ ಮಗುವಿಗೆ ತಾಯಿ ಇದ್ದಾರೆ; ಆದರೆ, ಅದಕ್ಕೆ ತಂದೆ ಇಲ್ಲ. ಅಂತಹವರನ್ನು ಕರೆದುಕೊಂಡು ಹೋಗಿ ನೀವು ಜೈಲಿನಲ್ಲಿ ಹಾಕುತ್ತೀರಿ. ಅದೇ ರೀತಿ ಒಂದು ಸ್ಕೂಲ್‌ನಲ್ಲಿ ನಡೆಯುವಂಥದ್ದರ ಬಗ್ಗೆ ಸದ್ದು ಇಲ್ಲ ಮತ್ತು ಅವರ ಬಗ್ಗೆ ಮಾತನಾಡುವುದೂ ಇಲ್ಲ. ಈ ರೀತಿಯ ತಾರತಮ್ಯವಾಗಬಾರದು. ನಮಗೂ ಒಂದು ಅವಕಾಶವನ್ನು ನೀಡಿ, ನಾವು ಬದುಕಬೇಕು, ನಾವು ನಿಮ್ಮ ತರಹ ಈ ರಾಷ್ಟ್ರದ ಮುಖ್ಯವಾಹಿನಿಗೆ ಬರಬೇಕು ಎಂದು ಆಸೆ ಪಡುವಂತಹ ಜನ.

ಹಾಗಾಗಿ ಸನ್ಮಾನ್ಯ ಸಭಾಪತಿಯವರೇ, ಹೆಚ್ಚಿನ ಸಮಯವನ್ನು ತೆಗೆದುಕೊಳ್ಳದೆ, ನಿಯಮ 68ರ ಅಡಿಯಲ್ಲಿ ಈಗಾಗಲೇ ಸಾಕಷ್ಟು ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ತಾವು ಪೀಠದಲ್ಲಿ ಕುಳಿತಿದ್ದೀರಿ, ತಮ್ಮ ಅಧ್ಯಕ್ಷತೆಯಲ್ಲಿ ಈ ಸದನ ನಡೆಯುತ್ತಿದೆ. ಆದರೆ, ಈಗ ನನಗೆ ದುಃಖವಾಗುತ್ತಿದೆ. ಏಕೆಂದರೆ, ಇಲ್ಲಿ ಗೃಹ ಮಂತ್ರಿಗಳು ಇಲ್ಲ ಮತ್ತು ಪೊಲೀಸ್ ಅಧಿಕಾರಿಗಳು ಸಹ ಇಲ್ಲ. ಗೃಹ ಮಂತ್ರಿಗಳು ವಿಧಾನ ಸಭೆಯಲ್ಲಿ ಇದ್ದರೆ, ಇಲ್ಲಿಗೆ ಹಿರಿಯ ಪೊಲೀಸ್ ಅಧಿಕಾರಿಗಳು ಬರಬೇಕಾಗಿತ್ತು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಾನೇ ಪ್ರಸ್ತಾಪ ಮಾಡಿ ಹೇಳಿದ್ದೇನೆ. ಈಗ ನಾವು ಹೇಳಿದರು ಸಹ ಅವರು ಬಂದಿಲ್ಲವೆಂದರೆ ಎಷ್ಟು ಬೇಜವಾಬ್ದಾರಿತನ ಎನಿಸುವುದಿಲ್ಲವೆ?

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಏನು ನಡೆಯುತ್ತಿದೆ ಎಂದು ಪೋಲೀಸ್ ಅಧಿಕಾರಿಗಳಿಗೆ ಗೊತ್ತಾಗದಿದ್ದರೆ ನಾವು ಏತಕ್ಕಾಗಿ ಮಾತನಾಡಬೇಕು ಮತ್ತು ಸದನಕ್ಕೆ ಏಕೆ ಬರಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಸುಮಾರು ಹತ್ತು–ಹತ್ತು ಜನ ಡಿ.ಜಿ.ಗಳು ಮತ್ತು ಐ.ಜಿ.ಪಿ.ಗಳು (Director General and Inspector General of Police) ಇದ್ದಾರೆ. ಆದರೆ, ಇಲ್ಲಿಗೆ ಅವರ್ಯಾರು ಬಂದಿಲ್ಲ. ಅವರು ಬರುವುದಕ್ಕೆ ಏನು ತೊಂದರೆ, ನೀವು ಅವರಿಗೆ ಏಕೆ ಹೇಳುವುದಿಲ್ಲ. ಈಗ ನೀವುಗಳೆಲ್ಲರೂ ಬಂದು ಕುಳಿತುಕೊಂಡಿದ್ದೀರಿ. ಅವರ ಕೆಲಸವೇ ಇಲ್ಲಿ ಬಂದು ಕುಳಿತುಕೊಳ್ಳುವುದು. ಇಷ್ಟೊಂದು ಅಸಡ್ಡೆಯಾದರೆ ಹೇಗೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ದಯಮಾಡಿ ಇಲ್ಲಿ ಇರಬೇಕಾದಂತಹ ಅಧಿಕಾರಿಗಳ ಹೆಸರನ್ನು ಓದಿ ಹೇಳಿ. ಆಗ ನಮಗೆ ಗೊತ್ತಾಗುತ್ತದೆ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಮಂತ್ರಿಗಳು ಬಂದು ಇದಕ್ಕೆ ಸಂಬಂಧಪಟ್ಟಂತೆ ಇವತ್ತೇ ಉತ್ತರ ಕೊಡಬೇಕು. ಈ ಪ್ರಕರಣದ ಬಗ್ಗೆ ಮುಂದೆ ಏನೇನು ಮಾಡುತ್ತಿದ್ದಾರೆ, ನ್ಯಾಯಾಂಗ ತನಿಖೆ ಮಾಡಿಸುತ್ತಾರೆಯೇ ಎಂಬ ಬಗ್ಗೆ ಸಹ ಉತ್ತರ ನೀಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಈ ರೀತಿ ಹೇಳಿದರೆ, ಈಗ ಸಭಾನಾಯಕರು ನೀಡುತ್ತಿರುವ ಪಟ್ಟಿ ಬೇಡ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಸದನಕ್ಕೆ ಅಧಿಕಾರಿಗಳು ಯಾರು ಬರಬೇಕೆಂದು ಪಟ್ಟಿಯನ್ನು ಕೊಟ್ಟಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಯಾರ್‍ಯಾರು ಸಚಿವರು ಮತ್ತು ಅಧಿಕಾರಿಗಳು ಇರುತ್ತಾರೆಂದು ಸದನಕ್ಕೆ ಪಟ್ಟಿಯನ್ನು ಕೊಡಬೇಕು. ಮಾನ್ಯ ಸಭಾನಾಯಕರು ಇಷ್ಟನ್ನೂ ಮಾಡದಿದ್ದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಪಟ್ಟಿಯನ್ನು ತರಿಸಿ ಕೊಡುತ್ತೇನೆ ಮತ್ತು ಅದನ್ನು ಓದಿ ಹೇಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸದನ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಆ ಪಟ್ಟಿಯನ್ನು ಸಭಾಪತಿಗಳಿಗೆ ನೀಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದುವರೆವಿಗೂ ನಡೆದಿರುವುದನ್ನು ನೋಡಿದ್ದಾರೆ. ಪಟ್ಟಿಯನ್ನು ತರಿಸಿ ಅದನ್ನು ಓದಿ ಹೇಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ನಾನು ಕೇಳುತ್ತಿರುವುದು, ಇದು ಅವರ ತಪ್ಪಲ್ಲವೆ? ಸದನದಲ್ಲಿ ಯಾವ್ಯಾವ ಸಚಿವರು ಮತ್ತು ಅಧಿಕಾರಿಗಳು ಇರಬೇಕೆಂದು ಸದನಕ್ಕೆ ಪಟ್ಟಿಯನ್ನು ಕೊಡಬೇಕು. ಇದು ಬೇಜವಾಬ್ದಾರಿಯಾಗಿದೆ. It is not correct.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ಇಲ್ಲಿಯವರೆವಿಗೂ ಇರುವ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ಸದನಕ್ಕೆ ತಪ್ಪು ಮಾಹಿತಿ ನೀಡಬೇಡಿ. ಇದು ಸಂಪ್ರದಾಯವಲ್ಲ, ಕಡ್ಡಾಯವಾಗಿ ಸಚಿವರ ಮತ್ತು ಅಧಿಕಾರಿಗಳ ಪಟ್ಟಿಯನ್ನು ಕೊಡಬೇಕೆಂದು ಕಾನೂನು ಇದೆ. ನೀವು ಎಲ್ಲಾ ಸಂಪ್ರದಾಯವನ್ನು ಬಿಟ್ಟಿದ್ದೀರಿ ಮತ್ತು ನೀವು ಎಲ್ಲದಕ್ಕೂ ಸಂಪ್ರದಾಯವೆಂದು ಹೇಳಬೇಡಿ. ಇದು ಸದನ ನಡೆಯುವಂತಹ ನಿಯಮಗಳು. ನೀವು ಆ ನಿಯಮಗಳನ್ನು ಪಾಲಿಸದಿದ್ದರೆ ಹೇಗೆ? ಮಾನ್ಯ ಸಭಾಪತಿಯವರೇ ತಾವು ಸರ್ಕಾರಕ್ಕೆ ಚಾಟಿ ಬೀಸಿ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಪಟ್ಟಿಯನ್ನು ತರಿಸಿ ಓದಿ ಹೇಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಪ್ರಸ್ತಾಪವಾಗಿದೆ. ಇದನ್ನು ಇಡೀ ರಾಜ್ಯದ ಜನ ನೋಡುತ್ತಿದ್ದಾರೆ. ಈಗ ಸರ್ಕಾರದ ವತಿಯಿಂದ ಏನು ತೀರ್ಮಾನಕ್ಕೆ ಬರುತ್ತಾರೆ. ಅಂದರೆ, ನ್ಯಾಯಾಂಗ ತನಿಖೆ ಅಥವಾ ಸದನ ಸಮಿತಿಯಾದರೆ ಆ ಸಮಾಜಕ್ಕೆ ಒಂದು ವಿಶ್ವಾಸ ಬರುತ್ತದೆ. ಇದನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ, ನಮಗೆ ನ್ಯಾಯ ಸಿಗುತ್ತದೆ ಎನ್ನುವ ಒಂದು ಆಸೆ ಇದೆ. ಇಲ್ಲಿಗೆ ಮಾನ್ಯ ಗೃಹ ಸಚಿವರು ಬರಬೇಕು, ಇದಕ್ಕೆ ಅಂತಿಮವಾಗಿ ಯಾವ ರೀತಿಯ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಇಲ್ಲಿ ಪ್ರಸ್ತಾಪ ಮಾಡಬೇಕೆಂದು ಕೇಳಿಕೊಂಡು. ಇವತ್ತಿನ ದಿವಸ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ನಿಯಮ 68ರ ಮೇಲಿನ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆಯು ಇಲ್ಲಿಗೆ ಮುಕ್ತಾಯವಾಯಿತು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆಂದು ತಮಗೆ ತಿಳಿಸಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಬಜೆಟ್ ಮೇಲೆ ಮಾತನಾಡುತ್ತೇನೆಂದು ಹೇಳಿದ್ದಾರೆ. ತಾವು ಹೆಸರನ್ನು ಎಲ್ಲಿ ನೀಡಿದ್ದಿರಿ? ಈಗ ಈ ಚರ್ಚೆಯನ್ನು ಮುಕ್ತಾಯ ಮಾಡಿದ್ದೇನೆ. ತಾವು ರಾಜ್ಯಪಾಲರ ಭಾಷಣದ ಮೇಲೆ ಇದೇ ವಿಚಾರವನ್ನು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಐದು ನಿಮಿಷಗಳ ಕಾಲಾವಕಾಶವನ್ನು ನೀಡಬೇಕೆಂದು ವಿನಂತಿಸುತ್ತಿದ್ದೇನೆ.

**ಸಭಾಪತಿಯವರು:–** ಒಂದು ನಿಮಿಷ. ಮಾನ್ಯ ಸದಸ್ಯರಾದ ಹೊರಟ್ಟಿಯವರು ಮಾತನಾಡುತ್ತಾರೆ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ನೋಟಿಸ್‌ಗೆ ಯಾರು ಸಹಿ ಮಾಡಿದ್ದಾರೆ, ಅವರಿಗೆ ಅವಕಾಶವನ್ನು ನೀಡಬೇಕು. ಆದರೆ, ಮಾನ್ಯ ಸಭಾಪತಿಯವರಿಗೆ ಅಧಿಕಾರವಿದೆ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶವನ್ನು ಬೇಕಾದರೆ ಕೊಡಬಹುದು ಇಲ್ಲವೆ ಬಿಡಬಹುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಜೆ.ಡಿ.(ಎಸ್) ಪಕ್ಷದ ವತಿಯಿಂದ ಮಾನ್ಯ ಸದಸ್ಯರಾದ ಬಿ.ಎಂ.ಫಾರೂಖ್‌ರವರು ಮಾತನಾಡುತ್ತಾರೆ.

**ಸಭಾಪತಿಯವರು:–** ನಾನು ಮಾತನಾಡಿ ಎಂದು ಹೇಳುವುದೆ? ಯಾರು ಕೈ ಎತ್ತಿದ್ದಾರೆ ಎಲ್ಲರಿಗೂ ಅವಕಾಶವನ್ನು ನೀಡಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಿ.ಎಂ.ಫಾರೂಖ್‌ರವರು ಕೈ ಎತ್ತಿದ್ದರು.

**ಸಭಾಪತಿಯವರು:–** ಆಯಿತು. ಈಗ ಮಾನ್ಯ ಸದಸ್ಯರಾದ ಬಿ.ಎಂ.ಫಾರೂಖ್‌ರವರೇ, ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರಕಾಶ್ ಕೆ. ರಾಥೋಡ್‌ರವರಿಗೆ ಒಂದು ಅವಕಾಶವನ್ನು ನೀಡಿ.

**ಶ್ರೀ ಬಿ.ಎಂ.ಫಾರೂಖ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಂಗಳೂರು ಗೋಲಿಬಾರ್‌ನ ಬಗ್ಗೆ ಹೇಳುವುದಾದರೆ, 19ನೇ ತಾರೀಖಿನಂದು ಖುದ್ದಾಗಿ ನಾನು ಆ ಸ್ಥಳದಲ್ಲಿ ಇದ್ದೆ. ಈಗ ನಾನು ಕೆಲವು ವಾಸ್ತವಾಂಶಗಳನ್ನು ಹೇಳುತ್ತೇನೆ. ಮಾನ್ಯ ಸಭಾನಾಯಕರಾದಂತಹ ಕೋಟ ಶ್ರೀನಿವಾಸ ಪೂಜಾರಿಯವರು ಒಂದು ಮಾತನು ಹೇಳಿದರು. 18ನೇ ತಾರೀಖಿನಂದು ಮಂಗಳೂರು ಖಾಜಿಯವರು ಲಿಖಿತವಾಗಿ ನೀಡುತ್ತಾರೆ, ನಾವು withdraw ಮಾಡಿದ್ದೇವೆಂದು. 19ನೇ ತಾರೀಖಿನಂದು ಕೆಲವು ಮುಸ್ಲಿಂ ಸಂಘಟನೆಗಳು ಪೌರತ್ವ ಕಾಯಿದೆ ವಿರುದ್ಧ ಪ್ರತಿಭಟನೆ ಮಾಡುವುದಕ್ಕೆ ಅಂದಿನ ಕಮೀಷನ್‌ರವರು ಅನುಮತಿಯನ್ನು ಕೊಡುತ್ತಾರೆ. ಅನುಮತಿಯನ್ನು ಕೊಟ್ಟ ತಕ್ಷಣ, 18ನೇ ತಾರೀಖಿನ ಸಾಯಂಕಾಲ ಬಹುಶಃ ಸರ್ಕಾರದಿಂದ ಒಂದು ಆದೇಶ ಹೊರಡಿಸಲಾಗುತ್ತದೆ, ಕರ್ನಾಟಕ ರಾಜ್ಯಾದ್ಯಂತ ಸೆಕ್ಷನ್ 144 ಅನ್ನು ಘೋಷಣೆ ಮಾಡಿ ಎಂದು.

**(ಮುಂದು)**

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(57) 19.02.2020 01.10 LL-KS

**ಶ್ರೀ ಬಿ.ಎಂ. ಫಾರೂಖ್(ಮುಂದುವರೆದಿದ್ದು...)**

ಮಂಗಳೂರಿನಲ್ಲಿ 144 ಸೆಕ್ಷನ್ ಜಾರಿಯಲ್ಲಿರುವುದರಿಂದ ತಾವು ಪ್ರತಿಭಟನೆ ಮಾಡಬಾರದೆಂದು ಪೊಲೀಸ್ ಆಯುಕ್ತರು ಹೇಳುತ್ತಾರೆ. ಮುಸ್ಲಿಂ ಸಂಘಟನೆಗಳು ಸಾಧಾರಣವಾಗಿ ಎಲ್ಲಾ ಸದಸ್ಯರಿಗೂ ಒಂದು ಮೆಸೇಜ್ ಪಾಸ್ ಮಾಡುತ್ತಾರೆ. ಆದರೆ, ಆ ದಿವಸ ಮಧ್ಯಾಹ್ನ ಕೆಲವು ಸಂಘಟನೆಯ ಸುಮಾರು 150 ರಿಂದ 200 ಸದಸ್ಯರುಗಳು ಸ್ಟೇಟ್ ಬ್ಯಾಂಕ್ ಹತ್ತಿರ ಬಂದು ಸೇರುತ್ತಾರೆ. ಆದರೆ, ಪ್ರತಿಭಟನೆ ರದ್ದಾಗಿರುವ ವಿಷಯ ತಿಳಿದಿರುವುದಿಲ್ಲ. ಅದರ ಬಗ್ಗೆ ತಿಳುವಳಿಕೆ ಸಹ ಅವರಿಗೆ ಇರುವುದಿಲ್ಲ. ಇದಾದ ತಕ್ಷಣ, ಪೊಲೀಸ್ ಬೆಟಾಲಿಯನ್ ಅಲ್ಲಿಗೆ ಬಂದು ಏನು ಹೇಳದೇ, ಕೇಳದೇ ಲೆಫ್ಟ್ ಅಂಡ್ ರೈಟ್ ಆಗಿ ಲಾಟಿ ಚಾರ್ಜ್ ಸ್ಟಾರ್ಟ್ ಮಾಡುತ್ತಾರೆ. ಅಲ್ಲದೇ, ಪೊಲೀಸರು ಅಂಗಡಿ–ಮುಂಗಟ್ಟುಗಳಿಗೆ ಮತ್ತು ಮಾರುಕಟ್ಟೆಗಳಿಗೆ ನುಗ್ಗಿ ಲೆಫ್ಟ್ ಅಂಡ್ ರೈಟ್ ಹೊಡೆಯುತ್ತಿರುತ್ತಾರೆ. ಅದರ ವಾಸ್ತವಾಂಶದ ಬಗ್ಗೆ ಸಿ.ಡಿ. ಮತ್ತು photographs ಸಹ ನನ್ನ ಬಳಿ ಇರುತ್ತವೆ. ಆಗಲೇ ಮಾನ್ಯ ಸದಸ್ಯರೊಬ್ಬರು ಮಂಗಳೂರು ಗಲಭೆಯಲ್ಲಿ ಪ್ರತಿಭಟನಾಕಾರರಿಗೆ ಬಾಯಿಗೆ ಬಟ್ಟೆ ಕಟ್ಟಿ ಹೊಡೆದಿರುತ್ತಾರೆಂದು ಹೇಳಿರುತ್ತಾರೆ. ಅದರಲ್ಲಿ ರಿಯಾಲಿಟಿ ಅಷ್ಟೇ ಅಲ್ಲದೇ ಹಾಗೂ ಫ್ಯಾಕ್ಟ್ ಕೂಡ ಇದೆ. ಅದರ ಬಗ್ಗೆ ಸಿ.ಡಿ.ಯನ್ನು ಕೂಡ ನಾನು ತಮಗೆ ನೀಡುತ್ತಿದ್ದೇನೆ. ಇಬ್ರಾಹಿಂ ಅಲ್–ಖಲೀಲ್ ಗಲ್ಲಿಯಲ್ಲಿ ಒಂದು ಮಸೀದಿ ಇದ್ದು, ಜನ ಪೊಲೀಸರ ಲಾಟಿ ಚಾರ್ಜ್‌ಗೆ ಹೆದರಿ ಆ ಮಸೀದಿ ಒಳಗಡೆ ಹೋಗುತ್ತಾರೆ. ಆಗ ಪೊಲೀಸರು ಆ ಮಸೀದಿಯೊಳಗೆ ಅಶ್ರುವಾಯು ಹಾಕಿ ಜನರನ್ನು ಚದುರಿಸಿ ಗೋಲಿಬಾರ್ ಮಾಡುತ್ತಾರೆ. ಗೋಲಿಬಾರ್ ಮಾಡುವುದಕ್ಕೆ ಮೊದಲು ಪ್ರತಿಭಟನಾಕಾರರನ್ನು ಅರೆಸ್ಟ್ ಮಾಡಿ, ಶಾಂತಿಯುತವಾಗಿ ಪ್ರತಿಭಟನೆ ಮಾಡಿ ಎಂದು ಹೇಳಬಹುದಿತ್ತು. ಆದರೆ, ಪೊಲೀಸರು ಏಕಾಏಕಿ ಬಂದು firing ಮಾಡುತ್ತಾರೆ. ಅದರಲ್ಲಿ ಇಬ್ಬರು ಇನ್ಸ್‌ಪೆಕ್ಟರ್... ಡಿಸೆಂಬರ್ 19 ರಂದು ಗಲಭೆ ಆಗಿದ್ದು, ಇಲ್ಲಿಗೆ 2 ತಿಂಗಳು ಆಗಿದೆ. ಆದರೆ, ಇಲ್ಲಿಯವರೆಗೆ ಆ ಇಬ್ಬರು ಪೊಲೀಸ್ ಅಧಿಕಾರಿಗಳ ವಿರುದ್ಧ not even a single action ತೆಗೆದುಕೊಂಡಿರುವುದಿಲ್ಲ. ಒಬ್ಬ ಹಿರಿಯ ಪೊಲೀಸ್ ಅಧಿಕಾರಿ, "ಕಾಲಿನ ಕೆಳಭಾಗಕ್ಕೆ ಗೋಲಿಬಾರ್ ಮಾಡು" ಎಂದು ಹೇಳುತ್ತಾರೆ. ಮತ್ತೊಬ್ಬರು, "2–3 ಹೋಗಲಿ ಸಾರ್, ನೀವು ಹೊಡೆಯಿರಿ, ಸಾಯಲಿ" ಎಂದು ಓಪನ್ ಆಗಿ ಹೇಳುತ್ತಾರೆ. ಒಬ್ಬ ಶಾಂತರಾಮ್ ಎನ್ನುವ ಇನ್ಸ್‌ಪೆಕ್ಟರ್, ಮತ್ತೊಬ್ಬರು ಷರೀಫ್ ಎನ್ನುವವರು ಆ ಇಬ್ಬರ ಪೊಲೀಸ್ ಅಧಿಕಾರಿಗಳಾಗಿದ್ದು, ಓಪನ್ ಆಗಿ ಜನರ ಮೇಲೆ ಗುಂಡೇಟು ಹೊಡೆದಿದ್ದಾರೆ. ಇದುವವರೆವಿಗೂ ಅವರನ್ನು ಸಸ್ಪೆಂಡ್ ಮಾಡಿದ್ದಾರೆಯೇ? ಈಗ ಉಡುಪಿ District Commissioner ನವರು Magisterial Inquiry ನಡೆಸಬೇಕೆಂದು ಹೇಳುತ್ತಿದ್ದಾರೆ. ಇದುವರೆವಿಗೂ ಯಾವ ತನಿಖೆ ಆಗಿದೆ? ಯಾವ ತನಿಖೆಯೂ ಸಹ ಆಗಿರುವುದಿಲ್ಲ. ಇಬ್ಬರು ಪೊಲೀಸರನ್ನು ಸಸ್ಪೆಂಡ್ ಮಾಡದೇ, "ಪ್ರತಿಭಟನಾಕಾರರು ಬಂದರು ಪೊಲೀಸ್ ಸ್ಟೇಷನ್‌ಗೆ ನುಗ್ಗಿ ನಮ್ಮ ಮೇಲೆ ಅಟ್ಯಾಕ್ ಮಾಡಲು ಮತ್ತು ನಮ್ಮ ಶಸ್ತ್ರಾಸ್ತ್ರಗಳಿಂದ ಹೊಡೆಯುವುದಕ್ಕೆ ಬಂದರು" ಎಂದು ಹೇಳುತ್ತಾರೆ. ಅದಕ್ಕೆ ಏನೂ ಸಾಕ್ಷಿ ಇದೆ. ಅಲ್ಲಿ 360 ಡಿಗ್ರಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಿರುಗುವಂತಹ ಒಂದು PTZ (Pan-tilt-Zoom) Camera ಇದೆ. ಇವೊತ್ತಿನವರೆಗೂ ಆ ಕ್ಯಾಮೆರಾದ ಫೂಟೇಜ್ ಅನ್ನು ಏತಕ್ಕೆ ಹೊರಗೆ ತಂದಿರುವುದಿಲ್ಲ? ಆ ಕ್ಯಾಮೆರಾ ದಿನದ 24 ಗಂಟೆಯಲ್ಲಿ ಚಾಲ್ತಿಯಲ್ಲಿರುತ್ತದೆ, and it is the actual fact. ಗೋಲಿಬಾರ್‌ನಲ್ಲಿ ಮೃತಪಟ್ಟ ನೌಶೀನ್ ಎಂಬಾತನ ಮನೆ, ಗಲಭೆ ನಡೆದ ಸ್ಥಳದಿಂದ 1 ಕಿಲೋ ಮೀಟರ್ ಆ ಕಡೆ ಇದೆ. ಅವನು ಆ ದಿನ ಮಧ್ಯಾಹ್ನ ತನ್ನ ಮಗನನ್ನು ಶಾಲೆಯಿಂದ ಕರೆದುಕೊಂಡು ಬಂದು ಮನೆಗೆ ಬಿಟ್ಟು ಹೊರಗೆ ಬರುವಷ್ಟರಲ್ಲಿ ಅವನಿಗೆ ಗುಂಡು ತಗುಲಿದೆ. ಈ ಗಲಭೆಯಲ್ಲಿ ಸುಮಾರು 7 ಜನರಿಗೆ ಮಾರಣಾಂತಿಕ ಹಲ್ಲೆ ಆಗಿರುತ್ತದೆ. ತದನಂತರ, ಕೆಲವು ಜನ ಆಸ್ಪತ್ರೆಯಲ್ಲಿ ಗಂಭೀರ ಸ್ಥಿತಿಯಲ್ಲಿರುತ್ತಾರೆ. ಆ ಆಸ್ಪತ್ರೆಯ ಐ.ಸಿ.ಯು. ವಾರ್ಡ್‌ನ ಬಾಗಿಲು ಹೊಡೆದು ಪೊಲೀಸರು ಹಲ್ಲೆ ಮಾಡಿರುವ ದೃಶ್ಯವನ್ನು ನೀವು ನೋಡಿದ್ದೀರಿ. ಇಷ್ಟೆಲ್ಲಾ ಆದರೂ ಕೂಡ ಮಾರನೆಯ ದಿನ ಪೊಲೀಸರು, "ಕೇರಳದಿಂದ ಜನ ಬಂದು ಗಲಭೆ ಮಾಡಿರುತ್ತಾರೆಂದು" ಹೇಳುತ್ತಾರೆ. ಕೇರಳ ಕೂಡ ಭಾರತದ ಒಂದು ಅವಿಭಾಜ್ಯ ಅಂಗ. Kerala is often referred to as God's own Country. ಮಂಗಳೂರಿನಲ್ಲಿ ಸಾಧಾರಣವಾಗಿ ಶೇಕಡ 50 ರಷ್ಟು ಜನ ಆ ಕಡೆ ಈ ಕಡೆ ಮದುವೆ ಆದವರು ಇದ್ದಾರೆ. ಏಕೆಂದರೆ, ಮಂಗಳೂರು ಬಾರ್ಡರ್ ಪ್ರದೇಶವಾಗಿರುತ್ತದೆ. ಈ ಬಗ್ಗೆ ಪೊಲೀಸ್ ಕಮೀಶನರ್‌ಗೆ, "ತಾವು ಕೇರಳ ಎಂದು ಹೇಳುತ್ತೀರಾ, ಅದು ಏನು ಪಾಕಿಸ್ತಾನದಲ್ಲಿ ಇದೆಯೇ?" ಎಂದು ಕೇಳಿದ್ದೇನೆ. ಇದಾದ ನಂತರ ಮಾನ್ಯ ಸುಪ್ರೀಂ ಕೋರ್ಟ್‌ನ ಒಬ್ಬ ಹಿರಿಯ ನಿವೃತ್ತ ನ್ಯಾಯಾಧೀಶರಾದ ಶ್ರೀ ವಿ. ಗೋಪಾಲಗೌಡರವರು ಮತ್ತು ಹಿರಿಯ ಪತ್ರಕರ್ತರು ಒಳಗೊಂಡಂತೆ People's Tribunal ಎಂದು ಮಾಡುತ್ತಾರೆ. ಆ People's Tribunal 3 ತಂಡಗಳಾಗಿ ಮಂಗಳೂರಿಗೆ ಹೋಗಿ, 'firstly, we have to find out the facts of the incident', ಎಂದು ಕೇಳುತ್ತಾರೆ. ಅದು ಜನವರಿ 6 ಮತ್ತು 7 ನೇ ತಾರೀಖಿನಂದು ಕ್ಯಾಂಪ್ ಮಾಡುತ್ತಾರೆ. ಮೊದಲನೆಯದಾಗಿ ಒಂದು ಕಡೆ ಅನುಮತಿ ಕೇಳಿದಾಗ ಪೊಲೀಸರು ಅವರಿಗೆ ಅನುಮತಿ ನೀಡಿರುವುದಿಲ್ಲ ಎಂದು ಹೇಳಿದರು. ಎರಡನೆದಾಗಿ, ಮತ್ತೊಂದು ಕಡೆ ಕ್ಯಾಂಪ್ ಮಾಡಿರುತ್ತಾರೆ. ಮೂರನೆಯದಾಗಿ, ಹಂಪನಕಟ್ಟೆಯ ಸೂರ್ಯ ಹೋಟೆಲ್‌ಗೆ ಹೋಗುತ್ತಾರೆ. ಅಲ್ಲಿ ಅವರಿಗೆ ಅನುಮತಿಯನ್ನು ಕೊಡುತ್ತಾರೆ. ಅದಕ್ಕೆ ಸಂಬಂಧಿಸಿದ ಶುಲ್ಕವನ್ನು ಸಹ ಅವರು ಕಟ್ಟಿರುತ್ತಾರೆ. ನಂತರ People's Tribunal ನವರು ಮಂಗಳೂರು ಗಲಭೆಯ actual facts ಅನ್ನು ತಿಳಿದುಕೊಳ್ಳುವುದಕ್ಕಾಗಿ ಪೊಲೀಸರು, ಪತ್ರಕರ್ತರು ಮತ್ತು ಎಲ್ಲರನ್ನೂ ಆಹ್ವಾನಿಸಿ, ಫ್ಯಾಕ್ಟ್ ಮಾಡುವಾಗ ಅರ್ಧ ಗಂಟೆಯಲ್ಲಿ ಪೊಲೀಸರು ಹೋಟೆಲ್ ಮಾಲೀಕರಿಗೆ ಒತ್ತಡ ಹಾಕಿ ಅವರನ್ನು ಅಲ್ಲಿಂದ ಕಳುಹಿಸಿರುತ್ತಾರೆ. ಅದರ ಬಗ್ಗೆ ರೆಕಾರ್ಡ್ ಮಾಡಿದಂತಹ ಸಂಪೂರ್ಣ ಸಿಸಿಟಿವಿ ದೃಶ್ಯಾವಳಿಗಳು ಇರುತ್ತವೆ. ನಂತರ ಅಲ್ಲಿ ಗಲಾಟೆ ಜಾಸ್ತಿ ಆಯಿತು. ಮಾರನೆಯ ದಿವಸ ಅವರಿಗೆ ಪತ್ರಿಕಾಗೋಷ್ಠಿ ಕರೆಯುವುದಕ್ಕೆ ಎಲ್ಲಿಯೂ ಕೂಡ ಅನುಮತಿ ನೀಡುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸದಸ್ಯರಾದ ಶ್ರೀ ಸಿ.ಎಂ. ಇಬ್ರಾಹಿಂರವರು ನಿನ್ನೆಯ ದಿವಸ, ಕರ್ನಾಟಕಕ್ಕೆ ಒಂದು ಸರ್ಕಾರ ಮತ್ತು ಮಂಗಳೂರಿಗೆ ಒಂದು ಸರ್ಕಾರ ಎನ್ನುವ ಮಾತನ್ನು ಹೇಳಿದರು. ಘಟನೆ ನಡೆದ ಮಾರನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ ಒಂದು ಸಭೆ ಮಾಡುತ್ತಾರೆ. ಅಲ್ಲದೇ, ಮಾನ್ಯ ಮುಖ್ಯಮಂತ್ರಿಗಳು ಮೃತರ ಕುಟುಂಬಗಳ ಮನೆಗಳಿಗೆ ಭೇಟಿ ನೀಡಬೇಕೆಂದು ಹೇಳಿದಾಗ, ಪೊಲೀಸರು ಭದ್ರತೆ ದೃಷ್ಟಿಯಿಂದ ಅಲ್ಲಿಗೆ ಹೋಗಬಾರದೆಂದು ಹೇಳಿರುತ್ತಾರೆ. ನಂತರ ಸರ್ಕಿಟ್ ಹೌಸ್‌ನಲ್ಲಿಯೇ ಸಭೆ ನಡೆಸಿರುತ್ತಾರೆ. ಆ ಸಭೆಯಲ್ಲಿ ನಾನು, ಕೆಲವು ಕಾಂಗ್ರೆಸ್ ನಾಯಕರು ಮತ್ತು ಮೃತರ ಕುಟುಂಬ ಸದಸ್ಯರು ಸಹ ಪಾಲ್ಗೊಂಡಿದ್ದರು. ಮಾನ್ಯ ಸದಸ್ಯರೊಬ್ಬರು ಮೃತರನ್ನು 'ಟೆರರಿಸ್ಟ್' ಎಂದು ಹೇಳುತ್ತಾರೆ. 'ಟೆರರಿಸ್ಟ್' ಎಂದು ಅವರನ್ನು ಘೋಷಣೆ ಮಾಡಲಾಗಿರುತ್ತದೆಯೇ? ಅವರು ಅಮಾಯಕರುಗಳಾಗಿರುತ್ತಾರೆ. ಒಬ್ಬ ವೆಲ್ಡರ್ ಊಟಕ್ಕೆ ಮನೆಗೆ ನಡೆದುಕೊಂಡು ಹೋಗುವಾಗ, ಅವನಿಗೆ ಗುಂಡೇಟು ಹೊಡೆಯುತ್ತಾರೆ. ಅವನಿಗೆ ತಿನ್ನುವುದಕ್ಕೆ ಗತಿಯಿರುವುದಿಲ್ಲ. ಆತನ ಕುಟುಂಬಕ್ಕೆ ಯಾವುದೇ ಪರಿಹಾರ ನೀಡಿರುವುದಿಲ್ಲ. ಆದರೆ, ಮಾನ್ಯ ಮುಖ್ಯಮಂತ್ರಿಗಳ ಬಳಿ ಮಾತನಾಡಿಕೊಂಡು ಮೃತರ ಕುಟುಂಬಕ್ಕೆ ತಲಾ 10 ಲಕ್ಷ ರೂಪಾಯಿ ಪರಿಹಾರ ಘೋಷಣೆ ಮಾಡುತ್ತಾರೆ. ಬಹುಶಃ ಭಾರತ ದೇಶದ ಇತಿಹಾಸದಲ್ಲಿ ಒಮ್ಮೆ ಪರಿಹಾರ ಹಣ ಘೋಷಣೆ ಮಾಡಿ ನಂತರ ಅವರಿಗೆ ಕೊಡಬಾರದೆಂದು ವಾಪಸ್ಸು ತೆಗೆದುಕೊಂಡಿರುತ್ತಾರೆ. ಇದು ಯಾವ ನ್ಯಾಯ? ಆದುದರಿಂದ, ನಾನು ಕೇಳುತ್ತಿರುವುದು, ಮಂಗಳೂರಿಗೆ ಒಂದು ಸರ್ಕಾರ, ಕರ್ನಾಟಕಕ್ಕೆ ಒಂದು ಸರ್ಕಾರ ಇದೆಯೇ? ಆ ದಿವಸ ಖುದ್ದಾಗಿ ನಾನು ಮಂಗಳೂರಿನಲ್ಲಿ ಇದ್ದೆನು. ಏನೆಲ್ಲಾ ಆಗಿದೆ ಎನ್ನುವುದು ನನಗೆ ಗೊತ್ತಿದೆ. ಇವೊತ್ತಿನವರೆಗೂ ಆ ಪೊಲೀಸ್ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ಆಗಿರುವುದಿಲ್ಲ. ಅದರಲ್ಲಿ ಇಬ್ಬರು ಪೊಲೀಸ್ ಅಧಿಕಾರಿ ಇರುತ್ತಾರೆ. ಅದರಲ್ಲಿ ಹಿಂದೂ–ಮುಸ್ಲಿಂ ಬೇದ–ಭಾವ ಎಂದು ನಾನು ಹೇಳುವುದಿಲ್ಲ. ಅದರಲ್ಲಿ ಶ್ರೀ ಷರೀಫ್ ಗೋಲಿಬಾರ್ ಮಾಡಿರುವುದಕ್ಕೆ ಸಾಕ್ಷಿ ಇದೆ ಮತ್ತು ಶಾಂತರಾಮ್ ಎನ್ನುವ ಹಿರಿಯ ಪೊಲೀಸ್ ಅಧಿಕಾರಿ ಓಪನ್ ಆಗಿ, "ಹೊಡೆಯಿರಿ, ಕೊಲ್ಲಿರಿ, ಸಾಯಲಿ" ಎಂದು ಹೇಳುತ್ತಾರೆ. There is a Rule…

ಈ ವಿಷಯದಲ್ಲಿ ಉಸ್ತುವಾರಿ ಸಚಿವರು ಹೇಳಿರುವುದು ಸರಿಯಿಲ್ಲ. Real facts ಅನ್ನು ಯೋಚನೆ ಮಾಡಬೇಕು. ಘಟನೆ ನಡೆದು 2 ತಿಂಗಳು ಆಗಿದೆ. ಇದುವರೆವಿಗೆ ಯಾವ ಕ್ರಮ ಆಗಿದೆ ಎನ್ನುವ ಬಗ್ಗೆ ಮಾಹಿತಿ ಇಲ್ಲ. ಮಾನ್ಯ ಸದಸ್ಯರು ಹೇಳಿದಂತೆ, ಮಾನ್ಯ ಗೃಹ ಮಂತ್ರಿಗಳು ಈ ಸದನಕ್ಕೆ ಬಂದು, ಈ ಘಟನೆಗೆ ಒಂದು ಶಾಶ್ವತ ಪರಿಹಾರ ಏನು ಮಾಡಿದ್ದಾರೆಂದು ಉತ್ತರ ಹೇಳಲಿ. ಮಂಗಳೂರು ಅಭಿವೃದ್ಧಿಯಲ್ಲಿ ಸುಮಾರು 20 ವರ್ಷ ಹಿಂದೆ ಹೋಗಿದೆ. ಈಗ ಕೇವಲ 4–5 pollution causing industries ಇವೆ. ಅದು ಬಿಟ್ಟು ಬೇರೆ ಏನು ನಡೆಯುತ್ತಿಲ್ಲ. ಈಗ ಐಟಿ ಪಾರ್ಕ್ ಅಷ್ಟೊಂದು ಬೆನಿಫಿಟ್ ಅನ್ನು ಯಾರೂ ಮಾಡುವ ಪರಿಸ್ಥಿತಿಯಿಲ್ಲ. ಇದಕ್ಕೆ ಉದಾಹರಣೆಗೆ, ನನ್ನ ಒಬ್ಬ ಪತ್ರಕರ್ತ ಸ್ನೇಹಿತ ರೈಲಿನಲ್ಲಿ ಬರುತ್ತಿರುವಾಗ, ಇನ್ಫೋಸಿಸ್‌ಗೆ ತರಬೇತಿಗಾಗಿ ಕೆಲವರನ್ನು ಮಂಗಳೂರಿಗೆ ಕಳುಹಿಸುತ್ತಿದ್ದರು. ಅದರಲ್ಲಿ ಕೆಲವರು ಹುಡುಗರು, ಕೆಲವರು ಹುಡುಗಿಯರು ಇದ್ದಾರೆ. ಅವರು ರೈಲಿನಲ್ಲಿ ಜೊತೆಯಲ್ಲಿ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರುತ್ತಿದ್ದು, ಮಂಗಳೂರಿನ ಬಂಟ್ವಾಳ ಸ್ಟೇಷನ್‌ಗೆ ಬರುತ್ತಿದ್ದ ಹಾಗೆ, 'ಹುಡುಗಿಯರು ಆ ಕಡೆಯಿಂದ ಇಳಿಯಿರಿ, ಹುಡುಗರು ಈ ಕಡೆಯಿಂದ ಇಳಿಯಿರಿ' ಎಂದು ಹೇಳುತ್ತಾರೆ. ಏಕೆಂದರೆ, ಮನೆಯಿಂದ ಪೋಷಕರುಗಳಿಂದ ಫೋನ್ ಮಾಡಿ ಮಂಗಳೂರು ಬಹಳ ಡೇಂಜರ್ ಆಗಿದ್ದು, ನೀವು ಹೋಗಬೇಡಿ ಎಂದು ಹೇಳುತ್ತಾರೆ. ಒಂದು ಕಾಲದಲ್ಲಿ ಮಂಗಳೂರು ಬುದ್ಧಿವಂತರ ಜಿಲ್ಲೆಯೆಂದು ಹೇಳುತ್ತಿದ್ದರು. ಏಕೆಂದರೆ, ಇಲ್ಲಿ ಮೋರಲ್ ಪೊಲೀಸ್ ಇದ್ದು, ಹುಡುಗ ಹುಡುಗಿಯರನ್ನು ನೋಡಿದರೆ ಹೊಡೆದುಬಿಡುತ್ತಾರೆ. ಅಂತಹ ಪರಿಸ್ಥಿತಿ ಮಂಗಳೂರಿಗೆ ಇವೊತ್ತಿನ ದಿವಸ ಬಂದಿರುತ್ತದೆ. ಇವೊತ್ತಿನ ದಿವಸ BASF India Ltd. and other pollution causing industries, ಬಿಟ್ಟು ಬೇರೆ ಏನು ಆಗುತ್ತಿಲ್ಲ. The development of the whole District is totally standstill. ಇಂತಹ ಪರಿಸ್ಥಿತಿ ಮಂಗಳೂರಿಗೆ ಬಂದಿರುತ್ತದೆ. ಮಾನ್ಯ ಸಭಾಪತಿಯವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಈ ಗಲಭೆ ಬಗ್ಗೆ ಸಮಗ್ರವಾದ ತನಿಖೆ ಮಾಡಿ, ತಪ್ಪಿತಸ್ಥರ ವಿರುದ್ಧ ನ್ಯಾಯಾಂಗ ತನಿಖೆ ಮಾಡಬೇಕು. ನಿನ್ನೆಯ ದಿವಸ ಮಾನ್ಯ ನ್ಯಾಯಾಲಯವು ಕೂಡ 20 ಜನರಿಗೆ ಗ್ರಾಂಟ್ ಕೊಟ್ಟಿರುತ್ತದೆ. The Hon'ble Court has stated clearly regarding the Grant in its Judgement. ಜಡ್ಜ್‌ಮೆಂಟ್ ನೋಡಿದರೆ ತಮಗೆ ಗೊತ್ತಾಗುತ್ತದೆ. Totally, 32 cases have been registered. ಇದರಲ್ಲಿ ಕಂಪ್ಲೀಟ್ ಹಿಸ್ಟರಿ ಇದೆ. ಹಾಗಾಗಿ, ಈ ಗಲಭೆ ಬಗ್ಗೆ ತಾವು ಒಂದು ಸದನ ಸಮಿತಿ ರಚನೆ ಮಾಡಿ. Let this Committee find out the facts of this case. ಎಲ್ಲಾ ಸದಸ್ಯರು ಮಂಗಳೂರಿಗೆ ಹೋಗಿ facts find out ಮಾಡಿದ ನಂತರ ಸರ್ಕಾರಕ್ಕೆ ವರದಿ ಕೊಡುವುದಕ್ಕೆ ಅವಕಾಶ ನೀಡಬೇಕು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಕಾನೂನಿನ ವ್ಯವಸ್ಥೆಯ ಬಗ್ಗೆ ನಿಯಮ 68ರಡಿಯಲ್ಲಿ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಇವೊತ್ತಿನ ನಮ್ಮ ಕರ್ನಾಟಕ ರಾಜ್ಯದಲ್ಲಿ ಸಿ.ಎ.ಎ. ಕಾನೂನನ್ನು ತಂದ ಮೇಲೆ ಹಲವಾರು ಪ್ರತಿಭಟನೆಗಳು ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಬಹುಶಃ ನಮ್ಮ ರಾಜ್ಯದಲ್ಲಿ ಎಲ್ಲರೂ ಹೋರಾಟಕ್ಕೆ ಇಳಿದಿದ್ದಾರೆ. ಅದು ವಿದ್ಯಾರ್ಥಿಗಳು ಇರಬಹುದು, ಮಹಿಳೆಯರು ಇರಬಹುದು, ಮಕ್ಕಳು ಇರಬಹುದು, ಸಂಘಟನೆಗಳು ಇರಬಹುದು, ಬುದ್ಧಿಜೀವಿಗಳು ಇರಬಹುದು, ಪ್ರಗತಿಪರ ಸಂಘಟನೆಗಳು ಇರಬಹುದು, ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಿರಬಹುದು ಇವರೆಲ್ಲರೂ ಪ್ರತಿಭಟನೆ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಂತಿಯುತವಾಗಿ ಪ್ರತಿಭಟನೆ ಮಾಡುವುದು ಕಾನೂನಿನ ಉಲ್ಲಂಘನೆ ಆಗುವುದಿಲ್ಲ. ಭಿನ್ನಾಭಿಪ್ರಾಯ, ಭಿನ್ನಮತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿರಂತರವಾಗಿ ನಡೆಯುತ್ತಿರುತ್ತದೆ. ಆದರೆ, ಜನರು ಕಾನೂನಿನ ಬಗ್ಗೆ ಶಾಂತಿಯುತ ಪ್ರತಿಭಟನೆ ಮಾಡುವಾಗ ಅವರ ಮೇಲೆ ಕಾನೂನು ಬಾಹಿರವಾಗಿ ದೌರ್ಜನ್ಯ ಮಾಡುವುದು, ದೇಶದ್ರೋಹದ ಕಾನೂನನ್ನು ಹಾಕುವುದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾರಕವಾಗುತ್ತದೆ. ಕೇವಲ ನಮಗೆ ಮೆಜಾರಿಟಿ ಇದೆಯೆಂದು, ತಾವು ಒಂದು ಕಾನೂನನ್ನು ಜಾರಿಗೆ ತಂದರೆ, ಜನರು ಅದರ ವಿರುದ್ಧ ಪ್ರತಿಭಟನೆ ಮಾಡಿದಾಗ, ಅದು ನಮ್ಮ ವ್ಯವಸ್ಥೆಯ ವಿರುದ್ಧ ಹೋಗುತ್ತಿದ್ದಾರೆಂದು ಅಲ್ಲ. ನಮ್ಮ ಸಂವಿಧಾನದ ಆರ್ಟಿಕಲ್ 19 ರಲ್ಲಿ 'Right to Freedom of Speech and Expression' ಎಂದು ಹೇಳುತ್ತಾರೆ. ಯಾವುದೇ ಒಂದು ಕಾನೂನಿನ ಬಗ್ಗೆ ಶಾಂತಿಯುತವಾಗಿ ಪ್ರತಿಭಟನೆ ಮಾಡುವುದಕ್ಕೆ ಸರ್ಕಾರವಾಗಲೀ ಅಥವಾ ಸರ್ಕಾರದ ಅಂಗಗಳಾಗಲೀ ಉದಾಹರಣೆಗೆ, ಪೊಲೀಸ್ ಇಲಾಖೆಯಾಗಲೀ, ಪ್ರತಿಭಟನಕಾರರಿಗೆ ಶಾಂತಿಯುತವಾಗಿ ಪ್ರತಿಭಟನೆ ಮಾಡುವುದಕ್ಕೆ ಎಲ್ಲಾ ಅವಕಾಶ ಮಾಡಿಕೊಡಬೇಕೆಂದು ಈಗಾಗಲೇ ಹೇಳಿದೆ."

(ಮುಂದು)

(58)19.02.2020/1.20/ವೈಎಲ್–ಜಿಆರ್
**ಶ್ರೀ ಪ್ರಕಾಶ್ ಕೆ ರಾಥೋಡ್(ಮುಂದು)**

ನಮ್ಮ ರಾಜ್ಯದ ಬಿಜೆಪಿ ಸರ್ಕಾರ ಪ್ರತಿಭಟನೆ ನಡೆಸುತ್ತಿರುವುದಕ್ಕೆ ಪ್ರತಿಯೊಂದು ಹಂತದಲ್ಲಿಯು ಅಡ್ಡಿ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಸಾಕಷ್ಟು ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನೋಡುತ್ತಿರುವ ಹಾಗೆ ಮಂಗಳೂರು, ಬೀದರ್ ಜಿಲ್ಲೆಯಲ್ಲಿ ನಡೆದಿರುವ ಘಟನೆ ಮತ್ತು ಮೈಸೂರಿನ ಮಾನಸ ಗಂಗೋತ್ರಿ ವಿಶ್ವವಿದ್ಯಾನಿಲಯದ ವಿವಿಧ ವಿದ್ಯಾರ್ಥಿಗಳ ಸಂಘಟನೆ, ದಲಿತ ವಿದ್ಯಾರ್ಥಿಗಳ ಒಕ್ಕೂಟ, ಬಹುಜನ ವಿದ್ಯಾರ್ಥಿಗಳ ಸಂಘ, ಭಾರತೀಯ ವಿದ್ಯಾರ್ಥಿ ಒಕ್ಕೂಟ, ಅಖಿಲ ಭಾರತ ಪ್ರಜಾಪ್ರಭುತ್ವ ವಿದ್ಯಾರ್ಥಿ ಸಂಘಟನೆ, ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ವಾಂಸ ಸಂಘ ಮುಂತಾದವರು ಈ ಒಂದು ಪ್ರತಿಭಟನೆ ನಡೆಸಿದ ಮೇಲೆ ಅವರಲ್ಲಿ ಯಾರೋ ಒಬ್ಬರು 'Free Kashmir' ಎಂದು ಬರೆದಿರುವುದರಿಂದ ಅವರುಗಳ ಮೇಲೆ ವಿಶೇಷವಾಗಿ ಅಲ್ಲಿನ ಪೊಲೀಸ್ ಅಧಿಕಾರಿಯಾದ ಶ್ರೀ ಮಹೇಂದ್ರರವರು ಎಫ್.ಐ.ಆರ್. ದಾಖಲಿಸಿದ್ದಾರೆ. ಇಂತಹ ಹಲವಾರು ಘಟನೆಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಬೀದರ್‌ನ ಶಾಹೀದ್ ಬಾಗ್ ಪ್ರಕರಣದ ಬಗ್ಗೆ ಸಾಕಷ್ಟು ಹೇಳಿದ್ದು, ಅದನ್ನು ನಾನು ಸದನದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಒಬ್ಬ ವ್ಯಕ್ತಿ 11 ವರ್ಷದ ಅಮಾಯಕ ವಿದ್ಯಾರ್ಥಿ ಮೇಲೆ ಮತ್ತು ಆಕೆಯ ತಾಯಿ ಹಾಗೂ ಪ್ರಾಂಶುಪಾಲರ ಮೇಲೆ ಈ ರೀತಿಯ ದೇಶದ್ರೋಹದ ಕಾನೂನನ್ನು ಮಾಡಿದ್ದಾರೆ. ಯಾವ ಸೆಕ್ಷನ್ ಅಡಿಯಲ್ಲಿ ಅದನ್ನು ಮಾಡುತ್ತಾರೆಂದರೆ, ಭಾರತೀಯ ದಂಡ ಸಂಹಿತೆಯ *Section 504 - Intentional insult with intent to provoke breach of the peace; Section 505(2)-* Statements creating or promoting enmity, hatred or ill-will between classes; 124A – Sedition; 153A – Attempting to promote disharmony and Section 34 – Common intention – ಈ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಒಬ್ಬ 11 ವರ್ಷದ ವಿದ್ಯಾರ್ಥಿಯ ಮೇಲೆ, ಅವರ ತಾಯಿಯ ಮೇಲೆ ಮತ್ತು ಅಲ್ಲಿನ ಪ್ರಾಂಶುಪಾಲರ ಮೇಲೆ ದೇಶದ್ರೋಹದ ಇಂತಹ ಎಲ್ಲಾ ಕಲಂಗಳ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿದ್ದಾರೆ. ಇವತ್ತು ಯಾವ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯ ಪರಿಸ್ಥಿತಿ ಇದೆ ಎಂದರೆ, ಬಹಳ ದೊಡ್ಡ ಪ್ರಮಾಣದಲ್ಲಿ ಈ ದೇಶದ ಕಾನೂನನ್ನು ಉಲ್ಲಂಘನೆ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಕೊಪ್ಪಳ ಜಿಲ್ಲೆಯಲ್ಲಿ ಜನವರಿ 09 ಮತ್ತು 10ನೇ ತಾರೀಖಿನಂದು ನಡೆದ ಆನೆಗೊಂದಿ ಉತ್ಸವದ ವಿದ್ಯಾರಣ್ಯ ವೇದಿಕೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ಸಿರಾಜ್ ಬಿಸರಳ್ಳಿರವರು ಸಿ.ಎ.ಎ., ಮತ್ತು ಎನ್.ಆರ್.ಸಿ., ಕುರಿತು ಕವಿತೆ ವಾಚಿಸಿದರು. ಅವರು ವಾಚಿಸಿದ ಕವನದಲ್ಲಿ ಮಾನ್ಯ ಪ್ರಧಾನ ಮಂತ್ರಿಯವರಿಗೆ ಮತ್ತು ಕೇಂದ್ರ ಸಚಿವರಿಗೆ ಅವಮಾನವಾಗಿದೆ ಎಂದು ಬಿಜೆಪಿ ಮುಖಂಡರು ದೂರು ನೀಡಿದ ಮೇಲೆ ಸಿರಾಜ್ ಬಿಸರಳ್ಳಿ ವಿರುದ್ಧ ಕೊಪ್ಪಳದಲ್ಲಿರುವ ಗಂಗಾವತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕವಿಗಳು, ಕಲಾವಿದರು, ಪತ್ರಕರ್ತರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವ್ಯಕ್ತ ಮಾಡಲಾಗದ ಸ್ಥಿತಿ ತಲುಪಿದೆ. ಏಕೆಂದರೆ, ಇಂತಹವರ ಮೇಲೆ ಸಹ ಈ ರೀತಿಯ ದೇಶದ್ರೋಹದ ಪ್ರಕರಣದ ಮೇಲೆ ಸುಳ್ಳು ದಾಖಲೆ ಮಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕೊಲೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಬಹುಶಃ ಸರ್ಕಾರದ ಗಮನಕ್ಕೆ ಬಂದಿದೆಯೋ, ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆಧುನಿಕ ಕವಿಗಳಲ್ಲಿ ಒಬ್ಬರಾದ ಕೇದಾರನಾಥ ಸಿಂಗ್‌ರವರ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಪ್ರಕರಣದಲ್ಲಿ ಸಂವಿಧಾನಿಕ ಪೀಠ ತೀರ್ಪನ್ನು ನೀಡಿದ್ದೆ. ಸುಪ್ರೀಂ ಕೋರ್ಟ್ ಪ್ರಕರಣದಲ್ಲಿ ಸೆಕ್ಷನ್ 124ಎ ಅಡಿ ‘ಕೇವಲ ರಾಜ್ಯದ ವಿರುದ್ಧ ಹಿಂಸೆ ಉತ್ತೇಜಿಸುವ ಭಾಷಣಕ್ಕೆ ಮಾತ್ರ ಬಯಸುವುದು ಸರಿ’ ಎಂದು ಹೇಳಿದ್ದೆ. ಈ ರೀತಿಯ ಸುಪ್ರೀಂ ಕೋರ್ಟ್ ಆದೇಶ ಇದ್ದರೂ ಸಹ ನಮ್ಮ ರಾಜ್ಯ ಸರ್ಕಾರ ಹಲವಾರು ಯುವಕರು, ಮಹಿಳೆಯರು, ಕವಿಗಳು, ಸಾಹಿತಿಗಳ ಮೇಲೆ ದೇಶದ್ರೋಹದ ಕಾನೂನನ್ನು ದಾಖಲಿಸಿರುವುದನ್ನು ನೋಡಿದರೆ, ಬಹುಶಃ ನಮ್ಮ ರಾಜ್ಯದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕೊಲೆ ಮಾಡುವಂಥ ಪ್ರಯತ್ನ ಬಿಜೆಪಿ ಸರ್ಕಾರ ನಡೆಸುತ್ತಿದೆ ಎಂದು ಬಹಳ ನೋವಿನಿಂದ ಹೇಳಬೇಕಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕೊಲೆ ಮಾಡುವಂಥ ಮಟ್ಟಕ್ಕೆ ಸರ್ಕಾರ ಇಳಿದಿಲ್ಲ.

**ಶ್ರೀ ಪ್ರಕಾಶ್ ಕೆ ರಾಥೋಡ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಇದು ನನ್ನ ನೇರ ಆರೋಪವಾಗಿದ್ದು, ಅದಕ್ಕೆ ನಾನು ಬದ್ಧನಾಗಿರುತ್ತೇನೆ. ಅದಕ್ಕೆ ಮಾನ್ಯ ಸಭಾನಾಯಕರು explanation ನೀಡಲಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಆ ರೀತಿ ಇಲ್ಲದಿದ್ದರೆ, ಹೇಗೆ ಭಾಷಣವನ್ನು ಮಾಡಬೇಕೆಂದು ಮಾನ್ಯ ಸದಸ್ಯರಿಗೆ ಬರೆದುಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಮಾನ್ಯ ಸದಸ್ಯರು ಮಾತನಾಡುವ ಹಾಗಿಲ್ಲ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ಮಾನ್ಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಪದೇ ಪದೇ obstruct ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿರ್ದಿಷ್ಟವಾದಂಥ ವಿಚಾರ ಇದ್ದರೆ ಹೇಳಲಿ.

(ಗೊಂದಲ)

ಮಾನ್ಯ ಸದಸ್ಯರು ಬಿಜೆಪಿ ಸರ್ಕಾರ ಕೊಲೆ ಮಾಡುವುದಕ್ಕೆ ಹೊರಟಿದೆ ಎಂದು ಹೇಳುತ್ತಿರುವುದರಿಂದ ಅವರಾಗಲಿ, ನಾವಾಗಲಿ ಆ ರೀತಿ ಹೇಳುವ ಹಾಗಿಲ್ಲ ಎಂದು ಹೇಳುತ್ತಿದ್ದೇನೆ. ನಾನು ಸಹ ವಿರೋಧ ಪಕ್ಷದ ಸ್ಥಾನದಲ್ಲಿದ್ದು ಕೆಲಸ ಮಾಡಿದ್ದೇನೆ. ನಿರ್ದಿಷ್ಟ ವಿಚಾರ ಇದ್ದರೆ ಹೇಳಲಿ.

**ಶ್ರೀ ಪ್ರಕಾಶ್ ಕೆ ರಾಥೋಡ್:–** ಮಾನ್ಯ ಸಭಾಪತಿಯವರೇ, ನಿರ್ದಿಷ್ಟ ವಿಚಾರವನ್ನು...

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಮಾನ್ಯ ಸದಸ್ಯರಿಗೆ ಹೀಗೇ ಮಾತನಾಡಿ ಎಂದು ಹೇಳುವಂಥ ಅಧಿಕಾರವನ್ನು ಈ ಸದನ ನೀಡಿಲ್ಲ. ಒಂದು ವೇಳೆ ಮಾನ್ಯ ಸದಸ್ಯರು ಏನಾದರೂ ತಪ್ಪು ಮಾತನಾಡಿದ್ದರೆ ಅಥವಾ ಬೇರೆ ವಿಚಾರಗಳನ್ನು ಮಾತನಾಡಿದ್ದರೆ, ನಡವಳಿಕೆಗೆ ವಿರೋಧವಾಗಿದ್ದರೆ ಅದಕ್ಕೆ ಅಡ್ಡಿ ಮಾಡಲಿ. ಹಾಗಾದರೆ, ಆಡಳಿತ ಪಕ್ಷದವರೆಲ್ಲರೂ ಮಾತನಾಡುವುದು ಸರಿಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಏನೇನೋ ಮಾತನಾಡಿದರೆ ಸರ್ಕಾರ ಮಧ್ಯೆ ಪ್ರವೇಶಿಸುವಂಥ ಕೆಲಸ ಮಾಡಬೇಕಾಗುತ್ತದೆ. ನಾನೂ ಸಹ ಮಾನ್ಯ ಸದಸ್ಯರಿಗೆ ಹೀಗೇ ಮಾತನಾಡಿ ಎಂದು ಹೇಳುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ ರಾಥೋಡ್‌ರವರೇ, ತಮ್ಮ ಮಾತು ಮುಗಿಯಿತೇ?

**ಶ್ರೀ ಪ್ರಕಾಶ್ ಕೆ ರಾಥೋಡ್:–** ಮಾನ್ಯ ಸಭಾಪತಿಯವರೇ, ಇನ್ನೂ 5 ನಿಮಿಷ ಮಾತನಾಡುವುದು ಬಾಕಿ ಇದೆ. ನಾನು ಈ ಮಾತನ್ನು ಏತಕ್ಕೆ ಬಹಳ ನೋವಿನಿಂದ ಹೇಳುತ್ತಿದ್ದೇನೆ ಎಂದರೆ, ಕಾನೂನು ಸುವ್ಯವಸ್ಥೆ ನಮ್ಮ ರಾಜ್ಯದಲ್ಲಿ ಯಾವ ಮಟ್ಟದಲ್ಲಿ ತಲುಪಿದೇ ಎಂದರೆ, ಇವತ್ತಿನ "DECCAN HERALD" ದಿನಪತ್ರಿಕೆಯಲ್ಲಿ 'Indictment of Bengaluru police' ಎಂಬ ಒಂದು editorial ವರದಿಯಾಗಿದೆ. It reads thus:

"The Karnataka High Court's ruling that the imposition of Section 144 by the Bengaluru Police Commissioner in the city in December

> was illegal should serve as a warning to the police against excessive zeal in acting against protests by the people. The police had withdrawn permission that had earlier been granted for holding protests against the Citizenship Amendment Act (CAA) and imposed ban orders in the city from December 18 to 21 on grounds that the court has now found wrong and unacceptable. ...."

ಸರ್ಕಾರದ ನಿರ್ಣಯ ಏನಿದೆ, ಅದಕ್ಕೆ ಪೋಲೀಸ್ ಕಮೀಷನರ್‌ನವರು ತೆಗೆದುಕೊಂಡಿರುವ ನಿರ್ಣಯ ಅಸಂವಿಧಾನಿಕವಾಗಿದೆ. ಇಂತಹದ್ದರಲ್ಲಿ ಅವರು ಏನು ಎಚ್ಚರಿಕೆಯನ್ನು ನೀಡುತ್ತಾರೆಂದರೆ, the editorial further reads thus:

> " .... The police have often read and acted on the script written by the BJP governments at the Centre and in the states. Even after the court's ruling, the police have taken action against those who protested against the CAA. Protesters were lathi-charged in Chennai last week. The police should not forget that their responsibility is to the rule of law and the Constitution and not to the government or party in power."

ದಯವಿಟ್ಟು ಇವತ್ತು ನಾವು ಈ ನಿರ್ಣಯವನ್ನು ಏತಕ್ಕೆ ಮಂಡಿಸಿದ್ದೇವೆ ಎಂಬುದನ್ನು ನೋಡಬೇಕಾಗುತ್ತದೆ. ಪೋಲೀಸ್ ಇಲಾಖೆಯವರು ಅಸಂವಿಧಾನಿಕ ಕೆಲಸ ಮಾಡಿದ್ದು, ಕಾನೂನಿನ ಉಲ್ಲಂಘನೆ ಮಾಡಿದ್ದಾರೆ. ನಮಗೆ ಪ್ರತಿಭಟನೆ ಮಾಡಲು ನೀಡಿರುವ ಅನುಮತಿಯನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ನಮ್ಮ ಮೇಲೆ ಸುಳ್ಳು ಆಪಾದನೆ ಮಾಡಿ, ದೇಶದ್ರೋಹದ ಪ್ರಕರಣಗಳನ್ನು ದಾಖಲಿಸಿದ್ದಾರೆ. ಇಂತಹ ಹಲವಾರು ಪ್ರಕರಣಗಳಲ್ಲಿ ನಮ್ಮ ರಾಜ್ಯದ ಶಾಂತಿಯನ್ನು ಕಾಪಾಡಲು ಅವರು ವಿಫಲರಾಗಿದ್ದಾರೆ. ಸರ್ಕಾರ ನಮ್ಮ ರಾಜ್ಯದಲ್ಲಿ ಶಾಂತಿ ಭಂಗ ಆಗಬೇಕು, ಕೋಮುಗಲಭೆ ಆಗಬೇಕು ಎನ್ನುವ ದೃಷ್ಟಿಯಿಂದ ಮಾಡಲಾಗಿದೆ. ಬಿಜೆಪಿ ಸರ್ಕಾರದ ನಿಲುವು ಏನೆಂದರೆ, ಈ ರಾಜ್ಯದಲ್ಲಿ ಹಿಂದೂ ಮತ್ತು ಮುಸಲ್ಮಾನರ ಜಗಳವಾಗಬೇಕು, ಅವರುಗಳ ಮೇಲೆ ಅತ್ಯಾಚಾರವಾಗಬೇಕು ಎಂದು ಈ ರೀತಿ ಘಟನೆಗಳನ್ನು ನಡೆಸುತ್ತಿದ್ದಾರೆ. ಇದಕ್ಕೆ ನಾವು ಕಡಿವಾಣ ಹಾಕಬೇಕಾಗಿದೆ. ಇವತ್ತು ನಾವು ಸರ್ಕಾರಕ್ಕೆ ಮತ್ತು ಪೋಲೀಸ್ ಇಲಾಖೆಗೆ ಎಚ್ಚರಿಕೆ ನೀಡಬೇಕಾಗಿದೆ. ಈ ಎಲ್ಲಾ ಪ್ರಕರಣವನ್ನು ಗಮನಿಸಿದಾಗ ನಮ್ಮ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಮತ್ತು ಶಾಂತಿ ಭಂಗ ಉಂಟಾಗಿದೆ. ವಿಶೇಷವಾಗಿ ಕೋಮುಗಲಭೆ ನಡೆಸುವುದಕ್ಕೆ ಸರ್ಕಾರ ಪ್ರಚೋದನೆ ಮಾಡುತ್ತಿದೆ. ಅದಕ್ಕಾಗಿ ನಾವು ಈ ನಡವಳಿ ಸೂಚನೆಯನ್ನು ಸದನದಲ್ಲಿ ಪ್ರದರ್ಶಿಸುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಭಾವಚಿತ್ರವೊಂದನ್ನು ಸದನದಲ್ಲಿ ಪ್ರದರ್ಶಿಸಿದರು)

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಸರ್ಕಾರ ಪ್ರಚೋದನೆ ಮಾಡುತ್ತಿದೆಯೇ? ಮಾನ್ಯ ಸದಸ್ಯರು ಏನೆಂದು ಮಾತನಾಡುತ್ತಿದ್ದಾರೆ?

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಹೌದು, ನಾನು ಮಾತನಾಡಿರುವ ವಿಚಾರಕ್ಕೆ ಬದ್ಧನಾಗಿದ್ದೇನೆ. ಬಿಜೆಪಿ ಸರ್ಕಾರದವರೇ ಪ್ರಚೋದನಾಕಾರಿ ಕೆಲಸವನ್ನು ಮಾಡುತ್ತಿದ್ದಾರೆ. ಪೊಲೀಸ್ ಅಧಿಕಾರಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಯಾವ ರೀತಿ ಪೊಲೀಸ್ ಅಧಿಕಾರಿಗಳು ಕಲ್ಲುಗಳ ತೂರಾಟ ಮಾಡುತ್ತಿದ್ದಾರೆ ಎಂಬುದನ್ನು ಭಾವಚಿತ್ರದಲ್ಲಿ ನೋಡಿ. ಪೊಲೀಸ್ ಅಧಿಕಾರಿಗಳು Javelin throw ಮಾಡುವ ರೀತಿ ಕಲ್ಲು ತೂರಾಟ ಮಾಡುತ್ತಿದ್ದಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ,...

(ಈ ಹಂತದಲ್ಲಿ ಸರ್ಕಾರದ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನರವರು ಭಾವಚಿತ್ರವೊಂದನ್ನು ಸದನದಲ್ಲಿ ಪ್ರದರ್ಶಿಸಿದರು)

ಇದರ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯ ಏನೆಂಬುದನ್ನು ಹೇಳಬೇಕಲ್ಲವೇ? ಒಂದು ಕಡೆಯ ಭಾವಚಿತ್ರವನ್ನು ಇಟ್ಟುಕೊಂಡು ಮಾತನಾಡಬಾರದು. ಎರಡೂ ಕಡೆಯಲ್ಲಿರುವ ಭಾವಚಿತ್ರವನ್ನು ಇಟ್ಟುಕೊಂಡು, ಅದರ ಅಭಿಪ್ರಾಯ ಏನೆಂಬುದನ್ನು ಸಹ ಹೇಳಬೇಕು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನರವರು ಹೇಳಿರುವುದಕ್ಕೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟರೆ ಮಾತನಾಡುತ್ತೇನೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಇದು ಸದನದ asset ಆಗಿದ್ದು, ಅದನ್ನು ತಾವು ಪಡೆದುಕೊಂಡು ಪುನಃ ಸದನ ಸಮಿತಿ ನಡೆಸಲು ಆದೇಶ ನೀಡಿ. ವಾಸ್ತವಾಂಶ ಏನೆಂಬುದು ಹೊರಗೆ ಬರಲಿ.

(ಮುಂದು)

(59)/19.02.2020/1.30/ಎಸ್‌ಕೆ–ಜಿಆರ್

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ತೋರಿಸುವ ಛಾಯಚಿತ್ರಗಳು ನಮಗೆ ಬೇಕಾ ಅಥವಾ ಮಾನ್ಯ ಕವಟಗಿ ಮಹಾಂತೇಶ ಮಲ್ಲಿಕಾರ್ಜುನರವರು ತೋರಿಸುವ ಛಾಯಚಿತ್ರಗಳು ನಮಗೆ ಬೇಕಾ? ಇದು ನಮಗೂ ಮತ್ತು ಮಾಧ್ಯಮದವರಿಗೂ ಅಷ್ಟೇ ಅಲ್ಲ. ಇದು ಇಡೀ ರಾಜ್ಯದ ಜನರಿಗೆ ಗೊಂದಲ ಉಂಟಾಗಿದೆ. ಏಕೆಂದರೆ ಒಂದು ವಾಸ್ತವಿಕ ನೆಲೆಗಟ್ಟಿನ ಚಿತ್ರಣವನ್ನು ನಾಡಿನ ಜನರಿಗೆ ಕೊಡದೇ ಹೋದರೆ, ಒಂದು ನಾಗರೀಕ ಸರ್ಕಾರದಲ್ಲಿ ಲೋಪವಾಗುತ್ತದೆ. ದಯವಿಟ್ಟು,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಾವು ಎರಡು ವೈರುಧ್ಯಗಳನ್ನು ನಾವು ಒಂದು ಕಡೆ ಇಡೋಣ. ಇದರ ಸತ್ಯಾಂಶವನ್ನು ಎಕ್ಕಿ ತೆಗೆಯೋಣ. ಅದು ಪ್ರಜಾಪ್ರಭುತ್ವಕ್ಕೆ ಕೊಡುವಂತಹ ಒಂದು ದೊಡ್ಡ ಗೌರವ. ದಯವಿಟ್ಟು ಸದನ ಸಮಿತಿ ಮಾಡಿ. ಇದರ ವಾಸ್ತವ ಏನಿದೆ ಎಂಬುದನ್ನು ತೆಗೆಯೋಣ. ಈ ನಾಡಿನ ಜನರಿಗೆ ತಿಳಿಸೋಣ.

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಹೇಳಿರುವಂತಹದ್ದು ಸತ್ಯ. ನಾನು ನಿನ್ನೆಯೂ ಸಹ ಹೇಳಿದೆ. This has become a property of this House. ಈ ಸದನದಲ್ಲಿ ಯಾರಾದರೂ ತಪ್ಪನ್ನು ತೋರಿಸಿದರೆ, ಈ ಸದನಕ್ಕೆ ಅಗೌರವ ಆಗುತ್ತದೆ. It becomes a breach of privilege of the House. ನಾನು ಇಬ್ಬರ ಮೇಲೂ ಹಕ್ಕುಚ್ಯುತಿ ಮಾಡುತ್ತೇನೆ. ಆಗ ತಾವು ಏನು ಮಾಡುತ್ತೀರಾ? ಒಂದು ಸದನ ಸಮಿತಿ ಮಾಡಿ. ಈ ಛಾಯಚಿತ್ರ ಸತ್ಯ ಹೌದೋ ಅಲ್ಲವೋ. ಬಾಕಿದ್ದು ಬಿಡಿ, ನ್ಯಾಯಾಂಗ ವಿಚಾರಣೆಯನ್ನು ಆಮೇಲೆ ನೋಡೋಣ. ಈ ಛಾಯಚಿತ್ರವೇ ಮೊದಲು. ಮಾನ್ಯ ಸದಸ್ಯರಿಬ್ಬರು ಛಾಯಚಿತ್ರಗಳನ್ನು ತೋರಿಸಿದ್ದಾರೆ. ಇದರ ಬಗ್ಗೆ ಸದನ ಸಮಿತಿ ಮಾಡಿ. ತಾವು ಇದರ ಬಗ್ಗೆ ರೂಲಿಂಗ್ ಕೊಡಿ. Because, this has become a property of the House. ಈ ಸದನ ಬಹಳ ಇತಿಹಾಸವುಳ್ಳ ಸದನ ಇದಾಗಿದೆ. ಇಲ್ಲಿ ಏನಾದರೂ ಬಂದು ಏನಾದರೂ ತೋರಿಸಿಬಿಟ್ಟರೂ ಎಂದು ಹೇಳಿದರೆ, ಪಾರು ಆಗುವುದಕ್ಕಾಗುವುದಿಲ್ಲ. ಆ ಛಾಯಚಿತ್ರದಲ್ಲಿ ಇರುವವರು ಯಾರು ಮತ್ತು ಈ ಛಾಯಚಿತ್ರಗಳಲ್ಲಿ ಇರುವವರು ಯಾರು?

**ಸಭಾಪತಿಯವರು:–** ಹಕ್ಕುಚ್ಯುತಿ ಹೇಗೆ ಆಗುತ್ತದೆ?

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಹಕ್ಕುಚ್ಯುತಿ ಹೇಗೆ ಆಗುತ್ತದೆ ಎಂದರೆ, ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟರೆ ಹಕ್ಕುಚ್ಯುತಿ ಅಲ್ಲವೇ.

**ಸಭಾಪತಿಯವರು:–** ಅದು ಹೇಗೆ ಆಗುತ್ತದೆಂಬುದರ ಬಗ್ಗೆ ಹೇಳಿ?

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿಯನ್ನು ಈ ಸದನಕ್ಕೆ ಕೊಟ್ಟರೆ it is a breach of privilege of the House. ನಿನ್ನೆಯ ದಿವಸ ಮಾನ್ಯ ಸಭಾನಾಯಕರು ಕೆಲವು ಛಾಯ ಚಿತ್ರಗಳನ್ನು ತೋರಿಸಿದ್ದಾರೆ. ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನವರು ಕೆಲವು ಛಾಯಾ ಚಿತ್ರಗಳನ್ನು ತೋರಿಸಿದ್ದಾರೆ. ಮಾನ್ಯ ಐವನ್ ಡಿ'ಸೋಜಾರವರು ಸಹ ಕೆಲವು ಛಾಯಾ ಚಿತ್ರಗಳನ್ನು ತೋರಿಸಿದ್ದಾರೆ. ಇದರ ಬಗ್ಗೆ

ಸದನ ಸಮಿತಿ ಮಾಡಿ. Let that House Committee visit Mangaluru. ಇದರಲ್ಲಿ ಏನೇನು ಹೇಳಿದ್ದಾರೆ. ಅವರು ಮೂರು ಸಾವಿರ ಜನರು ಎಂದು ಹೆಳಿದ್ದಾರೆ. ಇವರು ನೂರೈವತ್ತು ಜನರು ಎಂದು ಹೇಳಿದ್ದಾರೆ. ಅದು ಸಹ ಚರ್ಚೆಯಾಗಲಿ. ಪೊಲೀಸ್ ಮಫ್ತಿಯಲ್ಲಿದ್ದರು ಎಂದು ಅವರು ಹೇಳಿದ್ದಾರೆ. ಇವರು ಇಲ್ಲವೆಂದು ಹೇಳಿದ್ದಾರೆ. ಅದು ತನಿಖೆಯಾಗಲಿ. ಈ ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿರುವಂಥದ್ದು that is a breach of privilege of the House. ನಾವು ಇವತ್ತು ಛಾಯಾ ಚಿತ್ರವನ್ನು ತೋರಿಸಿದರೆ, ನಾಳೆ ಇನ್ನೊಬ್ಬ ಸದಸ್ಯರು ಕೆಲವು ಛಾಯಾಚಿತ್ರಗಳನ್ನು ತಂದು ತೋರಿಸುತ್ತಾರೆ. ಹಾಗಾಗಿ ತಾವು ಇದರ ಬಗ್ಗೆ ನಿರ್ದಿಷ್ಟವಾದಂತಹ ರೂಲಿಂಗ್ ಕೊಡುವ ಅವಶ್ಯಕತೆ ಇದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಹಕ್ಕುಚ್ಯುತಿ ಆಗುವುದಿಲ್ಲ. ಅದು misleading ಆಗಬಹುದು. ಇದಾದ ನಂತರ ತಪ್ಪು ಮಾಹಿತಿ ಕೊಟ್ಟಾಗ, ಆಗ ನಾವು ತಪ್ಪು ಮಾಹಿತಿ ಕೊಟ್ಟಿದ್ದಾರೆಂದು Breach of Privilege Motion move ಮಾಡಬಹುದು. ಈಗ ಹಕ್ಕುಚ್ಯುತಿ ಆಗುವುದಿಲ್ಲ. ಆದರೆ ಸತ್ಯಾಂಶ ಹೊರಗೆ ಬರಬೇಕೆಂದರೆ, ಒಂದು ಸದನ ಸಮಿತಿ ಮಾಡಿ. ಸದನ ಸಮಿತಿಯಿಂದ ವರದಿಯನ್ನು ಕೊಟ್ಟರೆ ಅವರು ಮತ್ತು ಇವರು ಸದನದಲ್ಲಿ ಪ್ರದರ್ಶನ ಮಾಡಿದ ಕೆಲವು ಛಾಯಾಚಿತ್ರಗಳನ್ನು ತೋರಿಸಿರುವಂತಹದ್ದು ತಪ್ಪು ಎಂದಾಗ ಮಾತ್ರ ಹಕ್ಕುಚ್ಯುತಿ ಆಗುತ್ತದೆ. ಈಗ ಹಕ್ಕುಚ್ಯುತಿ ಮಾಡುವುದಕ್ಕೆ ಕಾನೂನಿನ ಪ್ರಕಾರ ಬರುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್ ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮೇಲಿಂದ ಮೇಲೆ ಅದನ್ನು exhibit ಮಾಡುತ್ತಾರೆ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, misleading ಅಥವಾ ಹಕ್ಕುಚ್ಯುತಿ ಎರಡೂ ಆಗುವುದಿಲ್ಲ. ಇದು ಏಕೆ ಆಗುವುದಿಲ್ಲವೆಂದರೆ, ನನ್ನ ಹತ್ತಿರ ಒಂದು ಪೇಪರ್ ಇಟ್ಟುಕೊಂಡು, ಅದರ ಬಗ್ಗೆ ಮಾತನಾಡುತ್ತೇನೆ. ಇನ್ನೊಬ್ಬ ಸದಸ್ಯರ ಹತ್ತಿರ ಇನ್ನೊಂದು ಪೇಪರ್ ಇಟ್ಟುಕೊಂಡು, ಅದರ ಬಗ್ಗೆ ಮಾತನಾಡುತ್ತಾರೆ. ಅವರಿಗೆ ಏನು ಮಾಹಿತಿ ಸಿಕ್ಕಿರುತ್ತದೆಯೋ, ಅದರ ಪ್ರಕಾರವಾಗಿ ಅವರು ಮಾತನಾಡುತ್ತಾರೆ. ನನಗೆ ಏನು ಮಾಹಿತಿ ಸಿಕ್ಕಿರುತ್ತದೆಯೋ, ನಾನು ಅದರ ಪ್ರಕಾರವಾಗಿ ಮಾತನಾಡಿರುತ್ತೇನೆ. ಆದರೆ ಸರ್ಕಾರ ಯಾವುದು ಸರಿ ಮತ್ತು ಯಾವುದು ಸರಿಯಲ್ಲ ಎಂದು ಹೇಳಬೇಕಾದದ್ದು ಸರ್ಕಾರದ ಜವಾಬ್ದಾರಿ. ಒಂದು ನಿಮಿಷ ಹಾಗಾಗಿ...

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(ಗೊಂದಲ)

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಪತಿಯವರೇ, ಸಭಾನಾಯಕರು ಸರ್ಕಾರದವರೇ ಆಗಿದ್ದಾರೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ...

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಆಡಳಿತ ಪಕ್ಷದ ಹಿಂದಿನ ಸಾಲಿನಲ್ಲಿ ತಮ್ಮ ಸ್ಥಾನದಲ್ಲಿ ಎದ್ದು ನಿಂತುಕೊಂಡು ಮಾತನಾಡುತ್ತಿದ್ದರು)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ತಾವು ಅಲ್ಲಿಂದ ಏಕೆ ನಿಂತುಕೊಂಡು ಮಾತನಾಡುತ್ತೀರಿ?

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಹೌದು. ನಾನು ಇಲ್ಲಿಯೇ ನಿಂತುಕೊಂಡು ಮಾತನಾಡಬೇಕು.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):–** ತಾವು ಅಲ್ಲಿಂದ ನಿಂತುಕೊಂಡು ಮಾತನಾಡುವಾಗೇ ಇಲ್ಲ.

**ಶ್ರೀ ಪುಟ್ಟಣ್ಣ:–** ನನ್ನ ಆಸನ ಇಲ್ಲಿಯೇ ಇದೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರ ಸೀಟ್ ನನ್ನ ಪಕ್ಕದಲ್ಲಿದೆ. ಇಲ್ಲಿಂದ ನಿಂತುಕೊಂಡು ಮಾತನಾಡಬೇಕು.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ತಾವು ಅಲಾಟ್ ಮಾಡಿದ ಸೀಟ್‌ನಲ್ಲಿ ನಿಂತು ಮಾತನಾಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ ತಮ್ಮ ಮಾತನ್ನು ಮುಗಿಸಿ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈ ದಾಖಲೆ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರು ಮಾನ್ಯ ಸದಸ್ಯರಾದ ಪುಟ್ಟಣ್ಣನವರಿಗೆ ಆಡಳಿತ ಪಕ್ಷದ ಹಿಂದಿನ ಸಾಲಿನಲ್ಲಿ ಅಲಾಟ್ ಮಾಡಲಾಗಿದೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇಷ್ಟು ದಿವಸ ಕೆಳಮನೆಯ ಸದಸ್ಯರನ್ನು ಆಡಳಿತ ಪಕ್ಷದ ಕಡೆಗೆ ಸರ್ಕಾರದವರು ಸೆಳೆಯುತ್ತಿದ್ದರು. ಆದರೆ ಈಗ ಮೇಲ್ಮನೆಯ ಸಹ ಸದಸ್ಯರನ್ನೂ ಕೂಡ ಸರ್ಕಾರದವರು ಸರ್ಕಾರದ ಕಡೆಗೆ ಸೆಳೆದು, ಆಡಳಿತ ಪಕ್ಷದ ಸಾಲಿನಲ್ಲಿರುವ ಆಸನದಲ್ಲಿ ಕೂರಿಸಿದ್ದಾರೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನನಗೆ ಈ ಆಸನವನ್ನು ಇಲ್ಲಿ ಹಂಚಿಕೆ ಮಾಡಿದ್ದಾರೆಂದು ಹೇಳಿದರು. ಆದ್ದರಿಂದ ನಾನು ಇಲ್ಲಿ ಬಂದು ಕುಳಿತುಕೊಂಡಿದ್ದೇನೆ. ನನಗೆ ಬೇರೆ ಯಾವುದೇ ಆಸನವನ್ನು ಹಂಚಿಕೆ ಮಾಡಿದ್ದರೆ,

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ನಾನು ಅಲ್ಲಿ ಹೋಗಿ ಕುಳಿತುಕೊಂಡು ಮಾತನಾಡುತ್ತಿದ್ದೆ. ನನ್ನದೇನೂ ತಕರಾರು ಇಲ್ಲ. ದಯವಿಟ್ಟು, ನನಗೆ ಅನಿಸಿದ್ದನ್ನು ನಾನು ಹೇಳುತ್ತಿದ್ದೇನೆ. ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ ಒಂದೇ ನಿಮಿಷ. ನಾನು ಮಾತನಾಡಿದ ಮೇಲೆ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರಿಗೆ ಸೀಟ್ ಆಲಾಟ್ ಮಾಡಿರುವ ಎಲ್ಲಿ ಎಂಬುದರ ಬಗ್ಗೆ ಸ್ಪಷ್ಟವಾಗಿ ಹೇಳಿಬಿಡಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಅಲ್ಲಿಯೇ ಸೀಟ್‌ನ್ನು ಹಂಚಿಕೆ ಮಾಡಿದ್ದರೆ, ಅವರು ಅಲ್ಲಿಯೇ ಮಾತನಾಡಲಿ. ಆದರೆ ನಮಗೇನೂ ತೊಂದರೆಯಿಲ್ಲ. ವಿರೋಧ ಪಕ್ಷದ ಸಾಲಿನಲ್ಲಿ ಸೀಟ್ ಅಲಾಟ್ ಆಗಿರುವಾಗ ಮಾನ್ಯ ಸದಸ್ಯರು ಆಡಳಿತ ಪಕ್ಷದ ಸಾಲಿನಲ್ಲಿರುವ ಆಸನದಿಂದ ಮಾತನಾಡುವುದಕ್ಕೆ ಅಧಿಕಾರ ಕೊಟ್ಟವರು ಯಾರು?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಸಭಾನಾಯಕರನ್ನು ಕೇಳುತ್ತಿಲ್ಲ. ತಮ್ಮನ್ನು ಕೇಳುತ್ತಿದ್ದೇನೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 4 ರಲ್ಲಿ ಈ ರೀತಿ ಹೇಳಲಾಗಿದೆ;

> **“4. ಸದಸ್ಯರು ಕುಳಿತುಕೊಳ್ಳಬೇಕಾದ ಕ್ರಮ:** ಸಭಾಪತಿಯವರು ಗೊತ್ತುಪಡಿಸಬಹುದಾದಂಥ ಕ್ರಮದಲ್ಲಿ ಸದಸ್ಯರುಗಳು ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳತಕ್ಕದ್ದು.”

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ ನಾನು ಅಲ್ಲೊಂದು ಇಲ್ಲೊಂದು ಮಾತನಾಡುವುದಿಲ್ಲ. ನಾನು ನೇರವಾಗಿ ಮಾತನಾಡುತ್ತೇವೆ. ನಾನು ಏನು ಮಾತನಾಡುತ್ತೇವೆ. ಅದನ್ನು ನಾನು ನೇರವಾಗಿ ಮಾಡುತ್ತೇನೆ. ಇಲ್ಲಿ ಯಾರಿಗೂ ಸಹ ಹೆದರುವ ಅಗತ್ಯವಿಲ್ಲ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ದಯವಿಟ್ಟು, ಮಾನ್ಯ ಪುಟ್ಟಣ್ಣನವರ ಸೀಟ್ ಆಲಾಟ್ ಆಗಿರುವುದರ ಬಗ್ಗೆ ಹೇಳಿ. ಇಲ್ಲಿರುವ ಸೀಟ್‌ನಲ್ಲಿ ಮಾನ್ಯ ಸದಸ್ಯರ ಹೆಸರು ಇದೆ. ದಯಮಾಡಿ ಹೆಸರನ್ನು ತೆಗೆದುಬಿಡಿ.

**(ಗೊಂದಲ)**

**ಸಭಾಪತಿಯವರು:–**ಮಾನ್ಯ ಸದಸ್ಯರಿಗೆ ಸೀಟ್ ನಂಬರ್ 41 ಹಂಚಿಕೆಯಾಗಿದೆ. ಆದರೆ ಈ ಹಿಂದೆ ಅವರಿಗೆ ನೀಡಲಾಗಿದ್ದ ಆಸನದಿಂದ ಅವರ ಹೆಸರನ್ನು ಮಾತ್ರ ತೆಗೆದಿಲ್ಲ ಅಷ್ಟೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರನ್ನು ನಮ್ಮ ಪಕ್ಷದಿಂದ expel ಮಾಡಿದ್ದಾರೆ. ಅವರು ಸ್ವತಂತ್ರರು. ಆದರೆ ಬಿ.ಜೆ.ಪಿ. ಪಕ್ಷದವರು ಇವತ್ತಿನವರೆಗೂ ಪ್ರಾಥಮಿಕ ಸದಸ್ಯರನ್ನು ತೆಗೆದುಕೊಂಡಿಲ್ಲ. ಆಗ ಅವರು 'Independent Member' ಅಗುತ್ತಾರೆ. ಅವರ ಕುರ್ಚಿ ಎಲ್ಲಿದೆ ಎಂಬುದರ ಬಗ್ಗೆ ನಮ್ಮ ಸದಸ್ಯರ್‍ಯಾರಿಗೂ ಗೊತ್ತಿಲ್ಲ.

**ಸಭಾಪತಿಯವರು:–** ಇದು ಹೇಗೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿರುವ ಇಂತಹ ಸದಸ್ಯರನ್ನು ಇಂತಹದ್ದಕ್ಕೆ allot ಮಾಡಿದ್ದೇವೆಂದು official ಆಗಿ ಕಳುಹಿಸಿಕೊಡಬೇಕು. ಇದನ್ನು ತಾವು ಕಳುಹಿಸಿಲ್ಲ. ಅವರ ಆಸನ ಎಲ್ಲಿ ಅಲಾಟ್ ಆಗಿದೆ ಎಂಬುದನ್ನು ಕಳುಹಿಸಿಕೊಡಿ.

**ಸಭಾಪತಿಯವರು:–** ಈಗಾಗಲೇ ನಾನು announce ಮಾಡಿದ್ದೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಇಲ್ಲೇಕೆ ಕುಳಿತ್ತಿದ್ದೀಯ, ನಿನ್ನನ್ನು expel ಮಾಡಾಯಿತಲ್ಲ ಎಂದು ಹೇಳಿದವರು ಇವರೇ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಮಗೆ ಏನೂ ಬೇಜಾರಿಲ್ಲ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ ತಾವು ಮಾತನಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಈ ಭಾವಚಿತ್ರಗಳಲ್ಲಿ ಏನಿದೆ ಎಂಬುದರ ಬಗ್ಗೆ ನಾನು ತಮಗೆ ಅಧಿಕೃತವಾಗಿ ಕೊಡುತ್ತಿದ್ದೇನೆ. ಇದರ ಮೇಲೆ ತನಿಖೆಯಾಗಲಿ. ನಾನು ಒತ್ತಾಯಿಸುವುದೇನೆಂದರೆ, ನಾನು ನೀಡಿರುವ ದಾಖಲೆಯಲ್ಲಿ ಏನಾದರೂ ಸುಳ್ಳು ಇದ್ದರೆ, ತಾವು ನನ್ನ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಆದರೆ ಮಾನ್ಯ ಸದಸ್ಯರು ನೀಡಿರುವ ದಾಖಲೆ ಏನಾದರೂ ಸರಿಯಿದ್ದರೆ, ಅವರು ನೀಡಿರುವ ದಾಖಲೆಯನ್ನು ನಾನು ಒಪ್ಪುತ್ತೇನೆ. ಅದರೆ ದಾಖಲೆಗಳು ನೀಡಿರುವುದು ಸುಳ್ಳು ಇದ್ದರೆ, ಯಾರ ಮೇಲಾದರೂ ಕ್ರಮ ತೆಗೆದುಕೊಳ್ಳಿ ಎಂದು ನಾನು ತಮಗೆ ಈ ಛಾಯಚಿತ್ರವನ್ನು ಕೊಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ಒಂದು ಛಾಯಾಚಿತ್ರದ ಪ್ರತಿಯನ್ನು ಮಾನ್ಯ ಸಭಾಪತಿಯವರಿಗೆ ಕಳುಹಿಸಿಕೊಟ್ಟರು)**

**ಸಭಾಪತಿಯವರು:–** ತಮ್ಮ ಮಾತನ್ನು ಬೇಗ ಮುಗಿಸಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಈ ವಿಷಯವನ್ನು conclude ಮಾಡುತ್ತೇನೆ. ಕವಿಗಳು ಮತ್ತು ಕಲಾವಿದರು ಈ ಸಿರಾಜ್ ಬಿಸರಳ್ಳಿಯವರು. ಇವರು ಒಬ್ಬ ಕವಿ. ಇವರು ಯಾವುದೋ ಒಂದು ಸಭೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಇವರ ಮೇಲೆ ಕೇಸ್‌ನ್ನು ದಾಖಲು ಮಾಡಿದ್ದಾರೆ. ಕವಿಗೋಷ್ಠಿಯಲ್ಲಿ ಇರುವುದರ ಬಗ್ಗೆ ಹೇಳಿದ್ದಾರೆ. ಆದರೆ ಇದೇ ತರಹ ಮಾಸ್ಟರ್ ಹಿರಣ್ಣಯ್ಯನವರ ಮೇಲೆ ಆ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಮಾಸ್ಟರ್ ಹಿರಣ್ಣಯ್ಯನವರು ಇದೇ ತರಹ ಎಷ್ಟು ನಾಟಕ ಮಾಡಿದ್ದಾರೆ. ಸರ್ಕಾರವನ್ನು ಎಷ್ಟು ಸಲ ಅವಹೇಳನ ಮಾಡಿದ್ದಾರೆ.

(ಮುಂದು...)

(60) 19.02.2020 1.40 ಟಿಸಿಹೆಚ್–ಎಂಡಿ
**ಶ್ರೀ ಪ್ರಕಾಶ್ ಕೆ. ರಾಥೋಡ್(ಮುಂದು)**

ಮಾನ್ಯ ಸಭಾಪತಿಯವರೇ, ಹಲವಾರು ಕವಿಗಳು ಸರ್ಕಾರದ ವಿರುದ್ಧ ಯಾವುದೋ ಒಂದು ಪ್ರಕರಣದಲ್ಲಿ ಹೇಳುತ್ತಾರೆ. ಹಾಗಾದರೆ, ಅವರ ವಿರುದ್ಧ ನೀವು ಕ್ರಮ ತೆಗೆದುಕೊಳ್ಳುತ್ತೀರಾ? ಮಾನ್ಯ ಸಭಾಪತಿಯವರೇ, ನಾವು ಯಾವ ಸ್ಥಿತಿಗೆ ಬಂದು ನಿಂತಿದ್ದೇವೆ ನೋಡಿ. ಇನ್ನೊಂದು ವಿಚಾರದ ಬಗ್ಗೆ ಹೇಳುವುದಾದರೆ, ಗೋಲಿಬಾರ್ ಪ್ರಕರಣವನ್ನು ಯಾವುದೋ ಒಂದು ಪರಿಸ್ಥಿತಿಯಲ್ಲಿ ಮಾಡಬೇಕು.

**ಸಭಾಪತಿಯವರು:–** ಶ್ರೀ ಪಿ.ಆರ್.ರಮೇಶ್‌ರವರೇ ತಾವು ಮಾತನಾಡಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಶ್ರೀ ಪ್ರಕಾಶ್ ಕೆ. ರಾಥೋಡ್‌ರವರೇ, ಶ್ರೀ ಪಿ.ಆರ್.ರಮೇಶ್‌ರವರು ಕೂಡ ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತಾರೆ, ತಾವು ಕುಳಿತುಕೊಳ್ಳಿ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಿಯಮ 68 ರಡಿಯಲ್ಲಿ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗ . . .

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಸರ್ಕಾರ ಗೋಲಿಬಾರ್ ಮಾಡಬೇಕಾದರೆ ಈ ಕೆಳಕಂಡ ಪ್ರಕ್ರಿಯೆಯನ್ನು ಪಾಲಿಸಬೇಕು:

"The police must invariably secure the presence of a magistrate where it anticipates a breach of peace."

(ಗೊಂದಲ)

**ಸಭಾಪತಿಯವರು:–** ಈಗ ಸದನವನ್ನು ಮಧ್ಯಾಹ್ನ 2.30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(061)/19–2–2020/3–00/ಎಲ್‌ಎಂ/ಆರ್‌ಎನ್

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1.41 ಗಂಟೆಯಿಂದ 2.30 ಗಂಟೆಯವರೆಗೆ ಮುಂದೂಡಲಾಗಿದ್ದ ಸದನವು ಪುನಃ ಮಧ್ಯಾಹ್ನ 3 ಗಂಟೆ 03 ನಿಮಿಷಕ್ಕೆ ಸಮಾವೇಶಗೊಂಡಿತು, ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**9. <u>ಸದನದಲ್ಲಿ ಹಾಜರಿರಬೇಕಾದ ಅಧಿಕಾರಿಗಳ ಪಟ್ಟಿಯಂತೆ ಅಧಿಕಾರಿಗಳು ಹಾಜರಿಲ್ಲದಿರುವ ಬಗ್ಗೆ.</u>**

– – – – –

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೆ, ಇದುವರೆಗೆ ಆಡಳಿತ ಪಕ್ಷದ ಮಂತ್ರಿಗಳು, ಸದಸ್ಯರು, ಮುಖ್ಯ ಸಚೇತಕರು ಸದನಕ್ಕೆ ಬಂದಿರುವುದಿಲ್ಲ. ವಿರೋಧ ಪಕ್ಷದವರು ಬರುವುದಕ್ಕಿಂತ ಮುಂಚೆಯೇ ಆಡಳಿತ ಪಕ್ಷದವರು ಸದನಕ್ಕೆ ಬರಬೇಕು. ಆಡಳಿತ ಪಕ್ಷದ ಮುಖ್ಯ ಸಚೇತಕರೆ ಬಂದಿಲ್ಲ, ಸಭಾನಾಯಕರೆ ಎಲ್ಲವನ್ನು ನಿಭಾಯಿಸಿಕೊಂಡು ಹೋಗುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್**(ವಿರೋಧ ಪಕ್ಷದ ನಾಯಕರು):–ಮಾನ್ಯ ಸಭಾಪತಿಗಳೆ, tell them to read the names of Ministers and Officers.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**(ಸಭಾನಾಯಕರು):– ಮಾನ್ಯ ಸಭಾಪತಿಗಳೆ, ಬೆಳಗ್ಗೆ ಇಂದು ಸದನದಲ್ಲಿ ಹಾಜರಿರಬೇಕಾದ ಅಧಿಕಾರಿಗಳ ಪಟ್ಟಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು, ಆ ಪಟ್ಟಿ ಈ ರೀತಿಯಾಗಿದೆ;

ಶ್ರೀ ಮನೋಜ ಮೀನಾ, ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ. ಇವರು ಬಂದಿದ್ದಾರೆ. ಶ್ರೀ ಗೌರವ ಗುಪ್ತಾ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ. ಇವರು ಬಂದಿದ್ದಾರೆ. ಶ್ರೀ ಅಮೃತ ಪಾಲ– ಎಡಿಜಿಪಿ, ಇವರು ಬಂದಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್**:– ಅಧಿಕಾರಿಗಳ ಪಟ್ಟಿಯನ್ನು ಕೊಡಲಾಗಿದೆ. ಆದರೆ ಇಂದು ಸದನದಲ್ಲಿ ಹಾಜರಾಗಿರಬೇಕಾದ ಮಂತ್ರಿಗಳ ಹೆಸರನ್ನು ಹೇಳಿ. ನೀವು bureaucrats ಕಡೆಗೆ ಒಂದು ಬೊಟ್ಟು ಮಾಡಿದರೆ ನಿಮ್ಮ ಕಡೆಗೆ ಮೂರು ಬೊಟ್ಟುಗಳು ತೋರಿಸುತ್ತವೆ. ಮಂತ್ರಿಗಳು prompt ಆಗಿ ಇರಲಿ ಎಂದು ಕೇಳುತ್ತಿದ್ದೇವೆ. ಬಡೆದಾಡಿ, ಹೊಡೆದಾಡಿ, ಸ್ಟ್ರೈಕ್ ಮಾಡಿ, ಹತ್ತಾರು ಬಸ್‌ಗಳನ್ನು ಸುಟ್ಟು ಮಂತ್ರಿಗಳಾಗಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:– 5 ನಿಮಿಷದಲ್ಲಿ ಬರುತ್ತಾರೆ. ಮಂತ್ರಿಗಳು ಯಾರ‍್ಯಾರು ಎನ್ನುವುದನ್ನು ಪಟ್ಟಿ ತರಿಸಿ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್**:– ನಿಮ್ಮ ಮುಖ್ಯ ಸಚೇತಕರು ಎಲ್ಲಿ ಇದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:– ತಾವು ದೊಡ್ಡವರು ಇಂತಹ ಸಣ್ಣ ವಿಚಾರಗಳನ್ನು ಬಿಟ್ಟುಬಿಡಿ.

**ಸಭಾಪತಿಯವರು**:– ಕೋರಂ ಇದೆ. ಈಗ ಮಾನ್ಯ ಪಿ.ಆರ್.ರಮೇಶ್‌ರವರು ತಮ್ಮ ಮಾತುಗಳನ್ನು ಮುಂದುವರೆಸಬೇಕು.

**ಶ್ರೀ ಐವನ್ ಡಿ'ಸೋಜಾ**:– ಮಾನ್ಯ ಸಭಾಪತಿಗಳೆ, ತಾವು ಪೀಠದಲ್ಲಿ ಬಂದು ಕುಳಿತ ಮೇಲೆ ಕೋರಂ ಆಗಿದೆ.

**ಶ್ರೀ ಎಸ್.ಆರ್.ಪಾಟೀಲ್**:– ಮಾನ್ಯ ಸಭಾಪತಿಗಳೆ, what right they have to ask bureaucrats?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾವು ವಿರೋಧ ಪಕ್ಷದಲ್ಲಿದಾಗ ಈ ವಿಚಾರವಾಗಿ ಆಕ್ಷೇಪ ಮಾಡಿದ್ದೆವು. ನಂತರ ಸಹಮತಕ್ಕೆ ಬಂದಿದ್ದೇವೆ. ತಾವು ಈಗ ಸಹಮತ ಬನ್ನಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೆ, ತಾವು ಪೀಠದಲ್ಲಿ ಬಂದು ಕುಳಿತು ಮೇಲೆ ಕೋರಂ ಆಗಿರುವುದು. ಕನಿಷ್ಠ ಮೂರು ಜನ ಮಂತ್ರಿಗಳು ಇರಬೇಕು. ಮೂರು ಜನ ಮಂತ್ರಿಗಳು ಇಲ್ಲ. ನಾನು ಮುಖ್ಯ ಸಚೇತಕನಾಗಿ ಕೆಲಸ ಮಾಡಿದ್ದೇನೆ. ಭೋಜನ ವಿರಾಮದ ನಂತರ 2–30ಕ್ಕೆ ತಾವು ಸದನವನ್ನು ಕರೆದಿದ್ದೀರಿ. ಆದರೆ 3–00 ಗಂಟೆಯಾದರೂ ಆಡಳಿತ ಪಕ್ಷದವರು ಸದನಕ್ಕೆ ಬರುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲ ಎಂದಾಗ ಏನು ಮಾತನಾಡಬೇಕು? ಸರ್ಕಾರ ಈ ರೀತಿ ಬೇಜವಾಬ್ದಾರಿಯಿಂದ ವರ್ತಿಸಿದರೆ ಹೇಗೆ.

**ಸಭಾಪತಿಯವರು:–** 10 ನಿಮಿಷ ಸದನವನ್ನು ಮುಂದೂಡಬೇಕೇನು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಐದು ನಿಮಿಷದಲ್ಲಿ ಮಂತ್ರಿಗಳು ಬರುತ್ತಾರೆ. ಮಾನ್ಯ ಐವನ್ ಡಿ'ಸೋಜಾರವರಿಗೆ ಹೇಳಿ.

ಶ್ರೀ **ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಚಿಂತಕರ ಚಾವಡಿ ಎನ್ನುವಂತಹ, ಶತಮಾನದ ಇತಿಹಾಸ ಇರುವಂತಹ, ಘನತೆ–ಗೌರವವನ್ನು ಹೊಂದಿರುವುದು ಮೇಲ್ಮನೆ ಎಂದು ಭಾಷಣದಲ್ಲಿ ಹೇಳುತ್ತೇವೆ. ಇಲ್ಲಿ ಸಮಯಕ್ಕೆ ಸರಿಯಾಗಿ ಮಂತ್ರಿಗಳು ಸದನಕ್ಕೆ ಬರುವುದಿಲ್ಲ ಎಂದು ಹೇಳಿದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರು ಸಹಮತ ಕೊಡಬೇಕು. ಐದು ನಿಮಿಷದಲ್ಲಿ ಮಂತ್ರಿಗಳು ಬರುತ್ತಾರೆ. ಮಾನ್ಯ ಐವನ್ ಡಿ'ಸೋಜಾರವರಿಗೆ ನಾನು ಹೇಳುತ್ತೇನೆ. ಅವರು ಯಾವಾಗಲೂ ಗಲಾಟೆ ಮಾಡುವವರೆ.

**ಶ್ರೀ ಐವನ್ ಡಿ'ಸೋಜಾ:–** ಮುಖ್ಯ ಸಚೇತಕರೆ ಬಂದಿರುವುದಿಲ್ಲ. ಮಂತ್ರಿಗಳು ಇಲ್ಲ ಕೋರಂ ಇಲ್ಲದಿದ್ದರೆ ಗಂಟೆಯನ್ನು ಏಕೆ ನಿಲ್ಲಿಸಬೇಕು?

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಪಿ.ಆರ್.ರಮೇಶ್‌ರವರೆ ನಿಮ್ಮ ಭಾಷಣವನ್ನು ಪ್ರಾರಂಭ ಮಾಡಿ.

**10. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ**

**ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

– – – – – –

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಗಳೆ, ಭೋಜನ ವಿರಾಮದ ನಂತರ ನಿಯಮ 68ರ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇವತ್ತು ಈ ಸಭೆಯಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ಗಂಭೀರವಾದ ಚರ್ಚೆಯಾಗುತ್ತಿದೆ. ಇವತ್ತು ಕಾನೂನು–ಸುವ್ಯವಸ್ಥೆ ಹದಗೆಡುತ್ತಿರುವುದು ಮಂಗಳೂರು, ಬೀದರ್ ಮತ್ತು ಹುಬ್ಬಳ್ಳಿಯಲ್ಲಿ. ಇಲ್ಲಿಯೇ ಈ ರೀತಿಯಾಗುತ್ತಿರುವುದು ಪರಿಪಾಠವಾಗಿದೆ. ಈ ರೀತಿ ಏಕೆ ಆಗುತ್ತಿದೆ ಎನ್ನುವುದನ್ನು ನಾವು ಯಾರು ಚರ್ಚೆ ಮಾಡುತ್ತಿಲ್ಲ. ಹಿಂದೆ ಬೇರೆ ಪಕ್ಷದ ಸರ್ಕಾರ ಇದ್ದಾಗ, ಬಜೆಪಿ ಸಂಘಟನಾಕಾರರು ಸರ್ಕಾರದ ವಿರುದ್ಧ ಹಲವಾರು ಪ್ರಕರಣಗಳನ್ನು ತೆಗೆದು ಅಲ್ಲಿ ಪ್ರೇರೆಪಿಸುವ ರೀತಿಯಲ್ಲಿ, ಉದ್ರೇಕಗೊಳ್ಳುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿರುವುದನ್ನು ಕಂಡಿದ್ದೇವೆ. ಅವತ್ತು ಕೆಲವು ನಾಯಕರು ಮಾಧ್ಯಮದ ಮುಂದೆ ಉತ್ತಮವಾದ ಪ್ರದರ್ಶನ ಮಾಡಿ ಅನೇಕ ಹೇಳಿಕೆಗಳನ್ನು ಕೊಟ್ಟಿರುವುದನ್ನು ನೋಡಿದ್ದೇವೆ. ಇದರಿಂದ ಕೆಲವು ಜನರಿಗೆ ತಪ್ಪು ಸಂದೇಶ ಹೋಗುತ್ತದೆ ಮತ್ತು ಇನ್ನು ಕೆಲವು ಜನರಿಗೆ ಇದು ಆನಂದ ಕೊಡುತ್ತದೆ. ಆದರೆ ಸರ್ಕಾರದ ಅಧಿಕಾರಿಗಳಿಗೆ ಇದರಿಂದ ಜಿಗುಪ್ಸೆ ಉಂಟಾಗುತ್ತದೆ ಮತ್ತು ಇದನ್ನು ನಿಭಾಯಿಸುವುದು ಬಹಳ ಕಷ್ಟಕರವಾದ ಕೆಲಸವಾಗುತ್ತದೆ. ರಾಜಕೀಯವಾಗಿ ಇದನ್ನೆ ಬಂಡವಾಳವಾಗಿ ಮಾಡಿಕೊಳ್ಳುವಂತಹ ಕೆಲಸ ಹಿಂದೆ ಆಗುತ್ತಿತ್ತು. ಹಿಂದೆ ಈ ರೀತಿ ಕೆಲಸವನ್ನು ಕೆಲವು ಸಂಘ ಪರಿವಾರದವರು ಮಾಡುತ್ತಿದರು. ಈಗ ಆ ಕೆಲಸವನ್ನು ಸರ್ಕಾರದಿಂದ ಮಾಡಿಸುತ್ತಿದ್ದಾರೆ. ಈಗ ಕೆಲವು ಸಿ.ಡಿ ಗಳು ಬಂದಿವೆ, ಮತ್ತು ಕೆಲವು ವಿಷಯಗಳು ಪೇಪರ್‌ನಲ್ಲಿ ಬಂದಿವೆ. ಏಕೆ ಇವರು ಸತ್ತಿಲ್ಲ ಎಂದು ಕೇಳುವಂತಹ ಪ್ರಕರಣಗಳು ನಡೆದಿವೆ. ಗೋಲಿಬಾರ್ ಆಗಿದೆ. ಗೋಲಿಬಾರ್‌ನಿಂದ ಏನು ಆಗಿದೆ, ಏನು ಆಗಬೇಕಾಗಿತ್ತು ಎನ್ನುವ ಸ್ಪಷ್ಟವಾದ ಮಾಹಿತಿಯನ್ನು ಸರ್ಕಾರ ಕೊಡುತ್ತಿಲ್ಲ. ಬೀದರ್‌ನಲ್ಲಿ ನಡೆದಿರುವುದಕ್ಕೆ Sedition case ಹಾಕುತ್ತಾರೆ, ಹುಬ್ಬಳ್ಳಿಯ ಕೆ.ಎಲ್.ಇ ಕಾಲೇಜಿನ ಮೂವರು ವಿದ್ಯಾರ್ಥಿಗಳ ಪ್ರಕರಣದಲ್ಲಿ ಒಂದು ರೀತಿ ಕ್ರಮ ತೆಗೆದುಕೊಂಡಿದ್ದಾರೆ. ಇಲ್ಲಿ ಬಹಳ ಮುಖ್ಯವಾದುದು ಏನೆಂದರೆ, ಐಪಿಸಿ ಸೆಕ್ಷನ್. 124ಎ ಇದನ್ನು impose ಮಾಡುತ್ತೇವೆ, ಇದಕ್ಕೆ ಯಾವುದೇ ರೀತಿ ಲಂಗು ಲಗಾಮು ಇಲ್ಲದಂತೆ ಆಗುತ್ತಿದೆ. ಇದರ ಬಗ್ಗೆ ಸರ್ವೋಚ್ಚ ನ್ಯಾಯಾಲಯ ತೀರ್ಪು ಕೊಟ್ಟಿದೆ, ಆದರೂ ಕೂಡಾ ದೇಶದಲ್ಲಿ ಹಲವಾರು ಕಡೆಗಳಲ್ಲಿ ರಾಜಕೀಯವಾಗಿ ಇದನ್ನು ಬಂಡವಾಳ ಮಾಡಿಕೊಳ್ಳಲು ಉಪಯೋಗಿಸಿಕೊಳ್ಳುತ್ತಿದ್ದಾರೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

062/19-02-2020/03-10/ಬಿಎಸ್‌ಡಿ–ಆರ್‌ಎನ್

**ಶ್ರೀ ಪಿ.ಆರ್. ರಮೇಶ್ (ಮುಂದು)**

ಹುಬ್ಬಳ್ಳಿ–ಧಾರವಾಡ ಕೆ.ಎಲ್.ಇ ಕಾಲೇಜಿನಲ್ಲಿ ದೇಶದ್ರೋಹ ಮಾಡಿರುವ ಮೂರು ಜನ ವಿದ್ಯಾರ್ಥಿಗಳ ವಿರುದ್ಧ Sedition case ಹಾಕಿಲ್ಲ. ಅದನ್ನು ಏಕೆ ಮಾಡಿಲ್ಲ ಎಂದು ನಾನು ಹೇಳುತ್ತೇನೆ. ಆ ಕಾಲೇಜಿನ ಪ್ರಾಶುಂಪಾಲರು ನಿನ್ನೆ ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹೇಳಿಕೆ ಏನೆಂದರೆ, " ಈ ಕೃತ್ಯ ಎಸಗಿರುವ ಮೂವರು ಜಮ್ಮು–ಕಾಶ್ಮೀರದ ವಿದ್ಯಾರ್ಥಿಗಳಾಗಿದ್ದು, ಇವರು ಪ್ರಧಾನ ಮಂತ್ರಿಗಳ ವಿಶೇಷ ಸ್ಕಾಲರ್‌ಷಿಫ್ ಕೋಟಾದಡಿ ಪ್ರವೇಶ ಪಡೆದಿದ್ದಾರೆ. ವಿದ್ಯಾರ್ಥಿಗಳ ಆಯ್ಕೆ ನಮ್ಮ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ. ಈ ರೀತಿ ಕೋಟಾಗಳು ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಿಗೂ ಅನ್ವಯಿಸುತ್ತದೆ. ಶಿಕ್ಷಣ ಶುಲ್ಕ ಮತ್ತು ಸ್ಕಾಲರ್‌ಷಿಫ್ ಅನ್ನು ಕೇಂದ್ರ ಸರ್ಕಾರವೇ ಭರಿಸುತ್ತದೆ". ಈ ಹೇಳಿಕೆಯಂತೆ ಪ್ರಧಾನ ಮಂತ್ರಿಗಳ ಕಛೇರಿಯಿಂದ ಈ ಮೂರು ಜನ ಅಡ್ಮಿಷನ್ ತೆಗೆದುಕೊಂಡಿದ್ದಾರೆ. ಇವರ ವಿರುದ್ಧ Sedition case ಹಾಕಿದರೆ ನಾಳೆ ಪ್ರಧಾನ ಮಂತ್ರಿಗಳ ಕಚೇರಿಯೂ ವಿಚಾರಣೆಗೆ ಬರುತ್ತದೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಪ್ರಜಾಪ್ರಭುತ್ವದಲ್ಲಿ ಯಾರಿಗಾದರೂ ಅವಕಾಶ ಕೊಡುತ್ತಾರೆ. ಅವರು ಮಾತನಾಡುತ್ತಿರುವುದಕ್ಕೆ ಅರ್ಥ ಇದೆಯೇ?

**ಶ್ರೀ ಪಿ.ಆರ್.ರಮೇಶ್:–** 2014–15 ರಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರ ಇದ್ದಾಗ ಶಿವಮೊಗ್ಗ ಮತ್ತು ಮಂಗಳೂರಿನಲ್ಲಿ ಏನಾಯಿತು? ಆಗ ಅದನ್ನು ಯಾವ ರೀತಿ ತೆಗೆದುಕೊಂಡರು? ಯಾವ ರೀತಿ ಬೆಂಕಿಗೆ ಸೀಮೆಣ್ಣೆಯನ್ನು ಸುರಿದರು? ಇವೆಲ್ಲವೂ ಜನರಿಗೆ ಗೊತ್ತಿದೆ. ಈಗ ಇದನ್ನು ಬಂಡವಾಳ ಮಾಡಿಕೊಳ್ಳುತ್ತಿದ್ದಾರೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಪ್ರಧಾನ ಮಂತ್ರಿಯವರ ಕಛೇರಿಯ ಮೇಲಿನ ಕಪ್ಪುಚುಕ್ಕೆ ಹೋಗಬೇಕು. ನಮ್ಮಂತಹವರಿಂದಲೇ ಎಲ್ಲಾ ಸಹಕಾರಗಳನ್ನು ತೆಗೆದುಕೊಂಡು ಕೊಡುವಾಗ ಆ ವಿದ್ಯಾರ್ಥಿಗಳನ್ನು ಎದೆ ಬಗೆದು ನೋಡಿ ಕೊಡಲು ಸಾಧ್ಯವೇ? ಅವರು ಟೆರರಿಸ್ಟೋ ಅಥವಾ ಇನ್ನೇನೋ ಎಂದು ಗೊತ್ತಿರುತ್ತದೆಯೇ? ಹಿಂದಿನ ನಡವಳಿಕೆಗಳ ಮೇಲೆ ಕೊಟ್ಟಿರುತ್ತಾರೆ. ಅದನ್ನು ಪ್ರಧಾನ ಮಂತ್ರಿಯವರ ಮೇಲೆ ತರಲು ಆಗುತ್ತದೆಯೇ?

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದ ನಂತರ ಅರೆಸ್ಟ್ ಮಾಡಿ ಮತ್ತೆ ಏಕೆ ಬಿಟ್ಟರು?

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಕಾನೂನಿನ ವ್ಯವಸ್ಥೆಗಳಡಿಯಲ್ಲಿ ಎಲ್ಲವೂ ನಡೆಯಬೇಕಾಗುತ್ತದೆ. ಇದು ಸತ್ಯವಲ್ಲವೇ? ಯಾರೋ ಹೊಸದಾಗಿ ಕಾನೂನು ಮಾಡಲು ಸಾಧ್ಯವಿಲ್ಲ. ಕಾನೂನಿನ ಅಡಿಯಲ್ಲಿ ಅವಕಾಶಗಳಿದ್ದಾಗ ಆ ರೀತಿ ಆಗಿರಬಹುದು.

**ಶ್ರೀ ಎಂ. ನಾರಾಯಣಸ್ವಾಮಿ:–** ಹಾಗಾದರೆ ಮತ್ತೆ ಏಕೆ ಅರೆಸ್ಟ್ ಮಾಡಿದರು?

**ಶ್ರೀ ಹೆಚ್.ಎಂ. ರಮೇಶ್‌ಗೌಡ:–** ದೇಶದ್ರೋಹದ ಕೇಸ್‌ನಲ್ಲಿ ಬಂಧಿಸಿದ ನಂತರ ಮತ್ತೆ ಸ್ಟೇಷನ್‌ನಿಂದ ಬಿಡುವುದು ಉಂಟೇ? ಎಲ್ಲರೂ ಗಲಾಟೆ ಮಾಡಿದ ನಂತರ ಜೈಲಿಗೆ ಕಳುಹಿಸುತ್ತಾರೆ. ಇದು ಇವರ ಆಡಳಿತ. ಇಂತಹ ಕೆಲಸ ಮಾಡಿರುವುದಕ್ಕೆ ಸರ್ಕಾರಕ್ಕೆ ನಾಚಿಕೆಯಾಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾಚಿಕೆ ಅವರಿಗೆ ಆಗಬೇಕು. ಕಾಶ್ಮೀರದಲ್ಲಿ ಸೈನಿಕರಿಗೆ ಕಲ್ಲು ಹೊಡೆದವರಿಗೆ, ಬೆಂಕಿ ಹಾಕಿದವರಿಗೆ ಮುಗ್ಧರು ಎಂದು ಕರೆದ ಅವರಿಗೆ ನಾಚಿಕೆಯಾಗಬೇಕು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಧಾನ ಮಂತ್ರಿಯವರ ಕೋಟಾದಡಿ ಮೂರು ಮಂದಿ ಹುಬ್ಬಳ್ಳಿಯ ಕೆಎಲ್‌ಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದಾರೆ ಎಂದು ಇರುವ ಸತ್ಯವನ್ನು ಹೇಳಿದ್ದಾರೆ. ಒಂದು ಕವಿತೆ ಓದಿದರೆ ಅವರನ್ನು Sedition ಕೇಸ್ ಹಾಕಿ, ರಾಷ್ಟ್ರದ್ರೋಹಿ ಎಂದು ಕರೆಸಿದರು. ಪಾಕಿಸ್ತಾನ್ ಜಿಂದಾಬಾದ್ ಎಂದು ಕರೆದವರಿಗೆ Section 124A of IPC., ಅಡಿಯಲ್ಲಿ Sedition ಕೇಸ್ ಹಾಕಿದರೋ, ಇನ್ಯಾವ ಸೆಕ್ಷನ್ ಹಾಕಿದರು? ಮೊದಲನೆಯ ದಿವಸ ಅರೆಸ್ಟ್ ಮಾಡಿ ಬಿಟ್ಟುಬಿಟ್ಟರು. ಕೋರ್ಟಿಗೆ ಪ್ರೊಡ್ಯೂಸ್ ಮಾಡಬಾರದೇ? ಅವರನ್ನು non-cognizable offence ಮೇಲೆ ಅರೆಸ್ಟ್ ಮಾಡಿದ್ದಾರೆ. ನಂತರ ಹಾಗೆ ಬಿಟ್ಟಿದ್ದಾರೆ. ನಂತರ ಇಡೀ ಹುಬ್ಬಳ್ಳಿಯ ದೇಶಪ್ರೇಮಿಗಳು ದಂಗೆ ಎದ್ದು, ಛೀ, ಥೂ ಎಂದ ಮೇಲೆ ಎರಡನೆಯ ಸಲ ಅರೆಸ್ಟ್ ಮಾಡಿ ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಿದ್ದಾರೆ. ನಾಚಿಕೆಯಾಗಬೇಕು ಎಂದು ಹೇಳಿರುವುದು ಸರಿ. It is right. It is a shameful act on the part of the government. ಪೊಲೀಸರು ಇವರ ಕೈಗೊಂಬೆಯಾಗಿದ್ದಾರೆ. ಇವರು ಹೇಳಿದಂತೆ ಕೇಳುತ್ತಾರೆ. They have demoralized the Police Department. ಇದೇನು ಪೊಲೀಸ್ ಆಡಳಿತವೇ? ಪಾಕಿಸ್ತಾನ್ ಜಿಂದಾಬಾದ್ ಎಂದು ಕರೆದವರು ಪ್ರಧಾನ ಮಂತ್ರಿಗಳ ಕೋಟಾದಲ್ಲಿ ಬಂದವರು. ನಾಚಿಕೆ ಆಗಬೇಕು. ಅವರು ದಪ್ಪ ಚರ್ಮದವರು. ಮಾನ್ಯ ಅಟಲ್ ಬಿಹಾರಿ ವಾಜಪೇಯಿರವರು ಶ್ರೀಮತಿ ಇಂದಿರಾಗಾಂಧಿಯವರನ್ನು ಸಾಕ್ಷಾತ್ ದುರ್ಗೆ ಎಂದು ಕರೆದರು.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾಚಿಕೆ ಅವರಿಗೆ ಆಗಬೇಕು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಅವರು ಹುಬ್ಬಳ್ಳಿ ಜನರಿಗೆ ಮುಖ ತೋರಿಸಲು ಆಗದು. ಮಾನ ಮರ್ಯಾದೆ ಹಾಳಾಗಿದೆ. ಪಾಕಿಸ್ತಾನ ಪರ ಘೋಷಣೆ ಕೂಗಿದವರಿಗೆ non-cognizable offence ಮೇಲೆ ಅರೆಸ್ಟ್ ಮಾಡಿ Sedition case ಹಾಕಿದ್ದಾರೆ. ಮಾನ–ಮರ್ಯಾದೆ ಕಳೆದುಕೊಂಡು ಜನರಿಗೆ ಮುಖ ತೋರಿಸುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರು ಮಾತನಾಡಿದ್ದೆಲ್ಲದ್ದಕ್ಕೂ ನೀವು ಡಿಫೆಂಡ್ ಮಾಡಬೇಕೆಂದೇನೂ ಇಲ್ಲ. ಉತ್ತರ ಕೊಡುವಾಗ ಉತ್ತರ ಹೇಳಿ. ನಿಮಗೆ ಖುಷಿಯಾದಾಗಲೆಲ್ಲಾ ಮಾತನಾಡುವುದಕ್ಕೆ ಆಗುವುದಿಲ್ಲ. ಅವರಿಗೆ ಉತ್ತರ ಕೊಡುವ ಶಕ್ತಿ ಇದ್ದು, ಉತ್ತರ ಕೊಡುವ ಸಂದರ್ಭದಲ್ಲಿ ಉತ್ತರ ಕೊಡಿ. ಅವರು ಹೀಗೆ ಮಾತನಾಡಬೇಕು ಎಂದು ನೀವು ಹೇಳುವ ಹಾಗಿಲ್ಲ. ಮಾನ್ಯ ಪ್ರಾಣೇಶ್ ರವರೇ, ತಾವು ಮಾತನಾಡುವುದು ಯಾವುದೂ ದಾಖಲೆಗೆ ಹೋಗುವುದಿಲ್ಲ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಬಿಜಾಪುರದ ಸಿಂಧಗಿ ಪ್ರದೇಶದಲ್ಲಿ ಭಜರಂಗಿ ದಳದವರೋ ಅಥವಾ ಬಿಜೆಪಿ ಕಡೆಯವರು ಒಂದು ಪಾಕಿಸ್ತಾನ್ ಬಾವುಟವನ್ನು ಹಾರಿಸುತ್ತಾರೆ. ಆಗ ಅಂದಿನ ಬಿಜೆಪಿ ಸರ್ಕಾರ ಅವರ ವಿರುದ್ಧ Sedition case ಹಾಕುವುದಿಲ್ಲ. ಅದನ್ನು ಇದರ ಕೆಳಗೆ ತರಬೇಕಾಗಿತ್ತು. ಒಬ್ಬ ಬಿಜೆಪಿ ಕಾರ್ಯಕರ್ತ ಪಾಕಿಸ್ತಾನ ಬಾವುಟವನ್ನು ಭಾರತ ದೇಶದ ಕರ್ನಾಟಕದಲ್ಲಿ ಹಾರಿಸುತ್ತಾನೆಂದರೆ ಅವನ ವಿರುದ್ಧ ಕ್ರಮ ಏಕೆ ತೆಗೆದುಕೊಂಡಿಲ್ಲ? ಈ ರೀತಿ ಅನೇಕ ಪ್ರಕರಣಗಳಿವೆ.

(ಮುಂದು)

(63)/19.02.2020/3.20/ಹೆಚ್‌ವಿ–ಎಕೆ
**ಶ್ರೀ ಪಿ.ಆರ್.ರಮೇಶ್(ಮುಂದುವರೆದದ್ದು)**

ಸನ್ಮಾನ್ಯ ಸಭಾಪತಿಯವರೇ, ಇದರ ಉದ್ದೇಶ ಜನರನ್ನು ಪ್ರೇರೇಪಿಸುವುದು ಮತ್ತು ಉದ್ರೇಕಿಸುವುದಾಗಿದೆ. ಇದನ್ನು ಬಂಡವಾಳ ಮಾಡಿಕೊಳ್ಳುವುದು ಪ್ರತಿನಿತ್ಯದ ರೂಢಿಯಾಗಿದೆ. ಇದರಿಂದಾಗಿ ನಮ್ಮ ಪೋಲೀಸ್ ಇಲಾಖೆಯವರಿಗೆ ಮತ್ತು ನಮ್ಮ ನಾಗರಿಕರಿಗೆ ಬಹಳ ಕಷ್ಟವಾಗುತ್ತಿದೆ. ಭಾರತೀಯ ಜನತಾ ಪಕ್ಷದ ಸರ್ಕಾರವೇ ಈ ರಾಜ್ಯದಲ್ಲಿ ಅಧಿಕಾರದಲ್ಲಿರುವುದರಿಂದ ಪೋಲೀಸ್‌ನವರಿಂದ ಇಂತಹ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಅವರ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇಲ್ಲದೇ ಇರುವಂತಹ ಸಂದರ್ಭದಲ್ಲಿ ಅವರ ಕಾರ್ಯಕರ್ತರಿಂದ ಇಂತಹ ಕೃತ್ಯಗಳನ್ನು ಮಾಡಿಸುತ್ತಾರೆ. ಇದಕ್ಕೆ ಹಾಲಿ ಲೋಕಸಭಾ ಸದಸ್ಯರಿಂದ ಉತ್ತಮವಾಗಿರುವ ಹೇಳಿಕೆಗಳನ್ನು ಕೊಡಿಸುತ್ತಾರೆ. ಇದೊಂದು ರೀತಿಯಲ್ಲಿ ರೂಢಿಯಾಗಿದೆ ಮತ್ತು ಕೆಟ್ಟ ಚಾಳಿಯಾಗಿದೆ. ಇದು ನಮ್ಮ ದೇಶಕ್ಕೆ ಮತ್ತು ರಾಜ್ಯಕ್ಕೆ ಕೆಟ್ಟ ಹೆಸರನ್ನು ಮತ್ತು ಕಳಂಕವನ್ನು ತರುತ್ತದೆ. ಇದನ್ನು ರಾಜಕೀಯವಾಗಿ ಬಂಡವಾಳ ಮಾಡಿಕೊಳ್ಳುತ್ತಿದ್ದಾರೆ. ಬೇರೆ ಯಾವುದೇ ಕಾರ್ಯಕ್ರಮಗಳು

“ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇಲ್ಲದಿರುವ ಸಮಯದಲ್ಲಿ ಇಂತಹ ಪ್ರಕರಣಗಳನ್ನು ಮಾಡಿ ಕೆಲವು ವರ್ಗದ ಜನರನ್ನು ಉದ್ರೇಕಿಸುವಂತಹ ಮತ್ತು ಪ್ರೇರೇಪಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ತಮ್ಮ ಮೂಲಕ ಆಡಳಿತ ಪಕ್ಷದವರನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಕೆ.ಎಲ್.ಇ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಧಾನಮಂತ್ರಿಗಳ ಕೋಟಾದಡಿ ಸೀಟು ಪಡೆದುಕೊಂಡು ಬಂದಿರುವ ಈ ಮೂರು ಜನರ ಮೇಲೆ section 124A of the Indian Penal Code, punishment for sedition ಪ್ರಕಾರ ಪ್ರಕರಣ ದಾಖಲು ಮಾಡಿ, ಕಠಿಣ ಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ಸರ್ಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳದೇ ಬಿಟ್ಟಿತ್ತು. ನಂತರ ಜನರ ಒತ್ತಾಯದ ಮೇರೆಗೆ ಅವರನ್ನು ಪುನಃ ಅರೆಸ್ಟ್ ಮಾಡಿದ್ದಾರೆ. ಪುನಃ ಗಲಭೆಗಳನ್ನು ಮಾಡಿ, ರಾಜಕೀಯ ಬಂಡವಾಳ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

## 11. ನಿಯಮ 330 'ಎ' ಅಡಿಯಲ್ಲಿ ಪ್ರಸ್ತಾಪಿಸಲಾಗಿದ್ದ ವಿಶೇಷ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ

-----

**ವಿಷಯ: ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಯನ್ನು 10 ಕ್ವಿಂಟಾಲ್‌ನಿಂದ 20 ಕ್ವಿಂಟಾಲ್‌ಗೆ ಹೆಚ್ಚಿಸಬೇಕೆನ್ನುವ ಬಗ್ಗೆ.**

- -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಸಹಕಾರ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ದಿನಾಂಕ:18-02-2010ರಂದು ಮಾನ್ಯ ಸದಸ್ಯರಾದ ಶ್ರೀ ವಿಜಯ್ ಸಿಂಗ್‌ರವರು ನಿಯಮ 330 'ಎ' ಅಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಸಹಕಾರ ಸಚಿವರ ಪರವಾಗಿ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

## 12. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ

**ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ**

- - - -

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆಯನ್ನು ತಂದಿದ್ದಾರೆ, ಅದನ್ನು ಬೆಂಬಲಿಸಿ ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಮಾಡಿಕೊಟ್ಟ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಅಸ್ತಿತ್ವದಲ್ಲಿದೆಯೇ ಎನ್ನುವುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಇವತ್ತು ಸರ್ಕಾರ ಪೊಲೀಸರ ಮುಖಾಂತರ ಕಾನೂನು ಸುವ್ಯವಸ್ಥೆಯನ್ನು ಹದಗೆಡಿಸುವ ರೀತಿಯಲ್ಲಿ ಆಡಳಿತವನ್ನು ನಡೆಸುತ್ತಿರುವುದು ನಮ್ಮೆಲ್ಲರ ದುರ್ದೈವವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿ ನಡೆದಂತಹ ಗಲಾಭೆಯ ವಿಚಾರದ ಬಗ್ಗೆ ಹೇಳಬೇಕಾದರೆ, ಕೇಂದ್ರ ಸರ್ಕಾರ ಸಿ.ಎ.ಎ. ಮತ್ತು ಎನ್.ಆರ್.ಸಿ. ಕಾಯಿದೆಗಳನ್ನು ತಂದಿರುವುದು ಸರಿಯಲ್ಲವೆಂದು ಅದನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು. ಡಾ॥ಬಿ.ಆರ್. ಅಂಬೇಡ್ಕರ್‌ರವರು ದಯಪಾಲಿಸಿರುವಂತಹ ಸಂವಿಧಾನದಲ್ಲಿ ಈ ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಗೂ ಪ್ರತಿಭಟಿಸುವ ಹಕ್ಕನ್ನು ನೀಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿ ಡಿಸೆಂಬರ್ 13ನೇ ತಾರೀಖಿನಂದು ಯುವ ಮುಸ್ಲಿಂ ಸಂಘಟನೆಯವರು ಡಿಸೆಂಬರ್ 19ನೇ ತಾರೀಖಿನಂದು 'ಸಿ.ಎ.ಎ., ಎನ್.ಆರ್.ಸಿ. ಮತ್ತು ಎನ್.ಪಿ.ಆರ್.ಗಳ ವಿರುದ್ಧ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲು ಅವಕಾಶವನ್ನು ನೀಡಬೇಕು' ಎಂದು ಪೊಲೀಸಿನವರಿಗೆ ಒಂದು ಪತ್ರವನ್ನು ನೀಡುತ್ತಾರೆ. ಅದರ ಆಧಾರದ ಮೇಲೆ ಡಿಸೆಂಬರ್ 19ರ ಬೆಳಿಗ್ಗೆ ಪ್ರತಿಭಟನೆ ನಡೆಸುವುದಕ್ಕೆ ಅಲ್ಲಿನ ಪೊಲೀಸ್ ಕಮೀಶನರ್‌ರವರು ಅನುಮತಿಯನ್ನು ನೀಡಿದ್ದರು. ನಂತರ ಡಿಸೆಂಬರ್ 18ನೇ ತಾರೀಖಿನ ರಾತ್ರಿ 8 ಗಂಟೆಗೆ ಏಕಾಏಕಿ ಅನುಮತಿಯನ್ನು ಹಿಂಪಡೆದುಕೊಂಡರು ಮತ್ತು ಸೆಕ್ಷನ್ 144ರನ್ನು ಜಾರಿಗೊಳಿಸಿ, 'ನಿಮಗೆ ನೀಡಿರುವ ಅನುಮತಿಯನ್ನು ಹಿಂಪಡೆದುಕೊಂಡಿದ್ದೇವೆ. ನಾಳೆ ನೀವು ಪ್ರತಿಭಟನೆ ಮಾಡಬಾರದು' ಎಂದು ಪೊಲೀಸ್‌ನವರು ಯುವ ಮುಸ್ಲಿಂ ಸಂಘಟನೆಗೆ ಹೇಳಿದರು. 'ಮೊದಲು ಪ್ರತಿಭಟನೆ ಮಾಡುವುದಕ್ಕೆ ಅನುಮತಿಯನ್ನು ನೀಡಿದ್ದೀರಿ, ಈಗ ಅನುಮತಿಯನ್ನು ಹಿಂತೆಗೆದುಕೊಂಡಿದ್ದೀರಿ, ನಾವು ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳುತ್ತಿದ್ದೇವೆ' ಎಂದು ಅವರು ಒಪ್ಪಿಕೊಳ್ಳುತ್ತಾರೆ. ಪೊಲೀಸ್‌ನವರು ಸೆಕ್ಷನ್ 144ನ್ನು ಜಾರಿಗೊಳಿಸಲಾಗಿದೆ ಎನ್ನುವ ಅಂಶವನ್ನು ಧ್ವನಿವರ್ಧಕದ ಮೂಲಕ ಜನರಿಗೆ ತಿಳಿಸಬೇಕಾಗಿತ್ತು. ಆದರೆ, ಆ ರೀತಿಯ ಯಾವುದೇ ಕ್ರಮವನ್ನು ಅವರು ತೆಗೆದುಕೊಂಡಿಲ್ಲ. ಈ ವಿದ್ಯಾರ್ಥಿ ಸಂಘಟನೆಯವರು ಸೋಶಿಯಲ್ ಮೀಡಿಯಾ ಮೂಲಕ 'ನಾಳೆ ಪ್ರತಿಭಟನೆ ಇಲ್ಲ' ಎನ್ನುವ ಮೆಸೇಜ್ ಕಳುಹಿಸಿಕೊಡುತ್ತಾರೆ. ಆದರೆ, ಎಷ್ಟು ಜನರಿಗೆ ಆ ಸಂದೇಶ ಮುಟ್ಟಿತ್ತೋ ಏನೋ ಗೊತ್ತಿಲ್ಲ. ಮೆಸೇಜ್ ತಲುಪದೇ ಇರುವಂತಹ ಸುಮಾರು 100–

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

150 ಜನ ಪ್ರತಿಭಟನಾಕಾರರು ವಿಷಯ ಗೊತ್ತಿಲ್ಲದೇ ಸ್ಥಳಕ್ಕೆ ಆಗಮಿಸುತ್ತಾರೆ. ಒಂದು ಕಡೆ ಪೊಲೀಸರು ನಾಳೆ ನಡೆಯಬೇಕಾಗಿರುವ ಪ್ರತಿಭಟನೆಗೆ ನೀಡಿದ ಅನುಮತಿಯನ್ನು ಹಿಂಪಡೆದುಕೊಂಡಿರುತ್ತಾರೆ. ಹೀಗಿರುವಾಗ ಆ ಸ್ಥಳಕ್ಕೆ ಸುಮಾರು 2500 ಜನ ಪೊಲೀಸರು ಅಲ್ಲಿ ಏನು ಮಾಡುತ್ತಿದ್ದರು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಯಾರು ಬರುತ್ತಾರೋ ಅವರನ್ನು ಸದೆಬಡಿಯಬೇಕು ಎನ್ನುವುದು ಈ ಸರ್ಕಾರದ ಉದ್ದೇಶವಾಗಿತ್ತು. ಯಾರು ಸಿ.ಎ.ಎ. ವಿರುದ್ಧವಾಗಿ ಧ್ವನಿ ಎತ್ತುತ್ತಾರೆ ಅವರು ದೇಶದ್ರೋಹಿಗಳೆಂದು ಅವರ ಮೇಲೆ ದೇಶದ್ರೋಹ ಪ್ರಕರಣವನ್ನು ದಾಖಲು ಮಾಡುವುದು ಇವರ ಗುರಿಯಾಗಿತ್ತು. ಅದಕ್ಕೋಸ್ಕರ ಇವರು 2500 ಜನ ಪೊಲೀಸರನ್ನು ನೇಮಿಸಿಕೊಂಡರು. ಪೊಲೀಸರ ಕೈಯಲ್ಲಿ **XXX** ಮತ್ತು **XXX** ಇದ್ದವು. ಈ ರೀತಿಯ ಘಟನೆ ಇತಿಹಾಸದಲ್ಲಿ ಯಾವುದೇ ದೇಶದಲ್ಲಿ ಅಥವಾ ರಾಜ್ಯದಲ್ಲಿ ಯಾವುದೇ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ನಡೆದಿರುವ ಉದಾಹರಣೆಗಳು ಇವೆಯೇ? ಕಾನೂನು ರಕ್ಷಣೆ ಮಾಡಬೇಕಾಗಿರುವ ಪೊಲೀಸರು ಕೈಯಲ್ಲಿ **XXX** ಮತ್ತು **XXX** ಹಿಡಿದುಕೊಂಡು ನಿಂತಿರುವುದು ಈ ನಾಡಿನ ದುರ್ದೈವವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ...

**ಶ್ರೀ ಎಂ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರ ಮೇಲೆ ನಮಗೆ ಅಪಾರವಾಗಿರುವ ಗೌರವವಿದೆ. ನಾನು ಹೇಳುವುದು ತಪ್ಪಾಗಿದ್ದರೆ, ಸರ್ಕಾರ ಉತ್ತರ ಕೊಡುವಂತಹ ಸಂದರ್ಭದಲ್ಲಿ ಅವರು ಏನು ಹೇಳಬೇಕೆಂದಿದ್ದಾರೆ ಅದನ್ನು ಹೇಳಿದರೆ ನಾನು ಸ್ವೀಕಾರ ಮಾಡುತ್ತೇನೆ. ನನ್ನಲ್ಲಿ ಲಭ್ಯವಿರುವ ಮಾಹಿತಿಯನ್ನು ಸದನದ ಮುಂದಿಡುತ್ತಿದ್ದೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದೆನ್ನುವುದು ನಮ್ಮ ಉದ್ದೇಶವಾಗಿದೆ. ನಮ್ಮ ಹತ್ತಿರ ಇರುವಂತಹ ಮಾಹಿತಿಯನ್ನು ನಾವು ಹಂಚಿಕೊಳ್ಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ತಪ್ಪು ಮಾಹಿತಿಯನ್ನು ನಾವು ನೀಡುತ್ತಿಲ್ಲ. ನಮ್ಮ ಹತ್ತಿರ ಫೋಟೋ ಜೊತೆಗೆ ಸಿಡಿ ಸಹ ಇದೆ. ಈ ಚರ್ಚೆ ಮುಗಿದ ಮೇಲೆ ಸರ್ಕಾರ ಈ ವಿಚಾರವಾಗಿ ತನಿಖೆ ನಡೆಸಲು ಒಂದು ಸದನ ಸಮಿತಿಯನ್ನು ರಚನೆ ಮಾಡಬೇಕಾಗುತ್ತದೆ.

**(ಗೊಂದಲ)**

---

**XXX** ಸಭಾಪತಿಯವರ ಆಜ್ಞಾನುಸಾರ ತೆಗೆದು ಹಾಕಲಾಗಿದೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದ ಪೋಲೀಸರು ಅಥವಾ ಕಾಂಗ್ರೆಸ್ ಪಕ್ಷದ ಪೋಲೀಸರು ಎಂದು ಇಲ್ಲ. ಹಿಂದೆ ಕಾಂಗ್ರೆಸ್ ಪಕ್ಷದ ಸರ್ಕಾರದಲ್ಲಿ ಇದ್ದಂತಹ ಶೇಕಡಾ 99ರಷ್ಟು ಪೋಲೀಸರು ನಮ್ಮ ಸರ್ಕಾರದಲ್ಲಿಯೂ ಇದ್ದಾರೆ. ಯಾವುದೇ ಪಕ್ಷ ಅಧಿಕಾರದಲ್ಲಿ ಇರಲಿ, ಪೋಲೀಸರ ಮೇಲೆ **XXX** ಮತ್ತು **XXX** ಹೊಡೆದಾಗ ಅವರುಗಳು ತಮ್ಮ ಕೈಯಲ್ಲಿ **XXX** ಮತ್ತು **XXX** ಹಿಡಿದುಕೊಂಡಿರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇಂತಹ ಸಂದರ್ಭದಲ್ಲಿ ಅವರು ಅದನ್ನೇ **XXX XXX** ಇಂತಹ ಪರಿಸ್ಥಿತಿಯನ್ನು ಬಿಟ್ಟರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಪೋಲೀಸರು ಯಾರೂ ತಮ್ಮ ಕೈಯಲ್ಲಿ **XXX XXX** ಹಿಡಿದಿಲ್ಲ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ ಪೋಲೀಸಿನವರು **XXX** ಮತ್ತು **XXX** ಎಸೆಯಬಹುದು ಎಂದು ಅವರು ಹೇಳುತ್ತಿದ್ದಾರೆ. It has gone on record. ಅಮಾಯಕರ ಮೇಲೆ ದೇಶದ್ರೋಹ ಆರೋಪದ ಮೇಲೆ ಪ್ರಕರಣವನ್ನು ದಾಖಲು ಮಾಡುತ್ತಾರೆ. ಈ ಪೋಲೀಸರ ಮೇಲೆ ಏತಕ್ಕೋಸ್ಕರ ಕ್ರಮ ತೆಗೆದುಕೊಳ್ಳುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಪೋಲೀಸಿನವರು ಹೊಡೆಯಬಾರದು. ಆದರೆ, ಅವರು ತಮ್ಮ ರಕ್ಷಣೆಗೋಸ್ಕರ **XXX**

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸಭಾನಾಯಕರಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಈ ರೀತಿ ಮಾತನಾಡಬಹುದು.

**(ಗೊಂದಲ)**

---

**(XXX ಸಭಾಪತಿಯವರ ಆಜ್ಞಾನುಸಾರ ತೆಗೆದು ಹಾಕಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ವಾಸ್ತವಿಕ ಅಂಶಗಳನ್ನು ಈ ಸದನದ ಮುಂದೆ ಹೇಳಬೇಕೆನ್ನುವ ಕಾರಣಕ್ಕಾಗಿ ನಾನು ಹೇಳಿದ್ದೇನೆ. ನನ್ನ ಜವಾಬ್ದಾರಿಯ ಬಗ್ಗೆ ನನಗೆ ಅರಿವಿದೆ. ಅವರ ರೀತಿಯಲ್ಲಿಯೇ ನಾನು ಸಹ ಮಂತ್ರಿಯಾಗಿ ಬಂದಿರುವವನು. ಪೊಲೀಸರು ತಮ್ಮ ಆತ್ಮ ರಕ್ಷಣೆಗೋಸ್ಕರ **XXX**

**(ಗೊಂದಲ)**

(ಮುಂದುವರಿದಿದೆ)

(64) 19.2.2020 3.30 ಪಿಕೆ:ವಿಕೆ
**ಕೋಟ ಶ್ರೀನಿವಾಸ ಪೂಜಾರಿ(ಮುಂದುವರೆದಿದೆ)**

ನಾನೂ ಕೂಡ ನಿಮ್ಮ **ಹಾಗೆ** ಅಲ್ಲಿ ಕುಳಿತುಕೊಂಡೇ ಇಲ್ಲಿಗೆ ಬಂದಿದ್ದೇನೆ. ಪೊಲೀಸರು ಕೆಲವು ಸಲ ಆತ್ಮರಕ್ಷಣೆಗೋಸ್ಕರ ಅವರ **XXX XXX XXX XXX** ಹೊರತು ಇತಿಹಾಸದಲ್ಲಿ ...

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಪೊಲೀಸರು ತಮ್ಮ ಆತ್ಮ ರಕ್ಷಣೆಗೆ . . .

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಕೆಲವು ಸಲ ಪೊಲೀಸರ ಹತ್ತಿರ ಇರುವ weapons ಗಳನ್ನು ಮುಟ್ಟಲಿಕ್ಕೆ ಆಗದೇ ...

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಪೊಲೀಸರಿಗೆ ತಮ್ಮ ಸೇವಾವಧಿಯಲ್ಲಿ right of private defence ಇರುತ್ತದೆ. ತನ್ನ ಜೀವ ಉಳಿಸಿಕೊಳ್ಳುವುದಕ್ಕೋಸ್ಕರ police can fire. ಅದನ್ನು ಬಿಟ್ಟು ಪೊಲೀಸರೇ **XXX** ಎಂದು ಹೇಳಿರುವುದು ಹೊಸ ವ್ಯಾಖ್ಯಾನ ಮಾಡಿದಂತಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತ, **XXXX** ಎಂಬ ಮಾತು ಬಂದಾಗ, ಮಧ್ಯದಲ್ಲಿ ಮಾನ್ಯ ಸಭಾನಾಯಕರು ಎದ್ದು, ಅಂತಹ ಪ್ರಸಂಗಗಳು ಬಂದಾಗ **XXX** ಎಂದು ಹೇಳಿದರು. "ಬಹುದು" ಎಂದರೆ **XXX** ಅಥವಾ **XXX** ಆದರೂ ಆ ಪದಗಳನ್ನು ಕಡತದಿಂದ ತೆಗೆದು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

---

**(XXX ಸಭಾಪತಿಯವರ ಆಜ್ಞಾನುಸಾರ ತೆಗೆದು ಹಾಕಲಾಗಿದೆ)**

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಕಡತದಿಂದ ತೆಗೆಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಹೊರಟ್ಟಿಯವರ ಬಗ್ಗೆ ಗೌರವ ಇದೆ, ಮಾನ್ಯ ಸಭಾನಾಯಕರ ಬಗ್ಗೆಯೂ ಗೌರವ ಇದೆ. ಮಾನ್ಯ ಸಭಾನಾಯಕರು ಮಾತನಾಡುತ್ತಾ, ಜನ ಪೊಲೀಸರ ಮೇಲೆ **XXX** ಮತ್ತು **XXX XXX XXX XXX** ಅದೇ **XXX** ಮತ್ತು **XXX XXX XXX XXX** ಎಂದು ಹೇಳಿದ್ದು ಸರಿಯಲ್ಲ. ಪೊಲೀಸರಿಗೆ **XXX** ಮತ್ತು **XXX XXX** ಕೊಟ್ಟಿಲ್ಲ. ಪೊಲೀಸರು ರಕ್ಷಣೆಗೋಸ್ಕರ ಲಾಠಿ ಕೊಟ್ಟಿರುತ್ತಾರೆ, for right of private defence ಗೋಸ್ಕರ service weapons ಇರುತ್ತದೆ. To protect his life, he can fire.

(ಗೊಂದಲ)

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಪೊಲೀಸರು ಈ ರೀತಿ ಮಾಡುವುದಕ್ಕೆ ಯಾವ ಕಾನೂನು ಅವಕಾಶ ಮಾಡಿಕೊಟ್ಟಿದೆ, ಅದು ಯಾವ ಕಾನೂನಿನ ಅಡಿಯಲ್ಲಿ ಬರುತ್ತದೆ ಎಂದು ಸಭಾನಾಯಕರು ಹೇಳಬೇಕು

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಸಭಾನಾಯಕರು ಮತ್ತು ಕ್ಯಾಬಿನೆಟ್ ಮಂತ್ರಿಗಳೂ ಆಗಿರುವಂಥವರು Police Drill Manual, IPC (Indian Penal Code), CrPC (Criminal Procedure Code) ಓದಿಕೊಂಡು ಬರಬೇಕು.

(ಗೊಂದಲ)

**ಶ್ರೀ ಪಿ.ಆರ್.ರಮೇಶ್:–** ಪೊಲೀಸರೇ **XXX** ಅಥವಾ **XXX XXX XXX** ಪ್ರಕರಣಗಳು ಹಿಂದೆ ನಡೆದಿರುವಂತಹ ಉದಾಹರಣೆಗಳು ಇವೆಯೇ? . . .

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ನೀವು Right of Private Defence ಎಂದು ಹೇಳಿದಿರಿ. Right of Private Defence ಗೋಸ್ಕರ ಅವರ ಕೈಯಲ್ಲಿ ಲಾಠಿ ಇದೆ. ತಮ್ಮ ಜೀವ ಉಳಿಸಿಕೊಳ್ಳುವುದಕ್ಕೆ ಲಾಠಿಯಿಂದ ಹೊಡೆಯಬಹುದು. ಅದನ್ನು ಬಿಟ್ಟು, **XXX XXX XXX** ಎಂದು ಹೇಳುವುದು ಸರಿಯಲ್ಲ. ಸಭಾನಾಯಕರೆ, with due respect I am telling you.

---

**(XXX ಸಭಾಪತಿಯವರ ಆಜ್ಞಾನುಸಾರ ತೆಗೆದು ಹಾಕಲಾಗಿದೆ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಪಿ.ಆರ್.ರಮೇಶ್:–** ಪೊಲೀಸರ ರಕ್ಷಣಾ ನಿಯಮಗಳಲ್ಲಿ **XXX XXX XXX** ಎಂದಿದೆಯೇ? ದಯವಿಟ್ಟು ಹೇಳಬೇಕು.

**ಸಭಾಪತಿಯವರು:–** ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ಪಿ.ಆರ್.ರಮೇಶ್:–** ನಿಮ್ಮ ಪಕ್ಕದಲ್ಲೇ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿ ಈಗ ಮಂತ್ರಿಯಾಗಿರುವವರು ಇದ್ದಾರೆ. ಅವರನ್ನು ದಯವಿಟ್ಟು ಕೇಳಿ. ಒಬ್ಬ ಪೊಲೀಸ್ ತನ್ನ ಆತ್ಮರಕ್ಷಣೆಗೆ **XXX XXX XXX XXX** ಎನ್ನುವ ನಿಯಮಗಳಿವೆಯೇ ಎನ್ನುವುದನ್ನು ಕೇಳಿ.

**ಶ್ರೀ ಬಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಮಾತನಾಡುತ್ತಾ, ಪೊಲೀಸರು ಕೈಯ್ಯಲ್ಲಿ **XXX XXX** ಎನ್ನುವ ಮಾತನ್ನು ಹೇಳಿದರೇ ಹೊರತು, **XXX** ಎಂದು ಹೇಳಿಲ್ಲ; **XXX XXX** ಎಂದು ಹೇಳಿಲ್ಲ. ಪೊಲೀಸರ ಮೇಲೆ **XXX XXX XXX** ಹೊರತು, ಅವರೇ **XXX XXX XXX** ಎಂದು ಹೇಳಿದರು.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಪಾಟೀಲ್‌ರವರೇ, ಮಾನ್ಯ ಸಭಾನಾಯಕರು ಹೇಳಿದ್ದನ್ನು ಬಹುಶಃ ನೀವು ಸರಿಯಾಗಿ ಕೇಳಿಸಿಕೊಂಡಿಲ್ಲ ಎನಿಸುತ್ತಿದೆ. ಪೊಲೀಸರು ತಮ್ಮ ಆತ್ಮರಕ್ಷಣೆಗೋಸ್ಕರ **XXX** ಎಂದು ಹೇಳಿದ್ದಾರೆ. ಬೇಕಾದರೆ ದಾಖಲೆಗಳನ್ನು ತೆಗೆದು ನೋಡಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಮಂತ್ರಿಗಳಾದ ಬಿ.ಸಿ.ಪಾಟೀಲ್‌ರವರು ಸರಿಯಾಗಿ ಕೇಳಿಸಿಕೊಂಡಿಲ್ಲ ಎಂದೆನಿಸುತ್ತಿದೆ. . . .

(ಗೊಂದಲ)

---

**(XXX ಸಭಾಪತಿಯವರ ಆಜ್ಞಾನುಸಾರ ತೆಗೆದು ಹಾಕಲಾಗಿದೆ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಬಿ.ಸಿ.ಪಾಟೀಲ್‌ರವರು ಮಾತನಾಡುತ್ತಾ ತಮಗೆ ಹೇಗೆ ಬೇಕೋ ಆ ರೀತಿ ಮಾತುಗಳನ್ನು ಹೊರಳಿಸಿದರು. ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಹೆಚ್ಚು ಬೆಳೆಸುವುದು ಬೇಡ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಬಹಳ ಬುದ್ಧಿವಂತರು ಎಂದು ಭಾವಿಸಿದ್ದೆ. ಅದೇರೀತಿ ಆ ಬುದ್ಧಿವಂತಿಕೆಯನ್ನು ಇಲ್ಲಿ ತೋರಿಸಿದರು. ಶೇಕಡ 99ರಷ್ಟು ಪೊಲೀಸರು ಹಿಂದೆ ಇದ್ದಂತಹ ಸರ್ಕಾರವಿದ್ದಾಗಲೇ ಇದ್ದರು ಎಂಬ ಮಾತು ಹೇಳಿದರು. ಆದರೆ ಶೇಕಡ 1ರಷ್ಟು ಪೊಲೀಸರು ಈ ರೀತಿ ಕೆಲಸ ಮಾಡಿದ್ದಾರೆ ಎಂದು ಅವರೇ ಒಪ್ಪಿಕೊಂಡ ಹಾಗೆ ಆಯಿತು. ನಮಗೆ ಕರ್ನಾಟಕ ರಾಜ್ಯ ಪೊಲೀಸರ ಬಗ್ಗೆ ಅಪಾರವಾದ ಗೌರವ ಇದೆ. ಇಡೀ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯದ ಪೊಲೀಸರಿಗೆ ಉತ್ತಮವಾದ ಹೆಸರು ಇದೆ. ನಾವು ಎಲ್ಲಾ ಪೊಲೀಸರನ್ನು ದೂಷಣೆ ಮಾಡುತ್ತಿಲ್ಲ. ಯಾರು ಇನ್‌ವಾಲ್ವ್ ಆಗಿದ್ದಾರೋ ಅದರ ಸತ್ಯಾಸತ್ಯತೆ ಆಚೆ ಬರಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಮಾನ್ಯ ಸಭಾನಾಯಕರೇ, ಪರಿಸ್ಥಿತಿ ವಿಕೋಪಕ್ಕೆ ಹೋದ ಸಂದರ್ಭದಲ್ಲಿ ಪೊಲೀಸರು **XXX** ಇಟ್ಟುಕೊಂಡಿದ್ದರು **XXX** ಇಟ್ಟುಕೊಂಡಿದ್ದರು ಎಂದು ಒಂದು ಸರ್ಕಾರ ಹೇಳುವ ಮಾತೇ ಇದು? ಸರ್ಕಾರವೇ ಈ ರೀತಿ ಮಾತನಾಡಿದರೆ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಜನ **XXX XXX XXX XXX** ಎಂದಷ್ಟೇ ನಾನು ಹೇಳಿದೆ. ಆ ಕಡೆಯಿಂದ **XXX XXX** ಅವುಗಳನ್ನು ತಡೆಯಲು ತಮ್ಮ ರಕ್ಷಣೆಗೋಸ್ಕರ ಆ **XXX** ಕೈಯಿಂದ ಹಿಡಿದುಕೊಳ್ಳದೆ ಸುಮ್ಮನೆ ಇರುವುದಕ್ಕಾಗುತ್ತದೆಯೇ?

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ನಾನು ನಿನ್ನೆಯೇ ಹೇಳಿದ ಹಾಗೆ, ನಿಮಗೆ ಆಡಳಿತ ನಡೆಸಿ ಅಭ್ಯಾಸ ಇಲ್ಲ, ನಮಗೆ ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳುವ ಅಭ್ಯಾಸ ಇಲ್ಲ.

---

**(XXX ಸಭಾಪತಿಯವರ ಆಜ್ಞಾನುಸಾರ ತೆಗೆದು ಹಾಕಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಅಲ್ಲಿ 150 ಜನ ಮಾತ್ರ ಇದ್ದರು. 2500 ಜನ ಪೊಲೀಸರಿದ್ದರು. ಹತ್ತತ್ತು ಜನ ಪೊಲಿಸರು ಸೇರಿ ಒಬ್ಬೊಬ್ಬ ಕಾರ್ಯಕರ್ತರನ್ನು ಹಿಡಿದು ಒಳಗೆ ಹಾಕಬಹುದಾಗಿತ್ತು. ಆದರೆ ಪೊಲೀಸರು ಆ ಕೆಲಸ ಮಾಡಲಿಲ್ಲ. ಏಕಾಏಕಿ ಲಾಠಿ ಚಾರ್ಜ್ ಮಾಡುತ್ತಾರೆ, ಅಟ್ಟಿಸಿಕೊಂಡು ಹೋಗಿ ಹೊಡೆಯುತ್ತಾರೆ. ಬಸ್ ಸ್ಟ್ಯಾಂಡ್‌ನಲ್ಲಿ ನಿಂತಿದ್ದ ಸಾರ್ವಜನಿಕರಿಗೆ ಹೊಡೆಯುತ್ತಾರೆ. ಗಂಡ–ಹೆಂಡತಿ ಇಬ್ಬರು ಮಕ್ಕಳು ಬಸ್ಸಿಗಾಗಿ ಕಾಯುತ್ತಿದ್ದರೆ ಅವರ ಮೇಲೆ ಲಾಠಿ ಚಾರ್ಜ್ ಮಾಡುತ್ತಾರೆ. ತರಕಾರಿ–ಹಣ್ಣು ಮಾರಾಟ ಮಾರುತ್ತಿದ್ದವರ ಮೇಲೆ ಲಾಠಿ ಚಾರ್ಜ್ ಮಾಡಿ ಅವರು ದಿಕ್ಕಾಪಾಲಾಗಿ ಓಡುವ ಹಾಗೆ ಮಾಡಿದ್ದಾರೆ. ಭಯ–ಭೀತಿಯಿಂದ, ತಮ್ಮ ಪ್ರಾಣ ರಕ್ಷಣೆ ಮಾಡಿಕೊಳ್ಳಲು ಅಲ್ಲಿನ ಜನ ಒಂದು ಮಸೀದಿ ಒಳಗೆ ಹೋಗಿ ಬಚ್ಚಿಟ್ಟುಕೊಳ್ಳುತ್ತಾರೆ. ಆಗ ಪೊಲೀಸರು, ಮಸೀದಿಯಿಂದ ಆ ಜನ ವಾಪಸ್ಸು ಬರಬೇಕು ಎಂದು ಟಿಯರ್ ಗ್ಯಾಸ್ ಸಿಡಿಸುತ್ತಾರೆ. ಅಲ್ಲಿನ ಇಬ್ಬರು ಪೊಲೀಸ್ ಅಧಿಕಾರಿಗಳು, 'ಗುಂಡು ಹೊಡಿ, ಎರಡು ಹೆಣ ಬಿದ್ದರೆ ಮಾತ್ರ ಇವರಿಗೆ ಬುದ್ಧಿ ಬರುತ್ತದೆ' ಎಂದು ಹೇಳಿದ ಆಡಿಯೋ ಇದೆ. ನಾವು ಸರ್ಕಾರವನ್ನು ದ್ವೇಷಿಸುತ್ತಿಲ್ಲ. ಇದರಲ್ಲಿ ಸತ್ಯಾಸತ್ಯತೆ ಈಚೆಗೆ ಬರಬೇಕು. ಅದಕ್ಕೋಸ್ಕರ ನಾವು ಇದನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಿ ಎಂದು ಕೇಳುತ್ತಿದ್ದೇವೆ. ನಾವು ಸುಳ್ಳು ಹೇಳುತ್ತಿದ್ದೇವೆಯೋ ಅಥವಾ ನೀವು ಸುಳ್ಳು ಹೇಳುತ್ತಿದ್ದೀರೋ ಎನ್ನುವ ವಿಚಾರ ಹೊರಕ್ಕೆ ಬರಲಿ. ಕೇರಳದಿಂದ ಟೆರರಿಸ್ಟ್‌ಗಳು ಬಂದಿದ್ದರು ಎಂದು ಹೇಳುತ್ತಿದ್ದೀರಿ. ಕೇರಳ ಭಾರತ ದೇಶದ ಒಂದು ಅವಿಭಾಜ್ಯ ಅಂಗ. ಮಂಗಳೂರಿಗೆ ಹೊಂದಿಕೊಂಡಿರುವಂತಹ ಕಾಸರಗೋಡು ಜಿಲ್ಲೆ ಕೇರಳಕ್ಕೆ ಸೇರುತ್ತದೆ. ದಿನಬೆಳಗಾದರೆ ಕೇರಳದ ಜನ ಮಂಗಳೂರಿಗೆ ಬರುತ್ತಾರೆ. ಸಾವಿರಾರು ಜನ ವಿದ್ಯಾರ್ಥಿಗಳು ಮಂಗಳೂರು ಮತ್ತು ಉಡುಪಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಅವರು ಬರುತ್ತಿರುವುದರಿಂದಲೇ ಮಂಗಳೂರಿನಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ. ಆದರೆ ಈ ಘಟನೆ ಆದಮೇಲೆ ಯಾರು ಬರುತ್ತಿಲ್ಲ; ವ್ಯಾಪಾರ ಆಗುತ್ತಿಲ್ಲ. ಆರ್ಥಿಕ ಪರಿಸ್ಥಿತಿ ಅಲ್ಲಿ ಯಾವರೀತಿ ಇರಬಹುದು ಎಂದು ಆಲೋಚನೆ ಮಾಡಬೇಕಾಗುತ್ತದೆ. ಅಲ್ಲಿ ನಮ್ಮ ಪಕ್ಷದ ಹಿರಿಯ ಶಾಸಕರು, ಮಾಜಿ ಮಂತ್ರಿಗಳು, ದಯಮಾಡಿ ಇಂತಹ ಗಲಭೆಗಳನ್ನು ಮಾಡಬೇಡಿ ಎಂದು ಒಂದು ಹೇಳಿಕೆಯನ್ನು ಕೊಡುತ್ತಾರೆ. ತಂದಿರುವಂತಹ ಪೌರತ್ವದ ಕಾಯಿದೆ ಏನಿದೆ, ಅದರಿಂದ ಇಡೀ ದೇಶದಲ್ಲಿ ಗಲಭೆಗಳಾಗುತ್ತಿವೆ. ಎಲ್ಲಾ ಕಡೆ ಪ್ರತಿಭಟನೆ ಮಾಡುತ್ತಿದ್ದಾರೆ. ಅಲ್ಲಿ ಆಗುತ್ತಿರುವ ರೀತಿಯಲ್ಲಿ ನಮ್ಮ ಕರ್ನಾಟಕದಲ್ಲಿ ಆಗಬಾರದು, ಬೆಂಕಿ ಹಚ್ಚುವ ಕೆಲಸ ಮಾಡಬಾರದು ಎಂದು ಅವರು ಹೇಳಿದ್ದು ತಪ್ಪೇ? ಈ ರೀತಿ ಆಗಬಾರದು ಎನ್ನುವ ರೀತಿಯಲ್ಲಿ ಅವರು ಹೇಳಿಕೆ ಕೊಡುತ್ತಾರೆ. ಆದರೆ ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷರು ಅದೇ ಜಿಲ್ಲೆಯಲ್ಲಿ ಭಾಷಣ ಮಾಡುತ್ತಾ, 'ನಾವು ಬೆಂಕಿ ಹಚ್ಚುತ್ತೇವೆ' ಎಂದು ಹೇಳುತ್ತಾರೆ. ಇದು ದಾಖಲೆಯಲ್ಲಿದೆ.

**ಶ್ರೀ ಬಿ.ಸಿ.ಪಾಟೀಲ್:–** ಮಾನ್ಯ ಯು.ಟಿ.ಖಾದರ್ ಅವರು ಏನು ಹೇಳಿದರು? ಅವರು ಎರಡು ದಿವಸದ ಹಿಂದೆ, ಮಂಗಳೂರು ಬೆಂಕಿ ಹತ್ತಿ ಉರಿಯುತ್ತದೆ ಎಂದು ಹೇಳಿದ್ದರು. ಇದು ಟಿವಿ ಮಾಧ್ಯಮಗಳಲ್ಲೂ ಬಂದಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:–** ಅವರು, ಬೆಂಕಿ ಹಚ್ಚುವ ಕೆಲಸ ಮಾಡಬೇಡಿ ಎಂದು ಹೇಳಿದರು. ನಾವು ಹೇಳುತ್ತಿರುವುದು ನಿಜವೋ ಸುಳ್ಳೋ ಎಂದು ತಿಳಿದುಕೊಳ್ಳಲು ಒಂದು ಸದನ ಸಮಿತಿ ರಚನೆಯಾಗಲಿ, ಇದರ ಬಗ್ಗೆ ಕೂಲಂಕಷವಾದ ತನಿಖೆಯಾಗಲಿ. ಯಾರು ತಪ್ಪಿತಸ್ಥರು ಇದ್ದಾರೋ ಅವರ ವಿರುದ್ಧ ಕ್ರಮ ಕೈಗೊಳ್ಳಿ.

(ಮುಂದು)

(65)19–02–2020 3.40 ಡಿಎಸ್–ಬಿಎನ್ಎಸ್

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು)**

ಈ ರೀತಿಯಾಗಿ ಎರಡು ಹೆಣಗಳು ಬೀಳುತ್ತವೆ. ಎರಡು ಹೆಣಗಳು ಬಿದ್ದ ಮೇಲೆ ಅವರಿಗೆ ಸಾಂತ್ವನ ಹೇಳಬೇಕೆಂದು ನಮ್ಮ ಪಕ್ಷದ ಮೇಲ್ಮನೆಯ ವಿರೋಧ ಪಕ್ಷದ ನಾಯಕರು, ಅವರ ಜೊತೆಯಲ್ಲಿ ಒಂದು ತಂಡ, ಶ್ರೀಮತಿ ಜೈಮಾಲರವರು ಅವರ ಜೊತೆಯಲ್ಲಿ ಹೋಗಿದ್ದರು. ಶ್ರೀಮತಿ ಜೈಮಾಲರವರು ತಮ್ಮ ಭಾಷಣದಲ್ಲಿ ಇದನ್ನು ಹೇಳಲಿಲ್ಲ. ಅವರು ಸಾಂತ್ವನ ಹೇಳಬೇಕೆಂದು ಅಲ್ಲಿಗೆ ಹೋಗುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಮೊದಲೇ ಅಲ್ಲಿಗೆ ಬರುತ್ತೇವೆಂದು ದೂರವಾಣಿ ಮೂಲಕ ಸಂದೇಶ ಕಳುಹಿಸಿದ್ದರು. ಆಗ ಸಂಜೆಯಾಗಿತ್ತು. ನಾಳೆ ಬರುತ್ತಿದ್ದೇವೆಂದು ಅಧಿಕಾರಿಗಳಿಗೆ ಇವರ ಕಚೇರಿಯಿಂದ ಸಂದೇಶ ಹೋಗುತ್ತದೆ. ನಾಳೆ ಬೆಳಗ್ಗೆ ಇವರು ವಿಮಾನ ಹತ್ತುವುದಕ್ಕಿಂತ ಮೊದಲು ಫ್ಯಾಕ್ಸ್ ಹೋಗುತ್ತದೆ. ನಾವು ಬರುತ್ತಿದ್ದೇವೆ, ನಮಗೆ ಎಲ್ಲಾ ರೀತಿಯ ಬಂದೋಬಸ್ತ್ ಮಾಡಿಕೊಡಿ ಎಂದು ಅವರಿಗೆ ಕಳುಹಿಸಿರುತ್ತಾರೆ. ಆದರೆ ವಿಮಾನದಿಂದ ಇಳಿದು ಹೊರಗಡೆ ಬರುವಷ್ಟರಲ್ಲೇ ಅವರನ್ನು ತಡೆದು, ನೀವು ಹೊರಗಡೆ ಬರಬಾರದು. ನೀವು ಬಂದರೆ ಹೆಚ್ಚು–ಕಡಿಮೆ ಆಗುತ್ತದೆ, ಈಗ ಸೆಕ್ಷನ್ 144 ವಿಧಿಸಲಾಗಿದೆ ಎಂದು ಹೇಳುತ್ತಾರೆ. ಆ ರೀತಿ ಮಾಡದಿದ್ದರೆ ಮತ್ತೆ ಗಲಭೆ ಜಾಸ್ತಿಯಾಗಬಹುದು, ಅದಕ್ಕೋಸ್ಕರ ಈ ತಯಾರಿ ಮಾಡಿರುವುದನ್ನು ನಾವು ಒಪ್ಪುತ್ತೇವೆ. ಆದರೆ, ಇಲ್ಲಿಂದ ಮಂಗಳೂರಿಗೆ ಬರುವವರೆಗೆ ನೀವು ಸಂದೇಶವನ್ನು ಕೊಡಲಿಲ್ಲ. ಮುಖ್ಯಮಂತ್ರಿಯವರು ಇನ್ಸ್‌ಪೆಕ್ಟ್ ಮಾಡುವುದಕ್ಕೆ ಬರುತ್ತಾರೆ ಎಂದು ಹೇಳುತ್ತಾರೆ. ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಯಾವ ಮೂಲೆಗೆ ಹೋಗಿ ಬಂದರೂ ಕೂಡ ತಡೆ ಮಾಡುವಹಾಗಿಲ್ಲ. ಆದರೆ, ಅವರ ಜೊತೆಯಲ್ಲಿ ಯಾರ್‍ಯಾರು ಬಂದರು ಅವರಿಗೆಲ್ಲರಿಗೂ ಅನುಮತಿಯನ್ನು ಕೊಡುತ್ತಾರೆ. ಪೊಲೀಸ್ ಎಸ್ಕಾರ್ಟ್‌ನಲ್ಲಿ ಕರೆದುಕೊಂಡು ಹೋಗುತ್ತಾರೆ. ಆದರೆ ವಿರೋಧ ಪಕ್ಷದ ನಾಯಕರನ್ನು, ಪ್ರತ್ಯೇಕವಾಗಿ ಎಸ್.ಆರ್.ಪಾಟೀಲ್‌ರವರು ಎಂದು ಹೇಳುತ್ತಿಲ್ಲ. ಆ ಸ್ಥಾನ ಏನಿದೆಯೋ ಅದಕ್ಕೆ ಸಾಂವಿಧಾನಿಕವಾದ ಗೌರವವಿದೆ. ಅದಕ್ಕೆ ಗೌರವ ಕೊಡಬೇಕಾಗಿತ್ತು. ಆ ಗೌರವವನ್ನು ಕೂಡ ಕೊಡಲಿಲ್ಲ. ಅಲ್ಲಿಗೆ ಮಾನ್ಯ ಯಡಿಯೂರಪ್ಪನವರು ಹೋದರು. ಸರ್ಕ್ಯೂಟ್ ಹೌಸ್‌ನಲ್ಲಿ ಕುಳಿತುಕೊಂಡು, ಅವರು ಮೃತರ ಮನೆಗೆ ಹೋದರೆ ಅಲ್ಲಿ ಮತ್ತೆ ಏನಾದರೂ ಗಲಭೆಗಳಾಗಬಹುದೆಂದು ಆಡಳಿತ ಪಕ್ಷದ ಮುಖಂಡರು ಹೇಳಿದ್ದರಿಂದ ಮುಖ್ಯಮಂತ್ರಿಗಳು ಸರ್ಕ್ಯೂಟ್ ಹೌಸ್‌ನಲ್ಲೇ ಕುಳಿತುಕೊಂಡರು. ಉಸ್ತುವಾರಿ ಸಚಿವರು ಕೂಡ ಅಲ್ಲಿದ್ದರು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಾಸಕರಾದ ಮಾನ್ಯ ಐವನ್ ಡಿ'ಸೋಜಾರವರು, ಅಲ್ಲಿದ್ದರು. ಮಾನವೀಯತೆಯ ದೃಷ್ಟಿಯಿಂದ ಒಬ್ಬ ಮುಖ್ಯಮಂತ್ರಿ ಯಾರು ಅಮಾಯಕರು ಪ್ರಾಣವನ್ನು ಕಳೆದುಕೊಂಡಿದ್ದಾರೆಯೋ ಅವರಿಗೆ ಪರಿಹಾರ ಕೊಡಬೇಕೆಂದು ಹತ್ತು ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡುತ್ತಾರೆ. ಮೃತ ವ್ಯಕ್ತಿಗೆ ತಂದೆ ಇಲ್ಲ, ತಾಯಿಯ ಜೊತೆಗೆ ಇಬ್ಬರು ಮಕ್ಕಳಿದ್ದರು. ಒಬ್ಬ ಮಗ ಸುಮಾರು ಎರಡು ತಿಂಗಳ ಹಿಂದೆ ಸತ್ತು ಹೋಗಿದ್ದ. ಹೀಗಾಗಿ ಆ ತಾಯಿಗೆ ಇದ್ದದ್ದು ಇವನೊಬ್ಬನೇ ಮಗ. ದೊಡ್ಡ ಮಗ ಸತ್ತಾಗ ಈ ಚಿಕ್ಕ ಮಗ ತಾಯಿಯನ್ನು ಕುರಿತು 'ಅಮ್ಮ, ಕಣ್ಣೀರು ಹಾಕಬೇಡ; ನಾನಿದ್ದೇನೆ ನಿನ್ನನ್ನು ಸಾಕುವುದಕ್ಕೆ' ಎಂದು ಹೇಳುತ್ತಾನೆ. ಅಂಥವನ ಹೆಣ ಬಿದ್ದು ಹೋಯಿತು. ಸಾಂತ್ವನ ಹೇಳುವುದಕ್ಕೆ ಆಗಲಿಲ್ಲ. ಮೃತ ವ್ಯಕ್ತಿಯ ಕುಟುಂಬದವರನ್ನು ಮಾನ್ಯ ಮುಖ್ಯಮಂತ್ರಿಗಳು ಕರೆಯಿಸಿಕೊಂಡಿದ್ದರು. ಮಾನವೀಯತೆಯ ದೃಷ್ಟಿ ಮಾನ್ಯ ಯಡಿಯೂರಪ್ಪರವರಿಗೆ ಇದೆ. ಅವರು ಒಬ್ಬೊಬ್ಬರಿಗೆ ಹತ್ತು ಲಕ್ಷ ರೂಪಾಯಿ ಪರಿಹಾರ ಕೊಡುತ್ತೇನೆಂದು ಘೋಷಣೆ ಮಾಡಿದರು. ಘೋಷಣೆ ಮಾಡಿ ವಾಪಸ್ ಬರುತ್ತಾರೆ, ಎರಡು ದಿನಗಳಾದ ಮೇಲೆ, ಆಗಲೇ ನಮ್ಮ ಮುಖಂಡರು ಮಾತನಾಡುತ್ತಾ, 'ಕರ್ನಾಟಕ ರಾಜ್ಯಕ್ಕೆ ಒಂದು ಸರ್ಕಾರ, ಅಘೋಷಿತ ಮಂಗಳೂರಿಗೆ ಒಂದು ಸರ್ಕಾರ ಇದೆ' ಎಂದು ಹೇಳಿದರು. ಅಲ್ಲಿ ಒತ್ತಡ ಯಾವ ರೀತಿ ಬಂದಿದೆಯೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾತಿಗೆ ತಪ್ಪುವಂಥವರಲ್ಲ. ಆದರೂ ಕೂಡ ಮಾತಿಗೆ ತಪ್ಪಿ ಕೊಡಬೇಕಾದ ಪರಿಹಾರವನ್ನು ವಾಪಸ್ ತೆಗೆದುಕೊಳ್ಳುತ್ತಾರೆ. ಇವತ್ತು ಕೂಡ ಅವರಿಗೆ ತಿನ್ನುವುದಕ್ಕೆ ಕೂಳು ಇಲ್ಲ, ಕುಡಿಯುವುದಕ್ಕೆ ಗಂಜಿ ಇಲ್ಲ. ಇವತ್ತಿನ ದಿವಸ ಅವರ ಪರಿಸ್ಥಿತಿ ಏನಾಗಬೇಕು? ಯಾರೇ ಸತ್ತಿದ್ದರೂ ಕೂಡ ಮಾನವೀಯತೆ ದೃಷ್ಟಿಯಿಂದ ಪರಿಹಾರವನ್ನು ಕೊಡತಕ್ಕಂಥಾದ್ದನ್ನು ಯಾರೇ ಆಗಲಿ ಮಾಡುತ್ತಾರೆ. ಆದರೆ ಇವರು ಮಾಡಿದ್ದೇನು? ಇದರ ಹಿಂದೆ ಇರುವಂತಹ ಕಾಣದ ಕೈ ಯಾವುದು? ನೀವು ಕೊಟ್ಟಂಥ ಪರಿಹಾರವನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳಿದವರು ಯಾರು? ಇದು ಕೂಡ ತನಿಖೆಯಾಗಬೇಕಲ್ಲವೇ? ಈ ರೀತಿಯ ವ್ಯವಸ್ಥೆ ಇವತ್ತು ನಮ್ಮ ರಾಜ್ಯದಲ್ಲಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ಇನ್ನು ಬೀದರ್‌ನಲ್ಲಿರುವ ಶಾಹೀನ್ ಶಾಲೆ. ಆ ಶಾಲೆಯಲ್ಲಿ ವಾರ್ಷಿಕೋತ್ಸವ ನಡೆಯುತ್ತದೆ.

**ಶ್ರೀ ಅರುಣ ಶಹಾಪುರ:–** ನೀವು ಹೇಳುತ್ತಿರುವುದರಲ್ಲಿ ಏನು ತಪ್ಪು ಇಲ್ಲ. ಅದು ಅರ್ಥಗರ್ಭಿತವಾಗಿದೆ. ಅದರ ಹಿಂದೆ ಇರುವುದೇ ಕಾಣದ ಕೈ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಾಣದ ಕೈ ಯಾರು ಎಂದು ಬೇಕಾದರೆ ನಾನು ನೇರವಾಗಿ ಹೇಳಬಲ್ಲೆ. ಯಾರ ಕಾಣದ ಕೈ ಮಂಗಳೂರಿನಲ್ಲಿದೆ ಎಂದು ನೇರವಾಗಿ ನಾನು ಹೇಳುತ್ತೇನೆ. ನಾವು ಈ ದೇಶವನ್ನು ರಕ್ಷಣೆ ಮಾಡತಕ್ಕಂಥವರು. ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದಂಥವರು ನಾವು. ನಾವು ಬೆಂಕಿ ಹಚ್ಚುವ ಕೆಲಸ ಮಾಡುವುದಿಲ್ಲ. ಅದನ್ನು ಅವರು ತಿಳಿದುಕೊಳ್ಳಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಿದ್ದೇವೆ. ಈ ದೇಶಕ್ಕೆ ಪ್ರಜಾಪ್ರಭುತ್ವವನ್ನು ತಂದಿದ್ದೇವೆ. ಸಂವಿಧಾನವನ್ನು ಕೊಟ್ಟಿದ್ದೇವೆ. ಈ ದೇಶದಲ್ಲಿ ನಾವು ಚುನಾವಣೆ ಮಾಡುವಂತಹ ವ್ಯವಸ್ಥೆಯನ್ನು ತಂದಿರುವುದಕ್ಕೆ ಅವರು ಇಲ್ಲಿಗೆ ಬಂದಿದ್ದಾರೆ.

(ಗೊಂದಲ)

**ಶ್ರೀ ಅರುಣ ಶಹಾಪುರ:–** ಗಾಂಧೀಜಿಯವರು ಕಾಂಗ್ರೆಸ್‌ನ್ನು ವಿಸರ್ಜನೆ ಮಾಡೋಣ ಎಂದು ಹೇಳಿದರು. ಅದರ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ. ಗಾಂಧಿ ಎಂದರೆ ಇಂದಿರಾ ಗಾಂಧಿ ಅಲ್ಲ, ಸೋನಿಯಾ ಗಾಂಧಿ ಅಲ್ಲ; 'ಗಾಂಧೀಜಿ ಎಂದರೆ, ಮಹಾತ್ಮ ಗಾಂಧೀಜಿ.'

**ಶ್ರೀ ಹೆಚ್.ಎಂ.ರೇವಣ್ಣ:–** ಗೋಡ್ಸೆ ಸಂಸ್ಕೃತಿ ಇರುವವರು ಗಾಂಧೀಜಿ ಬಗ್ಗೆ ಮಾತನಾಡುತ್ತೀರಲ್ಲಾ!?

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ನಮ್ಮದು ಗಾಂಧಿ ಸಂಸ್ಕೃತಿ, ನಿಮ್ಮದು ಗೋಡ್ಸೆ ಸಂಸ್ಕೃತಿ, ಸುಮ್ಮನೆ ಏಕೆ ಮಾತನಾಡುತ್ತೀರಿ?

ಮಾನ್ಯ ಸಭಾಪತಿಯವರೇ, ಶಾಹೀನ್ ಶಾಲೆಯಲ್ಲಿ ಶಾಲೆಯ ವಾರ್ಷಿಕೋತ್ಸವ ನಡೆಯುತ್ತದೆ. ಪ್ರತಿಯೊಂದು ಶಾಲೆಯೂ ಕೂಡ ವರ್ಷದ ಕೊನೆಯಲ್ಲಿ ವಾರ್ಷಿಕೋತ್ಸವ ಮಾಡತಕ್ಕಂಥದ್ದು ಸಹಜ. ಅದೇ ರೀತಿ ಆ ಶಾಲೆಯಲ್ಲೂ ವಾರ್ಷಿಕೋತ್ಸವ ನಡೆಯುತ್ತದೆ. 11 ವರ್ಷದ ಹೆಣ್ಣುಮಕ್ಕಳು ಒಂದು ನಾಟಕವನ್ನು ಮಾಡುತ್ತಾರೆ. ಆ ನಾಟಕದಲ್ಲಿ CAA (Citizenship (Amendment) Act) ಬಗ್ಗೆ ಅವೈಜ್ಞಾನಿಕವಾದ ಕಾನೂನನ್ನು ತಂದಿದ್ದಾರೆ ಎಂದು ಅದರ ಬಗ್ಗೆ ನಾಟಕವನ್ನು ಪ್ರದರ್ಶನ ಮಾಡುತ್ತಾರೆ. ನಾಟಕದಲ್ಲಿ ಆ ಮಗು ಹೇಳುತ್ತದೆ, "ಯಾರು ಬಂದು ನಮ್ಮ ದಾಖಲೆಗಳನ್ನು ಕೇಳುತ್ತಾರೆಯೋ; ಅಂದರೆ, ನಮ್ಮ ಅಜ್ಜ–ಅಜ್ಜಿ ಸತ್ತು ಮಣ್ಣಿನಲ್ಲಿ ಮಲಗಿದ್ದಾರೆ, ಅವರ ದಾಖಲೆಗಳನ್ನು ನಾನು ಎಲ್ಲಿಂದ ತಂದುಕೊಡಲಿ, ಆ ಗೋರಿಗಳನ್ನು ತೆಗೆದು ಅವರನ್ನು ಕೇಳುವುದಕ್ಕಾಗುತ್ತದೆಯೇ, ಯಾರು ದಾಖಲೆಗಳನ್ನು ಕೇಳುವುದಕ್ಕೆ ಬರುತ್ತಾರೆಯೋ ಅವರಿಗೆ ಚಪ್ಪಲಿಯಲ್ಲಿ ಹೊಡೆಯುತ್ತೇನೆ" ಎಂದು ಆ ಮಗು ಹೇಳುತ್ತದೆ. ಆ ಒಂದು ಹೇಳಿಕೆಗೋಸ್ಕರವಾಗಿ 11 ವರ್ಷದ ಹೆಣ್ಣುಮಗಳನ್ನು ಅರೆಸ್ಟ್ ಮಾಡಿಸುತ್ತಾರೆ. ಪೊಲೀಸರು ಬಂದು ಆ ಶಾಲೆಯ 52 ಮಕ್ಕಳನ್ನು ವಿಚಾರಣೆ ಮಾಡುತ್ತಾರೆ. ಆ ಮಗುವಿಗೆ ಪೊಲೀಸರು ಬೆದರಿಕೆ ಹಾಕುತ್ತಾರೆ, ಈ ಡೈಲಾಗ್‌ನ್ನು ಹೇಳಿಕೊಟ್ಟಿರುವುದು ನಿಮ್ಮ ತಾಯಿ ಎಂದು ಹೇಳು ಎಂದು ಪೊಲೀಸರು ಒತ್ತಡವನ್ನು ಹಾಕಿ ಆ ಮಗುವಿನ ಕೈಯಲ್ಲಿ ಸುಳ್ಳನ್ನು ಹೇಳಿಸುತ್ತಾರೆ. ಆಗ ಅವರ ತಾಯಿಯನ್ನು, ಆ ಶಾಲೆಯ ಮುಖ್ಯೋಪಾಧ್ಯಾಯರನ್ನು ದೇಶದ್ರೋಹದ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆರೋಪದ ಮೇಲೆ ಪ್ರಕರಣವನ್ನು ದಾಖಲಿಸಿ ಜೈಲಿಗೆ ಕಳುಹಿಸುತ್ತಾರೆ. ಆದರೆ ಇಂತಹದ್ದೇ ಒಂದು ಕೇಸ್ ಮಂಗಳೂರಿನ **XXX XXX XXX** ಅವರ ಶಾಲೆಯಲ್ಲಿ ನಡೆಯುತ್ತದೆ. ಅಲ್ಲಿಯೂ ಕೂಡ ಶಾಲೆಯ ವಾರ್ಷಿಕೋತ್ಸವ ನಡೆಯುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಯಾರ್ಯಾರೋ ವ್ಯಕ್ತಿಗಳ ಹೆಸರನ್ನು ಈ ಸದನದಲ್ಲಿ ಹೇಳುವುದು ಬೇಡ.

**ಶ್ರೀ ಎಂ.ನಾರಾಯಣಸ್ವಾಮಿ:–** ನೀವು ಎಲ್ಲದ್ದಕ್ಕೂ ಈ ರೀತಿ ಹೇಳಿದರೆ ನಾವೇನು ಮಾಡುವುದು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, **XXX XXX XXX** ಅವರ ಹೆಸರನ್ನು ಕಡತದಿಂದ ತೆಗೆಸಬೇಕು.

**ಶ್ರೀ ಎಂ.ನಾರಾಯಣಸ್ವಾಮಿ:–** ದಯಮಾಡಿ ಮಾನ್ಯ ಸಭಾನಾಯಕರು ಕುಳಿತುಕೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನೀವು ವ್ಯಕ್ತಿಗಳ ಹೆಸರನ್ನು ದಯವಿಟ್ಟು ಹೇಳಬೇಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಇಡೀ ದೇಶಕ್ಕೆ ಗೊತ್ತಿದೆ. ಎಲ್ಲಾ ಪತ್ರಿಕೆಗಳಲ್ಲೂ, ಮಾಧ್ಯಮಗಳಲ್ಲೂ ಬಂದಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಆಕ್ಷೇಪ ಮಾಡುತ್ತಿರುವುದು ವಿಷಯದ ಬಗ್ಗೆ ಅಲ್ಲ. ಈ ಸದನದಲ್ಲಿ ವ್ಯಕ್ತಿಗಳ ಹೆಸರನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಆಗದಿರುವಂತಹ ವ್ಯಕ್ತಿಗಳ ಹೆಸರನ್ನು ಉಲ್ಲೇಖ ಮಾಡುವುದು ಸರಿಯಲ್ಲ. ಅದಕ್ಕೋಸ್ಕರ ದಯವಿಟ್ಟು ಅದನ್ನು **ಕಡತದಿಂದ ತೆಗೆದು ಹಾಕಿ.**

**ಸಭಾಪತಿಯವರು:–** ಸರಿ.

---

**(XXX ಸಭಾಪತಿಯವರ ಆಜ್ಞಾನುಸಾರ ತೆಗೆದು ಹಾಕಲಾಗಿದೆ)**

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ಶಾಲೆಯಲ್ಲಿ ಬಾಬ್ರಿ ಮಸೀದಿಯನ್ನು ಒಡೆದಂಥದ್ದು, ಇದು ತಪ್ಪು ಎಂದು ಎಲ್ಲೂ ಪ್ರಸ್ತಾಪ ಮಾಡಬಾರದು ಎಂದು ಈ ದೇಶದ ಅತ್ಯುನ್ನತ ಸ್ಥಾನದಲ್ಲಿರುವ ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಈಗ ಆ ಶಾಲೆಯಲ್ಲಿ ನಾಟಕದ ರೂಪದಲ್ಲಿ ಕರಸೇವಕರು ಹೋಗಿ ಬಾಬ್ರಿ ಮಸೀದಿಯನ್ನು ಯಾವ ರೀತಿ ಧ್ವಂಸ ಮಾಡುತ್ತಾರೆಯೋ ಆ ರೀತಿ ಪ್ರದರ್ಶನ ಮಾಡುತ್ತಾರೆ. ಅವರ ಮೇಲೆ simple Petty Case ಹಾಕಿ ಕಳುಹಿಸಿ ಕೊಡುತ್ತಾರೆ. ಅವರ ವಿರುದ್ಧ ದೇಶದ್ರೋಹದ ಆರೋಪದ ಮೇಲೆ ಪ್ರಕರಣವನ್ನು ಹಾಕುವುದಕ್ಕೆ ಆಗುತ್ತಿರಲಿಲ್ಲವೇ? ಈ ರೀತಿ ತಾರತಮ್ಯ ಮಾಡುತ್ತಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ. ಅದನ್ನು ಬಿಟ್ಟು ಕೇವಲ ಹುಡುಕಿ ಹುಡುಕಿ ಯಾರು ಬೇರೆ ಕೋಮಿಗೆ ಸೇರಿದ್ದಾರೆಯೋ ಅಂಥವರನ್ನು ಗುರಿ ಮಾಡಿಕೊಂಡು ಅವರ ಮೇಲೆ ದೇಶದ್ರೋಹದ ಆರೋಪದ ಮೇಲೆ ಪ್ರಕರಣಗಳನ್ನು ಹಾಕತಕ್ಕಂಥ ಪರಿಪಾಠವನ್ನು ಅವರು ಪಾಲನೆ ಮಾಡಿಕೊಂಡು ಹೋಗುತ್ತಿದ್ದಾರೆ.

(ಮುಂದು)

**(66) 19/02/2020/3.50/ಎಸ್‌ಪಿಆರ್(ಬಿಕೆಪಿ)/ಬಿಎನ್‌ಎಸ್**

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು)**

ಇದು ಯಾವುದೇ ಸರ್ಕಾರದ ತಪ್ಪು ಎನ್ನುವಂತಹ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇತ್ತೀಚೆಗೆ ಕೆ.ಎಲ್.ಇ. ಕಾಲೇಜಿನಲ್ಲಿ ಮತ್ತೊಂದು ಪ್ರಕರಣ ನಡೆಯಿತು. "ಪಾಕಿಸ್ತಾನ ಜಿಂದಾಬಾದ್" ಎಂದು ಮೂರು ವಿದ್ಯಾರ್ಥಿಗಳು ಘೋಷಣೆ ಕೂಗುತ್ತಿದ್ದರು. ಬಿ.ಜೆ.ಪಿ. ಪಕ್ಷದ ಬಗ್ಗೆ ಮಾತನಾಡಿದರೆ ಆಡಳಿತ ಪಕ್ಷದವರಿಗೆ ಕೋಪ ಬರುತ್ತದೆ. "ಭಾರತ ಮಾತಾ ಕಿ ಜೈ" ಭಾರತ ಮಾತೆಯನ್ನು ಇವರುಗಳೇ ಗುತ್ತಿಗೆಗೆ ಪಡೆದುಕೊಂಡಂತೆ ವರ್ತಿಸುತ್ತಾರೆ. ನಾವೂ ಸಹ ಭಾರತೀಯರಾಗಿದ್ದೇವೆ. ನಾವೂ ಸಹ ಹಿಂದೂಗಳಾಗಿದ್ದೇವೆ. ಅವತ್ತಿನ ದಿವಸ ಪಾಕಿಸ್ತಾನಕ್ಕೆ ಜಿಂದಾಬಾದ್ ಎಂದು ಕೂಗಿದ ಸಂದರ್ಭದಲ್ಲಿದ್ದ ಆ ವಿದ್ಯಾರ್ಥಿಗಳು ಎಲ್ಲಿಂದ ಯಾವ ರೀತಿಯ ಸ್ಕಾಲರ್‌ಶಿಪ್ ತೆಗೆದುಕೊಂಡು ಬಂದರು ಎಂಬುದರ ಬಗ್ಗೆ ಹೇಳಿದ ತಕ್ಷಣವೇ ಆಡಳಿತ ಪಕ್ಷದವರಿಗೆ ಕೋಪ ಬರುತ್ತದೆ. ಅವರುಗಳು ಕೇಂದ್ರ ಸರ್ಕಾರದಿಂದ ಸ್ಕಾಲರ್‌ಶಿಪ್‌ನ್ನು ತೆಗೆದುಕೊಂಡು ಬಂದ ಆ ಮೂರು ವಿದ್ಯಾರ್ಥಿಗಳು ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದಾಗ ಅವರುಗಳನ್ನು ದಸ್ತಗಿರಿ ಮಾಡಿ ಠಾಣೆಗೆ ಕರೆದುಕೊಂಡು ಹೋಗಲಾಯಿತು. ಇದು ದೇಶದ್ರೋಹ ಅಲ್ಲವೇ? ಆ ವಿದ್ಯಾರ್ಥಿಗಳಿಗೆ ಠಾಣಾ ಜಾಮೀನು ನೀಡಿ ಮನೆಗೆ ವಾಪಸ್ಸು ಕಳುಹಿಸುತ್ತಾರೆ. ಇದು ನಿಮ್ಮ ಕಾನೂನೇ? ಪ್ರಧಾನಮಂತ್ರಿಗಳ ಕಛೇರಿಯಿಂದ ನೀಡಲಾಗುವ ಸ್ಕಾಲರ್‌ಶಿಪ್‌ನ್ನು ಪಡೆದುಕೊಂಡು ಆ ವಿದ್ಯಾರ್ಥಿಗಳು ಆಯ್ಕೆಯಾಗಿರುತ್ತಾರೆ. ನಾಳೆಯ ದಿನ ಎಲ್ಲಿ ಯಾವ ರೀತಿ ತೊಂದರೆಯಾಗುತ್ತದೆ ಎನ್ನುವ ಹುನ್ನಾರವನ್ನಿಟ್ಟುಕೊಂಡು ಆ ವಿದ್ಯಾರ್ಥಿಗಳಿಗೆ ಠಾಣಾ ಜಾಮೀನು ನೀಡಿ ಮನೆಗೆ ಕಳುಹಿಸಿಕೊಡಲಾಗುತ್ತದೆ. ಆಮೇಲೆ ಒತ್ತಡ ಹೆಚ್ಚಾದಾಗ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಧ್ಯಮದವರು ಬಂದ ಮೇಲೆ ಅವತ್ತಿನ ದಿವಸ ಎಚ್ಚೆತ್ತುಕೊಂಡು ಪುನಃ ಅವರುಗಳನ್ನು ದಸ್ತಗಿರಿ ಮಾಡುತ್ತಾರೆ. ಇದು ನ್ಯಾಯವೇ? ಇದು ಕಾನೂನೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ನೀಡುವ ಸ್ಕಾಲರ್‌ಶಿಪ್‌ಗೂ ಹಾಗೂ ಆ ವಿದ್ಯಾರ್ಥಿಗಳಿಗೂ ಯಾವುದೇ ಸಂಬಂಧವಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯಾವ ರೀತಿಯ ತಾರತಮ್ಯಗಳನ್ನು ಮಾಡುತ್ತಿದೆ ಎಂಬುದನ್ನು ಸರ್ಕಾರವು ಯೋಚನೆ ಮಾಡಬೇಕು. ನಾನು ಯೀಲ್ಡ್ ಆಗಿಲ್ಲ. ಆಡಳಿತ ಪಕ್ಷದವರು ಪದೇ ಪದೇ ಎದ್ದು ನಿಂತುಕೊಂಡು ಮಾತನಾಡುವುದಕ್ಕೆ ಹೋಗಬಾರದು. ಸರ್ಕಾರದಿಂದ ಯಾವ ರೀತಿಯಾಗಿ ಬೇಕೋ ಆ ರೀತಿಯಾಗಿ ಉತ್ತರ ಕೊಡಿಸಿ. ಅದಕ್ಕೆ ನಮ್ಮ ಆಕ್ಷೇಪಣೆ ಇರುವುದಿಲ್ಲ. ಮಂಗಳೂರಿನ ವಿಮಾನ ನಿಲ್ದಾಣದ ಹತ್ತಿರ ಬಾಂಬ್‌ವೊಂದು ಪತ್ತೆಯಾಯಿತು. ಈ ಸಂಗತಿಯನ್ನು ಮಾಧ್ಯಮದವರು ಬೆಳಿಗ್ಗೆಯಿಂದ ಪ್ರಸಾರ ಮಾಡಿದರು. ಬಾಂಬ್ ಸ್ಫೋಟಗೊಂಡರೆ ಇಡೀ ಮಂಗಳೂರು ವಿಮಾನ ನಿಲ್ದಾಣವು ಧ್ವಂಸಗೊಳ್ಳುತ್ತದೆ, ನೂರಾರು ಜನರ ಪ್ರಾಣ ಹಾನಿಯಾಗುತ್ತದೆ ಎಂಬುದಾಗಿ ಸುದ್ದಿಯನ್ನು ಬಿತ್ತರಿಸಿದರು. ನಾವು ಹೇಳುವುದನ್ನು ಆಡಳಿತ ಪಕ್ಷದವರು ಸ್ವಲ್ಪ ತಾಳ್ಮೆಯಿಂದ ಕೇಳಲಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ನಮ್ಮನ್ನು ಟೀಕೆ ಮಾಡಿದರೆ, . . .

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಹೇಳುವುದನ್ನು ಅವರು ಕೇಳಲಿ. ನಿಮ್ಮ ವರ್ತನೆ ಯಾವ ರೀತಿಯಾಗಿದೆ ಎಂದರೆ, ಬಾಂಬ್ ಸ್ಫೋಟಗೊಂಡರೆ ಆ ರೀತಿಯಾಗಿ ಆಗುತ್ತದೆ ಎಂದು ನಿಮ್ಮ ಗೃಹ ಮಂತ್ರಿಗಳೂ ಸಹ ಹೇಳಿಕೆಯನ್ನು ನೀಡುತ್ತಾರೆ. ಆ ಸಂಗತಿಯು ನಿಮಗೆ ತಿಳಿದಿದೆಯೇ? ಸದರಿ ಬಾಂಬ್ ಸ್ಫೋಟಗೊಂಡರೆ ಅಲ್ಲಿ ಎಲ್ಲವೂ ಛಿದ್ರ ಛಿದ್ರ ಆಗುತ್ತದೆ, ಎಷ್ಟು ಸಾವು-ನೋವು ಸಂಭವಿಸುತ್ತದೆ ಎಂಬುದಾಗಿ ಹೇಳಿದರು. ಸದರಿ ಬಾಂಬ್‌ನ್ನು ನಿಷ್ಕ್ರಿಯಗೊಳಿಸುವ ತಂಡವನ್ನು ಕರೆದುಕೊಂಡು ಹಾಗೂ ಮರಳಿನ ಮೂಟೆಗಳನ್ನು ತೆಗೆದುಕೊಂಡು ಪೂರ್ವ ಸಿದ್ಧತೆಯನ್ನು ಮಾಡಿಕೊಂಡು ಸಂಜೆಯ ಸಮಯದಲ್ಲಿ ಅದನ್ನು ಸ್ಫೋಟಗೊಳಿಸುತ್ತಾರೆ. ಆಗ ಬಾಂಬ್ ಢಂ ಎಂಬ ಶಬ್ದದಿಂದ ಒಡೆದು ಪಟಾಕಿ ತರಹ ಆಗುತ್ತದೆ. ಇದರ ಹಿಂದೆ ಯಾರ ಕೈವಾಡ ಇದೆ ಎಂದು ಹುಡುಕಿದಾಗ ಆದಿತ್ಯ ರಾವ್ ಎಂಬ ಎಂ.ಬಿ.ಎ., ಇಂಜಿನಿಯರಿಂಗ್ ವಿದ್ಯಾರ್ಥಿ ಸಿಕ್ಕಿಹಾಕಿಕೊಳ್ಳುತ್ತಾನೆ. ಅಲ್ಲಿಯವರೆಗೆ ಬಿ.ಜೆ.ಪಿ. ಪಕ್ಷ ಹಾಗೂ ಮಾಧ್ಯಮದವರು ಬಾಂಬ್ ಸ್ಫೋಟಗೊಂಡರೆ ಛಿದ್ರ ಛಿದ್ರ ಆಗುತ್ತಿತ್ತು ಎಂಬುದಾಗಿ ಹೇಳುತ್ತಿದ್ದರು. ಅಂತಹವರು ಒಂದೇ ನಿಮಿಷದಲ್ಲಿ ತಮ್ಮ ನಿರ್ಣಯವನ್ನು ಬದಲಾಯಿಸಿದರು. ಸದರಿ ವ್ಯಕ್ತಿಯು ಮಾನಸಿಕ ಅಸ್ವಸ್ಥ,

ಅವನೊಬ್ಬ mental patient ಎಂಬುದಾಗಿ ಹೇಳಿದರು. ಹೀಗಾಗಿ ಇದು ಬಾಂಬ್ ಅಲ್ಲ ಠುಸ್ ಪಟಾಕಿ ಎಂಬುದಾಗಿ ಹೇಳಿದರು. ಅದರಲ್ಲಿ ಚಿಣಿ ಮಿಣಿ ಪೌಡರ್ ಇತ್ತು ಎಂಬುದಾಗಿಯೂ ಸಹ ಹೇಳಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ಪ್ರಕರಣದಲ್ಲಿ ಯಾರದೇ ಕೈವಾಡವಿದ್ದರೂ ಸಹ ಅವರನ್ನು ದಸ್ತಗಿರಿ ಮಾಡಿ ಬಂಧಿಸಿ ಎಂಬುದಾಗಿ ಹೇಳಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. ಹೀಗಾಗಿ ಆಡಳಿತ ಪಕ್ಷದವರು ಪ್ರತಿಯೊಂದಕ್ಕೂ ಮಾತನಾಡುವುದು ಬೇಡ. ಅದೇ ಜಾಗದಲ್ಲಿ ಒಬ್ಬ ಮುಸ್ಲಿಂ ವ್ಯಕ್ತಿ ಇದ್ದಿದ್ದರೆ ನೀವು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೀರಿ.

**ಶ್ರೀ ಬಿ.ಸಿ.ಪಾಟೀಲ್ (ಕೃಷಿ ಸಚಿವರು):–** ಆ ವ್ಯಕ್ತಿಯನ್ನು ಈ ಹಿಂದೆ ಪ್ರಕರಣವೊಂದರಲ್ಲಿ ದಸ್ತಗಿರಿ ಮಾಡಿ ಬಿಡುಗಡೆ ಮಾಡಲಾಗಿತ್ತು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ಸಂದರ್ಭದಲ್ಲಿ ವೈಭವೀಕರಣ ಮಾಡುತ್ತಿದ್ದರು. ಆಡಳಿತ ಪಕ್ಷದವರು ಸುಮ್ಮನೆ ಕುಳಿತುಕೊಳ್ಳಲಿ. ಏಕೆ ಮಾತನಾಡುತ್ತಾರೆ. ನಾನು ಯೀಲ್ಡ್ ಆಗಿಲ್ಲ. ಆಡಳಿತ ಪಕ್ಷದವರು ಪದೇ ಪದೇ ಮಾತನಾಡುತ್ತಾರೆ. **(ಗೊಂದಲ)** ಆ ವ್ಯಕ್ತಿಯನ್ನು ಆಡಳಿತ ಪಕ್ಷದವರು ಏಕೆ ಸಮರ್ಥನೆ ಮಾಡಿಕೊಳ್ಳುತ್ತಾರೆ? ಆ ವ್ಯಕ್ತಿಯು ನಿಮ್ಮ ಪಕ್ಷದ ಕಾರ್ಯಕರ್ತ. ಹೋಟೆಲ್ ಒಂದರಲ್ಲಿ ಕೆಲಸ ಮಾಡಿಕೊಂಡು, ರೂಮಿನಲ್ಲಿ ಬಾಂಬ್‌ನ್ನು ತಯಾರಿಸಿದ್ದಾರೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪುರ:–** ಅಷ್ಟು ತರಾತುರಿಯಲ್ಲಿ ಮಾನಸಿಕ ಅಸ್ವಸ್ಥನೆಂದು ಹೇಳುವುದು ಅವಶ್ಯಕತೆ ಏನಿತ್ತು? ಇಂತಹ ಗುಮಾನಿಗಳು ನಿಮ್ಮ ಸರ್ಕಾರವನ್ನು ಕಾಡುತ್ತಿದೆ. ಇಂತಹ ಗುಮಾನಿಗಳ ಬಗ್ಗೆ ಚರ್ಚೆಯಾಗಲಿ. ಸದನ ಸಮಿತಿಗೆ ವಹಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಗುಮಾನಿ ಎಂದು ಹೇಳುವುದು ಬೇಡ. ವಾಸ್ತವಿಕವಾಗಿ ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್.ಬಿ.ತಿಮ್ಮಾಪುರ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಸತ್ಯ ಸಂಗತಿಯನ್ನು ಒಪ್ಪಿಕೊಳ್ಳಲಿ. ಯಾವುದೇ ವಿಷಯದಲ್ಲಿ ಸಂಶಯ ಬಂದಾಗ . . .

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರು ಮಾತನಾಡುವುದನ್ನು ಬಿಟ್ಟು ಬೇರೆ ಯಾರು ಮಾತನಾಡಿದರೂ ಸಹ ಅದು ದಾಖಲೆಗೆ ಹೋಗುವುದಿಲ್ಲ. ನಾರಾಯಣ ಸ್ವಾಮಿಯವರೆ ತಾವು ಮುಂದುವರೆಸಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ನಾನು ಮಾತನಾಡುವಾಗ ಮಧ್ಯದಲ್ಲಿ ಯಾರೂ ಮಾತನಾಡುವುದು ಬೇಡವೆಂದು ತಾವು ತಿಳಿಸಿ. ಅವರು ಸುಮ್ಮನೆ ಎದ್ದು ಮಾತನಾಡುತ್ತಾರೆ. ನಾನೇನು ಮಾಡಲಿ?

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರು ಮಾತನಾಡುವುದನ್ನು ಬಿಟ್ಟು ಬೇರೆ ಯಾರು ಮಾತನಾಡಿದರೂ ಸಹ ಅದು ದಾಖಲೆಗೆ ಹೋಗುವುದಿಲ್ಲ. ತಾವು ಮುಂದುವರೆಸಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಬಾಂಬಿನ ಪ್ರಕರಣ ಈ ರೀತಿಯಾಗಿ ಆಯಿತು. ಇದರ ಜೊತೆಗೆ ಸರ್ಕಾರಕ್ಕೆ ಮಾತೊಂದನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಪೊಲೀಸರು ಯಾವ ರೀತಿ ವರ್ತಿಸುತ್ತಾರೆ ಎಂಬ ಬಗ್ಗೆ ಹೇಳುತ್ತೇನೆ. ಮೊನ್ನೆಯ ದಿವಸ ಅಪರಾಹ್ನ ಎರಡೂವರೆ ಗಂಟೆಯಲ್ಲಿ ನಡೆದ ಘಟನೆಯಲ್ಲಿ ನಮ್ಮ ಪಕ್ಷದ ಶಾಸಕರೊಬ್ಬರ ಮಗ ಭಾಗಿಯಾಗಿರುವ ಬಗ್ಗೆ ಸುದ್ದಿಯಾಗುತ್ತದೆ. ಒಂದು ಕಡೆ ಸರಣಿ ಅಪಘಾತವಾಗುತ್ತದೆ. ಆ ಸಂದರ್ಭದಲ್ಲಿ ಯಾರಿಗೆ ಗಾಯವಾಗುತ್ತದೆ ಅವರನ್ನು ನೇರವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿ, ಅವರು ಮನೆಗೆ ಹಿಂದಿರುಗುತ್ತಾರೆ. ಆದರೆ ಪೊಲೀಸರು ಅವರನ್ನೇ ಹುಡುಕುತ್ತಾರೆ. ಆಗ ಶಾಸಕರ ಮಗ ಆ ಸಂದರ್ಭದಲ್ಲಿ ಅಲ್ಲಿರಲಿಲ್ಲ ಎಂಬುದಾಗಿ ಹೇಳುತ್ತಾನೆ. ನಂತರದಲ್ಲಿ ಅವರ ತಂದೆ ನನ್ನ ಮಗ ತಪ್ಪು ಮಾಡಿದ್ದರೆ ನಾನೇ ಜವಾಬ್ದಾರಿ ವಹಿಸಿಕೊಂಡು ಅವನನ್ನು ಠಾಣೆಗೆ ಕರೆದುಕೊಂಡು ಬರುವುದಾಗಿ ತಿಳಿಸುತ್ತಾರೆ. ಇಷ್ಟು ಹೊತ್ತಿಗೆ ಪೊಲೀಸರು ಆ ಹುಡುಗನ ಮೊಬೈಲ್ ಟವರ್ ಲೊಕೇಷನ್ ಮುಖಾಂತರ ಆತನು ಯಾವ ಸಮಯದಲ್ಲಿ ಘಟನಾ ಸ್ಥಳದಲ್ಲಿದ್ದನು ಎನ್ನುವುದನ್ನು ಹುಡುಕುವುದಕ್ಕೆ ಹೇಳುತ್ತಾರೆ. ಪೊಲೀಸರ ಈ ಕಾರ್ಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದು ಫೈನ್. ಪ್ರಕರಣದ ತನಿಖೆಯನ್ನು ಪೊಲೀಸರು ಈ ರೀತಿಯಾಗಿ ಮಾಡಬೇಕು. ಪೊಲೀಸರು ಟವರ್ ಲೊಕೇಷನ್‌ನ್ನು ಚೆಕ್ ಮಾಡಿದರು. ಆಗ ಆತನು ಯಾವ ಸಮಯದಲ್ಲಿ ಎಲ್ಲಿದ್ದನು ಎನ್ನುವುದು ಗೊತ್ತಾಗುತ್ತದೆ. ಅದೇ ರೀತಿಯಾಗಿ ಆಡಳಿತ ಪಕ್ಷದ ಮಂತ್ರಿಯೋರ್ವರ ಮಗ ಎರಡು ಜೀವಗಳನ್ನು ತೆಗೆದುಕೊಂಡರು ಅಂದರೆ ಇಬ್ಬರು ಮೃತಪಟ್ಟರು. ಮಾನ್ಯ ಮಂತ್ರಿಗಳಾದ ಶ್ರೀ ಅಶೋಕ್‌ರವರು ತಮ್ಮ ಮಗ ಘಟನಾ ಸ್ಥಳದಲ್ಲಿ ಇದ್ದ ಎಂಬುದಾಗಿ ಹೇಳಿದರು. ಆದರೆ ಮಂತ್ರಿಗಳ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಗ ಆ ಜಾಗದಲ್ಲಿ ಇರಲಿಲ್ಲ ಎಂಬುದಾಗಿ ಪೊಲೀಸರು ಹೇಳುತ್ತಾರೆ. **(ಗೊಂದಲ)** ಆಡಳಿತ ಪಕ್ಷದವರು ಕುಳಿತುಕೊಳ್ಳಲಿ. ನಿಜ ಹೇಳಿದರೆ ಅವರಿಗೆ ಕೋಪ ಬರುತ್ತದೆ. ಅವರು ಸುಮ್ಮನೆ ಕುಳಿತುಕೊಳ್ಳಲಿ. ನಾನು ಯೀಲ್ಡ್ ಆಗಿಲ್ಲ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಂತ್ರಿಗಳ ಮಗ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಆದರೆ, ವಿರೋಧ ಪಕ್ಷದ ಸದಸ್ಯರ ಮಗನೇ ಮಾಡಿದ್ದರೆ, ... **(ಗೊಂದಲ)** ಕೊಲೆ ಮಾಡಿರುವ ಬಗ್ಗೆ ಹೇಳುತ್ತಾರೆ.

**(ಗೊಂದಲ )**

**ಶ್ರೀ ಹೆಚ್.ಎಂ.ರೇವಣ್ಣ:–** ಪೇಪರ್‌ಗಳಲ್ಲಿ. . .

**ಶ್ರೀ ಎಂ.ಕೆ.ಪ್ರಾಣೇಶ್:–** ಕೊಲೆ ಮಾಡಿದ್ದಾರೆಂದು ಹೇಳುತ್ತಿದ್ದಾರೆ, ಇದಕ್ಕೆ ಏನಾದರೂ ಅರ್ಥ ಇದೆಯೇ? **(ಗೊಂದಲ)** ವಿರೋಧ ಪಕ್ಷದವರು ಏನೇನೋ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಈ ವಿಚಾರದಲ್ಲಿ ನಮಗೆ ಅನುಮಾನವಿದೆ.

**(ಗೊಂದಲ)**

**ಶ್ರೀ ಬಿ.ಸಿ.ಪಾಟೀಲ್:–** ಪ್ರಕರಣವು ತನಿಖಾ ಹಂತದಲ್ಲಿದೆ. ಹೀಗಿರುವಾಗ ಇದು ತನಿಖೆಯ ದಾರಿಯನ್ನು ತಪ್ಪಿಸುವಂತಹ ಕೆಲಸವಾಗುತ್ತದೆ. ತನಿಖೆಯನ್ನು mislead ಮಾಡಿದಂತಾಗುತ್ತದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಯಾವುದೇ misleading ಆಗುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಸಿ.ಪಾಟೀಲ್:–** ಪೊಲೀಸ್ ಅಧಿಕಾರಿಗಳಿಗೆ free entry ನೀಡಿದಾಗ ತನಿಖೆಯನ್ನು ಮಾಡುತ್ತಾರೆ. ಇದು ತನಿಖೆಯ ದಾರಿಯನ್ನು ತಪ್ಪಿಸುವಂತಹದ್ದಾಗಿದೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:** ಅಪಘಾತದಲ್ಲಿ ಸತ್ತವರ ದೇಹದ postmortem ಅನ್ನು ಮಾಡಿಸಿರುವುದಿಲ್ಲ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಈ ರೀತಿಯಾಗಿ ಪದೇ ಪದೇ ಮಾತನಾಡದೇ, ಪ್ರೂಫ್ ಇಟ್ಟುಕೊಂಡು ಮಾತನಾಡಲಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರು ಮಾತನಾಡುವುದನ್ನು ಬಿಟ್ಟು ಬೇರೆ ಯಾರು ಮಾತನಾಡಿದರೂ ಸಹ ಅದು ದಾಖಲೆಗೆ ಹೋಗುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:–** ಸರ್ಕಾರವು ಈ ವಿಚಾರದಲ್ಲಿ ಎಲ್ಲದಕ್ಕೂ ಉತ್ತರವನ್ನು ನೀಡಲಿ. ನಾವು ಬೇಡವೆಂದು ಹೇಳುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಸಿ.ಪಾಟೀಲ್:–** ವಿರೋಧ ಪಕ್ಷದವರೇ Police Station ಗೆ ಹೋಗಲಿ. ಹಾಗೂ ಅವರೇ witness ಅನ್ನು ಕೊಡಲಿ. **(ಗೊಂದಲ)** ಪೊಲೀಸ್ ಅಧಿಕಾರಿಗಳ ತನಿಖೆಯ ಹಾದಿಯನ್ನು ತಪ್ಪಿಸುವಂತಹ ಕೆಲಸವಾಗಬಾರದು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿಯವರು ಮಾತನಾಡುವುದನ್ನು ಬಿಟ್ಟು ಬೇರೆ ಯಾರು ಮಾತನಾಡಿದರೂ ಸಹ ಅದು ದಾಖಲೆಗೆ ಹೋಗುವುದಿಲ್ಲ. ನಾರಾಯಣಸ್ವಾಮಿಯವರು ಮಾತನಾಡಲಿ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಆಡಳಿತ ಪಕ್ಷದವರು ಈ ರೀತಿಯಾಗಿ ಮಾತನಾಡಿದರೆ, ನಾನೇನು ಮಾತನಾಡಲಿ? ಅವರನ್ನು ಸದನದ ಹೊರಗಡೆ ಕಳುಹಿಸಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ತಾವು ಪಾಯಿಂಟ್ ಆಫ್ ಆರ್ಡರ್‌ನ ಕಡೆಗೆ ಗಮನ ಕೊಡಬೇಕು. ಇದು ನನ್ನ ವಿನಂತಿಯಾಗಿದೆ.

**ಸಭಾಪತಿಯವರು:–** ಅದು ಯಾವುದು ಎಂದು ಹೇಳಿ.

**ಶ್ರೀ ಅರುಣ ಶಹಾಪುರ:–** ಅದು ಯಾವುದೆಂದು ಹೇಳುತ್ತೇನೆ. ಯಾವುದೇ ಆರೋಪವನ್ನು ಮಾಡಿದ ...

**ಸಭಾಪತಿಯವರು:–** ಅದು ಯಾವುದೆಂದು ಪುಟ ಸಂಖ್ಯೆ ಹಾಗೂ ಸೆಕ್ಷನ್ ಹೇಳಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಅರುಣ ಶಹಾಪುರ:–** ಅದು ಯಾವ ಸೆಕ್ಷನ್‌ದ್ದು ಎಂದು ನಂತರದಲ್ಲಿ ತಿಳಿಸುತ್ತೇನೆ. ಸದನದಲ್ಲಿ ಯಾವುದೇ ಆರೋಪವನ್ನು ಮಾಡುತ್ತಿರಬೇಕಾದರೆ, ಆಧಾರರಹಿತವಾದ ಆರೋಪವನ್ನು ಮಂತ್ರಿಗಳ ಮೇಲೆ ಮಾಡುವಂತಿಲ್ಲ.

**ಸಭಾಪತಿಯವರು:–** ನೀವು ಎಲ್ಲಾ ರೀತಿಯ ಭಾಷಣವನ್ನು ಮಾಡಿದ್ದೀರಿ.

**ಶ್ರೀ ಅರುಣ ಶಹಾಪುರ:–** ತಾವು ಸಭಾಪತಿಯವರ ಸ್ಥಾನದಲ್ಲಿದ್ದೀರಿ. ಇದನ್ನು ಕರ್ನಾಟಕ ರಾಜ್ಯವು ಗಮನಿಸುತ್ತಿದೆ. ನೀವು ನ್ಯಾಯ ನೀಡುವಂತಹ ಕೆಲಸವನ್ನು ಮಾಡಬೇಕು. **(ಗೊಂದಲ)**

**ಸಭಾಪತಿಯವರು:–** ತಾವು ಕುಳಿತುಕೊಳ್ಳಿ. ಶಹಾಪುರರವರೇ ನನಗೆ ನೀವು ಹೇಳಿಕೊಡಬೇಕಾಗಿಲ್ಲ. ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರು ಸರಿಯಾದ ನಿರ್ಣಯವನ್ನು ನೀಡಿದ್ದಾರೆ. ಮಾನ್ಯ ಸದಸ್ಯರು ನಿಯಮ 329 ರಡಿ ಕ್ರಿಯಾಲೋಪವನ್ನು ಎತ್ತಿದ್ದಾರೆ. ಆದರೆ ನಿಮ್ಮ ಕ್ರಿಯಾಲೋಪವನ್ನು ಮಾನ್ಯ ಸಭಾಪತಿಯವರು ಎತ್ತಿ ಹಿಡಿಯಲಿಲ್ಲ. ಅಲ್ಲಿಗೆ ಮುಗಿಯಿತು. ಮಾನ್ಯ ನಾರಾಯಣಸ್ವಾಮಿರವರು ಮಾತನಾಡುತ್ತಾರೆ. What is wrong in it?

(ಮುಂದು)

**(067) 19.02.2020 04.00 ಎಸ್‌ವಿ–ಕೆಎಸ್**

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ಪ್ರಕರಣದಲ್ಲಿ ಒಂದು ರೀತಿ, ಮತ್ತೊಂದು ಪ್ರಕರಣದಲ್ಲಿ ಒಂದು ರೀತಿ ಮಾಡಬಾರದು. ನಲಪ್ಪಾಡ್ ಪ್ರಕರಣದಲ್ಲಿ ಘಟನೆ ನಡೆದ ಸಮಯದಲ್ಲಿ ಅವರ ಮೊಬೈಲ್ ಟವರ್ ಎಲ್ಲಿತ್ತು ಎಂಬುದನ್ನು ಪರಿಶೀಲನೆ ಮಾಡಿ ಎಂದು ಹೇಳುತ್ತಾರೆ. ಅದೇ ರೀತಿಯಾಗಿ ಮಂತ್ರಿಗಳ ಮಗನ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರು ಮಾತನಾಡಿರುವುದನ್ನು ಹೊರತುಪಡಿಸಿ ಬೇರೆಯವರು ಯಾರು ಮಾತನಾಡಿದ್ದರೂ ಅದು ದಾಖಲೆಗೆ ಹೋಗುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಲಪ್ಪಾಡ್ ಅವರ ಪ್ರಕರಣದಲ್ಲಿ ಅವರು ಎಲ್ಲಿದ್ದರೆಂಬುದನ್ನು ಪತ್ತೆ ಹಚ್ಚುವುದಕ್ಕೆ ಅವರ ಮೊಬೈಲ್ ಟವರ್ ಅನ್ನು ಪೊಲೀಸರು ಪರಿಶೀಲಿಸುತ್ತಾರೆ. ಅದೇ ಇನ್ನೊಂದು ಅಪಘಾತ ಪ್ರಕರಣದಲ್ಲಿ ಇಬ್ಬರು ಸತ್ತಿದ್ದು, ಆ ವೇಳೆಯಲ್ಲಿ ಆ ವ್ಯಕ್ತಿ ಎಲ್ಲಿದ್ದರೆಂಬುದಕ್ಕೆ ಏಕೆ ಅವರ ಮೊಬೈಲ್ ಟವರ್ ಚೆಕ್ ಮಾಡಲಿಲ್ಲ? ಎಫ್.ಐ.ಆರ್. ಹಾಕುವುದಕ್ಕಿಂತ ಮುಂಚಿತವಾಗಿ ಆ ಪೊಲೀಸ್ ಅಧಿಕಾರಿ “ಆ ವ್ಯಕ್ತಿಯು ಘಟನೆ ನಡೆದ ಸ್ಥಳದಲ್ಲಿ ಇರಲಿಲ್ಲ” ಎಂದು ಹೇಳುತ್ತಾರೆ. ಇನ್ನೂ ಈ ಪ್ರಕರಣದಲ್ಲಿ ತನಿಖೆಯಾಗಿಲ್ಲ, ಪರಿಶೀಲನೆಯಾಗಿಲ್ಲ. ಆಗಲೇ ಮಂತ್ರಿಗಳ ಮಗ ಅಲ್ಲಿರಲಿಲ್ಲ ಎಂದು ಹೇಳುತ್ತಿದ್ದಾರೆ. ಇದು ಹುನ್ನಾರವಲ್ಲವೆ? ಒಂದೊಂದು ಪ್ರಕರಣದಲ್ಲಿ ಒಂದೊಂದು ರೀತಿಯಾಗಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆಯೇ? ಆಗಲೇ ನಮ್ಮ ಮಿತ್ರರಾದ ಮಾನ್ಯ ತಿಪ್ಪಣ್ಣ ಕಮಕನೂರ ಅವರು ಮಾತನಾಡುತ್ತಾ ಕೆಲವೊಂದು ಕಡೆಯಲ್ಲಿ ಈಗ ಅರಾಜಕತೆ ಆಗಿದ್ದು, atrocity case ಗಳನ್ನು ಹಾಕಿಸಲಾಗುತ್ತಿದೆ ಎಂದು ಹೇಳಿದರು. ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ. ಕೆ.ಆರ್.ಪುರಂ ವಿಧಾನಸಭಾ ಕ್ಷೇತ್ರದಲ್ಲಿ ಮೊನ್ನೆ ನಡೆದ ಉಪ ಚುನಾವಣೆಯಲ್ಲಿ ನಮ್ಮ ಪಕ್ಷದ ಪರವಾಗಿ ಕಾರ್ಯಕರ್ತನೊಬ್ಬ ಕೆಲಸ ಮಾಡಿದುದಕ್ಕೆ ಅವರನ್ನು ತಮ್ಮ ಪಕ್ಷಕ್ಕೆ ಬರಬೇಕೆಂದು ಕೇಳಿದರು. ಆಗ ಆ ಕಾರ್ಯಕರ್ತನು ನೀವು ನಮ್ಮ ಪಕ್ಷಕ್ಕೆ ದ್ರೋಹ ಮಾಡಿ ಹೋಗಿದ್ದೀರಿ. ನಾನು ಕಾಂಗ್ರೆಸ್‌ನಲ್ಲಿಯೇ ಇರುತ್ತೇನೆ ಎಂದು ಹೇಳಿದುದಕ್ಕೆ ಅವನ ವಿರುದ್ಧ ಪಕ್ಕದ ಮನೆಯವರ ಕಡೆಯಿಂದ atrocity case ಅನ್ನು ಹಾಕಿಸಿ 50 ದಿನಗಳಿಂದ ಜಾಮೀನು ದೊರೆಯದೆ ಅಲೆಯುತ್ತಿದ್ದಾನೆ. ಪೊಲೀಸರು ಈ ಮಟ್ಟಕ್ಕೆ ಹೋಗಿದ್ದಾರೆ ಮತ್ತು ಸ್ಥಳೀಯ ಶಾಸಕರು ಅವರ ಮೇಲೆ ಒತ್ತಡವನ್ನು ತರುತ್ತಿದ್ದಾರೆ. ಇದೇ ರೀತಿ ಪೊಲೀಸರದ್ದು ಇನ್ನೊಂದು ನಿದರ್ಶನವಿದೆ. ಅಲ್ಲಿನ ಶಾಸಕರಾದವರು ಈಗ ಸಚಿವರಾಗಿದ್ದಾರೆ. ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಸೇವೆಯಲ್ಲಿರುವ ಮೂರು ಜನ ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಬೆಳ್ಳಿ ಗದೆಯನ್ನು ಉಡುಗೊರೆಯನ್ನಾಗಿ ನೀಡುತ್ತಾರೆ. ಅವರ ಪಕ್ಷದ ಕಾರ್ಯಕರ್ತರಂತೆ ಜೈಕಾರ ಕೂಗುತ್ತಾರೆ. ಇವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಮಾನ್ಯ ಸಭಾನಾಯಕರು ಇದನ್ನು ನೋಟ್ ಮಾಡಿಕೊಳ್ಳಬೇಕು. ಇದಕ್ಕೆ ಉತ್ತರವನ್ನು ಕೊಡಬೇಕು. ಸೇವೆಯಲ್ಲಿರುವ ಪೊಲೀಸ್ ಅಧಿಕಾರಿಗಳಿಗೆ ಬೆಳ್ಳಿ ಗದೆಯನ್ನು ನೀಡುವಷ್ಟು ದುಡ್ಡು ಎಲ್ಲಿಂದ ಬಂತು? ವೇದಿಕೆಯ ಮೇಲೆ ಕುಳಿತು ಕಾರ್ಯಕರ್ತನ ರೀತಿಯಲ್ಲಿ ಜೈಕಾರ ಹಾಕುತ್ತಿರುವವರು ತಮ್ಮ ಪೊಲೀಸ್ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿ, ಸಮವಸ್ತ್ರವನ್ನು ತೆಗೆದಿರಿಸಿ, ಹೋಗಿ ಕಾರ್ಯಕರ್ತರಾಗಿ ಕೆಲಸ ಮಾಡಬೇಕು. ಪೊಲೀಸರು ಹೀಗೆಯೇ ಕಾರ್ಯ ನಿರ್ವಹಿಸುವುದು? ಇವರ ಕಾರ್ಯವೈಖರಿಯನ್ನು ಪ್ರಶ್ನಿಸುವವರು ಯಾರೂ ಇಲ್ಲವೇ?

ಮಾನ್ಯ ಮುಖ್ಯಮಂತ್ರಿಯವರಿಗೆ ಉತ್ತಮವಾದ ಆಡಳಿತ ಕೊಡಬೇಕೆಂಬ ಆಸೆ ಇದೆ. ಮಾನ್ಯ ಆಯನೂರು ಮಂಜುನಾಥ್‌ರವರು ನಿನ್ನೆ ಮಾತನಾಡುವಾಗ ಒಳ್ಳೆಯ ಮಾತನ್ನು ಹೇಳಿದರು. ನೆರೆ ಬಂದ ಸಂದರ್ಭದಲ್ಲಿ ಸರ್ಕಾರದಲ್ಲಿ ಪೂರ್ಣ ಮಂತ್ರಿಮಂಡಲ ಇರಲಿಲ್ಲ. ಮುಖ್ಯಮಂತ್ರಿಗಳೊಬ್ಬರೇ ಕಾಲಿಗೆ ಚಕ್ರ ಕಟ್ಟಿಕೊಂಡು ಓಡಾಡಿದರು ಎಂದು ಹೇಳಿದರು. ಅವರು ಅದನ್ನು ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಬೇಕು. ಕಾಲಿಗೆ ಚಕ್ರವಲ್ಲ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಓಡಾಡಿದರು. ಏಕೆಂದರೆ ಯಾರಿಗೆ ಬೇಕಾಗಿತ್ತು ಈ ಮುಖ್ಯಮಂತ್ರಿ ಕುರ್ಚಿ? ನನ್ನನ್ನು ಈ ರೀತಿ ಆಟ ಆಡಿಸುತ್ತಿದ್ದಾರೆ. ಒಂದು ಮಂತ್ರಿ ಮಂಡಲ ಮಾಡಲು ಬಿಡುತ್ತಿಲ್ಲ. ಖಾತೆಗಳ ಹಂಚಿಕೆ ಮಾಡಲು ಬಿಡುತ್ತಿಲ್ಲ. ನಾನು ಕೆಲಸ ಮಾಡುವುದಕ್ಕೆ ಬಿಡುತ್ತಿಲ್ಲ ಎನ್ನುವ ಅವರ ದುಃಖ ಯಾರ ಬಳಿ ಹೇಳಿಕೊಳ್ಳುತ್ತಾರೆ? ಅವರ ಪರಿಸ್ಥಿತಿ ಹೀಗಾಗಿ ಹೋಗಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಇವರು ಕೊಟ್ಟಿದ್ದ ಕಾಟಕ್ಕೆ ಮಾನ್ಯ ಮುಖ್ಯಮಂತ್ರಿಯವರು ತಂತಿಯ ಮೇಲೆ ನಡೆಯುತ್ತಿದ್ದೇನೆ ಎಂದು ಹೇಳಿದ್ದರು. ಅದನ್ನು ನೆನಪು ಮಾಡುತ್ತಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಇದುವರೆವಿಗೂ ನಾವು ಮಾತನಾಡಿದ್ದೇವೆ, ನಾವು ಹಾಗೂ ಆಡಳಿತ ಪಕ್ಷದವರು ಭಾವಚಿತ್ರಗಳನ್ನು ತೋರಿಸಿದ್ದೇವೆ. ಈಗ ಅದೆಲ್ಲಾ ಈ ಮನೆಯ ಸ್ವತ್ತಾಗಿದೆ. ನಾವು ತಪ್ಪು ಮಾಡಿದ್ದರೆ ನಮ್ಮ ಮೇಲೆ ಕಾನೂನು ಕ್ರಮ ಕೈಗೊಳ್ಳಲಿ. ಅವರು ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ಕೈಗೊಳ್ಳಲಿ. ಸತ್ಯ ಹೊರಬರಬೇಕಾದರೆ ಇದರ ಬಗ್ಗೆ ಒಂದು ಸದನ ಸಮಿತಿ ರಚನೆಯಾಗಲೇ ಬೇಕು. ಇಲ್ಲವಾದಲ್ಲಿ ನ್ಯಾಯಾಂಗ ತನಿಖೆಯನ್ನು ನಡೆಸಬೇಕು. ಈ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಾಯಬಾರದು. ಎಲ್ಲರಿಗೂ ನ್ಯಾಯ ಸಿಗಬೇಕು. ಕೇವಲ ಒಂದು ಧರ್ಮವನ್ನು ಓಲೈಸಿ, ಇನ್ನೊಂದು ಧರ್ಮವನ್ನು ದ್ವೇಷ ಮಾಡುವುದಲ್ಲ. ಕರ್ನಾಟಕದ ಆರೂಕಾಲು ಕೋಟಿ ಜನತೆ ಸಂತೋಷದಿಂದ ಬದುಕಬೇಕಾಗಿದೆ. ಅದಕ್ಕಾಗಿ ಸದನ ಸಮಿತಿ ಅಥವಾ ನ್ಯಾಯಾಂಗ ತನಿಖೆಯಾಗಬೇಕೆಂದು ಕೇಳಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟಗಳು, ಪ್ರತಿಭಟನೆಗಳು ಎಲ್ಲವೂ ಸಹಜವಾಗಿ ನಡೆಯುತ್ತಿರುತ್ತವೆ. ಪ್ರತಿಭಟನೆಗಳಿಗೆ ಅವಕಾಶವನ್ನು ಕೊಟ್ಟಾಗ ಅವುಗಳಿಗೆ ಇತಿಮಿತಿಗಳನ್ನು ಕೂಡ ಇಟ್ಟಿರುತ್ತಾರೆ. ಪ್ರತಿಭಟನೆಗಳು ತಮ್ಮ ಇತಿ-ಮಿತಿಗಳನ್ನು ಮೀರಿದಾಗ ಪೋಲೀಸ್ ಇಲಾಖೆಯವರು ಅಥವಾ ಸಂಬಂಧಪಟ್ಟ ಇಲಾಖೆಯವರು ಅವುಗಳಲ್ಲಿ ಹಸ್ತಕ್ಷೇಪವನ್ನು ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಕಾರಣವಿಷ್ಟೆ. ಇದು ಸದನ. ಸದನದಲ್ಲಿ ಹಿರಿಯರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ನಿಯಮ 68ರ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸಿದರು. ನಿಜವಾಗಿಯೂ ಇದು ಒಳ್ಳೆಯ ವಿಚಾರ. ಇದನ್ನು ನಾವೆಲ್ಲರೂ ಸ್ವಾಗತ ಮಾಡುತ್ತೇವೆ. ಅವರು ಹಿರಿಯರು, ಎಲ್ಲರೂ ಅವರನ್ನು ಗೌರವದಿಂದ ಕಾಣುತ್ತೇವೆ. ಆದರೆ ಅವರು ತಮ್ಮ ಆತ್ಮಸಾಕ್ಷಿಗೆ ವಿರುದ್ಧವಾಗಿ ಮಾತನಾಡಿಬಿಟ್ಟರೇನೋ ಎಂದು ನನಗನ್ನಿಸಿತು. ಏಕೆಂದರೆ ನಡೆದಿರುವ ಘಟನೆಗಳೆಲ್ಲಾ ಅವರ ಮನದಲ್ಲಿ ಅಚ್ಚೊತ್ತಿದೆ. ಆದರೆ ಅನಿವಾರ್ಯವಾಗಿ ವಿರೋಧಪಕ್ಷದಲ್ಲಿದ್ದೇನೆ ಎನ್ನುವ ಏಕೈಕ ದೃಷ್ಟಿಯಿಂದ ಅವರು ಹಾಗೆ ಮಾತನಾಡಿದ್ದಾರೆ ಎನಿಸಿತು. ಇದು ನನ್ನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವೈಯಕ್ತಿಕ ಅಭಿಪ್ರಾಯ. ಏಕೆಂದರೆ ಅವರು ಆಡಳಿತ ಪಕ್ಷದಲ್ಲಿದ್ದಾಗಲೂ ನಾನು ನೋಡಿದ್ದೇನೆ. ಆಗಲೂ ಸಹ ಕೆಲವೊಮ್ಮೆ ಅವರು ನೇರವಾಗಿ ವಿರೋಧವನ್ನು ಮಾಡಿದ್ದಾರೆ. ಆಡಳಿತ ಪಕ್ಷದಲ್ಲಿದ್ದಾಗ ವಿರೋಧಪಕ್ಷದವರು ಹೇಳುತ್ತಿರುವುದು ಸರಿಯಿದೆ ಎಂದು ಹೇಳಿರುವುದನ್ನು ಕೂಡ ನೋಡಿದ್ದೇವೆ. ಆದರೆ ನಿನ್ನೆ ಅವರು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಕೆಲವು ಕಾನೂನನ್ನು ಇಟ್ಟುಕೊಂಡು ಪೊಲೀಸರ ಆತ್ಮಸ್ಥೈರ್ಯವನ್ನು ಕುಗ್ಗಿಸುವಂತಹ ಕೆಲಸಕ್ಕೆ ಕೈಹಾಕಿಬಿಟ್ಟರೇನೋ ಎಂದು ನನಗನ್ನಿಸಿತು. ಏಕೆಂದರೆ ಇವರು ಸರ್ಕಾರವನ್ನು ನಡೆಸುವಾಗ ಪೊಲೀಸ್ ಇಲಾಖೆ ಒಳ್ಳೆಯದು. ಆದರೆ ಇನ್ನೊಂದು ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಪೊಲೀಸ್ ಇಲಾಖೆ ಕೆಟ್ಟದು. ಹಾಗೆ ಆಗಲು ಹೇಗೆ ಸಾಧ್ಯ? ಅದೇ ಪೊಲೀಸ್‌ನವರು, ಅದೇ ವ್ಯವಸ್ಥೆ. ಯಾವಾಗಲೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಾಗ ಅನಿವಾರ್ಯವಾಗಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಪರಿಸ್ಥಿತಿಗಳು ಬರುತ್ತದೆ ಎಂಬುದು ನಮಗೂ ನಿಮಗೂ ತಿಳಿದಿರುವ ಸತ್ಯ.

**(ಈ ಹಂತದಲ್ಲಿ ವೈಸ್ ಚೇರ್ಮನ್ ಆದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸಭಾಪತಿ ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಪ್ರಾಣೇಶ್‌ರವರೇ, ನೀವು ನನ್ನ ಬಗ್ಗೆ ಗೌರವದ ಮಾತುಗಳನ್ನಾಡಿದ್ದೀರಿ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ನಾನು ಯಾವತ್ತೂ ನನ್ನ conscious ಗೆ ವಿರುದ್ಧವಾಗಿ ನಡೆದುಕೊಳ್ಳುವುದಿಲ್ಲ. ಏಕೆಂದರೆ ದಾಖಲೆಗೆ ತಪ್ಪಾಗಿ ಹೋಗಬಾರದು. ನನ್ನ ಪಕ್ಷದ ತಪ್ಪುಗಳಿದ್ದಾಗ ನೇರವಾಗಿ ಖಡಾಖಂಡಿತವಾಗಿ ಹೇಳಿದ ಹತ್ತಾರು ಉದಾಹರಣೆಗಳನ್ನು ನಿಮಗೆ ನಾನು ನೀಡುತ್ತೇನೆ. ನಾನು ಆಡಳಿತ ಪಕ್ಷದಲ್ಲಿದ್ದಾಗಲೂ ಹಾಗೆಯೇ ಇದ್ದೆನು. ವಿರೋಧಪಕ್ಷದಲ್ಲಿಯೂ ಕೂಡ ಹಾಗೆಯೇ ಇದ್ದೇನೆ. I will never go against my conscious. It is my way of life and style of functioning. ಅದಕ್ಕಾಗಿ ನಾನು ಕಾನೂನುಗಳನ್ನು ಓದಿ ಹೇಳಿದೆನು. ಪೊಲೀಸ್ ಫೈರಿಂಗ್‌ಗಿಂತಲೂ ಮೊದಲು ಏನು ನಿಯಮಗಳಿವೆ, ಪೊಲೀಸ್ ಫೈರಿಂಗ್ ನಂತರ ಇರುವ ನಿಯಮಗಳೇನು ಎಂದು ಹೇಳಿದೆನು. ಇಲ್ಲಿ ಎಲ್ಲಾ ಹಿರಿಯ ಪೊಲೀಸ್ ಅಧಿಕಾರಿಗಳು ಇದ್ದಾರೆ. ಆ ನಿಯಮಗಳನ್ನು ಇವರು ಸರಿಯಾಗಿ ಪಾಲನೆ ಮಾಡಿಲ್ಲ ಎನ್ನುವ ಸಲುವಾಗಿ ನಾನು ಅವುಗಳನ್ನು ಓದಿ ಹೇಳಿದೆನು. I will never go against my conscious. It is my way of life.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೆ, ಮಾನ್ಯ ಎಸ್.ಆರ್.ಪಾಟೀಲ್‌ರವರು ಹಿರಿಯರಿದ್ದಾರೆ. ಅವರ ಮನಸ್ಸಿಗೇನಾದರೂ ನೋವಾಗಿದ್ದರೆ ದಯವಿಟ್ಟು ಕ್ಷಮೆ ಇರಲಿ. ಆದರೆ ನನಗನ್ನಿಸಿದ್ದನ್ನು ನಾನು ತಮ್ಮ ಮುಂದೆ ಹೇಳಿದ್ದೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಈ ಸದನದ ಬಗ್ಗೆ ಹೊರಗಿನ ಜಗತ್ತಿಗೆ ಎಷ್ಟೊಂದು ಗೌರವ, ಅಭಿಮಾನವಿದೆ ಎಂದು ನನಗೆ ಅನ್ನಿಸುತ್ತದೆ. ಆದರೆ ಇಂದು ನಾವು ಮಾತನಾಡುತ್ತಿರುವ ವಿಚಾರಗಳು ಎಲ್ಲಿಯೋ ಮನರಂಜನೆಯ ಭಾಗವಾಗಿದೆಯೇನೋ ಎಂದೆನಿಸುತ್ತಿದೆ. ಏಕೆಂದರೆ ನನ್ನ ಮನಸ್ಸಿನಲ್ಲಿರುವ ವೈಯಕ್ತಿಕ ವಿಚಾರಗಳನ್ನು ಇಲ್ಲಿ ತರುವ ಪ್ರಯತ್ನವಾಗುತ್ತಿದೆ. ಸದನ ಇರುವುದು ನಮ್ಮ ವೈಯಕ್ತಿಕ ವಿಚಾರಗಳನ್ನು ತರಲಿಕ್ಕೆ ಅಲ್ಲ. ಜನರ ಸಮಸ್ಯೆಗಳು ಪರಿಹಾರವಾಗಬೇಕು. ಈ ರಾಜ್ಯದ ಆಡಳಿತದಲ್ಲಿ ಇರುವ ಅವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಸರಿಪಡಿಸುವ ಪ್ರಯತ್ನವಾಗಬೇಕು. ನಾವು ಸದನದೊಳಗೆ ಇಂದು ಯೋಚನೆ ಮಾಡಬೇಕು. ರಾಜ್ಯದಲ್ಲಿರುವ ಆರು ಕೋಟಿ ಜನತೆಯನ್ನು 75 ಜನ ಪ್ರತಿನಿಧಿಸುತ್ತೇವೆ ಎಂದರೆ ನಮ್ಮ ಮೇಲಿನ ಜವಾಬ್ದಾರಿ ಎಷ್ಟು ಎಂಬುದರ ಅರಿವು ನಮಗಿರಬೇಕು. ಇಲ್ಲಿ ನೋಡುತ್ತಿದ್ದರೆ ನಾವು ಮೂಲ ಉದ್ದೇಶಗಳನ್ನು ಕೈಬಿಡುತ್ತಿದ್ದೇವೆ. ಯಾವುದೋ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ರೀತಿಯಾಗಬಾರದು ಎಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಹುಬ್ಬಳ್ಳಿಯ ಪ್ರಕರಣವಿರಬಹುದು ಅಥವಾ ಮಂಗಳೂರಿನಲ್ಲಾದ ಗಲಭೆಯಿರಬಹುದು. ಎಲ್ಲರಿಗೂ ಗೊತ್ತಿರುವ ವಿಚಾರ. ಕೇವಲ ವಿರೋಧ ಮಾಡಬೇಕೆಂದು ವಿರೋಧ ಮಾಡುವುದು ಬೇಡ ಅಥವಾ ನಾವು ಆಡಳಿತ ಪಕ್ಷದಲ್ಲಿದ್ದೇವೆ, ನಾವು ಮಾಡುವುದೆಲ್ಲವೂ ಸರಿ ಎನ್ನುವ ಭಾವನೆಯೂ ನಮ್ಮಲ್ಲಿಲ್ಲ. ಹಾಗಿದ್ದ ಮೇಲೆ ಮಂಗಳೂರಿನಲ್ಲಿ ಗಲಭೆಯಾದ ಸಂದರ್ಭದಲ್ಲಿ ಆಗಿದ್ದೇನು? ಅಲ್ಲಿನ ಸ್ಥಳೀಯ ಶಾಸಕರು ಸಾಕಷ್ಟು ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಆದರೆ ನಿಜವಾಗಿಯೂ ಹೇಳುತ್ತೇನೆ. ಅಲ್ಲಿ ಮುಸಲ್ಮಾನರೂ ಕೆಟ್ಟವರೆಂದು ಹೇಳುವುದಿಲ್ಲ, ಹಿಂದೂ–ಮುಸಲ್ಮಾನರಿಗೆ ಭೇದ–ಭಾವ ಇದೆಯೆಂದೂ ನಾನು ಹೇಳುವುದಿಲ್ಲ. ಆದರೆ ಅದನ್ನು ಪ್ರಚೋದನೆ ಮಾಡಿದವರು ಯಾರು ಎನ್ನುವುದನ್ನು ಹುಡುಕಬೇಕಾಗಿದೆ.

ಘಟನೆ ನಡೆದಿರುವುದು ಮಂಗಳೂರಿನಲ್ಲಿ. ಸಾಕಷ್ಟು ವಿಚಾರಗಳನ್ನು ಮಾನ್ಯ ಎಂ.ನಾರಾಯಣಸ್ವಾಮಿಯವರು ಪ್ರಸ್ತಾಪ ಮಾಡಿದರು. ಕೇರಳದಿಂದ ಎಸ್.ಟಿ.ಎಫ್. ಅವರು ಬರುವ ಅವಶ್ಯಕತೆ ಏನಿತ್ತು? ಮಂಗಳೂರಿಗೆ ಕೇರಳದವರು ಬಂದು ಪ್ರತಿಭಟನೆ ಮಾಡುವ ಅವಶ್ಯಕತೆ ಏನಿತ್ತು? ಏನಾದರೂ ಮಾಡಿ ಇಲ್ಲಿ ಗಲಭೆಯನ್ನು ಹುಟ್ಟುಹಾಕಬೇಕೆಂಬುದು ಅವರ ಉದ್ದೇಶವಾಗಿತ್ತು. CAA [Citizenship (Amendment) Act] ವರದಿಯ ವಿರುದ್ಧ ಹೋರಾಟ ಮಾಡಲಿ. ಹೋರಾಟ ಮಾಡಲು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶಗಳಿದೆ ಎಂದು ಮಾನ್ಯ ಪ್ರಧಾನಿಗಳಾದ ಶ್ರೀ ನರೇಂದ್ರ ಮೋದಿಯವರು ಮತ್ತು ಮಾನ್ಯ ಗೃಹಸಚಿವರಾದ ಶ್ರೀ ಅಮಿತ್ ಷಾ ಅವರು ಹೇಳಿದ್ದಾರೆ. ಆದರೆ ಅದು ಯಾವುದೇ ಅತಿರೇಕಕ್ಕೆ ಹೋಗಬಾರದು. ಅತಿರೇಕಕ್ಕೆ ಹೋದಂತಹ ಸಂದರ್ಭದಲ್ಲಿ ಕಾನೂನಿನಡಿಯಲ್ಲಿ ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಾಗುತ್ತದೆ ಎಂಬುದನ್ನು ಕೂಡ ಅವರು ಹೇಳಿದ್ದಾರೆ. ನಾನು ಮೊದಲೇ ಹೇಳಿದಂತೆ ಪ್ರಜಾಪ್ರಭುತ್ವ ಎಂಬುದನ್ನು ಮತ್ತೊಮ್ಮೆ ಮತ್ತೊಮ್ಮೆ ಒತ್ತಿ ಹೇಳುತ್ತಿದ್ದೇನೆ.

**(...ಮುಂದು)**

(68) 19.02.2020 KG.KS 4.10

**ಶ್ರೀ ಎಂ.ಕೆ.ಪ್ರಾಣೇಶ್ (ಮುಂದು)**

ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ ಇತಿಮಿತಿಗಳು ಇರುತ್ತವೆ ಎಂಬುದನ್ನು ನಾವು ನೀವುಗಳು ಅರ್ಥ ಮಾಡಿಕೊಳ್ಳಬೇಕು. ಹೌದು, ಯಾವುದೋ ಒಂದು ತೊಂದರೆ ಮಾಡಿಬಿಟ್ಟು ಪ್ರಜಾಪ್ರಭುತ್ವದಲ್ಲಿ ಇದೆ ಎಂದು ಹೇಳಿ ಯಾರದೋ ಮನೆಗೆ ನುಗ್ಗಿ ದೊಣ್ಣೆಯಿಂದ, ಬಾಟಲ್‌ನಿಂದ ಹೊಡೆದು ಪ್ರಜಾಪ್ರಭುತ್ವದಲ್ಲಿ ಏನು ಬೇಕಾದರೂ ಮಾಡಬಹುದೆಂದು ಮಾಡಿಬಿಡಬಹುದಾ? ಅವತ್ತು ಪೊಲೀಸರು ಏನಾದರೂ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ, ಪೊಲೀಸರ ಬಗ್ಗೆ ಏನು ಮಾತನಾಡುತ್ತಿದ್ದರು? ಅವರು ಇರುವುದು ಅದಕ್ಕಾಗಿಯೆ, ಅವರು ಅವರ ಕೆಲಸವನ್ನು ಪ್ರಮಾಣಿಕವಾಗಿ ಮಾಡಿದ್ದಾರೆ. ಹಾಗಾಗಿ, ನಾವು ಕೂಡ ಪ್ರಮಾಣಿಕವಾಗಿ ಇಲ್ಲಿ ಮಾತನಾಡೋಣ. ಕೆಲವು ತಪ್ಪು ಸರಿಗಳನ್ನು ಸರಿಪಡಿಸುವಂತಹ ಕರ್ತವ್ಯಗಳು ಸಹ ನಮ್ಮ ಮೇಲೆ ಇದೆ. ಇವತ್ತು ಹಾಗಾದರೆ, ಒಂದು ದೇಶ ಒಂದು ಯೋಚನೆಯನ್ನು ಮಾಡಿ Citizenship (Amendment) Act [CAA] ವರದಿಯನ್ನು ತಂದಿರುವಂಥದ್ದು ತಪ್ಪು ಎಂದು ವಿರೋಧ ಪಕ್ಷದವರು ಹೇಳಿದ್ದಾರೆ. ನಮಗೆ ಆಡಳಿತ ಪಕ್ಷದವರಿಗೆ ಇಡೀ ದೇಶ mandate ಕೊಟ್ಟಿದೆ. ನಾವು ಸಿಎಎ ಯನ್ನು ತರುತ್ತೇವೆಂದು ನಮ್ಮ manifesto ನಲ್ಲಿ ಹೇಳಿದ್ದೆವು. ಹಾಗಾದರೆ, ನಾವು ತಪ್ಪು ಮಾಡಿದ್ದೇವೆಯೇ? ಅದನ್ನು ವಿರೋಧ ಮಾಡಿ, ಮಾಡುವುದಕ್ಕೆ ಹೇಳುತ್ತಿಲ್ಲ. ಹಾಗಾದರೆ, ಅದು ತಪ್ಪೇ? ಕೇಂದ್ರಕ್ಕೆ 302, 303 ಜನ ಪಾರ್ಲಿಮೆಂಟ್ ಸದಸ್ಯರನ್ನು ಗೆಲ್ಲಿಸಿ ಏತಕ್ಕೆ ಕಳುಹಿಸಿದ್ದಾರೆ? ನಾವು ಅವತ್ತು ಹೇಳಿದ್ದೆವು. ನಾವು CAB (Citizenship Amendment Bill) ಅನ್ನು ತರುತ್ತೇವೆಂದು ಹೇಳಿದ್ದೆವು. ಆ ನಂತರ ನಮಗೆ majority ಕೊಟ್ಟಿದ್ದಾರೆ. ನಂತರ CAA ವರದಿಯನ್ನು ಜಾರಿಗೆ ತಂದಿದ್ದಾರೆ. ಇದರಲ್ಲಿ ಏನು ತಪ್ಪಿದೆ? ಅದಕ್ಕೆ ಉತ್ತರ ಕೊಡಿ? ಈಗ ಬಂದು ಹೋರಾಟ ಮಾಡಬೇಕಾದರೆ, ಯೋಚನೆ ಮಾಡಿ ಜನ ನಮಗೆ mandate ಕೊಡಬಾರದಿತ್ತು. ನಮಗೆ ಅದನ್ನು ಮಾಡಬೇಕೆಂದು ಕೊಟ್ಟಿದ್ದಾರೆ. ಅದನ್ನು ವಿರೋಧ ಮಾಡುವಂಥದ್ದು ಏನಿದೆ?

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಅವರಿಗೆ mandate ಕೊಟ್ಟ ಮೇಲೆ, ಅವರು ಅಧಿಕಾರಕ್ಕೆ ಬಂದ ಮೇಲೆ ಇದು ನಡೆದಿರುವುದು. ಜನ ಇದಕ್ಕೆ mandate ಕೊಟ್ಟಿಲ್ಲ, ಇದಕ್ಕೆ ಜನ mandate ಕೊಟ್ಟಿದ್ದಾರೆಂದು ಏಕೆ ಹೇಳುತ್ತಾರೆ?

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಅದಕ್ಕೆ ಏನಾದರೂ ಅವಶ್ಯಕತೆ ಒದಗಿಸುವಂತಹ ಕೆಲಸವನ್ನು ಮಾಡುತ್ತೇವೆ. ಇದನ್ನು ನಮ್ಮ manifesto ನಲ್ಲಿ ಹೇಳಿದ್ದೆವು. ನಾವು ಚುನಾವಣೆ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೇವೆಯೋ, ನಾವು ಅದನ್ನು ಮಾಡಿದ್ದೇವೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಅವರು ಈ ವಿಷಯವನ್ನು ಪ್ರಣಾಳಿಕೆಯಲ್ಲಿ ತೆಗೆದುಕೊಂಡಿದ್ದೆವು, ಅದಕ್ಕಾಗಿ ಇದನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಹಾಗಾದರೆ, ಬೇರೆ ಬೇರೆ ವಿಷಯಗಳನ್ನು ಪ್ರಣಾಳಿಕೆಯಲ್ಲಿ ತೆಗೆದುಕೊಂಡಿದ್ದಾರೆ. ಆ ವಿಷಯಗಳ ಬಗ್ಗೆ ಏಕೆ ಮಾತನಾಡುತ್ತಿಲ್ಲ? 15 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಇವರ ಬಗ್ಗೆಯೂ ಅವರು ಮಾತನಾಡಲಿ. ಇದನ್ನು ಮಾತ್ರ ಬಹಳ ವೇಗವಾಗಿ ತರುತ್ತಿದ್ದಾರೆ.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಾನು ಮೊದಲು ಮಾತನಾಡಿ ಮುಗಿಸುತ್ತೇನೆ.

(ಗೊಂದಲ)

**ವೈಸ್ ಛೇರ್ಮನ್‌ರವರು:–** ಪ್ರಾಣೇಶ್‌ರವರೇ, ತಾವು ಮುಂದುವರೆಸಿ.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಈಗ ಅದನ್ನು ಮಾಡಬೇಕೋ ಅಥವಾ ಬೇಡವೋ, ಕೊಟ್ಟ ಮಾತನ್ನು ಉಳಿಸದಿದ್ದರೆ ಜನರು ಏನು ಹೇಳುತ್ತಿದ್ದರು? ಈಗ 15 ಲಕ್ಷ ರೂಪಾಯಿಗಳ ವಿಚಾರವನ್ನು ಇವರು ಮಾತನಾಡುತ್ತಿದ್ದಾರೆ. ಈಗ ಮಾಡಿರುವುದು ಹೋಗಲಿ, 15 ಲಕ್ಷ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ, ಮಾಡಿದ್ದೇವೆ ಎನ್ನುವ ವಿಶ್ವಾಸ ಇಲ್ಲದೆ ಇವರು ಮಾತನಾಡುತ್ತಿದ್ದಾರೆ. ಜನರಿಗೆ ಎಲ್ಲೆಲ್ಲಿ ತಲುಪಿಸಬೇಕೋ ಅಲ್ಲಲ್ಲಿ ನಾವು ತಲುಪಿಸಿದ್ದೇವೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, demonetization ನಿಂದ ಒಂದು ವರ್ಷಕ್ಕೆ ಎರಡು ಕೋಟಿ ಉದ್ಯೋಗ ಹೋಯಿತು.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಾವು ವಿರೋಧ ಪಕ್ಷದವರ ತಲೆ ಮೇಲೆ ಸಂತಸದ ಮಳೆಯನ್ನೇ ಸುರಿದರೂ ಸಹ ಅವರನ್ನು ಖುಷಿ ಪಡಿಸುವುದಕ್ಕೆ ಆಗುವುದಿಲ್ಲ. ನಾವು ಜನರಿಗೆ ಖುಷಿ ಪಡಿಸಿದ್ದೇವೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇನ್ನೂ ನಾಲ್ಕು ವರ್ಷಗಳಷ್ಟು ಸಮಯ ಇದೆ. ನಾವು ಖಂಡಿತವಾಗಿಯೂ ಇನ್ನುಳಿದ ವಿಚಾರಗಳಲ್ಲಿಯೂ ಪ್ರಯತ್ನ ಮಾಡುತ್ತೇವೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸದಸ್ಯರೇ, ಮಾನ್ಯ ಪ್ರಾಣೇಶ್‌ರವರನ್ನು appreciate ಮಾಡುತ್ತೇವೆ. ಆದರೆ, ಅವರು ಮಾತನಾಡುವಂತಹ ಮಾತುಗಳು ಬಹಳ ಹೇಸಿಗೆ ತರುವಂತಹ ಮಾತುಗಳಾಗಿವೆ. ಮಾನ್ಯ ಸದಸ್ಯರ mandate ಬಗ್ಗೆ ಹೇಳಿದ್ದಾರೆ. ಆ mandate ಬಗ್ಗೆ, ಒಟ್ಟು 37%, 303 ಪಾರ್ಲಿಮೆಂಟ್ ಸದಸ್ಯರು ಆರಿಸಿ ಬಂದಿದ್ದಾರೆ. ಮಾನ್ಯ ಸದಸ್ಯರು ಅವರಿಗೆ massive mandate ಇದೆ ಎಂದು ಹೇಳಿದ್ದಾರೆ. ಒಟ್ಟು 37% ಮತಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ಅಂದರೆ, 63% ವಿರೋಧ ಪಕ್ಷದವರು ತೆಗೆದುಕೊಂಡಿದ್ದಾರೆ ಎಂಬುದು ಅವರ ಗಮನಕ್ಕೆ ಇರಲಿ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಹಿರಿಯರಿದ್ದಾರೆ. ಅವರಿಂದ ನಾನು ಈ ಮಾತನ್ನು expect ಮಾಡಿರಲಿಲ್ಲ. ರಾಜಕಾರಣದ ವ್ಯವಸ್ಥೆಯೊಳಗೆ ಈ ರೀತಿ percentage of votes ನ ಲೆಕ್ಕ ತೆಗೆದುಕೊಂಡು ಮಾಡುವಂತಹದ್ದು ಇದೆಯೇ? ಅವರು ಅದನ್ನು ಹೇಳಲಿ. ನಮಗೆ ಜನ mandate ಕೊಟ್ಟಿದ್ದಾರೆ. ಹೌದು, ಅವರಿಗೆ ಜನರು percentage of votes ನ್ನು ಹೆಚ್ಚಿಗೆ ಕೊಟ್ಟಿದ್ದಾರೆಂದು ಅವರು ಬಂದು ಇಲ್ಲಿ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ಈಗ ಆಡಳಿತ ಪಕ್ಷ ಬಿಜೆಪಿ ಇದೆ. ಅದರಲ್ಲಿ 117 ಜನ ಶಾಸಕರು ಇದ್ದಾರೆ, ಹಾಗಾಗಿ, percentage of votes ನಲ್ಲಿ ನಮಗಿಂತ ಅವರಿಗೆ ಹೆಚ್ಚು ಇದೆ ಎಂದು ಹೇಳಿ ಅವರು ಬಂದು ಅಧಿಕಾರ ಮಾಡುವುದಕ್ಕೆ ಸಾಧ್ಯ ಇದೆಯೇ? ಸಾಧ್ಯ ಇಲ್ಲ. ನಮ್ಮ ವ್ಯವಸ್ಥೆ ಆ ರೀತಿ ಇದೆ. ನಮ್ಮ ಸಂವಿಧಾನದೊಳಗೆ ಏನಿದೆ ಅದನ್ನೇ ಮಾಡುವುದಕ್ಕೆ ಸಾಧ್ಯವೇ ಹೊರತು ಅವರು ಅವರ ಬೆನ್ನನ್ನು ತಟ್ಟಿಕೊಳ್ಳುವುದಕೋಸ್ಕರ ಅಲ್ಲ. ಹಾಗಾದರೆ, ಜನ ಅವರಿಗೆ ಅಧಿಕಾರ ಕೊಡುತ್ತಿದ್ದರು. ನಮಗೆ ವಿರುದ್ಧವಾಗಿ ಮತ ಹಾಕುತ್ತಿದ್ದರು.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಬಿಜೆಪಿ ಸರ್ಕಾರ ಬರಲಿ ಅಂತ mandate ಬಂದಿತ್ತಾ? No. ನಮ್ಮಲ್ಲಿದ್ದವರನ್ನು ಎಳೆದುಕೊಂಡು ಹೋಗಿ ಮಾಡಿಕೊಂಡಿದ್ದಾರೆ.

(ಗೊಂದಲ)

**ವೈಸ್ ಛೇರ್ಮನ್‌ರವರು:–** ರೇವಣ್ಣನವರೇ, ಅವರು ಮಾತನಾಡಿ ಮುಗಿಸಲಿ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ. ಅದನ್ನು mandate ಅನ್ನುವುದಿಲ್ಲ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮೂರು ಬಾರಿ ಬಿಜೆಪಿ ಇದೇ ರೀತಿ ಮಾಡಿದೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಲು mandate ಇತ್ತೇನು?

(ಗೊಂದಲ)

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಂತಹ ಸಂದರ್ಭದಲ್ಲಿ ಅವರಿಗೆ mandate ಇತ್ತೇನು?

(ಗೊಂದಲ)

**ವೈಸ್ ಛೇರ್ಮನ್‌ರವರು:–** ದಯವಿಟ್ಟು ಎಲ್ಲರೂ ಕೂಳಿತುಕೊಳ್ಳಿ. ಮಾನ್ಯ ಪ್ರಾಣೇಶ್‌ರವರು ಮಾತನಾಡಲಿ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, Mandate ಎಂದರೇನು? ಚುನಾವಣೆಯಲ್ಲಿ ಗೆದ್ದಿರುವಂತಹದ್ದು, ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಇರುವುದು Alliance ಸರ್ಕಾರ, NDA (National Democratic Alliance)....

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅನೈತಿಕವಾಗಿ ಅವರ ಸರ್ಕಾರ ಬಂದಿದೆ,. ಮೂರು ಬಾರಿ ಬಿಜೆಪಿ ಸರ್ಕಾರ ಬಂದಾಗಲೂ ಸಹ ಅನೈತಿಕವಾಗಿ ಸರ್ಕಾರ ರಚನೆ ಆಗಿದೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು ಅವರನ್ನು ಏಕೆ ಅಲ್ಲಿಗೆ ಹೋಗಿದ್ದಾರೆ ಎಂದು ಕೇಳುತ್ತಿಲ್ಲ. ಅವರು ಹೋಗಿದ್ದು ಆಯಿತು, ಅಲ್ಲಿಗೆ ಹೋಗಿ ಮಂತ್ರಿಗಳೂ ಆಗಿಬಿಟ್ಟರು. ಅನರ್ಹರು ಎಂದದ್ದು ಆಯಿತು, ಅವರು ಈಗ ಅರ್ಹರು ಆಗಿಬಿಟ್ಟರು. ಇದೆಲ್ಲಾ ರಾಜಕೀಯದಲ್ಲಿ ನಡೆಯುತ್ತದೆ. ಆದರೆ,..

(ಗೊಂದಲ)

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ನಾವು ಅನರ್ಹರಾದಾಗ ಅತ್ಯಂತ ಖುಷಿ ಪಟ್ಟಿದ್ದು ಮಾನ್ಯ ರೇವಣ್ಣನವರೇ, ನಮಗೂ ಅವರಿಗೂ ದೋಸ್ತಿ ಇದೆ.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ವೈಸ್ ಛೇರ್ಮನ್:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ., ಪ್ರಾಣೇಶ್‌ರವರು ಮಾತನಾಡಲಿ. ಪ್ರಾಣೇಶ್‌ರವರೇ, ಇನ್ನೂ ಮೂರು ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

(ಗೊಂದಲ)

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ಈಗ ನಮ್ಮ ಸಚಿವರು ಮಾನ್ಯ ರೇವಣ್ಣನವರಿಗೆ ಹಳೆಯ ಗೆಳೆಯರು. ಅದಕ್ಕೆ ನಾನು ರೇವಣ್ಣನವರಿಗೆ ಹೇಳುವುದೇನೆಂದರೆ, ಅವರು ಇವರು ಚರ್ಚೆ ಮಾಡುತ್ತಿದ್ದರು, ನನಗೆ ಅದರ ಬಗ್ಗೆ ನನ್ನ ವಾದ ಇಲ್ಲ. ಆದರೆ, ನಿಮ್ಮದೂ ಅವರದ್ದೂ understanding ಏನಾಗಿತ್ತು ಎನ್ನುವುದು ಸಹ ನನಗೆ ಗೊತ್ತಿಲ್ಲ.

(ಮುಂದು)

(69)19–02–2020(4–20)ಎಂವಿ–ಜಿಆರ್

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್:–** ನಾನು ನಿಮ್ಮ ಪರವಾಗಿ ಮಾತನಾಡಿದ್ದೇನೆ.

**ಶ್ರೀ ಅರುಣ್ ಶಹಾಪುರ:–** ಮಾನ್ಯ ಸಭಾಪತಿಯವರೇ, ಅವರ ಮೇಲೆ ಪೂಜ್ಯ ಭಾವನೆ.

**ವೈಸ್ ಛೇರ್ಮನ್:–** ಈಗ ಮಾನ್ಯ ಸದಸ್ಯರಾದ ಪ್ರಾಣೇಶ್‌ರವರು ಮಾತನಾಡುವುದು.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾನ್ಯ ಸದಸ್ಯರಾದ ಲಕ್ಷ್ಮಣ ಸವದಿಯವರಿಗೆ ಒಂದು ಮಾತು ಹೇಳುತ್ತೇನೆ. ಅವರು ಮಾರ್ಮಿಕವಾಗಿ ಹೇಳಿದರು ರೇವಣ್ಣನವರಿಗೂ ಅವರಿಗೂ understanding ಇದೆ ಎಂದಿದ್ದಾರೆ. ಈಗ ಶ್ರೀ ಎಸ್.ಟಿ.ಸೋಮಶೇಖರ್, ಶ್ರೀ ರಮೇಶ್ ಲಕ್ಷ್ಮಣರಾವ್ ಜಾರಕಿಹೋಳಿ ಮತ್ತು ಶ್ರೀ ಬಿ.ಸಿ.ಪಾಟೀಲ್‌ರವರು ನಾವುಗಳೆಲ್ಲರೂ ಸಹ ಒಟ್ಟಿಗೆ ಕೆಲಸ ಮಾಡಿದವರು. ಆ ತರಹ ಏನೂ ಇಲ್ಲ. ಅವರೆಲ್ಲರೂ ಅವರ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಅದರ ಬಗ್ಗೆ ನಾನು ಮಾತನಾಡಿಲ್ಲ. ನಮ್ಮ ಸಂಬಂಧಗಳು ಕೆಟ್ಟಿದೆ ಎಂದು ಹೇಳುವುದಿಲ್ಲ. ಮಾನ್ಯ ಸದಸ್ಯರಾದ ಲಕ್ಷ್ಮಣ ಸವದಿಯವರು ಆ ರೀತಿ ಹೇಳಿ ಕುಳಿತುಕೊಂಡಿದ್ದಾರೆ. ನನಗೂ ಮತ್ತು ಅವರಿಗೂ ಏನೋ ಇದೆ ಎಂದು ತಿಳಿಯುತ್ತಾರೆ. ಏಕೆಂದರೆ, ಅದು ರೆಕಾರ್ಡ್‌ಗೆ ಹೋಗುತ್ತದೆ.

**ವೈಸ್ ಛೇರ್ಮನ್:–** ದಯವಿಟ್ಟು ಮಾನ್ಯ ಹೆಚ್.ಎಂ.ರೇವಣ್ಣನವರು ಕುಳಿತುಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು adjustment ಎಂದು ಹೇಳಿಲ್ಲ. ಅನರ್ಹರಾದಾಗ ಅತ್ಯಂತ ಖುಷಿ ಪಟ್ಟವರಲ್ಲಿ ಶ್ರೀ ಹೆಚ್.ಎಂ.ರೇವಣ್ಣನವರು ಒಬ್ಬರು ಎಂದು ಹೇಳಿದೆ ಅಷ್ಟೇ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅದು ಬೇರೆಯಾಯಿತು. ಮಾನ್ಯ ಸದಸ್ಯರಾದ ಲಕ್ಷ್ಮಣ ಸವದಿಯವರು ಬುದ್ಧಿವಂತ ನಾಯಕರು ಅವರು ಬಹಳ clever ಆಗಿ ಹೇಳಿದರು. ಏಕೆಂದರೆ, ವಿಧಾನ ಸಭೆಗೆ ಬಾರದೆ ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಏನೇನು ಆಗಿದ್ದಾರೆ ಎನ್ನುವುದು ನನಗೆ ಬೇಡ." ಅವರಿಗೆ ಬುದ್ಧಿವಂತಿಕೆ ಇಲ್ಲದೇ ಇದ್ದಿದ್ದರೆ ಉಪ ಮುಖ್ಯಮಂತ್ರಿ ಆಗುತ್ತಿದ್ದರೇ? ಅದು ಬಹಳ ಒಳ್ಳೆಯದು.

**ವೈಸ್ ಛೇರ್ಮನ್:–** ಈಗ ಸಮಯವಾಗುತ್ತಿದೆ, ಮಾನ್ಯ ಸದಸ್ಯರಾದ ಪ್ರಾಣೇಶ್‌ರವರು ಮಾತನಾಡುವುದು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ಗಡಿಬಿಡಿ ಏಕೆ ಮಾಡುತ್ತೀರಿ. ಇನ್ನು ಏನೂ ಆಗಿಲ್ಲ ಎಲ್ಲವೂ ಸಹ ಸರಿಯಿದೆ.

**ವೈಸ್ ಛೇರ್ಮನ್:–** ಈಗ ನಿಯಮ 68ರ ಅಡಿಯಲ್ಲಿ ಚರ್ಚೆ ನಡೆಯಬೇಕಾಗಿದೆ. ಏಕೆಂದರೆ, ಸದನ ನಡೆಯಲು ನಾಳೆ ಒಂದೇ ದಿವಸ ಉಳಿದಿರುವುದು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ರೇವಣ್ಣನವರಿಗೆ ಅವರ ಮೇಲೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ನನ್ನ ಮೇಲೂ ಸಹ ಇದೆ.

**ವೈಸ್ ಛೇರ್ಮನ್:–** ಅವರಿಗೆ ನಿಮ್ಮ ಮೇಲೆ ಕಾಳಜಿ ಇದೆ. ನಿಮಗೆ ಅವರ ಮೇಲೆ ಕಾಳಜಿ ಇದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಅದು ಹಾಗೇ ಇರುವುದರಿಂದ ಇವತ್ತು ಹೀಗೆ ಆಗಿರುವುದು. ನಾನು ಇವತ್ತಿನ ದಿವಸ ಈ ಮೇಲ್ಮನೆಗೆ ಬರಬೇಕಾದರೆ, ಅದನ್ನು ಅವರು ಹೇಳಿಕೊಳ್ಳುವುದಲ್ಲ, ನಾನು ಅದನ್ನು ಹೇಳಬೇಕು. ಏಕೆಂದರೆ, ಒಬ್ಬ ವ್ಯಕ್ತಿ ಫಲಾನುಭವಿ ಆದಮೇಲೆ, ಆ ಫಲ ಕೊಟ್ಟಿರುವುದರ ಬಗ್ಗೆ ನೆನಪು ಮಾಡಕೊಳ್ಳಬೇಕೋ ಬೇಡವೋ? ನಾನು ಈ ಮೇಲ್ಮನೆಗೆ ಬರುವುದಕ್ಕೆ ಅವರ ಸಹಕಾರ ಸಹ ಇದೆ ಅದಕ್ಕೆ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಅದು ಯಾವ ತರಹದ ಸಹಕಾರ ಎಂದು ತನಿಖೆ ಆಗಬೇಕು.

**(ಗೊಂದಲ)**

**ಶ್ರೀ ಎಂ.ಎ.ಗೋಪಾಲ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ರಿಜ್ವಾನ್ ಅರ್ಷದ್‌ರವರು ಗೆಲ್ಲುವುದಕ್ಕೆ...

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ, ಅವರು candidate ಅನ್ನು ಕೇಳಿದರೆ ಹೇಳುತ್ತಾರೆ.

**ವೈಸ್ ಛೇರ್ಮನ್:–** ಪ್ರಾಣೇಶ್‌ರವರೇ ನೀವು yield ಆಗಬಾರದು, ಮಾತನಾಡಿ.

**(ಗೊಂದಲ)**

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–** ಮಾನ್ಯ ಸಭಾಪತಿಯವರೇ, ಬಹುಶಃ ವಿರೋಧ ಪಕ್ಷದವರು ಒಂದು ಕಡೆ ಹಿನ್ನಡೆಯನ್ನು ಅನುಭವಿಸಿದರು. ಭಾರತ ಸಂವಿಧಾನದ ಆರ್ಟಿಕಲ್ 370 ವಿಚಾರವನ್ನು ನಮ್ಮ ಪಕ್ಷದ ಅಜೆಂಡಾದಲ್ಲಿ ಇಟ್ಟುಕೊಂಡಿದ್ದೆವು ಮತ್ತು ಚುನಾವಣೆಗಿಂತ ಮುಂಚೆಯೇ ಹೇಳಿದ್ದೆವು ಅದಕ್ಕೆ ಅದನ್ನು ಮಾಡಿದ್ದೇವೆ. ಅದರ ಒಳಗೂ ಸಹ ಏನೋ ಹುನ್ನಾರ ನಡೆಯುವಂತಹ ಪ್ರಯತ್ನ ನಡೆಯಿತು. ಆದರೆ, ಅದನ್ನು ಯಶಸ್ವಿಯಾಗಿ ನಿಭಾಯಿಸಿದ್ದೇವೆ. ಅದನ್ನು ನಿಭಾಯಿಸಿ ಅದರಲ್ಲಿ ಯಶಸ್ವಿಯಾಗಿ, ಸಿ.ಎ.ಬಿ., ಯನ್ನು ಸಿ.ಎ.ಎ., ಮಾಡಿದ್ದೇವೆ. ನಮ್ಮ ಅಸ್ತಿತ್ವಗಳೇ ಉಳಿಯುವುದು ಕಷ್ಟ ಎಂದು ಮನವರಿಕೆ ಆದಂತಹ ಸಂದರ್ಭಗಳಲ್ಲಿ ಇವರು ಪ್ರಚೋದನೆಗಳನ್ನು ಮಾಡುವಂತಹ ವ್ಯವಸ್ಥೆಗಳೇ, ಇವತ್ತು ಮಂಗಳೂರಿನಲ್ಲಿ ನಡೆದಿರುವಂತಹ ಘಟನೆ. ಇದರ ಹಿಂದೆ ಯಾರ ಕೈವಾಡವಿದೆ ಎಂದು ಮೊದಲೇ ವಿರೋಧ ಪಕ್ಷದ ನಾಯಕರಿಗೆ ಹೇಳಿದ್ದೇನೆ. ತಾವು ತಮ್ಮ ಆತ್ಮಸಾಕ್ಷಿಗೆ ವಿರುದ್ಧವಾಗಿ ಮಾತನಾಡುತ್ತಿದ್ದೀರಿ ಎಂದು ನನಗೆ ಅನಿಸುತ್ತಿದೆ ಎಂದು ಏಕೆ ಹೇಳಿದೆ ಎಂದರೆ, because of this point ಅಷ್ಟೆ. ಏಕೆಂದರೆ, ಅಲ್ಲಿನ ಪ್ರಚೋದನೆ ಎಲ್ಲಿ ಮತ್ತು ಹೇಗೆ ಪ್ರಾರಂಭವಾಯಿತು. ಅವರು ಪ್ರತಿಭಟನೆ ಮಾಡುವುದಕ್ಕೆ ಅವಕಾಶ ಕೊಟ್ಟಿರಲಿಲ್ಲವೆ? ಆಗ ಅವರು ಪ್ರತಿಭಟನೆ ಮಾಡುವಾಗ, ಈಗ ನನ್ನ ಕೈಯಲ್ಲಿರುವ ಚಿತ್ರವನ್ನು ವಿರೋಧಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಂ.ಕೆ. ಪ್ರಾಣೇಶ್ ರವರು ಗಲಭೆಗೆ ಸಂಬಂಧಪಟ್ಟ ಕೆಲವು ಛಾಯಾಚಿತ್ರಗಳನ್ನು ವಿರೋಧ ಪಕ್ಷದ ನಾಯಕರಿಗೆ ತೋರಿಸಿದರು)**

ಈ ಚಿತ್ರದಲ್ಲಿ ಅವರ ಕೈಯಲ್ಲಿರುವಂತಹ ದೊಣ್ಣೆ, ಸೋಡಾ ಬಾಟಲ್ ಮತ್ತು ಆಯುಧಗಳನ್ನು ನೋಡಿ. ಇವುಗಳನ್ನು ಇಟ್ಟುಕೊಂಡು ಪ್ರತಿಭಟನೆಯನ್ನು ಮಾಡುವುದಕ್ಕೆ ಹೋದಾಗ, ಪೊಲೀಸ್‌ನವರು ಕೈಕಟ್ಟಿಕೊಂಡು ಕುಳಿತುಕೊಳ್ಳಬೇಕೆ ಎನ್ನುವಂತಹ ಪ್ರಶ್ನೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಇದರಿಂದ ಅಮಾಯಕರ ಜೀವಗಳು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಯಾರದೋ ಜೀವ ತೆಗೆಯುವುದಕ್ಕೆ ಹೊರಟ್ಟಂತಹವರಲ್ಲಿ ಒಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜೀವ ಹೋದರೆ ಹೋಗಲಿ ಬಿಡಿ. ಆದರೆ, ನೂರಾರು ಅಮಾಯಕರ ಜೀವಗಳು ಉಳಿದಿವೆ. ಈಗ ಕೇವಲ ಎರಡು ಜೀವಗಳು ಹೋಗಿರುವುದಕ್ಕೆ ನಮಗೆ ವಿಷಾಧವಿದೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಪ್ರಾಣೇಶ್ ಎಂ.ಕೆ.:-** ಮಾನ್ಯ ಸಭಾಪತಿಯವರೇ, ಅವರು ಈ ತರಹ ಪ್ರತಿಭಟನೆ ಮಾಡುವುದಕ್ಕೆ ಬಂದಿರುವುದನ್ನು ನಾನು ಸಮರ್ಥನೆ ಮಾಡುತ್ತಿದ್ದೇನೆ. ಈಗ ನೂರಾರು ಅಮಾಯಕರ ಜೀವಗಳು ಉಳಿದಿವೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರಿಗೆ ನಾಚಿಕೆಯಾಗಬೇಕು.

**(ಗೊಂದಲ)**

**ಶ್ರೀ ಪ್ರಾಣೇಶ್ ಎಂ.ಕೆ.:-** ಮಾನ್ಯ ಸಭಾಪತಿಯವರೇ, ಈಗ ಅವರು ಮಾಡುತ್ತಿರುವಂತಹ ಸಮರ್ಥನೆ ಏನು ಎಂದು ಹೇಳಿ. ಅಲ್ಲಿ ಇನ್ನು ಹೆಣಗಳು ಬೀಳಬೇಕಾಗಿತ್ತೆ? ಆದರೆ, ನಾನು ಅವರು ಹೋಗಿರುವುದಕ್ಕೆ ವಿಷಾಧ ವ್ಯಕ್ತಪಡಿಸುತ್ತೇನೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ...

**ಶ್ರೀ ಪ್ರಾಣೇಶ್ ಎಂ.ಕೆ.:-** ಮಾನ್ಯ ಸಭಾಪತಿಯವರೇ, ಕಾನೂನಿನ ಅಡಿಯಲ್ಲಿ ಶಿಕ್ಷೆ ಆಗಲೇಬೇಕು. ಅದರಲ್ಲಿ ಏನು ತಪ್ಪಿದೆ. (ಗೊಂದಲ) ನಾನು ಹೇಳುವುದು ಅಲ್ಲಿ ನೂರಾರು ಜನರ ಬಲಿಯಾಗುತ್ತದೆ ಎನ್ನುವುದಾದರೆ, ಆ ಇಬ್ಬರದು ಹೋಗಲಿ ಬಿಡಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು)**

**ವೈಸ್ ಛೇರ್ಮನ್:-** ಸದನವನ್ನು ಹತ್ತು ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

<u>(70)19–2–2020/5.10/ಎಂ.ಎಂ–ಎ.ಕೆ</u>

**(ಸಂಜೆ 4 ಗಂಟೆ 26 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಸಾಯಂಕಾಲ 5 ಗಂಟೆ 11 ನಿಮಿಷಕ್ಕೆ ಸಮಾವೇಶಗೊಂಡಿತು, ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**(ಸದನ ಆರಂಭಗೊಳ್ಳುತ್ತಿದ್ದಂತೆ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿದರು)**

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಇಲ್ಲದ ವೇಳೆಯಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್. ಪಾಟೀಲ್‌ರವರು ನನ್ನ ಹೆಸರನ್ನು ಉಲ್ಲೇಖಿಸಿ ಏನೇನೋ ಮಾತನಾಡಿದ್ದಾರೆ ಅದಕ್ಕೆ ಸ್ಪಷ್ಟೀಕರಣ ಬೇಕು.

**(ಈ ಹಂತದಲ್ಲಿ ವಿರೋಧಪಕ್ಷದ ಮಾನ್ಯ ಸದಸ್ಯರುಗಳು ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಿದ್ದರು)**

**ಶ್ರೀ ಎಸ್.ಆರ್. ಪಾಟೀಲ್(ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನನ್ನನ್ನು ಕರೆದಿದ್ದಾರೆ;

**ಶ್ರೀ ಲಹರ್ ಸಿಂಗ್ ಸಿರೋಯಾ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಇಲ್ಲದ ವೇಳೆಯಲ್ಲಿ ಮಾನ್ಯ ಎಸ್.ಆರ್. ಪಾಟೀಲ್‌ರವರು ನಮ್ಮ ಹೆಸರಿನಲ್ಲಿ ಏನೇನೋ ಇಲ್ಲದ್ದನ್ನೆಲ್ಲಾ ಮಾತನಾಡಿದ್ದಾರೆ ಅದಕ್ಕೆ ಸ್ಪಷ್ಟೀಕರಣ ಬೇಕಾಗಿದೆ. ಏಕೆಂದರೆ, ನಾವು ಅವರನ್ನು ಸರಳ, ಸಜ್ಜನ ರಾಜಕಾರಣಿ ಎಂದು ತಿಳಿದುಕೊಂಡಿದ್ದೇವೆ. ಆದರೆ ಅವರು ನಮ್ಮ ಮಾತನ್ನು ತಿರುಗಿಸಿ ಮಾತನಾಡುತ್ತಾರೆ ಎಂಬ ಕಲ್ಪನೆ ಇರಲಿಲ್ಲ. ಇದಕ್ಕೆ ಸ್ಪಷ್ಟೀಕರಣ ಬೇಕು.

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರು ನಿಯಮ 68ರಡಿ ಮಾತನಾಡುತ್ತಾ. . .

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರದ್ದೇನೂ ಇಲ್ಲ ಆಗ ತಾವು ಅವರನ್ನು ಉಲ್ಲೇಖಿಸಿ ಮಾತನಾಡಿದಿರಲ್ಲ ಹಾರ, ಗಂಧದಕಡ್ಡಿ ಅದಕ್ಕೆ ಸ್ಪಷ್ಟೀಕರಣ ಕೇಳುತ್ತಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಪೂಜೆ ಎಂದರೆ ಏನು? ವಿಭೂತಿ, ಕುಂಕುಮ ಹಚ್ಚಿ ಊದಿನಕಡ್ಡಿ ಬೆಳಗುವುದೇ ಪೂಜೆ. ಶ್ರೀಮಾನ್ ಪ್ರಾಣೇಶ್‌ರವರು ನಿಯಮ 68ರಡಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಅವರು ಏನು ಹೇಳಿದರೆಂದರೆ, ಅವತ್ತು ಗೋಲಿಬಾರ್ ಆದ ಸಂದರ್ಭದಲ್ಲಿ ಇಬ್ಬರ ಸಾವು ಆಗಿದೆ. ಇಬ್ಬರ ಸಾವು ಆದರೆ ಆಗಲಿ 100 ಮಂದಿಯನ್ನು ಉಳಿಸಬಹುದಾಗಿತ್ತು ಎಂದು ಭಾವೋದ್ವೇಗದಲ್ಲಿ ಹಾಗೆ ಮಾತನಾಡಿದರು. ಬಹುತರವಾಗಿ ಯಾವುದೇ ಒಬ್ಬ ವ್ಯಕ್ತಿಯ ಸಾವು ಇರಲಿ ಏನೇ ಇರಲಿ ನನ್ನ ಭಾಷಣದ ಉದ್ದಕ್ಕೂ ನಾನು ಅದನ್ನು ಪ್ರತಿಪಾದನೆ ಮಾಡಿದ್ದೇನೆ. ಗೋಲಿಬಾರ್‌ನಲ್ಲಿ ಮೃತರಾದವರು ಕಡುಬಡತನದವರು, ಅಮಾಯಕರು ಹಾಗೂ ಅವರು ಯಾವುದೇ ಸಂಘಟನೆಗೆ ಒಳಗಾದಂತಹವರಲ್ಲ ಮತ್ತು ಆ ಪ್ರತಿಭಟನೆಯಲ್ಲಿ ಭಾಗಿಯಾದಂತಹವರಲ್ಲ. ಮೃತರಾದವರಲ್ಲಿ ಒಬ್ಬರು ಮೀನು ಹೊರುವ ದಿನಗೂಲಿ ಮಾಡುವವರು ಇನ್ನೊಬ್ಬರು ಗ್ಯಾರೇಜ್‌ನಲ್ಲಿ ಕೆಲಸ ಮಾಡುವಂತಹ ಯುವಕರು. ಅವರಿಬ್ಬರೂ ಅಮಾಯಕರು ಮತ್ತು ಯಾವುದೇ ಸಂಘಟನೆಗೆ ಸಂಬಂಧಿಸಿದವರಲ್ಲ, ಇಬ್ಬರೂ ಪ್ರತಿಭಟನೆಯಲ್ಲಿ ಭಾಗಿಯಾದವರಲ್ಲ ಎಂದು ನಾನು ಹತ್ತು ಸಲ ಹೇಳಿದ್ದೇನೆ. ಇದನ್ನು ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಕೂಡ ಒಕ್ಕೊರಲಿನಿಂದ ಒಪ್ಪಿಕೊಂಡಂತಹ ಸಂದರ್ಭದಲ್ಲಿ ಅವರಿಬ್ಬರು ಸತ್ತರೆ ಸಾಯಲಿ ಎಂದರೆ ಜೀವವನ್ನು ಎಷ್ಟು ಕೀಳಾಗಿ ಕಾಣುವಂತಹ ಶಬ್ಧವನ್ನು ಶ್ರೀಮಾನ್ ಪ್ರಾಣೇಶ್‌ರವರು ಬಳಕೆ ಮಾಡಬಾರದಾಗಿತ್ತು. ಅದಕ್ಕೆ ಇವತ್ತು ಎರಡು ಪಕ್ಷಗಳ ಸದಸ್ಯರು ಇದರಿಂದ ನೊಂದುಕೊಂಡು ಬಾವಿಯನ್ನು ಪ್ರವೇಶ ಮಾಡಿದ್ದಾರೆ. ದಯಮಾಡಿ ತಾವು ಹೇಳಿ. ಜೀವ ಎಂದರೆ ಅದು ಜೀವನ. ಅಲ್ಲದೆ, ಅವರು ಅಮಾಯಕರು. ಯಾವುದಕ್ಕೂ ಸಂಬಂಧ ಇಲ್ಲದ ಮುಗ್ಧರು. ಅವರು ಜೀವ ಕಳೆದುಕೊಂಡ ಬಗ್ಗೆ ನಾವು ದುಃಖವನ್ನು ವ್ಯಕ್ತ ಮಾಡಬೇಕು, ವಿಷಾದ ವ್ಯಕ್ತ ಮಾಡಬೇಕು ಅಂತಹ ಸಂದರ್ಭದಲ್ಲಿ ಮಾನ್ಯ ಪ್ರಾಣೇಶ್‌ರವರು ಯುವಕರಿದ್ದಾರೆ ಅವರು ಮಾತನಾಡುವ ಭರದಲ್ಲಿ ಭಾವೋದ್ವೇಗಕ್ಕೊಳಗಾಗಿ ಈ ಮಾತುಗಳನ್ನಾಡಬಾರದಾಗಿತ್ತು ಅದು ಅವರಿಗೂ ಭೂಷಣವಲ್ಲ. ಅದು ಅವರ ಭವಿಷ್ಯತ್ತಿಗೂ ಕೂಡ ಒಳ್ಳೆಯದಲ್ಲ ಆ ದೃಷ್ಟಿಯಿಂದ ಅವರೇನು ಮಾತನಾಡಿದ್ದಾರೆ ಅದನ್ನು ಹಿಂತೆಗೆದುಕೊಂಡು ಅದಕ್ಕೆ ವಿಷಾದ ವ್ಯಕ್ತ ಮಾಡಲಿ ಎಂದು ತಮ್ಮ ಮುಖಾಂತರ ಮಾನ್ಯ ಪ್ರಾಣೇಶ್‌ರವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ಕೆ. ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಬ್ಬ ಮನುಷ್ಯನ ಜೀವಕ್ಕೆ ಎಷ್ಟು ಬೆಲೆ ಇದೆ ಎಂಬ ಸಂಪೂರ್ಣ ಅರಿವು ನನಗೆ ಕೂಡ ಇದೆ. ಬಹುಶಃ ನಾನು ಮಾತನಾಡುವ ಸಂದರ್ಭದಲ್ಲಿ ಹೇಳಿದೆ. ಏನೋ ಒಂದು ವಿಚಾರಗಳನ್ನು ಹೇಳುವಾಗ ಅಥವಾ ಮಾತನಾಡುವ ಸಂದರ್ಭದಲ್ಲಿ ಒಂದು ಪದದೊಳಗೆ 100 ಅರ್ಥಗಳು ಬರುವುದು ಕೂಡ ಇದೆ. ಅದು ನಮಗೆ ಅರ್ಥವಾಗುತ್ತದೆ. ನಾವು ಮಾತನಾಡುವಂತಹ ಭಾಷೆಗಳಲ್ಲಿ ಕೆಲವನ್ನು ಅರ್ಥೈಸಿಕೊಳ್ಳುವುದರಲ್ಲಿಯೂ ವ್ಯತ್ಯಾಸಗಳಿರುತ್ತದೆ. ಸಹಜವಾಗಿ ಆ ರೀತಿ ಆಗಿರಬಹುದು ಎಂದು ಅಂದುಕೊಂಡಿದ್ದೇನೆ. ಅದರಲ್ಲಿಯೂ ಅವರು ಅರ್ಥೈಸಿಕೊಳ್ಳುವ ರೀತಿಯಲ್ಲಿ ಏನೋ ಆಗಿರಬಹುದು. ಅವರು ಅದನ್ನು ಅರ್ಥೈಸಿಕೊಂಡಿರುವುದು ತಪ್ಪು ಎಂದು ನಾನು ಹೇಳುವುದಿಲ್ಲ. ನಾನು ಹೇಳುವುದೇನೆಂದರೆ, ಯಾರ ಜೀವವೂ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋಗಬಾರದು. ಯಾರದ್ದೋ ಜೀವ ಹೋದರೂ ಅವನು ಯಾವ ಜಾತಿ, ಜನಾಂಗದವನು ಎಂಬ ಪ್ರಶ್ನೆ ಇಲ್ಲಿಲ್ಲ. ಆದರೆ ಯಾರ ಜೀವವೂ ಹೋಗಬಾರದು. ಆ ಸಂದರ್ಭದಲ್ಲಿ ಏನಾಯಿತು ಎಂದರೆ ಆ ರೀತಿಯ ಘರ್ಷಣೆಗಳಾಗುವ ಸಂದರ್ಭದಲ್ಲಿ ಪೊಲೀಸರ ಪ್ರವೇಶವಾಗದೇ ಇದ್ದಿದ್ದರೆ ಇನ್ನೂ 100 ಜೀವಗಳು ಹೋಗುವಂತಹ ಸಂದರ್ಭಗಳು ಬರುತ್ತಾ ಇತ್ತು. ಅದರೊಳಗೆ ಎರಡು ಜೀವಗಳು ಹೋಯಿತು ಹಾಗಾಗಿ ಅದಕ್ಕೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ. ದಯಮಾಡಿ, ನನ್ನ ವಿನಂತಿಯೇನಿದೆ ಎಂದರೆ, ಶಬ್ಧಗಳನ್ನು ಬೇರೆ ರೀತಿ ಅರ್ಥೈಸಿಕೊಳ್ಳುವುದನ್ನು ಮಾಡಬೇಡಿ. ಏಕೆಂದರೆ, ನಾನು ಒಬ್ಬ ಈ ಸದನದ ಕಿರಿಯ ಸದಸ್ಯ. **(ಗೊಂದಲ)** ನಾನು ಹೇಳುತ್ತಿದ್ದೇನೆ ನಾನು ಪೂರ್ಣ ಮಾತನಾಡುವುದಕ್ಕೆ ಬಿಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, . . .

(ಗೊಂದಲ)

**Sri S.R. PATIL:** I request you all; ಅವರು ಮಾತನಾಡುವುದಕ್ಕೆ ಬಿಡಿ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನೊಂದು ಸಲಹೆ ಕೊಡುತ್ತೇನೆ ಅಥವಾ ಅದನ್ನು ವಿನಂತಿ ಎಂದಾದರೂ ತಿಳಿದುಕೊಳ್ಳಿ. ವಿಷಾದವನ್ನು ವ್ಯಕ್ತಪಡಿಸಿದರೆ ಅದಕ್ಕಿಂತ ದೊಡ್ಡದಾದ ಗೌರವ ಯಾರಿಗೂ ಸಿಗುವುದಿಲ್ಲ. ಈ ಸದನದಲ್ಲಿ ಯಾರೂ ದೊಡ್ಡವರಲ್ಲ, ಯಾರೂ ಸಣ್ಣವರಲ್ಲ. ಮಾತನಾಡುವಾಗ ತಪ್ಪು ಮಾತನಾಡಬಹುದು, ತಪ್ಪು ಮಾತನಾಡಿದ್ದು ತಿಳುವಳಿಕೆಗೆ ಬಂದಾಗ ವಿಷಾದ ವ್ಯಕ್ತಪಡಿಸುವುದು ಬಹಳ ದೊಡ್ಡಗುಣ. ದಯಮಾಡಿ ತಾವು ವಿಷಾದವನ್ನು ವ್ಯಕ್ತಪಡಿಸುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಹಿರಿಯರ ಸಲಹೆಯನ್ನು ನಾನು ಯಾವತ್ತೂ ಸ್ವೀಕಾರ ಮಾಡುವಂತಹವನು. ನಾನು ಅವರಿಗಿಂತ ದೊಡ್ಡವನಲ್ಲ. ಅವರೆಲ್ಲಾ 5 ಬಾರಿ, 6 ಬಾರಿ ಮತ್ತು 8 ಬಾರಿ ಈ ಸದನದಲ್ಲಿ ಇದ್ದಂತಹವರು. ನಾನು ಮೊದಲನೇ ಬಾರಿ ಈ ಸದನಕ್ಕೆ ಬಂದಿರುವಂತಹವನು. ನನಗೆ ಅದರ ಎಲ್ಲಾ ಗಾಂಭೀರ್ಯತೆ ಅರ್ಥವಾಗುತ್ತದೆ. ಆದರೆ ತಾವು ಬೇಕಾದರೆ ಕಡತವನ್ನು ಕೂಡ ತೆಗೆಸಿ ನೋಡಿ. ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು ಏನು ಹೇಳಿದರು;

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಎಂ.ಕೆ. ಪ್ರಾಣೇಶ್:–** ಒಂದು ನಿಮಿಷ ನಾನು ಮಾತನಾಡುವುದನ್ನು ಕೇಳಿ.

**ಸಭಾಪತಿಯವರು:–** ಅವರು ಏನು ಹೇಳುತ್ತಿದ್ದಾರೆ ಎಂಬುದನ್ನು ಕೇಳಿ.

(ಗೊಂದಲ)

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಬಸವರಾಜ ಹೊರಟ್ಟಿರವರು ಏನು ಹೇಳಿದ್ದಾರೆ. ಅದಕ್ಕೆ ಮಾನ್ಯ ಪ್ರಾಣೇಶ್‌ರವರು ಐದು ನಿಮಿಷ ಹೇಳುವುದಕ್ಕೆ ಬಿಡಿ.

(ಮುಂದು)

(71) 19–02–2020/ 5–20 /ಕೆಹೆಚ್–ಆರ್‌ಎನ್

**ಶ್ರೀ ಪುಟ್ಟಣ್ಣ (ಮುಂದು):–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಂತಹ ಹಿರಿಯ ಸದಸ್ಯರೇ ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರಿಗೂ ಮಾತನಾಡುವುದಕ್ಕೆ 5 ನಿಮಿಷಗಳ ಕಾಲಾವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಮಾತನಾಡುವ ಶಬ್ದದ ಜೋಡಣೆಯಲ್ಲಿ ಹೆಚ್ಚು–ಕಡಿಮೆಯಾಗಿರಬಹುದು. ಇದನ್ನು ವಿರೋಧ ಪಕ್ಷದವರು ತಪ್ಪಾಗಿ ಅರ್ಥೈಸಿಕೊಂಡಿರಬಹುದು. ನಾವು ಯಾವುದೇ ಸಾವು–ನೋವುಗಳನ್ನು ಅನುಭವಿಸುವುದಕ್ಕೆ ಸಿದ್ಧರಿಲ್ಲ. ಒಟ್ಟಾರೆಯಾಗಿ ಇದರ ಬಗ್ಗೆ ನಾನು ತಕ್ಷಣವೇ ವಿಷಾದವನ್ನು ತಿಳಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನಿಮಗಿಂತ ಸ್ಪಷ್ಟವಾಗಿ ಮಾನ್ಯ ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರು ಹೇಳುತ್ತಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುವುದೇನೆಂದರೆ, ಇದರ ಬಗ್ಗೆ ಸ್ಪಷ್ಟನೆ ದೊರೆತ ನಂತರ ಮೂಲ ಉದ್ದೇಶಗಳನ್ನು ಹೇಳಿದ ನಂತರ . . .

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್.ಭೋಜೇಗೌಡ:–** (ಸದನದ ಬಾವಿಯಿಂದ) ಮಾನ್ಯ ಸಭಾನಾಯಕರೇ ಯಾರು ಕೂಡ ತಪ್ಪಾಗಿ ಅರ್ಥೈಸಿ ಹೇಳಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಆ ರೀತಿ ಹೇಳಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಪ್ರಾಣೇಶ್‌ರವರೇ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಡಿ.

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ clarify ಮಾಡಲೇಬೇಕು. ಏಕೆಂದರೆ, ನಾವು ಸುಮ್ಮನೆ ಏನೋ ತಪ್ಪನ್ನು ಒಪ್ಪಿಕೊಳ್ಳುವಂತಹದಲ್ಲ. ತಪ್ಪಾಗಿದ್ದಂತಹ ಸಂದರ್ಭದಲ್ಲಿ ಅದು ಏನೆಂದು ತಿಳಿದುಕೊಂಡು, ಅದನ್ನು clarify ಮಾಡಿ, ಅದರ ಬಗ್ಗೆ ನಂತರ ಹೇಳುತ್ತೇನೆ. ನಾನು ಹೇಳುವಂತಹ ಸಂದರ್ಭದಲ್ಲಿ ಕಡತವನ್ನು ಪರಿಶೀಲನೆ ಮಾಡಿ. ಇದಕ್ಕೆ ದಯವಿಟ್ಟು, ಎಲ್ಲರೂ ಅವಕಾಶ ಮಾಡಿಕೊಡಿ. ಇದರ ಬಗ್ಗೆ ಕೂಡಲೇ ಕಡತವನ್ನು ನೋಡಿ. ನಾನು ಉದ್ದೇಶಪೂರ್ವಕವಾಗಿ ಹೇಳಿರುವುದಿಲ್ಲ. ನಾನು ಹೇಳಿರುವ ಅಂಶವು ಕಡತದಲ್ಲಿ ದಾಖಲಾಗಿದ್ದರೆ, ಅದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಬಹುಶಃ ಇದರ ಬಗ್ಗೆ ಅವರಿಗೆ satisfy ಆಗಲಿಲ್ಲವೆಂದರೆ; ನನ್ನ ಪ್ರಕಾರ ಮನುಷ್ಯನ ಜೀವಕ್ಕಿಂತ ದೊಡ್ಡದು ಯಾವುದೂ ಇಲ್ಲ, ಯಾವೊಬ್ಬ ಮನುಷ್ಯನ ಜೀವ ಹೋಗಬಾರದು. ಹಾಗಾಗಿ ಆ ಮನುಷ್ಯನು ದೊಡ್ಡವನೋ, ಶ್ರೀಮಂತನೋ ಗೊತ್ತಿಲ್ಲ. ಆದರೆ ಈಗ ಮಾತನಾಡಬೇಕಾದರೆ ಅವನು ಬಡವ ಎಂದು ಹೇಳಿದರು. ಇದರ ಬಗ್ಗೆ ಪ್ರಶ್ನೆ ಇಲ್ಲ. ಜೀವ ಎಂದರೆ ಜೀವ. ದೊಡ್ಡವರಾದರೂ ಸಹ ಜೀವವೇ. ಸಣ್ಣವರಾದರೂ ಸಹ ಜೀವವೇ. ಆ ಜೀವ ಹೋಗಬಾರದಿತ್ತು. ಜೀವ ಹೋಗಿದ್ದು ತಪ್ಪು. ಆಕಸ್ಮಾತ್ ತಾವು ಬೇರೆ ರೀತಿಯಲ್ಲಿ ಅದನ್ನು ಅರ್ಥೈಸಿಕೊಂಡಿದ್ದರೆ, ಅದಕ್ಕಾಗಿ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಅದರಲ್ಲಿ ಎರಡನೇ ಮಾತಿಲ್ಲ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್.) ಪಕ್ಷದ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)**

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ ನಾನು ಮಾತನಾಡಿ ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಸಭೆಯನ್ನು ಮುಂದುವರೆಸುವುದೇ ಅಥವಾ ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡುತ್ತಾರೆಯೇ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ತಮಗೆ ಮಾತನಾಡುವುದಕ್ಕೆ ನಾಳೆ ಅವಕಾಶ ಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, don’t allow them.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ನಾನು ಇಲ್ಲದ ಸಮಯದಲ್ಲಿ ಮಾನ್ಯ ಎಸ್.ಆರ್.ಪಾಟೀಲ್‌ರವರು ಏನೇನು ಹೇಳಿದ್ದಾರೆ ಎಂದರೆ, ನಾನು ಹೇಳದೇ ಇರುವುದನ್ನೆಲ್ಲಾ ಹೇಳಿದ್ದಾರೆ. ಅದರ ಬಗ್ಗೆ ನನಗೆ ಕ್ಲ್ಯಾರಿಫೈ ಆಗಬೇಕು. ಇಲ್ಲದಿದ್ದರೆ ನಮ್ಮ ಸ್ನೇಹಿತರು ನನ್ನ ಮೇಲೆ ಕೋಪ ಮಾಡಿಕೊಳ್ಳುತ್ತಾರೆ.

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ತಾವು 8 ದಿವಸಗಳು ಆದ ಮೇಲೆ ಬಂದರೆ ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ನಮ್ಮಲ್ಲಿ ಆ ರೀತಿ ವ್ಯವಸ್ಥೆಯೇ ಇಲ್ಲ. ಇದರ ಬಗ್ಗೆ ಬರವಣಿಗೆಯಲ್ಲಿ ಕೊಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನಾನು ಏನು ವಿಷಯ ಎಂದು ಕೇಳಬೇಕಲ್ಲವೇ?

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ನಾನು ಬಹುಶಃ ಮಂಗಳೂರಿನಲ್ಲಿ ನಡೆದಿರುವ ಘಟನೆಯ ಬಗ್ಗೆ ಮಾತನಾಡುತ್ತಿದ್ದೆ. ಇಷ್ಟಕ್ಕೆಲ್ಲಾ ಮೂಲ ಕಾರಣಗಳು ಏನು ಎಂಬುದನ್ನು ಸಹ ಹುಡುಕಬೇಕಾಗುತ್ತದೆ. ಬಹುಶಃ ಡಿಸೆಂಬರ್ 17ನೇ ತಾರೀಖು ನಮ್ಮ ಗೌರವಾನ್ವಿತ ಮಾಜಿ ಸಚಿವರು ಮತ್ತು ಹಾಲಿ ಶಾಸಕರು ಒಂದು ಭಾಷಣವನ್ನು ಮಾಡುತ್ತಾರೆ. ಆ ಭಾಷಣದಲ್ಲಿ ಕೇಂದ್ರ ಸರ್ಕಾರದಲ್ಲಿ ಜಾರಿಯಾಗಿರುವ ಸಿಎಎ ವರದಿಯನ್ನು ನಮ್ಮ ರಾಜ್ಯ ಸರ್ಕಾರದಲ್ಲಿ ಜಾರಿಗೆ ತಂದರೆ ಈ ರಾಜ್ಯದೊಳಗೆ “ಬೆಂಕಿ ಹತ್ತಿ ಉರಿಯುತ್ತದೆ” ಎನ್ನುವ ಅಂಶವನ್ನು ಭಾಷಣದಲ್ಲಿ ವ್ಯಕ್ತ ಮಾಡುತ್ತಾರೆ. ಇದರ ಬಗ್ಗೆ ಟಿ.ವಿ.ಮಾಧ್ಯಮಗಳಲ್ಲಿ ನೋಡಿದ್ದೇವೆ ಮತ್ತು ಪತ್ರಿಕೆಗಳಲ್ಲಿಯೂ ಬಂದಿರುವುದನ್ನು ನೋಡಿದ್ದೇವೆ. ಇದರ ಬಗ್ಗೆ ಕಟ್ಟು ಕಥೆಯಂತೂ ಹೇಳುತ್ತಿಲ್ಲ. ಈ ಸಂದರ್ಭದಲ್ಲಿ ನಮಗೆ ಬುದ್ಧಿವಾದ ಹೇಳುವಂತಹ ವಿರೋಧ ಪಕ್ಷದವರು ಆ

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ದಿವಸ ಗೌರವಾನ್ವಿತ ಮಾಜಿ ಸಚಿವರು ಮತ್ತು ಹಾಲಿ ಶಾಸಕರನ್ನು ಕರೆದು ನೀವು ಹೇಳುತ್ತಿರುವುದು ತಪ್ಪು ಎಂದು ಏಕೆ ಹೇಳಲಿಲ್ಲ, ಈ ರೀತಿಯಾದರೆ ಅಶಾಂತಿ ನಿರ್ಮಾಣವಾಗುತ್ತದೆ ಎಂದು ಏಕೆ ಹೇಳಲಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಅವರು ಹೇಳಿರುವುದು ತಪ್ಪಲ್ಲ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಮಾನ್ಯ ಸದಸ್ಯರಾದ ಎಂ.ಕೆ.ಪ್ರಾಣೇಶ್‌ರವರು ಮಾತನಾಡಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಅವರು ಏನು ಹೇಳಿದ್ದಾರೆ; ಅವರು ತಪ್ಪು ಮಾತನಾಡುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಸರಿಯಾಗಿ ಮಾತನಾಡುವುದಕ್ಕೆ ಹೇಳಿ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಮಾನ್ಯ ಸದಸ್ಯರಾದ ಎಂ.ಕೆ.ಪ್ರಾಣೇಶ್‌ರವರು ಮಾತನಾಡುವುದು ಬೇಡವೇ, ನೀವೇ ಎದ್ದು ನಿಂತುಕೊಂಡು ಮಾತನಾಡುತ್ತೀರಾ? ಅವರು ಮಾತನಾಡುವುದಕ್ಕೆ ಬಿಡಿ. ಇನ್ನು ಅನೇಕ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಇದ್ದಾರೆ. ಮಾನ್ಯ ಸದಸ್ಯರು ಹೇಗೆ ಮಾತನಾಡಬೇಕೆಂದು ಬರೆದು ಕೊಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವ ಬಗ್ಗೆ ಹೇಳುತ್ತಿಲ್ಲ. ಅವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ನಾನು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿಲ್ಲ. ಇದು ನನ್ನ ಹೇಳಿಕೆ ಅಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರು ಮಾತನಾಡಿ ಮುಗಿಸಿದ ಮೇಲೆ ತಾವು ತಮ್ಮ ಅನಿಸಿಕೆಗಳನ್ನು ಹೇಳಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಇದು ನನ್ನ ಹೇಳಿಕೆ ಅಲ್ಲ. ತಾವು ಕೂಡ ಟಿ.ವಿ.ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದ್ದೀರಿ ಎಂದು ಅಂದುಕೊಂಡಿದ್ದೇನೆ. ಈ ಮಾಹಿತಿ ಬಂದಿರುವಂತಹದ್ದು ತಪ್ಪು ಎಂದು ನಿಮಗೆ ಅಭಿಪ್ರಾಯವಿದ್ದರೆ ಗೌರವಾನ್ವಿತ ಸದಸ್ಯರು ಕೊಟ್ಟಿರುವ ಹೇಳಿಕೆಗಳನ್ನು ಡಿಸೆಂಬರ್ 17ನೇ ತಾರೀಖಿನ ಪತ್ರಿಕೆಯಲ್ಲಿ ಮತ್ತು ಅದೇ ದಿನ ಸಂಜೆ ಟಿ.ವಿ. ಮಾಧ್ಯಮದಲ್ಲಿ ಪ್ರಸಾರವಾಗಿರುವುದನ್ನು ತಾವು ತೆಗೆದು ನೋಡಬಹುದು. ನಾನು ಆ ಆಧಾರದ ಮೇಲೆ ಮಾತನಾಡುತ್ತಿದ್ದೇನೆ. ಮಾನ್ಯ ಸದಸ್ಯರು ಕೂಡ ಪತ್ರಿಕೆಗಳಲ್ಲಿ ಬಂದಿರುವುದನ್ನು ಮತ್ತು ಟಿ.ವಿ. ಮಾಧ್ಯಮದಲ್ಲಿ ಪ್ರಸಾರವಾಗಿರುವುದನ್ನು ನೋಡಿದ್ದಾರಲ್ಲವೇ;, ಈ ರಾಜ್ಯ ಶಾಂತಿಯಿಂದ ಇರಬೇಕೆಂದು ತಮಗೂ ಕೂಡ ಅನಿಸಿತ್ತಲ್ಲವೇ; .ಆವತ್ತಿನ ದಿವಸ ಈ ವಿಚಾರವನ್ನು ಪ್ರಸ್ತಾಪ ಮಾಡಿ ತಾವು ಹೇಳಿರುವಂತಹ ಹೇಳಿಕೆಗಳು ತಪ್ಪು ಎಂದು ಏಕೆ ಸಮರ್ಥನೆ ಮಾಡಲಿಲ್ಲ? ಆ ದಿವಸ ಆ ಘಟನೆ ನಡೆಯುವುದಕ್ಕೆ ಯಾರು ಮೂಲ ಕಾರಣ ಕರ್ತರು ಎಂಬುದು ಈಗ ನಮ್ಮ ಮುಂದಿರುವಂತಹ ಪ್ರಶ್ನೆಯಾಗಿದೆ. ಅದೆಲ್ಲಾ ಆ ನಂತರದ ವಿಚಾರವಾಗಿದೆ. ಜೀವ ಹೋದ ನಂತರ ಮಾತನಾಡಿ ಏನು ಪ್ರಯೋಜನ? ಈಗ ನಾವು ಪುನಃ ಆ ಜೀವ ಕೊಡುವುದಕ್ಕೆ ಸಾಧ್ಯವೇ? ಆವತ್ತಿನ ದಿವಸ ಜೀವವನ್ನು ಉಳಿಸಬಹುದಿತ್ತಲ್ಲವೇ, ಆವತ್ತಿನ ದಿವಸ ಏಕೆ ಸುಮ್ಮನೆ ಕುಳಿತುಕೊಂಡರು? ಇವತ್ತಿನ ದಿವಸ ಮಾತನಾಡುವುದಕ್ಕೋಸ್ಕರ ವಿರೋಧ ಪಕ್ಷದಲ್ಲಿ ನಾವು ಸಹ ಇದ್ದೇವೆ ಎಂದು ನಮ್ಮನ್ನು ಗುರುತು ಹಿಡಿಯಬೇಕು ಎನ್ನುವುದಕ್ಕೋಸ್ಕರ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆಯೇ? ನಾನು ಈ ವಿಚಾರದ ಬಗ್ಗೆ ಸಂಪೂರ್ಣವಾಗಿ ಮಾತನಾಡುತ್ತೇನೆ. ಏಕೆಂದರೆ, ಇದರಲ್ಲಿ ರಾಜಕಾರಣ ಅಡಗಿದೆ, ರಾಜಕಾರಣ ಏಕೆ ಅಡಗಿದೆ ಎಂದರೆ ನಾನು ಈ ಮೊದಲೇ ಹೇಳಿದ್ದೇನೆ. ನಮ್ಮ ದೇಶದಲ್ಲಿ ಆರ್ಟಿಕಲ್–370 ಒಳಗೆ ಕಾನೂನನ್ನು ಜಾರಿಗೆ ತಂದು ಕೇಂದ್ರ ಸರ್ಕಾರ ಯಶಸ್ವಿಯಾಯಿತು.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಆರ್ಟಿಕಲ್–370 ಅನ್ನು ಅಸಂವಿಧಾನಿಕಗೊಳಿಸಲಾಗಿದೆಯೇ?

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, Citizenship (Amendment) Bill ಅನ್ನು Citizenship (Amendment) Act ಮಾಡುವುದರಲ್ಲಿ ಯಶಸ್ವಿಯಾಯಿತು. ಇವರು ರಾಜಕಾರಣಕ್ಕೋಸ್ಕರ ಇನ್ನು ನಮ್ಮ ಆಸ್ತಿತ್ವ ಉಳಿಯುವುದಿಲ್ಲವೆಂದು ಮತ್ತು ನಮಗೆ ಆಸ್ತಿತ್ವ ಇಲ್ಲ, ಇನ್ನೂ ನೆಲಸಮ ಆಗುತ್ತೇವೆಂದು ಹೇಗಾದರೂ ಗೊಂದಲಗಳನ್ನು ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ಈ ವಿಚಾರವನ್ನು ಹುಟ್ಟುಹಾಕುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಆವತ್ತಿನ ದಿವಸ ಇದೇ ಕಾಳಜಿ ಇದ್ದಿದ್ದರೆ ಈ ರೀತಿಯ ಯಾವುದೇ ಘಟನೆಗಳು ಆಗುತ್ತಿರಲಿಲ್ಲ. ಆಡಳಿತ ಪಕ್ಷದ ಮತ್ತು ಸರ್ಕಾರದ ಜೊತೆಗೆ ಒಟ್ಟಿಗೆ ಕುಳಿತುಕೊಂಡು ಚರ್ಚೆ ಮಾಡಿ, ಸಮಸ್ಯೆಗಳನ್ನು ಬಗೆಹರಿಸಬಹುದಾಗಿತ್ತು. ಬೆಂಕಿಗೆ ತುಪ್ಪ ಸುರಿಯುವಂತಹ ಕೆಲಸ ಏಕೆ ಮಾಡಬೇಕಾಗಿತ್ತು? ಇವತ್ತಿನ ದಿವಸ ನಾವು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏನಾದರೂ ಮಾತನಾಡಿದರೆ, ಅದರಲ್ಲಿ ತಪ್ಪು ಹುಡುಕುವಂತಹ ಕೆಲಸಗಳನ್ನು ವಿರೋಧ ಪಕ್ಷದವರು ಖಂಡಿತವಾಗಿಯೂ ಮಾಡಬಾರದು. ಏಕೆಂದರೆ, ನಾನು ಇದರ ಬಗ್ಗೆ ಮೊದಲೇ ಪ್ರಸ್ತಾಪ ಮಾಡಿದ್ದೇನೆ. ನಾವೆಲ್ಲರೂ ಈ ಸದನದ ಗೌರವ, ಘನತೆಯನ್ನು ಉಳಿಸಬೇಕು. ನಾನು ಈಗ ಹೊಸದಾಗಿ ಈ ಸದನಕ್ಕೆ ಬಂದಿರಬಹುದು. ಆದರೆ ಹಿಂದಿನಿಂದಲೂ ಕೆಳಮನೆ ಮತ್ತು ಮೇಲ್ಮನೆಗಳಿಗೆ ಇತಿಹಾಸಗಳೇ ಇವೆ. ಈ ಎರಡು ಸದನಗಳಿಗೆ ಎಂತೆಂತಹ ಮಾನ್ಯ ಸದಸ್ಯರುಗಳು ಬಂದು ಹೋಗಿದ್ದಾರೆ. ಆದರೆ ಈ ಸದನವು ಅಂತಹ ಸಂದರ್ಭದಲ್ಲಿ ಶಾಂತಿಯಿಂದ ಇದ್ದಂತಹದ್ದನ್ನು ಇವತ್ತಿನ ದಿವಸ ನಮ್ಮಲ್ಲಿರುವ ಪರಸ್ಪರ ದ್ವೇಷಕ್ಕೋಸ್ಕರ, ಆಡಳಿತದ ಅಧಿಕಾರಕ್ಕೋಸ್ಕರ ಬೆಂಕಿ ಹಚ್ಚುವಂತಹ ಕೆಲಸವನ್ನು ಮಾಡುವಂತಹದ್ದು ಸೂಕ್ತ ಎಂದು ನನಗೆ ಅನಿಸುವುದಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಉದ್ದೇಶ ಇತ್ತು.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಉದ್ದೇಶ ಏನಿತ್ತು? ಎಲ್ಲಾ ಮಾನ್ಯ ಸದಸ್ಯರುಗಳು ಸಿಎಎ ಬಗ್ಗೆ ಮಾತನಾಡಿದ್ದಾರೆಯಲ್ಲವೇ, ಸಿಎಎ ನಲ್ಲಿ ಏನು ತಪ್ಪು ಇದೆ? ಇಲ್ಲಿರುವವರಿಗೆ ಏನಾದರೂ ತೊಂದರೆ ಕೊಡುವುದಕ್ಕೆ ಹೊರಟಿದೆಯೇ? ಸಿಎಎ ಬಗ್ಗೆ ಮಾತನಾಡಿರುವ ಕಡತವನ್ನು ತೆಗೆಯಿಸಿ, ಅವರು ಸಿಎಎ ಬಗ್ಗೆ ಮಾತನಾಡಿಲ್ಲವೇ? ಅದರಲ್ಲಿ ಏನು ತಪ್ಪಿದೆ?

(ಗೊಂದಲ)

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ನಮ್ಮ ದೇಶದಿಂದ ಹೋಗಿರುವಂತಹವರಿಗೆ ಈ ರೀತಿ ಮಾಡುತ್ತಿರುವಂತಹದ್ದು. ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಏಕೆ ಮಾತನಾಡುತ್ತಾರೆ? ಇದರಲ್ಲಿ ರಾಜಕೀಯ ಅಡಗಿದೆ. ರಾಜಕಾರಣಕ್ಕೋಸ್ಕರ ಇವರು ವಿರೋಧತೆಯನ್ನು ತೋರಿಸುತ್ತಿದ್ದಾರೆ. ಇದು ಒಳ್ಳೆಯದಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ನಾವು ಇದರ ಬಗ್ಗೆ ಯಾವತ್ತೂ ಕೂಡ ವಿರೋಧತೆಯನ್ನು ತೋರಿಸುತ್ತಿಲ್ಲ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಅವರು ಈ ರೀತಿ ಮಾತನಾಡಬಹುದೇ?

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಇವರಿಗೆ ಸಂವಿಧಾನದ ಬಗ್ಗೆ ಏನಾದರೂ ಗೊತ್ತಿದೆಯೇ,

(ಗೊಂದಲ)

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಇವರು ಸಿಎಎನಲ್ಲಿ ಉಲ್ಲೇಖ ಮಾಡಿದ್ದಾರೆ. ಅವರು ಮಾತನಾಡಿದರು, ನಾವು ಇದರ ಬಗ್ಗೆ ಮಾತನಾಡಬಹುದು; ವಿರೋಧ ಪಕ್ಷದ ನಾಯಕರು ಮಾತ್ರ ಮಾತನಾಡಬೇಕೇ,

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಡಾ॥ ಜಯಮಾಲರವರು ಸಿಎಎ ಮೇಲೆ ಉಲ್ಲೇಖ ಮಾಡಿದ್ದಾರೆ. ಇದರ ಬಗ್ಗೆ ಕಡತವನ್ನು ತೆಗಿಸಿ, ಕಡತದಲ್ಲಿ ಇಲ್ಲದಿದ್ದರೆ ನಾನು ಹೇಳಿರುವ ಹೇಳಿಕೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಪೌರತ್ವ ತಿದ್ದುಪಡಿ ಕಾಯಿದೆ (ಸಿಎಎ) ಯನ್ನು ವಾಪಸ್ಸು ಪಡೆಯಬೇಕು. ಎಲ್ಲರಿಗೂ ಒಂದೇ ಕಾನೂನು ಆಗಬೇಕು. ವಿರೋಧ ಪಕ್ಷದವರಿಗೆ ಒಂದು ಕಾನೂನು, ಆಡಳಿತ ಪಕ್ಷದವರಿಗೆ ಒಂದು ಕಾನೂನೇ?

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಇದು ನಮ್ಮ ಸಂವಿಧಾನದಲ್ಲಿ ಇಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ನಿಮಗೆ ಎಷ್ಟು ಹಕ್ಕು ಇದೆಯೋ, ನಮಗೂ ಸಹ ಅಷ್ಟೇ ಹಕ್ಕು ಇದೆ.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದವರು ಬಾಯಿಗೆ ಬಂದ ಹಾಗೆ ಮಾತನಾಡಬಹುದೇ? ಇದು ಸಾಧ್ಯವಿಲ್ಲ. ಸಿಎಎ ಬಗ್ಗೆ ಡಾ॥ ಜಯಮಾಲರವರು, ಶ್ರೀ ಎಂ.ನಾರಾಯಣಸ್ವಾಮಿ ಯವರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತನಾಡಿರುವುದನ್ನು ಕೇಳಿಕೊಂಡೇ ನಾನು ಈಗ ಮಾತನಾಡುತ್ತಿರುವುದು. ವಿರೋಧ ಪಕ್ಷದವರು ನಾವು ಮಾತನಾಡಿಲ್ಲ ಎಂದು ಹೇಳಿದರೆ, ಇದರ ಬಗ್ಗೆ ಕಡತವನ್ನು ತೆಗೆಸಿ ನೋಡಿ. ಆಗ ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸಿಎಎ ಯಿಂದ ಏನು ತಪ್ಪಿದೆ ಎಂದು ತಾವು ಕೇಳಿರುವುದರಿಂದ, ಏನು ತಪ್ಪಿದೆ ಎನ್ನುವ ಬಗ್ಗೆ ನಾವು ಮಾತನಾಡುತ್ತೇವೆ. ಪಾಕಿಸ್ತಾನ ಇರಬಹುದು, ಬಾಂಗ್ಲಾದೇಶ ಇರಬಹುದು. ಶ್ರೀಲಂಕಾವನ್ನು ಏಕೆ ಬಿಟ್ಟಿದ್ದೀರಾ, ಬೇರೆ ದೇಶವನ್ನು ಏಕೆ ಬಿಟ್ಟಿದ್ದೀರಾ?

(ಗೊಂದಲ)

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಮಂಗಳೂರಿನ ಘಟನೆಗೆ ಮೂಲ ಕಾರಣ ಯಾರು? ಇದರ ಬಗ್ಗೆ ನಾವು ಹೇಗೆ ಉಲ್ಲೇಖ ಮಾಡಬೇಕು.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಗೋಲಿಬಾರ್ ಬಗ್ಗೆ ಮೊದಲು ಮಾತನಾಡಲಿ. ಪೊಲೀಸ್ ದೌರ್ಜನ್ಯದ ಬಗ್ಗೆಯೂ ಸಹ ಮಾತನಾಡಲಿ. ಅವರನ್ನು ಅಮಾನತ್ತು ಮಾಡುವ ಬಗ್ಗೆ ಹೇಳಿ.

(ಗೊಂದಲ)

(ಮುಂದು)

**(72) 19/02/2020/5:30/ಎಸ್‌ಪಿಆರ್/ಆರ್‌ಎನ್**

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಆ ಘಟನೆ ಹುಟ್ಟಿರುವುದೇ ಸಿ.ಎ.ಎ. ಯಿಂದಾಗಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಆ ಎರಡು ಜೀವ ಹೋಗಿವೆ. ಅವರಿಗೆ ಪರಿಹಾರ ಕೊಡಿ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಯಾವುದು ತಪ್ಪೆಂದು ಮಾನ್ಯ ಸಭಾಪತಿಯವರು ಹೇಳಬೇಕು. ನಾನು ಅದನ್ನು ಉಲ್ಲೇಖ ಮಾಡಿರುವುದು ಸರಿಯೋ ಅಥವಾ ತಪ್ಪೋ? ಇದು ಸದನಕ್ಕೆ ಸ್ಪಷ್ಟವಾಗಬೇಕು. ಏಕೆಂದರೆ ಇದನ್ನು ವಿರೋಧ ಪಕ್ಷದವರು ಮಾಡಿದ್ದಾರೆ. ವಿರೋಧ ಪಕ್ಷದವರು ಘಟನೆ ನಡೆದಿರುವ ಮೂಲ ಉದ್ದೇಶ . . .

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ನಾರಾಯಣಸ್ವಾಮಿ:–** ಆದರೆ, ಸಿ.ಎ.ಎ. ... ಅದನ್ನು ಹೇಳಲಿ.

**ಡಾ॥ ಜಯಮಾಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನನ್ನ ಹೆಸರನ್ನು ಪ್ರಸ್ತಾಪಿಸಿದ್ದಾರೆ.

**ಸಭಾಪತಿಯವರು:–** ಆಗ ನೀವು ಮಾತನಾಡಿದ್ದೀರಿ. ಈಗ ಬೇರೆಯವರಿಗೆ ಅವಕಾಶ ನೀಡೋಣ.

**ಶ್ರೀ ಎಂ.ಕೆ.ಪ್ರಾಣೇಶ್:–** ನಾನು ಪ್ರಸ್ತಾಪ ಮಾಡಿರುವುದಲ್ಲಿ ಏನು ತಪ್ಪಿದೆ? Citizenship (Amendment) Bill ಅನ್ನು Citizenship (Amendment) Act ಆಗಿ ಮಾಡಿರುವುದರಲ್ಲಿ ಏನು ತಪ್ಪಿದೆ? ಇದರ ಬಗ್ಗೆ ನಾನು ಈ ಮೊದಲೇ ಉಲ್ಲೇಖ ಮಾಡಿದ್ದೇನೆ. ಈ Citizenship (Amendment) Bill ಅನ್ನು ನಮ್ಮ ಅಜೆಂಡಾದಲ್ಲಿಟ್ಟುಕೊಂಡು ನಮ್ಮ ಪಕ್ಷವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಇದನ್ನು ಮಾಡುತ್ತೇವೆಂದು ಹೇಳಿದ್ದೇವೆ. ಹೀಗಾಗಿ ಇದನ್ನು ಮಾಡಿದ್ದೇವೆ. ಇದರಲ್ಲಿ ಏನು ತಪ್ಪಿದೆ? ನೀವು ಅದಕ್ಕೆ ಪ್ರೊಟೆಸ್ಟ್ . . .

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದನ್ನು ಎಲ್ಲಾ ಸಮಾಜದವರಿಗೆ ಎಲ್ಲಾ ಜನಾಂಗದವರಿಗೆ ಹಾಗೂ ಎಲ್ಲಾ ದೇಶಗಳಿಗೂ ಸಹ ಇದನ್ನು ಮಾಡಿ. ಭಾರತ ದೇಶದ ಸುತ್ತಲೂ ಇರುವ ಎಲ್ಲಾ ದೇಶಗಳಿಗೂ ಮಾಡಿ. ಕೇವಲ ಮೂರು ರಾಷ್ಟ್ರಗಳಿಗೆ ಏಕೆ ಮಾಡುತ್ತೀರಿ?

**ಶ್ರೀ ಎಂ.ಕೆ.ಪ್ರಾಣೇಶ್:–** ನಾನು ಮುಗಿಸುತ್ತೇನೆ. ಹದಿನೈದು ಲಕ್ಷ ರೂಪಾಯಿಗಳನ್ನು ಕೊಡುವುದರ ಬಗ್ಗೆ ವಿರೋಧ ಪಕ್ಷದವರು ಉಲ್ಲೇಖ ಮಾಡಿದ್ದಾರೆ. ಇದನ್ನು ಯಾರು ಹೇಳಿದ್ದಾರೆ? ಈ ಬಗ್ಗೆ ದಾಖಲೆಗಳನ್ನು ಮಾನ್ಯ ಸಭಾಪತಿಯವರ ಮುಖಾಂತರ ತಂದು ತೋರಿಸಲಿ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಆಡಳಿತ ಪಕ್ಷದವರು ಜನರಿಗೆ ಬೆಲೆ ...

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ವಿರೋಧತೆಗೋಸ್ಕರ ವಿರೋಧ ಮಾಡುವುದು ಬೇಡ. ನಾನು ವಿನಂತಿಯನ್ನು ಮಾಡುತ್ತೇನೆ. ಈ ರೀತಿ ಎಲ್ಲಾ . . . **(ಗೊಂದಲ)** ಖಂಡಿತವಾಗಿಯೂ ಸಹ ಏನು ಆಗಿದೆ... ಅವತ್ತಿನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಂದರ್ಭಗನುಗುಣವಾಗಿ ... ಹಾಗೆ ಆಗಬಾರದಿತ್ತು. ಆದರೂ ಸಹ ಆಗಿದೆ. ಈ ರಾಜ್ಯದಲ್ಲಿ ಶಾಂತಿ ನೆಲೆಸುವುದಕ್ಕೆ ಮುಂದೆ ಎಲ್ಲರೂ ಒಟ್ಟಾಗಿ ಅಂದರೆ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರು ಕೈಜೋಡಿಸಬೇಕೆಂದು ವಿನಂತಿ ಮಾಡುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಶ್ರೀ ಆಯನೂರು ಮಂಜುನಾಥರವರೇ ನೀವು ಮಾತನಾಡುತ್ತೀರಲ್ಲವೇ?

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನೀವು ನಮಗೆ ಮಾತನಾಡಲು ನಂತರದಲ್ಲಿ ಅವಕಾಶವನ್ನು ನೀಡುವುದಾಗಿ ಹೇಳಿದ್ದೀರಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಮೊದಲೆ ಹೇಳಿದಂತೆ ಒಂದು ಬಾರಿ ಆಡಳಿತ ಪಕ್ಷದವರಿಗೆ ಮತ್ತೊಂದು ಬಾರಿ ವಿರೋಧ ಪಕ್ಷದವರಿಗೆ ಮಾತನಾಡಲು ಅವಕಾಶ ನೀಡಬೇಕು. ಹೀಗಾಗಿ ಈಗ ಶ್ರೀ ಹೆಚ್.ಎಂ.ರಮೇಶ ಗೌಡರವರು ಮಾತನಾಡಲಿ.

**ಶ್ರೀ ಆಯನೂರು ಮಂಜುನಾಥ:–** ಮಾನ್ಯ ಸಭಾಪತಿಯವರೇ, ಹಾಗೆಯೇ ಆಗಲಿ.

**ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಸವಿಸ್ತಾರವಾಗಿ ನಮ್ಮ ಹಿರಿಯ ಸದಸ್ಯರುಗಳೆಲ್ಲಾ ಕಾನೂನು ಸುವ್ಯವಸ್ಥೆಯ ಬಗ್ಗೆ ದೀರ್ಘವಾದ ಚರ್ಚೆಯನ್ನು ಮಾಡಿ ಅದರ ಬಗ್ಗೆ ಹೇಳಿದ್ದಾರೆ. ಮಂಗಳೂರಿನ ಗಲಭೆಯನ್ನು ಎಲ್ಲರೂ ನೋಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್ ರವರು ಈಗಾಗಲೇ ಮಾತನಾಡಿದ್ದಾರೆ. ನಿನ್ನೆಯ ದಿನ ಶ್ರೀ ಸಿ.ಎಂ.ಇಬ್ರಾಹೀಂರವರು ಮಾತನಾಡಿದ್ದಾರೆ. ಇವರಿಬ್ಬರೂ ಸಹ ಮಂಗಳೂರು ಗಲಭೆಯ ಬಗ್ಗೆ ಎರಡೂ ಸದನಗಳಲ್ಲಿ ಪ್ರಸ್ತಾಪ ಮಾಡಿ, ಚರ್ಚೆ ಮಾಡಿರುವ ಬಗ್ಗೆ ತಿಳಿಸಿದ್ದಾರೆ. ಎರಡೂ ಕಡೆಗಳಲ್ಲಿ ಗಲಭೆಗೆ ಸಂಬಂಧಪಟ್ಟಂತೆ ಕೆಲವೊಂದು ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿದೆ. ಮಂಗಳೂರಿನಲ್ಲಿ ಬಡವರ ಮೇಲೆ ಲಾಠಿ ಚಾರ್ಜ್ ಮಾಡಲಾಗಿದೆ. ಕರ್ನಾಟಕ ರಾಜ್ಯವು ಯಾವಾಗಲೂ ಇಲ್ಲಿನ ಪೊಲೀಸ್ ಹಾಗೂ ಕಾನೂನು ಸುವ್ಯವಸ್ಥೆಗೆ ವಿಶೇಷವಾದ ಗೌರವನ್ನು ಪಡೆದುಕೊಂಡಿದೆ. ಸದಸ್ಯರುಗಳೆಲ್ಲರೂ ನೋಡಿದಂತೆ, ಆದರೆ ಇಡೀ ರಾಜ್ಯದಲ್ಲಿ ಎಲ್ಲಿಯೋ ಒಂದು ಕಡೆ ಅದರಲ್ಲೂ ವಿಶೇಷವಾಗಿ ರಾಜ್ಯದ ಕರಾವಳಿ ಭಾಗದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಬಿ.ಜೆ.ಪಿ. ಪಕ್ಷವು ಅಧಿಕಾರಕ್ಕೆ ಬಂದಾಗ ಮಾತ್ರವೇ ಮಂಗಳೂರು ಭಾಗದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುತ್ತದೆ. ಏಕೆಂದರೆ, ಬಿ.ಜೆ.ಪಿ.ಪಕ್ಷದಲ್ಲಿನ ಹೆಚ್ಚು ಶಾಸಕರು ಆ ಭಾಗದಿಂದ ಆಯ್ಕೆಗೊಂಡು ಬಂದಿದ್ದಾರೆ. ಆ ಭಾಗದಲ್ಲಿನ ಸಂಘ ಸಂಸ್ಥೆಗಳು ನೀಡುವ ಪ್ರಚೋದನಾಕಾರಿ ಹೇಳಿಕೆಗಳು ಅಲ್ಲಿನ ಕಾನೂನು ಸುವ್ಯವಸ್ಥೆ ಹದಗೆಡಲು ಕಾರಣವಾಗಿದೆ. ಈ ಸಂಬಂಧಪಟ್ಟಂತೆ ಹಲವಾರು ಉದಾಹರಣೆಗಳನ್ನು ನಾನು ನೀಡುತ್ತೇನೆ. ಮಂಗಳೂರು ಪೊಲೀಸ್

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಯುಕ್ತರು ಹಾಗೂ ಪೊಲೀಸ್ ಅಧಿಕಾರಿಗಳು ಅವತ್ತಿನ ದಿವಸ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ನಾಕರುಗಳು ಮಂಗಳೂರು ನಗರಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಮಂಗಳೂರು ವಿಮಾನ ನಿಲ್ದಾಣದಿಂದ ಮಂಗಳೂರಿಗೆ ಹೋಗಲು ಅವಕಾಶ ನೀಡಲಿಲ್ಲ. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಗೋಪಾಲಗೌಡರವರು ಮಂಗಳೂರಿನಲ್ಲಾದ ಅವ್ಯವಸ್ಥೆಯನ್ನು ಅವಲೋಕಿಸಲು, ಹದಗೆಟ್ಟಿರುವ ಕಾನೂನು ಸುವ್ಯವಸ್ಥೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಹಾಗೂ ಅಲ್ಲಿನ ಜನತೆಗೆ ಸಾಂತ್ವನ ನೀಡುವುದಕ್ಕಾಗಿ ಮಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿ ಅವರು ಪತ್ರಿಕಾ ಗೋಷ್ಠಿಯನ್ನು ನಡೆಸಲು ಅವಕಾಶ ನೀಡುವುದಿಲ್ಲ. ಅಲ್ಲಿನ ಕೆಲವು ಪತ್ರಿಕಾ ಸ್ನೇಹಿತರು ಪತ್ರಿಕಾ ಗೋಷ್ಠಿಯನ್ನು ನಿಗದಿಪಡಿಸಿದ ಸ್ಥಳಕ್ಕೆ ಆಹ್ವಾನಿಸಿದರೂ ಸಹ ಅಲ್ಲಿನ ಪೊಲೀಸ್ ಆಯುಕ್ತರು, ಪೊಲೀಸ್ ಅಧಿಕಾರಿಗಳು ಹಾಗೂ ಜಿಲ್ಲಾಡಳಿತಾಧಿಕಾರಿಗಳು ವಿಶೇಷವಾದ ಕಾಳಜಿಯನ್ನು ವಹಿಸಿ, ನಿವೃತ್ತ ನ್ಯಾಯಾಧೀಶರಿಗೆ ಪತ್ರಿಕಾ ಗೋಷ್ಠಿಯನ್ನು ನಡೆಸುವುದಕ್ಕೆ ಅವಕಾಶ ನೀಡುವುದಿಲ್ಲ. ಇವತ್ತಿನ ದಿವಸ ನಾವು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ. ಇಂತಹ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಸಹ ಪ್ರತಿಭಟನೆಯನ್ನು ಮಾಡಬಹುದು ಹಾಗೂ ಎಲ್ಲಿಗೆ ಬೇಕಾದರೂ ಸಹ ಹೋಗಬಹುದು. ಇದಕ್ಕೆ ಬಿ.ಜೆ.ಪಿ. ಪಕ್ಷ ಹಾಗೂ ಸರ್ಕಾರದವರು ಅಲ್ಲಿ 144 ಸೆಕ್ಷನ್‌ನ್ನು ವಿಧಿಸಿರುವ ಕಾರಣಕ್ಕಾಗಿ ನಿವೃತ್ತ ನ್ಯಾಯಾಧೀಶರನು ಪತ್ರಿಕಾ ಗೋಷ್ಠಿ ನಡೆಸುವುದಕ್ಕಾಗಿ ಬಿಡಲಿಲ್ಲ ಎಂಬುದಾಗಿ ಹೇಳಿದ್ದಾರೆ. ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಕಾನೂನು ಎಲ್ಲರಿಗೂ ಒಂದೇಯಾಗಿರುತ್ತದೆ ಹಾಗೂ ಎಲ್ಲರೂ ಕಾನೂನನ್ನು ಪಾಲಿಸಬೇಕಾಗುತ್ತದೆ. ಇಂತಹ ಕಾನೂನನ್ನು ಯಾರಾದರೂ ಸರಿ ಉಲ್ಲಂಘಿಸಿ, ಪ್ರಚೋದನೆಕಾರಿ ಹೇಳಿಕೆಯನ್ನು ನೀಡುವಂತಹ ಅಥವಾ ಗಲಭೆಯನ್ನು ಮಾಡುವಂತಹ ಕೃತ್ಯಗಳನ್ನು ಮಾಡುವವರ ವಿರುದ್ಧ ಸರ್ಕಾರವು ಕಾನೂನು ರೀತಿಯ ಕ್ರಮಗಳನ್ನು ಕೈಗೊಳ್ಳಬಹುದಾಗಿರುತ್ತದೆ. ಆದರೆ, ಇಂತಹ ಯಾವುದೇ ಕ್ರಮಗಳನ್ನು ಮಾಡಲಿಲ್ಲ. ಸರ್ಕಾರದವರು ಒಂದು ರೀತಿಯ ದೌರ್ಜನ್ಯ ಮತ್ತು ದಬ್ಬಾಳಿಕೆಯನ್ನು ಮಾಡಿ ಅಲ್ಲಿ ನಮ್ಮ ವಿರೋಧ ಪಕ್ಷದ ನಾಯಕರಿಗೆ ಮತ್ತು ನಿವೃತ್ತ ಸರ್ವೋಚ್ಚ ನ್ಯಾಯಾಧೀಶರುಗಳಿಗೆ ಅವಮಾನವನ್ನು ಮಾಡಿದ್ದಾರೆ. ಹೀಗಾಗಿ ಸರ್ಕಾರವು ಈ ಸದನಕ್ಕೆ ಸರಿಯಾದ ಸಮಜಾಯಿಷಿಯನ್ನು ನೀಡಬೇಕಾಗುತ್ತದೆ. ಪ್ರಸ್ತುತ ಸದನದಲ್ಲಿ ಗೃಹ ಮಂತ್ರಿಗಳು ಉಪಸ್ಥಿತರಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಒಂದು ನಿಮಿಷ ತಾಳಿ. ಪ್ರಸ್ತುತ ಮಾನ್ಯ ಮೋಹನ ಕುಮಾರ್ ಕೊಂಡಜ್ಜಿರವರು ಸದನದಲ್ಲಿದ್ದಾರೆ. ಅವರು ಕಾರ್ಯಸೂಚಿಯಂತೆ ಅರ್ಜಿಯನ್ನೊಪ್ಪಿಸಲಿ. ನಂತರದಲ್ಲಿ ನೀವು ಮುಂದುವರೆಸಿ.

**13. <u>ಅರ್ಜಿಯನ್ನೊಪ್ಪಿಸುವುದು</u>**

**ಶ್ರೀ ಮೋಹನ ಕುಮಾರ್ ಕೊಂಡಜ್ಜಿ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಇವತ್ತು ಅರ್ಜಿಯನ್ನೊಪಿಸಬೇಕಾಗಿತ್ತು. ಆದರೆ ಪೂರ್ವಾಹ್ನದಲ್ಲಿ ನಾನು ದಾವಣಗೆರೆ ನಗರ ಸಭೆಯ ಚುನಾವಣೆಯ ನಿಮಿತ್ತ ಅಲ್ಲಿಗೆ ಹೋಗಬೇಕಾಗಿತ್ತು. ಹೀಗಾಗಿ ಈಗ ಮಂಡಿಸುತ್ತಿದ್ದೇನೆ. 2011, 2014 ಮತ್ತು 2015 ನೇ ಸಾಲಿನ ಗೆಜೆಟೆಡ್

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರೋಬೇಷನರ್ಸ್ ಹುದ್ದೆಗಳ ಆಯ್ಕೆ ಪ್ರಕ್ರಿಯೆಗಳಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ ಸರ್ಕಾರ ನಿಷ್ಪಕ್ಷಪಾತವಾಗಿ ಮತ್ತು ಪ್ರಾಮಾಣಿಕವಾಗಿ ಕ್ರಮಕೈಗೊಳ್ಳಬೇಕೆಂಬ ವಿಷಯದ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಅರ್ಜಿಯನ್ನು ಒಪ್ಪಿಸಲಾಯಿತು.

14. <u>ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ</u>

**ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ, ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ.**

– – – – –

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಪೊಲೀಸ್ ವ್ಯವಸ್ಥೆಗೆ ಅತ್ಯುನ್ನತವಾದ ಗೌರವವಿದೆ. ನಮ್ಮ ರಾಜ್ಯದ ಸಂಚಾರಿ ವ್ಯವಸ್ಥೆಯ ಬಗ್ಗೆ ತಮಗೆ ಅನುಭವವಾಗಿರಬಹುದು ಅಥವಾ ತಾವು ಇದನ್ನು ರಸ್ತೆಯಲ್ಲಿ ನೋಡಿರಬಹುದು. ಸಂಚಾರಿ ಪೊಲೀಸ್ ಅಧಿಕಾರಿಗಳು ಅಥವಾ ಅಲ್ಲಿ ಕರ್ತವ್ಯ ನಿರ್ವಹಿಸುವ ಪೇದೆಗಳು ಎಲ್ಲಿಯೋ ಒಂದು ಕಡೆ ನಿಂತುಕೊಂಡಿರುತ್ತಾರೆ. ಆ ಸಮಯದಲ್ಲಿ ಯಾರೋ ವಾಹನದಲ್ಲಿ ಸಂಚರಿಸುತ್ತಿದ್ದ ಸಂದರ್ಭದಲ್ಲಿ ಸಂಚಾರಿ ಪೊಲೀಸ್ ಅಧಿಕಾರಿ/ಪೇದೆ ಅಲ್ಲಿಗೆ ಅಕಸ್ಮಾತ್ತಾಗಿ ಓಡಿ ಬರುವ ಸಂದರ್ಭವಿರಬಹುದು ಅಥವಾ ಬಂದು ಸವಾರರ ಕುತ್ತಿಗೆ ಪಟ್ಟಿಗೆ ಕೈ ಹಾಕುವ ಸಂದರ್ಭವಿರಬಹುದು. ಇಂತಹ ಘಟನೆಗಳು ಬಹಳಷ್ಟು ಕಡೆಗಳಲ್ಲಿ ನಡೆಯುತ್ತವೆ. ಇಂತಹ ಪ್ರಕರಣಗಳನ್ನು ನಾವು ಬಹಳಷ್ಟು ನೋಡಿದ್ದೇವೆ. ಅದರಲ್ಲೂ ವಿಶೇಷವಾಗಿ ಬೆಂಗಳೂರು ನಗರದಲ್ಲಿ 15–16 ಪ್ರಕರಣಗಳನ್ನು ನಾವು ನೋಡಿದ್ದೇವೆ. ಇಂತಹ ಘಟನೆಗಳ ಬಗ್ಗೆ ನಾವು ಪೊಲೀಸ್ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಈ ವಿಷಯದಲ್ಲಿ ಗೃಹ ಮಂತ್ರಿಗಳು ವಿಶೇಷ ಕಾಳಜಿಯನ್ನು ವಹಿಸಬೇಕು. ಸದರಿ ಸ್ಥಳಗಳ ಸಿ.ಸಿ.ಟಿ.ವಿ. ಫೂಟೇಜ್‌ಗಳಿರುತ್ತವೆ. ಇವುಗಳಿಂದ ವಾಹನಗಳ ನೊಂದಣಿ ಸಂಖ್ಯೆಯನ್ನು ನೋಡಬಹುದು. ವಾಹನ ಸವಾರರು ಸಿಗ್ನಲ್ ಜಂಪ್ ಮಾಡುವ, ರ್‍ಯಾಶ್ ಚಾಲನೆ ಮಾಡುವ ಇಂತಹ ತಪ್ಪು ಕೃತ್ಯಗಳನ್ನು ಮಾಡಿದರೆ, ಅವುಗಳನ್ನು ನೋಡಬಹುದು. ಇಂತಹ ಎಲ್ಲಾ ರೀತಿಯ ವ್ಯವಸ್ಥೆಗಳು ನಮ್ಮ ಪೊಲೀಸ್ ಇಲಾಖೆಯಲ್ಲಿವೆ. ಆದ್ದರಿಂದ ಪೊಲೀಸರು ತಪ್ಪು ಮಾಡಿದ ಚಾಲಕರ ವಾಹನ ಸಂಖ್ಯೆಯನ್ನು ನೋಡಿಕೊಂಡು, ಅವರಿಗೆ ನೋಟೀಸ್‌ನ್ನು ನೀಡಬಹುದು ಅಥವಾ ಬೇರೆ ಯಾವುದೇ ರೀತಿಯ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬಹುದು. ಇದಕ್ಕೆ ಯಾರ ಅಭ್ಯಂತರವೂ ಇರುವುದಿಲ್ಲ. ಇಂತಹ ಆಧುನಿಕ ವ್ಯವಸ್ಥೆಗಳು ಇದ್ದು, ತಂತ್ರಜ್ಞಾನದಲ್ಲಿ ನಾವು ಮುಂದುವರೆದಿದ್ದರೂ ಸಹ ಇವತ್ತಿನ ದಿವಸ ಕೆಲವು ಪೊಲೀಸ್ ಅಧಿಕಾರಿ ಮತ್ತು ಪೇದೆಗಳು ಅನಾಗರೀಕ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಇದರಿಂದಾಗಿ ಇಡೀ ಪೊಲೀಸ್ ವ್ಯವಸ್ಥೆಗೆ ಒಂದು ಕಪ್ಪುಚುಕ್ಕೆಯಂತಾಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಮುಂದು)

(073)/19–2–2020/5–40/ಎಲ್ಎಂ/ವಿಕೆ
**ಶ್ರೀ ಎಚ್.ಎಂ.ರಮೇಶ್ ಗೌಡ**(ಮುಂದು)

ಅಡ್ಡ ಓಡಿ ಬಂದು ಬಿದ್ದು ಸಾಯುತ್ತಾರೆ. ಆ ರೀತಿಯಾಗಬಾರದು ಎಂದರೆ, ತಾವು ಸರ್ಕಾರಕ್ಕೆ ಸರಿಯಾದ ನಿರ್ದೇಶವನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದಕ್ಕಾಗಿ ಒಂದು ಸದನ ಸಮಿತಿಯನ್ನು ರಚನೆ ಮಾಡಿದರೆ ಒಳ್ಳೆಯದಾಗುತ್ತದೆ. ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡುತ್ತಿದ್ದೇವೆ. ಮಂಗಳೂರಿನಲ್ಲಿ ನಡೆದಿರುವ ಘಟನೆ ಬಗ್ಗೆ judicial inquiry ಮಾಡಿಸಿದರೆ ಒಳ್ಳೆಯದು. ಆ ತನಿಖೆಗಾಗಿ ಹೈಕೋರ್ಟ್ ಸಿಟಿಂಗ್ ನ್ಯಾಯಾಧೀಶರಿಂದ ತನಿಖೆಯನ್ನು ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಆಗ್ರಹಿಸಿ. ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಆಯನೂರು ಮಂಜುನಾಥ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ನಿನ್ನೆಯಿಂದ ಬಹಳ ಗಂಭೀರವಾದಂತಹ ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ. ಆಡಳಿತ ಪಕ್ಷದವರಲ್ಲಿ ಸ್ವಲ್ಪ ಆತಂಕವಿತ್ತು. ಇಂದಿನ ಅಜೆಂಡಾದಲ್ಲಿ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದು ಹೋಗಿದೆ ಎಂದು ಸಾರ್ವಜನಿಕ, ಮಹತ್ವದ ಜರೂರು ವಿಷಯ ಎಂದು ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡುವ ವಿಷಯವಿತ್ತು. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಂದಕ್ಕೆ ಹಾಕಬೇಕು ಎನ್ನುವ ವಿಚಾರ ಬಂದಾಗ ನಿಜವಾಗಿಯು ನಮಗೆ ಆತಂಕವಾಯಿತು, really afraid. ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿರುವ ಬಗ್ಗೆ ಚರ್ಚೆ ಮಾಡಿ positive ಆದ ಅಂಶಗಳ ಮೇಲೆ ಸದನ ಬೆಳಕನ್ನು ಚೆಲ್ಲಿದರೆ 5ನೇ ತಾರೀಖಿನಂದು ಮಂಡಿಸುತ್ತಿರುವ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಿದ್ದುಕೊಳ್ಳುವಂತಹ ಮಾರ್ಗದರ್ಶನವನ್ನು ಈ ಮೇಲ್ಮನೆ ಕೊಡುವಂತಹ ಅವಕಾಶವಿತ್ತು. ನಿನ್ನೆಯಿಂದ ನಡೆದ ಚರ್ಚೆಯನ್ನು ಆಧರಿಸಿ ನಾನು ಮಾತನಾಡುತ್ತಿದ್ದೇನೆ. ಕಾನೂನು ವ್ಯವಸ್ಥೆ ಎಲ್ಲಿ ಕುಸಿದು ಹೋಗಿದೆ ಎನ್ನುವುದು ನಿನ್ನೆಯ ಚರ್ಚೆಯಿಂದ ಗೊತ್ತಾಯಿತು. ಇಡೀ ರಾಜ್ಯದಲ್ಲಿ ಕೆಲವು ಭಾಗಗಳಲ್ಲಿ ಬಿಟ್ಟು ಕಾನೂನು ಸುವ್ಯವಸ್ಥೆ ತುಂಬಾ ಚೆನ್ನಾಗಿದೆ. ಮಂಗಳೂರಿನಲ್ಲಿ, ಬೀದರ್‌ನ ಶಾಲೆಯಲ್ಲಿ ಮತ್ತು ಹುಬ್ಬಳ್ಳಿಯ ಒಂದು ಭಾಗದಲ್ಲಿ ಈ ರೀತಿ ಪ್ರಕರಣ ನಡೆದಿದೆ. ಇವುಗಳನ್ನು ಬಿಟ್ಟರೆ ರಾಜ್ಯದ ಎಲ್ಲ ಕಡೆಗಳಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ ಎನ್ನುವುದನ್ನು ಇಡೀ ಸದನ ಒಕ್ಕರಲಿನಿಂದ ಒಪ್ಪಿಕೊಂಡಿದೆ ಎನ್ನುವುದು ನನಗೆ ಭಾಸವಾಗುತ್ತಿದೆ. ಅಲ್ಲಿಯು ಆಗಬಾರದು, ಆಗಿರುವುದು ಸರಿ ಎಂದು ನಾನು ಹೇಳುತ್ತಿಲ್ಲ. ಆರುವರೆ ಕೋಟಿ ಜನಸಂಖ್ಯೆ ಇರುವಂತಹ ಇಷ್ಟು ದೊಡ್ಡ ರಾಜ್ಯದಲ್ಲಿ ಒಂದೇರಡು ಕಡೆಗಳಲ್ಲಿ ಇಂತಹ ಪ್ರಕರಣಗಳು ಆಗಿವೆ. ಇದು ಗಂಭೀರವಾದ ವಿಚಾರವೇ ಅಲ್ಲ ಎಂದು ನಾನು ಹೇಳುತ್ತಿಲ್ಲ. ನಿನ್ನೆಯಿಂದ ಚರ್ಚೆ ಕೇಳಿದ ಮೇಲೆ ಸ್ವಲ್ಪ ಸಮಾಧಾನವಾಯಿತು. ತಪ್ಪು ಆಗಿದೆ ಆದರೆ ನಾವು ಹೆದರಿಕೊಳ್ಳುವಷ್ಟು ತಪ್ಪಾಗಿಲ್ಲ. ಸರಿಪಡಿಸಿಕೊಳ್ಳಲು ಆಗದಂತಹ ತಪ್ಪಾಗಿದೆ. ಆದರೆ ತೀರಾ ನಾವು ಹೆದರಿಕೊಳ್ಳುವಷ್ಟು ಕಾನೂನು ಸುವ್ಯವಸ್ಥೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಿದ್ದುಹೋಗಿರುವುದಿಲ್ಲ. ಮಂಗಳೂರಿನಲ್ಲಿ ನಡೆದ ಘಟನೆ ಬಗ್ಗೆ ಯಾವುದೇ ಸರ್ಕಾರವಿರಲಿ ಕ್ರಮ ತೆಗೆದುಕೊಳ್ಳಬೇಕು. ಇದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅಧಿಕಾರಿಗಳು ತಪ್ಪು ಮಾಡಿದರೆ ಅವರ ಮೇಲೆ ಕ್ರಮವಾಗಲಿ. ಹುಬ್ಬಳ್ಳಿ–ಬೀದರ್‌ನಲ್ಲಿ ನಡೆದಿರುವ ಘಟನೆ ಮೇಲೆ ಕ್ರಮ ತೆಗೆದುಕೊಳ್ಳಲಿ. ನನ್ನ ಸ್ನೇಹಿತರಾದ ಮಾನ್ಯ ರಮೇಶ್‌ರವರು ಹೇಳಿದ ಹಾಗೆ signal jump ಆಗಿದರೆ ಅದಕ್ಕೂ ಕ್ರಮ ತೆಗೆದುಕೊಳ್ಳಲಿ. signal jump ಕಾನೂನಿನ ಕುಸಿತ ಎಂದು ನಾನು ಭಾವಿಸುವುದಿಲ್ಲ. signal jump ಆದರೆ ಸಿಸಿ ಕ್ಯಾಮೆರಾ ಇರುತ್ತದೆ, ಅದನ್ನು ಪೊಲೀಸ್‌ನವರು ನೋಡಿ ಕ್ರಮ ತೆಗೆದುಕೊಳ್ಳುತ್ತಾರೆ. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಮೂರು ಕಡೆ ಮಾತ್ರ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯಸರ್ಕಾರ ವಿಫಲವಾಗಿದೆ. Indirectly you have certified that the Government is running smoothly. ಮೂರು ಕಡೆ ಮಾತ್ರ ಎಡವಿದೆ. ಬಾಕಿ ಕಡೆಗಳಲ್ಲಿ ಆಗಿರಬಹುದು ಅಥವಾ ಆಗದೆ ಇರಬಹುದು ಅದು ನನಗೆ ಗೊತ್ತಿಲ್ಲ. ಆದರೆ ವಿರೋಧ ಪಕ್ಷದವರು ಬೇರೆ ಕಡೆ ಆಗಿದೆ ಎನ್ನುವುದನ್ನು ಹೇಳಿರುವುದಿಲ್ಲ. ನಡೆದಿರುವ ಚರ್ಚೆಯನ್ನೆ ಆಧರಿಸಿ ನಾನು ಮಾತನಾಡುತ್ತಿದ್ದೇನೆ. ರಾಜ್ಯ ಸರ್ಕಾರ ಇದನ್ನು ನಿಭಾಯಿಸುವಲ್ಲಿ ವಿಫಲವಾಗಿರುವುದರಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಎಲ್ಲೇಲಿ ಕುಂಠಿತವಾಗಿದೆ ಎನ್ನುವ ಬಗ್ಗೆ ಒಂದೇ ಒಂದು ಪ್ರಕರಣವನ್ನು ಪ್ರಸ್ತಾಪ ಮಾಡಲಿಲ್ಲ. ಕಾನೂನು ಸುವ್ಯವಸ್ಥೆ ಕುಸಿತದಿಂದ ಎಲ್ಲಿ ಅಭಿವೃದ್ಧಿ ಕೆಲಸಗಳು ನಿಂತು ಹೋಗಿವೆ, ಸರ್ಕಾರದ ಯೋಜನೆಗಳು ಎಲ್ಲಿ ಸ್ಥಗಿತಗೊಂಡಿವೆ, ಇದರಿಂದ ಜನಸಾಮಾನ್ಯರಿಗೆ ಏನೇನು ತೊಂದರೆಗಳಾಗಿವೆ ಎನ್ನುವುದರ ಬಗ್ಗೆ ಬೆಳಕು ಚೆಲ್ಲಿದರೆ ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಿದೆ. ಒಂದು ವಿರೋಧ ಪಕ್ಷ ಜವಾಬ್ದಾರಿಯಿಂದ ಸರ್ಕಾರದ ತಪ್ಪುಗಳನ್ನು ಹೇಳಿದ್ದಾಗ ಅದನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡಬೇಕಾಗುತ್ತದೆ. ಅದೃಷ್ಟವಶಾತ್ ಅಥವಾ ದುರದೃಷ್ಟವಶಾತ್ ಆ ರೀತಿಯ ಚರ್ಚೆ ನಿನ್ನೆಯಿಂದ ಕಂಡುಬರಲಿಲ್ಲ.

**ಶ್ರೀ ಎನ್.ಅಪ್ಪಾಜಿಗೌಡ:–** ಇದು ಸರ್ಕಾರದ ಉತ್ತರವೊ ಅಥವಾ ಚರ್ಚೆಯೇ ಎನ್ನುವುದು ಗೊತ್ತಾಗುತ್ತಿಲ್ಲ.

ಶ್ರೀ **ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಗಳೆ, ನಾನು ನಿಯಮ 68ರ ಮೇಲೆ ಚರ್ಚೆ ಮಾಡುತ್ತಿದ್ದೇನೆ. ತಾವು ತಡವಾಗಿ ಸದನಕ್ಕೆ ಬಂದಿರುವುದರಿಂದ ತಮಗೆ ಗೊತ್ತಾಗಿಲ್ಲ. ಅದನ್ನು ತಿಳಿದುಕೊಳ್ಳಿ. ಉತ್ತರವನ್ನು ಸರ್ಕಾರ ಕೊಡುತ್ತದೆ. ತಾವು ಹಿರಿಯ ಸದಸ್ಯರು ಅದನ್ನು ಅರ್ಥ ಮಾಡಿಕೊಳ್ಳಬೇಕು. ಸಂತೋಷ ವಿಷಯವನ್ನು ಸ್ವಾಗತ ಮಾಡುತ್ತೇವೆ. ಕಲಿಯಲು ಸದನಕ್ಕೆ ಬಂದಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಮಾತನಾಡಿದರು. ನಾನು ಕಾನೂನು ವಿದ್ಯಾರ್ಥಿಯಾಗಿದ್ದೆ ಆದರೆ ಮಧ್ಯೆದಲ್ಲಿಯೇ ಬಿಟ್ಟೆ, ಪೂರ್ತಿ ಮಾಡಲಿಲ್ಲ. Trade union activities ನಲ್ಲಿ ಇದ್ದೆ ಅದರಿಂದ ಕಾನೂನು ಪದವಿಯನ್ನು ಪೂರ್ತಿ ಮಾಡಲು ಆಗಲಿಲ್ಲ. ಆದರೆ ಮಾನ್ಯ ವಿರೋಧ ಪಕ್ಷದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾಯಕರಾದ ಎಸ್.ಆರ್.ಪಾಟೀಲ್‌ರವರು ಮಾತನಾಡುವಾಗ ನಾನು ಕಾನೂನಿನ ಕ್ಲಾಸ್‌ನಲ್ಲಿ ಪಾಠ ಕೇಳುತ್ತಿದ್ದೇನೆ ಎನ್ನಿಸಿತು. ಇಡೀ police manual ಹೇಳಿದರು.

**ಶ್ರೀ ಐವನ್ ಡಿ'ಸೋಜಾ:-** ತಾವು ಇನ್ನು young ಆಗಿದ್ದೀರಿ, ಹೀಗಾಗಿ ಈಗಲೂ ತಾವು ಕಾನೂನು ಕಾಲೇಜಿಗೆ ಸೇರಬಹುದು.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಗಳೆ, ಕಲಿಯಲು ಯಾವುದೇ ವಯಸ್ಸಿನ ಮಿತಿ ಇಲ್ಲ ಕಲಿಯುತ್ತೇನೆ. ಐವನ್ ಡಿ'ಸೋಜಾರವರು ನನ್ನ ಒಳ್ಳೆಯ ಸ್ನೇಹಿತ. ಒಬ್ಬ ಒಳ್ಳೆಯ ಸ್ನೇಹಿತನಾಗಿ ನಾನು ಕೈಮುಗಿದು ವಿನಂತಿ ಮಾಡಿಕೊಳ್ಳುತ್ತೇನೆ, ಅವರು ಕೂಡುವ ಕುರ್ಚಿಯಲ್ಲಿ ಏನೊ ಸಮಸ್ಯೆ ಇದೆ. ಅವರಿಗೆ ಕುರ್ಚಿಯಲ್ಲಿ ಕೂಡಲು ಆಗುತ್ತಿಲ್ಲ. ಏನೋ ಚುಚ್ಚುತ್ತಿದೆ. ಆದ್ದರಿಂದ ದಯಮಾಡಿ ಅವರಿಗೆ ಬೇರೆ ಕಡೆ ಜಾಗವನ್ನು ಕೊಡಿ.

**ಸಭಾಪತಿಯವರು:-** ಬೇರೆ ಕಡೆಯೇ ಕೊಡಲಾಗಿತ್ತು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾನಾಯಕರಿಗೂ ಕುರ್ಚಿಯ ಸಮಸ್ಯೆ ಇರಬಹುದು. ಸ್ವಲ್ಪ ಪರಿಶೀಲನೆ ಮಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸ್ನೇಹಿತರಿಗೆ ನ್ಯಾಯ ಕೊಡಿಸಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಗಳೆ, ಭೋಜೆಗೌಡರೆ ನೀವು ಮಾತನಾಡುವಾಗ ನಾನು ಸುಮ್ಮನೆ ಇದ್ದೆ, ನ್ಯಾಯ ಕೊಡಿಸುತ್ತೇವೆ. ರಾಜ್ಯದ ಜನತೆಯ ಕಷ್ಟ-ಸುಖಗಳನ್ನು ನಾವು ಯೋಚನೆ ಮಾಡುವಾಗ, ನನ್ನ ಸಂಗಾತಿಯ ಸಮಸ್ಯೆ ಏನು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ನಮಗೆ ಆಗದಿದ್ದರೆ ಒಂದು ರೀತಿ hypocrite ಅನ್ನಿಸುತ್ತದೆ. ನನ್ನ ಜೊತೆಯಲ್ಲಿರುವವರ ಕಷ್ಟವನ್ನು ಅರ್ಥ ಮಾಡಿಕೊಳ್ಳದೆ ರಾಜ್ಯದ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುತ್ತೇನೆ ಎಂದರೆ ಅದು ಸರಿ ಹೋಗುವುದಿಲ್ಲ. ನಾನು ಮಾನ್ಯ ಐವನ್ ಡಿ'ಸೋಜಾರವರ ಪರವಾಗಿ ಇದ್ದೇನೆ. ಅವರ ಕುರ್ಚಿಯನ್ನು ಒಂದು ಸಾರಿ ಚೆಕ್ ಮಾಡಿಸಿ. ಸರಿ ಇದ್ದರೆ ಅಲ್ಲೇ ಇರಲಿ.

ಮಾನ್ಯ ಎಸ್.ಆರ್.ಪಾಟೀಲ್‌ರವರು ಮಾತನಾಡುವಾಗ ಅವರ ಮಾತನ್ನು ಕೇಳಿ, ನಾನು ಅವರ ಹತ್ತಿರ ಹೋಗಿ ನೀವು ವಕೀಲರಾಗಿದ್ದೀರಾ ಸರ್ ಎಂದು ಕೇಳಿದೆ. ಅದಕ್ಕೆ ಅವರು ಹೌದು ನಾನು practice ಮಾಡುತ್ತಿದೆ, ಮರ್ಡರ್ ಕೇಸ್‌ಗಳನ್ನು ನಡೆಸುತ್ತಿದ್ದೆ ಎಂದು ಹೇಳಿದರು. ಪರಿಸ್ಥಿತಿಯನ್ನು ನಿಭಾಯಿಸುವಾಗ ಪೊಲೀಸ್ ಇಲಾಖೆ ಹೇಗೆ ನಡೆದುಕೊಳ್ಳಬೇಕು, ಲಾಠಿ ಯಾವಾಗ ಉಪಯೋಗಿಸಬೇಕು, ಫೈರಿಂಗ್ ಮಾಡಿದರೆ ಯಾವ smooth part ಗೆ ಹೊಡೆಯಬೇಕು ಎನ್ನುವುದೆಲ್ಲವನ್ನು ಹೇಳಿದರು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ನಾನು ಹೇಳಿದ್ದು ಒಂದು ನೀವು ಹೇಳುತ್ತಿರುವುದು ಒಂದು ರೀತಿ ಆಗಬಾರದು. ಅದಕ್ಕೆ ಮತ್ತೆ ಹೇಳುತ್ತೇನೆ, ಲಾಠಿ ಚಾರ್ಜ್ ಮಾಡುವಾಗ soft portion of the human body ಗೆ ಹೊಡೆಯಬೇಕು. Head or collarbone ಗೆ ಹೊಡೆದರೆ ಸಾಯುವಂತಹ ಚಾನ್ಸ್ ಇರುತ್ತದೆ. ಗುಂಡು ಹೊಡೆದರೆ ಮೊಣಕಾಲ ಕೆಳಗೆ ಹೊಡೆಯಬೇಕು. ತಲೆಗೆ ಗುಂಡು ಹೊಡೆದರೆ ಸಾಯಿಸುವ ಉದ್ದೇಶದಿಂದಲೇ ಹೊಡೆದಿದ್ದಾರೆ ಎಂದು ಹೇಳಬಹುದು. ಸದನದ ಗಮನಕ್ಕೆ ಆ ನಿಯಮಗಳನ್ನು ತರಬೇಕಾಗಿತ್ತು ಅದಕ್ಕೆ ಹೇಳಿದ್ದೇನೆ. ಮಾನ್ಯ ಆಯನೂರು ಮಂಜುನಾಥ್‌ರವರು ನನ್ನ ಹೆಸರನ್ನು refer ಮಾಡಿದ್ದರಿಂದ ಹೇಳುತ್ತಿದ್ದೇನೆ. ಅವರ ಬಗ್ಗೆ ನನಗೆ ಗೌರವವಿದೆ. ಫೈರಿಂಗ್ ಮಾಡಬೇಕಾದರೆ ಏನು ನಿಯಮಗಳನ್ನು ಪಾಲಿಸಬೇಕು, ಫೈರಿಂಗ್ ಆದಮೇಲೆ ಪೊಲೀಸ್ ಇಲಾಖೆಯವರು ಏನು ಮಾಡಬೇಕು ಎನ್ನುವುದಕ್ಕೆ ಪೊಲೀಸ್ ಮ್ಯಾನುವಲ್‌ನಲ್ಲಿ ನಿಯಮಗಳು ಇವೆ. ಈ ನಿಯಮಗಳನ್ನು ನಾನು ಏಕೆ ಹೇಳಿದೆ ಎಂದರೆ, ಈ ಪ್ರಕರಣದಲ್ಲಿ ಪೊಲೀಸ್ ಇಲಾಖೆಯವರು ಆ ನಿಯಮಗಳನ್ನು ಪಾಲನೆ ಮಾಡಿರುವುದಿಲ್ಲ. ಅದಕ್ಕಾಗಿ ಆ ನಿಯಮಗಳನ್ನು ಸದನದ ಗಮನಕ್ಕೆ ತಂದಿದ್ದೇನೆ. ಆದರೆ ನಾನು ಎಲ್‌ಎಲ್‌ಬಿ ಮಾಡಿದ್ದೇನೆ, ವಕೀಲ ವೃತ್ತಿಯಲ್ಲಿದೆ ಎಂದು ಈ ವಿಷಯವನ್ನು ಹೇಳಿರುವುದಿಲ್ಲ. ಮಾನ್ಯ ಆಯನೂರ ಮಂಜುನಾಥ್‌ರವರೆ ತಾವು ಕಾನೂನು ಪದವಿಯನ್ನು ಪೂರ್ತಿ ಕಲಿಯಲಿಲ್ಲವೆ?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಗಳೆ, ಇಲ್ಲ ನಾನು ಅರ್ಧಕ್ಕೆ ಬಿಟ್ಟೆ. ತಾವು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ನನ್ನ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಏನೋ ಹೇಳಿದ್ದಾರೆ ಅದರ ಬಗ್ಗೆ ನನಗೆ ಹೇಳಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಲಹರ್ ಸಿಂಗ್‌ರವರು ಮಧ್ಯೆಯಲ್ಲಿ ಎದ್ದು ಮಾತನಾಡುತ್ತಿದ್ದಾರೆ. ಅವರು ಸಮಸ್ಯೆಯನ್ನು ಬಗೆಹರಿಸಿಬಿಡಬೇಕು. ನಿಮ್ಮ ಸ್ನೇಹಿತರು ಯಾರು ನಿಮಗೆ ಏನು ಅನ್ನುವುದಿಲ್ಲ ಸುಮ್ಮನೆ ಇರಿ.

(ಮುಂದು)

074/19–02–2020/05–50/ಬಿಎಸ್‌ಡಿ–ವಿಕೆ

**ಶ್ರೀ ಎಸ್.ಆರ್. ಪಾಟೀಲ್(ಮುಂದು)**

ಮಾನ್ಯ ಲಹರ್ ಸಿಂಗ್ ರವರು ಪದೇ ಪದೇ ಮಾತನಾಡಲು ಎದ್ದು ನಿಲ್ಲುತ್ತಿದ್ದಾರೆ. ಎಲ್ಲರೂ ನಮ್ಮ ಸ್ನೇಹಿತರೇ ಆಗಿದ್ದು, ಯಾರೂ ಏನೂ ಹೇಳುವುದಿಲ್ಲ. ಅವರು ಆರಾಮವಾಗಿ ಕುಳಿತುಕೊಳ್ಳಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಶ್ರೀಯುತ ಸಿ.ಎಂ. ಇಬ್ರಾಹಿಂ ರವರು ಹೊರಟುಹೋದರು. ಮಾನ್ಯ ಇಬ್ರಾಹಿಂ ರವರು, ಮಾನ್ಯ ದೇವೇಗೌಡರು, ಮಾನ್ಯ ರಾಮಕೃಷ್ಣ ಹೆಗಡೆ ಮತ್ತು ನಾನು ಸೇರಿದಂತೆ ಇತ್ಯಾದಿ ಎಲ್ಲಾ ನಾಯಕರೂ ಒಂದೂವರೆ ವರ್ಷ ರಾಜ್ಯದ ಜೈಲುಗಳಾದ ಬೆಂಗಳೂರು ಸೆಂಟ್ರಲ್ ಜೈಲ್, ಬಳ್ಳಾರಿ ಮತ್ತು ಗುಲ್ಬರ್ಗ ಜೈಲುಗಳಲ್ಲಿ ಇದ್ದೆವು. ಆವತ್ತು ಎಮರ್ಜೆನ್ಸಿಯಲ್ಲಿ ನೋಡಿ ಹೊಡೆಯಬೇಕಾಗಿತ್ತು, ಆದರೆ ನಮಗೆ ಹೊಡೆಯಬಾರದ ಜಾಗಗಳಿಗೆಲ್ಲಾ ಹೊಡೆದರು. ಅವತ್ತು ಈ ಪೊಲೀಸ್ ಮ್ಯಾನ್ಯುಯಲ್ ಇತ್ತು.

**ಶ್ರೀ ಐವನ್ ಡಿ'ಸೋಜಾ:-** ಹಾಗಾದರೆ ಈಗ ಎಮರ್ಜೆನ್ಸಿ ಇದೆ ಎಂದಾಯಿತು. ಅವರು ಈಗ ಒಪ್ಪಿಕೊಂಡು ಬಿಟ್ಟಿದ್ದಾರೆ. ಅಘೋಷಿತ ಪರಿಸ್ಥಿತಿ ಇದೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮಾತುಗಳಿಗೆ ಪ್ರತಿಯಾಗಿ ನಾನು ಬಹಳ ಬೇಗ ಬಾಲ್ ಬಿಸಾಕುತ್ತೇನೆ. ಆಗ ಈ ದೇಶದಲ್ಲಿ ಕಾನೂನು ಇತ್ತು. ಆದರೆ ನಮಗೆ ಏಕೆ ನ್ಯಾಯ ಸಿಗಲಿಲ್ಲ ಎಂದು ದುಃಖ ಆಯಿತು. ಇಷ್ಟೆಲ್ಲಾ ಮ್ಯಾನ್ಯುಯಲ್ ಇದ್ದು, ಆ ಪ್ರಕಾರ ಒಂದು ಇಲಾಖೆ ಮಾಡಬೇಕು ಅಲ್ಲವೇ? ಸದನದಲ್ಲಿ ಏನು ವಿಷಯ ತಂದಿದ್ದೇವೆಯೋ, ಅದರ ಬಗ್ಗೆ ಮಾತ್ರ ಚರ್ಚೆಯಾಗಬೇಕಲ್ಲವೇ? ಅದನ್ನು ಓದಿ, ಕಾನೂನು ಹೀಗೆ ಇದೆ, ಸೆಕ್ಷನ್ ಹೀಗೆ ಇದೆ ಎಂದೆಲ್ಲಾ ಹೇಳಿದರು. ನಮ್ಮ ಅಜೆಂಡಾ ಪೂರ್ತಿಯಾಗದೇ ಚರ್ಚೆ ಏಕೆ ಆ ರೀತಿ ನಡೆಯಿತು? ಏಕೆ ಟ್ರ್ಯಾಕ್ ತಪ್ಪಿಹೋಯಿತು? ಇರಲಿ, ಸಿಎಎ ಬಗ್ಗೆ ಅಲ್ಲಿ-ಇಲ್ಲಿ ಚರ್ಚೆಯಾಗಿದೆ. ಸಿಎಎ ಬಗ್ಗೆ ಯಾರಿಗಾದರೂ ಸಂಶಯ ಅಥವಾ ವಿರೋಧ ಇದ್ದು, ಸದನದಲ್ಲಿ ಚರ್ಚೆಯಾಗಬೇಕು ಎಂದು ಬಯಸುವುದಾದರೆ ವ್ಯಕ್ತಿಗತವಾಗಿ ನಿರ್ಧಾರ ಮಾಡುವುದಲ್ಲ, ಅದನ್ನು ಸದನ ನಿರ್ಧಾರ ಮಾಡಬೇಕು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸಿಎಎ ಬಗ್ಗೆ ಹಿಂದೆ ಮಾನ್ಯ ನೆಹರೂ ರವರು ಏನು ಹೇಳಿದ್ದರು, ಮಹಾತ್ಮ ಗಾಂಧಿ ಮತ್ತು ಶ್ರೀಯುತ ಕೃಷ್ಣ ಮೆನನ್ ರವರು ಏನು ಹೇಳಿದ್ದರು, ಅದರ ಬಗ್ಗೆ ಏನೇನು ಪತ್ರ ಬರೆದಿದ್ದರು, ಭಾರತದಲ್ಲಿ ಮೊದಲನೆಯದಾಗಿ ಹರಿಜನ ವ್ಯಕ್ತಿಯೊಬ್ಬರು ಕಾನೂನು ಸಚಿವರಾಗಿದ್ದರು. ಪಾಕಿಸ್ತಾನದಲ್ಲಿಯೂ ಶ್ರೀಯುತ ಮಂಡಲ್ ರವರು ಸಚಿವರಾಗಿದ್ದರು. ಭಾರತ-ಪಾಕಿಸ್ತಾನ ಇಬ್ಭಾಗವಾದಾಗ ಮಂಡಲ್ ರವರು ಬಹಳ ಪ್ರೀತಿಯಿಂದ ಪಾಕಿಸ್ತಾನದಲ್ಲಿ ಉಳಿದುಕೊಂಡು ನಂತರ ರಾಜೀನಾಮೆ ಕೊಟ್ಟರು. ಯಾವ ಕಾರಣಕ್ಕೆ ರಾಜೀನಾಮೆ ಕೊಟ್ಟರು ಎಂಬುದನ್ನು ಸಿಎಎ ಚರ್ಚೆಗೆ ಅವಕಾಶ ಕೊಟ್ಟರೆ ಹೇಳುತ್ತೇನೆ. ಕಮ್ಯುನಿಷ್ಟ್ ಪಾರ್ಟಿ ಮೀಟಿಂಗ್‌ನಲ್ಲಿ ಏನು ರೆಸಲ್ಯೂಷನ್ ಮಾಡಿತ್ತು ಎಂಬುದನ್ನು ಹೇಳುತ್ತೇನೆ. ನಾನು ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಅಂದಿನ ಪ್ರಧಾನ ಮಂತ್ರಿಗಳು ಒಂದು ಗಮನ ಸೆಳೆಯುವ ಸೂಚನೆಗೆ ಏನು ಉತ್ತರವನ್ನು ಕೊಟ್ಟಿದ್ದಾರೆ ಎನ್ನುವುದನ್ನು ಸಿಎಎ ಏಕೆ ಬಂತು ಎಂಬ ಇತಿಹಾಸವನ್ನು ತೆಗೆದುಕೊಳ್ಳೋಣ. ಇದು ಮೇಲ್ಮನೆಯಾಗಿದ್ದು, ಪ್ರಜ್ಞಾವಂತರು ಹಾಗೂ ಅನುಭವಿಗಳು ಇರುವ ಸದನ. ಕಾನೂನುಗಳನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರೂಪಿಸುವ ಮಾಡುವ ಸದನ. ಅವೆಲ್ಲವುಗಳನ್ನು ಅಧ್ಯಯನ ಮಾಡಿಕೊಂಡು ಸಿಎಎ ತಪ್ಪಾಗಿದ್ದರೆ ತಪ್ಪು ಮತ್ತು ಸರಿ ಇದ್ದರೆ ಸರಿ ಎಂದು ಹೇಳೋಣ. ಅಧ್ಯಯನವನ್ನೇ ಮಾಡದೇ ಪಾರ್ಲಿಮೆಂಟ್‌ನಲ್ಲಿ ಪಾಸ್ ಆದ ಒಂದು ಕಾನೂನಿನ ಬಗ್ಗೆ ಹಗುರವಾಗಿ ಚರ್ಚೆ ಮಾಡುವುದು ಬೇಡ. ಅದಕ್ಕೆ ಅವಕಾಶ ಸಿಕ್ಕರೆ ಬೇರೆ ಸಂದರ್ಭದಲ್ಲಿ ಚರ್ಚೆ ಮಾಡೋಣ. ಅವರೇ ಒಂದು ರೆಸಲ್ಯೂಷನ್ ತೆಗೆದುಕೊಂಡು ಬಂದರೆ ಮತ್ತು ಅದಕ್ಕೆ ಅವಕಾಶ ಸಿಕ್ಕರೆ ಚರ್ಚೆ ಮಾಡೋಣ.

**ಡಾ॥ ಜಯಮಾಲ:–** ಮಾನ್ಯ ಸಭಾಪತಿಯವರೇ, ಬಹಳ ಒಳ್ಳೆಯ ವಿಷಯಗಳನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದಕ್ಕೆ ತಾವು ದಯಮಾಡಿ ಅವಕಾಶ ಮಾಡಿಕೊಡಬೇಕು. ಇಡೀ ದೇಶದಲ್ಲಿ ಭುಗಿಲೆದ್ದಿರುವ ಮತ್ತು ಅತಂತ್ರತೆಯನ್ನು ಕಾಡುತ್ತಿರುವ ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನನ್ನ ಸಹೋದರ ಹಾಗು ಮಾಜಿ ಸಚಿವರೇ ಆ ಪ್ರಸ್ತಾವವನ್ನು ಸದನದ ಮುಂದೆ ತರಲಿ. ನಾನು ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ನಸೀರ್ ಅಹಮದ್ ರವರೇ, ಈ ವಿಷಯದ ಬಗ್ಗೆ ತಾವು ನೋಟೀಸ್ ಕೊಟ್ಟಿಲ್ಲವೇ?

**ಶ್ರೀ ನಸೀರ್ ಅಹ್ಮದ್:–** ನಾನು ನೋಟೀಸ್ ಕೊಟ್ಟಿದ್ದೇನೆ, ಸ್ವಾಗತವನ್ನು ಮಾಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್:–** ನಾನು ಸ್ವಾಗತ ಮಾಡುತ್ತೇನೆ. ಈ ವಿಷಯ ಚರ್ಚೆಗೆ ಬಂದಾಗ ಹಿಟ್ ಅಂಡ್ ರನ್ ರೀತಿ ಸಿಎಎ ಪ್ರಸ್ತಾಪ ಮಾಡುವುದಿಲ್ಲ. ಸಿಎಎ ಎಂದರೆ ಏನು ಎಂದು ನಾನು ಅರ್ಥ ಮಾಡಿಕೊಂಡಿರುವ ರೀತಿಯಲ್ಲಿ ಪ್ರಸ್ತಾಪ ಮಾಡುತ್ತೇನೆ. ಇತಿಹಾಸದ ಪುಟಗಳನ್ನು ಈ ಸದನದಲ್ಲಿ ಕೋಟ್ ಮಾಡುತ್ತೇನೆ. ಈ ವಿಷಯ ಚರ್ಚೆಗೆ ಬಂದಾಗ ಸಮರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಇವತ್ತು ಸಿಎಎ ಪ್ರಸ್ತಾಪ ಮಾಡುವುದಿಲ್ಲ. ನಮ್ಮ ಗೆಳೆಯರಾದ ಶ್ರೀ ರಮೇಶ್ ರವರು ಬಿಜೆಪಿ ಸರ್ಕಾರ ಬಂದರೆ ಮಂಗಳೂರಿನಲ್ಲಿ ಏನೇನೋ ಆಗಿಬಿಡುತ್ತದೆ, ಸಾವು ನೋವುಗಳು ಆಗುತ್ತವೆ ಎಂದು ಮಾತನಾಡಿದರು. ಆದರೆ ಯಾವ ಸರ್ಕಾರ ಬಂದರೂ ಎಲ್ಲಿಯೂ ಏನೂ ಆಗಬಾರದು. ಕಳೆದ ಬಾರಿ ಪ್ರಶಾಂತ್ ಪೂಜಾರಿ ಕೊಲೆಯಾದಾಗ ಬಿಜೆಪಿ ಸರ್ಕಾರ ಇರಲಿಲ್ಲ. ಆಗ ಶ್ರೀ ಕೋಟ ಶ್ರೀನಿವಾಸ ಪೂಜಾರಿ ರವರು ಮಂತ್ರಿಯೂ ಆಗಿರಲಿಲ್ಲ. ಅದೇ ರೀತಿ ಶರತ್ ಮಡಿವಾಳ್ ರವರ ಸಾವು ಆಯಿತು.

**ಶ್ರೀ ಹೆಚ್.ಎಂ. ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ....

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ....

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸದಸ್ಯರು ನಂತರ ಕ್ಲಾರಿಫೈ ಮಾಡಲಿ. ನಾನು ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟರೆ ಸ್ಪಷ್ಟೀಕರಿಸುವ ಎಲ್ಲಾ ಅಧಿಕಾರ ಅವರಿಗೆ ಇದೆ. ನಾನು ಅದನ್ನು ಪ್ರಶ್ನೆ ಮಾಡುವುದಿಲ್ಲ. ಇಲ್ಲದಿದ್ದರೆ ಮಾನ್ಯ ರಮೇಶ್ ರವರು ನಾನು ಏನೇನು ಮಾತನಾಡಬೇಕು ಎಂದು ನನಗೆ ಹೇಳಿಕೊಡುತ್ತಾ ಬರಲಿ, ನಾನು ಅದನ್ನೇ ಪಾಲನೆ ಮಾಡುತ್ತೇನೆ. ಆದರೆ ನನ್ನ ಮಾತಿನ ಸ್ವಾತಂತ್ರ್ಯಕ್ಕೆ ಅಡ್ಡಿ ಬರುವ ಹಕ್ಕು ಅವರ್‍ಯಾರಿಗೂ ಇಲ್ಲ. ಇಲ್ಲದಿದ್ದರೆ ನನ್ನ ಪಕ್ಕಕ್ಕೆ ಬಂದು ನನಗೆ ಹೇಳಿಕೊಡಲಿ. ಅವರು ನನ್ನ ಆತ್ಮೀಯ ಸ್ನೇಹಿತರು. ಅವರು ಹೇಳಿದಂತೆ ಮಾತನಾಡುತ್ತೇನೆ. ಆ ದಿನ ಮಾನ್ಯ ಯು.ಟಿ. ಖಾದರ್ ರವರು ಮಂತ್ರಿಯಾಗಿದ್ದರು. ಕಾಂಗ್ರೆಸ್ ಸರ್ಕಾರ ಇದ್ದಾಗ ಈ ರೀತಿ ಆಗುತ್ತದೆ, ಬಿಜೆಪಿ ಸರ್ಕಾರ ಇದ್ದಾಗ ಇನ್ನೊಂದು ಆಗುತ್ತದೆ ಎಂದ ಶಾಸಕರಾಗಿ ರೆಕ್ಟಿಫೈ ಮಾಡಬಾರದು. ಮಾತನಾಡುವಾಗ ಜವಾಬ್ದಾರಿ ಹೇಳಿಕೆ ಇರಬೇಕು. ಆದರೆ ಅಂತಹ ಘಟನೆಗಳನ್ನು ನಾವು ಸದನದಲ್ಲಿ ನೋಡುತ್ತಿದ್ದೇವೆ. ಆ ಕಡೆಯಿಂದಲೂ ಛಾಯಾ ಚಿತ್ರಗಳ ಪದರ್ಶನ ಆಯಿತು, ಈ ಕಡೆಯಿಂದಲೂ ಆಯಿತು. ಆ ಛಾಯಾ ಚಿತ್ರಗಳನ್ನು ಇವರ್‍ಯಾರೂ ಹೋಗಿ ತೆಗೆದುಕೊಂಡು ಬಂದದ್ದಲ್ಲ. ಯಾರೋ ಮೂರನೆ ವ್ಯಕ್ತಿಗಳು ಕೊಟ್ಟ ಛಾಯಾ ಚಿತ್ರಗಳು. ಟಿ.ವಿ ಗಳಲ್ಲಿ ಪ್ರದರ್ಶನವಾಯಿತು, ಪೊಲೀಸ್ ಇಲಾಖೆ ಬಿಡುಗಡೆ ಮಾಡಿತು, ಕೆಲವು ವ್ಯಕ್ತಿಗಳು ಯಾರೋ ವ್ಯಾಟ್ಸಪ್ ನಲ್ಲಿ ತೆಗೆದುಕೊಂಡಿರಬಹುದು. ನಾವು ತೆಗೆದುಕೊಂಡಿದ್ದನ್ನು ಅವರು ನಂಬುವುದಿಲ್ಲ. ಅವರು ತೆಗೆದುಕೊಂಡಿದ್ದನ್ನು ನಾವು ನಂಬುವುದಿಲ್ಲ. ಆದರೆ ಟಿ.ವಿ ರವರು ಯಾವ ಪಕ್ಷ? ಅವರು ನೇರವಾಗಿ ಲೈವ್ ತೋರಿಸುತ್ತಿದ್ದರು. ಯಾರು ಸಿಸಿ ಟಿವಿ ಗೆ ಅಡ್ಡ ಬರುತ್ತಿದ್ದರು, ಯಾರು ದೊಣ್ಣೆ ಹಿಡಿದುಕೊಂಡಿದ್ದರು, ಯಾರು ಮುಖಕ್ಕೆ ಬಟ್ಟೆ ಕಟ್ಟಿಕೊಂಡಿದ್ದರು. ಇವುಗಳನ್ನೆಲ್ಲ ಯಾರು ತೋರಿಸಿದವರು. ಅದನ್ನು ಬಿಜೆಪಿ ಅವರು ತೆಗೆದುಕೊಂಡಿದ್ದೇ? ಅಥವಾ ಕಾಂಗ್ರೆಸ್‌ನವರು ತೆಗೆದುಕೊಂಡಿದ್ದೇ? ಅಲ್ಲ. ಇದನ್ನು ನೂರಾರು ಮಾಧ್ಯಮಗಳು ತೋರಿಸಿದರು. ಅದರ ಸತ್ಯಸತ್ಯಾತೆಗಳು ಪರಿಶೀಲನೆ ಆಗಲಿ. ಆದರೆ ಆ ನೆಪದಲ್ಲಿ ಎಷ್ಟನ್ನು ನಾವು ಚರ್ಚೆ ಮಾಡಬೇಕು. ಅವರ ಅಭಿಪ್ರಾಯದಲ್ಲಿ ಪೊಲೀಸ್‌ನವರು ತಪ್ಪು ಮಾಡಿದ್ದಾರೆ ಎಂದು ಹೇಳಿದರು. ಆದರೆ ಇದೇ ಪೊಲೀಸ್ ಮುಂಚೆ ಇರಲಿಲ್ಲವೇ? ಕೇವಲ ಆರು ತಿಂಗಳಲ್ಲಿ ಬಿಜೆಪಿ ಪೊಲೀಸ್‌ನವರಾದರೆ? ಆರು ತಿಂಗಳ ಮುಂಚೆ ಇದೇ ಪೊಲೀಸ್‌ನವರು ನಮ್ಮ ವಿರೋಧ ಪಕ್ಷದವರ ಅಭಿಪ್ರಾಯದಲ್ಲಿ ಅತ್ಯಂತ ಸಮರ್ಥರು, ನಿಷ್ಪಕ್ಷಪಾತಿಗಳು, ಕಾನೂನನ್ನು ಪಾಲನೆ ಮಾಡುವವರಾಗಿದ್ದರು. ಆದರೆ ಆರು ತಿಂಗಳಲ್ಲಿ ಕೆಟ್ಟು ಕುಲಗೆಟ್ಟು ಹೋಗಿದ್ದಾರೆ ಎನ್ನುವ ಅಭಿಪ್ರಾಯ ಬರಬಾರದು. ಸರ್ಕಾರ ಯಾವುದೇ ಬಂದರೂ ಅದೊಂದು ವ್ಯವಸ್ಥೆ. ಬಹಳ ಜನ ಶಾಸಕರು ಗನ್‌ಮ್ಯಾನ್‌ಗಳು ಇಲ್ಲದೇ ಓಡಾಡುವ ಸ್ಥಿತಿಯಲ್ಲಿ ಇಲ್ಲ. ನಾವು ಗನ್‌ಮ್ಯಾನ್‌ಗಳನ್ನು ಇಟ್ಟುಕೊಂಡು ಏಕೆ ಓಡಾಡುತ್ತಿದ್ದೇವೆ. ಯಾವ ಪೊಲೀಸ್ ಮೇಲೆ ನಂಬಿಕೆ ಇದೆಯೋ, ಅದೇ ಗನ್‌ಮ್ಯಾನ್ ಸೆಕ್ಯೂರಿಟಿಗೆ ಬೇಕು ಎಂದು ಹೇಳುತ್ತಾರೆ. ಇವತ್ತು ಆ ಸ್ಥಿತಿ ಇದೆ. ಒಂದು ವ್ಯವಸ್ಥೆ ತಪ್ಪಾಗಿದ್ದರೆ ಆ ತಪ್ಪನ್ನು ನಾವೆಲ್ಲರೂ ಸೇರಿ ಒಪ್ಪೋಣ, ಅದನ್ನು ಸರಿಪಡಿಸೋಣ. ಆದರೆ ಟೀಕೆ ಮಾಡುವುದು ಎಷ್ಟು? ಇನ್ನೊಂದು ಸಾರಿ ಆ ಪೊಲೀಸರು ಲಾಠಿ ಎತ್ತಬಾರದು, ಫೈರಿಂಗ್

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬಾರದು, ಕೈ ಅಡ್ಡ ಹಾಕಬಾರದು, ಸುಮ್ಮನೆ ನಿಂತುಕೊಂಡು ನೋಡಬೇಕು ಎಂದು ಬಯಸಿದರೆ ಹೇಗೆ? ಇದೇ ಸದನದಲ್ಲಿ ಪೊಲೀಸರಿಗೆ ಪಿಸ್ತೂಲ್ ಕೊಟ್ಟಿದ್ದು ಏಕೆ? ಗನ್ ಕೊಟ್ಟಿದ್ದು ಏಕೆ? ರಿಸರ್ವ್ ಪೊಲೀಸ್ ಕೊಟ್ಟಿದ್ದು ಏಕೆ? ಈ ರೀತಿ ಆಯಿತಲ್ಲ ಎಂದು ಇದೇ ಸದನದಲ್ಲಿ ಕೇಳುತ್ತಿದ್ದೆವು. ಹಾಗಾಗಿ ತಪ್ಪು–ಒಪ್ಪುಗಳನ್ನು ಮಾಡುವಾಗ ಮೇಲ್ಮಟ್ಟದ ಚರ್ಚೆ ಮಾಡಿದರೆ ಆ ವ್ಯವಸ್ಥೆ ಶಾಶ್ವತವಾಗುತ್ತದೆ. ಅದನ್ನು ಡೀಮಾರಲೈಸ್ ಮಾಡುವುದು ಬೇಡ. ತಪ್ಪಿತಸ್ಥರಿದ್ದರೆ ಅವರನ್ನು ಹ್ಯಾಂಗ್ ಮಾಡೋಣ. ಅದು ಬೇರೆ ವಿಷಯ. ಅವರು ಕಾನೂನಿಗಿಂತ ದೊಡ್ಡವರಲ್ಲ, ಸಂವಿಧಾನಕ್ಕಿಂತ ಅತೀತರಲ್ಲ. ಆದರೆ ಹೇಳುವುದಕ್ಕೆ ಒಂದು ಇತಿ–ಮಿತಿ ಬೇಕಲ್ಲವೇ? ಮಾನ್ಯ ಸಭಾಪತಿಯವರೇ, ತಾವು ಬಹಳ ಪ್ರೀತಿಯಿಂದ ನನಗೆ ಇಂತಹ ಒಂದು ಶಿಕ್ಷೆಯನ್ನು ವಿಧಿಸಿದ್ದೀರಿ. ಅದು ನನಗೂ ಅನಿವಾರ್ಯ ಆಗಿತ್ತು. ಒಂದೇ ವಿಷಯವನ್ನು ನಿನ್ನೆಯಿಂದ ಕೇಳುವಂತೆ ಆಯಿತು. ನಿನ್ನೆಯಿಂದ ಅದೇ ಮಂಗಳೂರು, ಅದನ್ನೇ ಹೇಳುವುದು. ಹೋಗಲಿ, ಬೇರೆ ಬೇರೆ ರೀತಿ ಹೇಳುತ್ತಿದ್ದರೆ? ಇಲ್ಲ. ಹೇಳಿದ್ದೇ ಹೇಳಿಕೊಂಡು ಅದನ್ನೇ ಕೇಳಿ ಕೇಳಿ ಮಾಧ್ಯಮದವರಿಗೂ ಸುಸ್ತಾಗಿ ಹೋಗಿರಬಹುದು. ಏಕೆಂದರೆ ಬಹುಶ: ಮಂಗಳೂರು ವಿಷಯವನ್ನು ಒಂದು ಸಾರಿ ಬರೆದುಕೊಂಡು ಇನ್ನೊಬ್ಬರು ಅದೇ ಮಂಗಳೂರು ವಿಷಯ ಹೇಳಿದರು. ಅದನ್ನು ಬರೆದುಕೊಂಡು ಮೂರನೆಯವರು ಅದನ್ನೇ ಹೇಳಿದರು. ಇನ್ನೊಂದು ಯಾವುದೋ ಶಾಲೆ ವಿಷಯ ಹೇಳಿದರು. ಅದನ್ನೂ ಬರೆದುಕೊಂಡರು. ಆದರೆ ಮಾತನಾಡುವವರೆಲ್ಲರೂ ಅದೇ ಹಾಡು ಹೇಳುತ್ತಿದ್ದರೆ ಕೇಳುವುದು ಹೇಗೆ? ಈ ಸದನಕ್ಕೆ ಅರ್ಥವಾಗುತ್ತದಲ್ಲವೇ? ಆಡಿದ ವಿಷಯವನ್ನೇ ಮತ್ತೆ ಮತ್ತೆ ಆಡುವ ಬದಲಿಗೆ ಹೊಸ ಹೊಸ ವಿಷಯದ ಬಗ್ಗೆ ಬೆಳಕು ಚೆಲ್ಲಿದ್ದರೆ ಎಲ್ಲರನ್ನೂ ಮೀರಿದ್ದ ಸದನ ನಿರ್ಣಯ ತೆಗೆದುಕೊಳ್ಳಬಹುದಾಗಿತ್ತು. ಪೊಲೀಸ್ ಇಲಾಖೆಯು ಹದ್ದುಮೀರಿದ್ದರೆ ಕ್ರಮ ತೆಗೆದುಕೊಳ್ಳಬಹುದಾಗಿತ್ತು.

(ಮುಂದು)

(75)/19.02.2020/6.00/ಹೆಚ್‌ವಿ–ಬಿಎನ್‌ಎಸ್

**ಶ್ರೀ ಆಯನೂರು ಮಂಜುನಾಥ್(ಮುಂದುವರೆದದ್ದು)**

ಅದನ್ನು ಬಿಟ್ಟು 'ಚರ್ವಿತ ಚರ್ವಣ' ಎನ್ನುವ ರೀತಿಯಲ್ಲಿ ಇವರು ಒಂದೇ ವಿಷಯವನ್ನು ಎಳೆದು ಎಳೆದು ಮಾತನಾಡುತ್ತಿದ್ದಾರೆ. ಚೂಯಿಂಗ್ ಗಮ್ ಅನ್ನು ಎಷ್ಟೇ ಅಗಿದರೂ ಇವರಿಗೆ ದವಡೆ ನೋವು ಮಾತ್ರ ಬರಲಿಲ್ಲ. ಮಾನ್ಯ ವಿರೋಧ ಪಕ್ಷದ ಸದಸ್ಯರು ಸದನದಲ್ಲಿ ಯಾವುದೇ ಹೊಸ ವಿಚಾರಗಳ ಬಗ್ಗೆ ಬೆಳಕು ಚೆಲ್ಲಲಿಲ್ಲ. ಅವರುಗಳು ತಂದಿರುವಂತಹ ನಿಲುವಳಿ ಸೂಚನೆಯ ಉದ್ದೇಶ ಈಡೇರಲಿಲ್ಲ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿಲ್ಲ, ಅಭಿವೃದ್ಧಿ ಕುಂಠಿತವಾಗಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ, 'ಪ್ರವಾಹ ಬಂದಾಗ ನಮ್ಮ ಸರ್ಕಾರ ಯಾವ ರೀತಿಯಲ್ಲಿ ಪರಿಹಾರವನ್ನು ನೀಡಿದೆ, ಯಾವಯಾವ ಕ್ರಮಗಳನ್ನು ತೆಗೆದುಕೊಂಡಿದೆ, ರಾಜ್ಯದಲ್ಲಿ ಬರಗಾಲ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎದುರಾದಾಗ ಅದನ್ನು ಯಾವ ರೀತಿಯಲ್ಲಿ ಎದುರಿಸಲಾಯಿತು; ಬಿದ್ದು ಹೋದ ಮನೆಗಳಿಗೆ ಯಾವ ರೀತಿಯಲ್ಲಿ ಪರಿಹಾರವನ್ನು ನೀಡಲಾಯಿತು. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಶಿಕ್ಷಣ ಸಾಲಗಳ ಮಂಜೂರಾತಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಶಿಕ್ಷಣವನ್ನು ಪಡೆಯುತ್ತಿರುವ ಸರಿಸುಮಾರು 1.70 ಲಕ್ಷ ವಿದ್ಯಾರ್ಥಿನಿಯರಿಗೆ ಪೂರ್ಣ ಶುಲ್ಕ ವಿನಾಯಿತಿಯನ್ನು ನೀಡಲಾಗಿದೆ' ಎನ್ನುವ ವಿಚಾರವನ್ನು ಹೇಳಿದ್ದೇವೆ. ಅವರುಗಳು ಎಲ್ಲಿ ಅಭಿವೃದ್ಧಿ ಕುಂಠಿತವಾಗಿದೆ ಎನ್ನುವುದನ್ನು ಹೇಳುವಂತಹ ಸಂದರ್ಭದಲ್ಲಿ ಇವುಗಳನ್ನು ಉಲ್ಲೇಖ ಮಾಡಬಹುದಾಗಿತ್ತು. ಅದನ್ನು ಅವರುಗಳು ಹೇಳಲಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ನಾವು ನಿಯಮ 68ರ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಇನ್ನೂ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಬಂದಂತಹ ಸಂದರ್ಭದಲ್ಲಿ ಅವುಗಳನ್ನು ಉಲ್ಲೇಖ ಮಾಡುತ್ತೇವೆ. ಈಗ ಆ ವಿಷಯ ಬಂದಿಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ 'ಕೊಚ್ಚಿ ಹೋದ ಸೂರು, ನಿಲ್ಲದ ಕೂಗು' ಎನ್ನುವ ಶಿರೋನಾಮೆಯಡಿಯಲ್ಲಿ ಒಂದು ವರದಿ ಪ್ರಕಟವಾಗಿದೆ. ಅದರಲ್ಲಿ ನೀವು ಏನೇನು ಮಾಡಿದ್ದೀರಿ ಎನ್ನುವುದನ್ನು ಬಯಲು ಮಾಡಿದ್ದಾರೆ. ನಾವು ಇನ್ನೂ ರಾಜ್ಯಪಾಲರ ಭಾಷಣದಲ್ಲಿರುವ ವಿಷಯಕ್ಕೆ ಬಂದಿಲ್ಲ.

**(ಮಾನ್ಯ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿಯವರು 'ಪ್ರಜಾವಾಣಿ' ದಿನಪತ್ರಿಕೆಯಲ್ಲಿನ ವರದಿಯನ್ನು ಸದನದಲ್ಲಿ ಪ್ರದರ್ಶಿಸಿದರು)**

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಸನ್ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಯಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರಿ ಅವರುಗಳು ಮಾತನಾಡುತ್ತಿದ್ದ ಸಂದರ್ಭದಲ್ಲಿ ಈ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಈಗ ದಿನಪತ್ರಿಕೆಗಳನ್ನು ಪ್ರದರ್ಶನ ಮಾಡುವುದರಿಂದ ಯಾವ ಉಪಯೋಗವೂ ಆಗುವುದಿಲ್ಲ. ಇದರ ಬಗ್ಗೆ ನಾನು ಗಮನಹರಿಸುವುದಿಲ್ಲ. ಈ ಗಲಭೆಯಿಂದಾಗಿ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ ಎನ್ನುವುದನ್ನು ವಿರೋಧ ಪಕ್ಷದ ಯಾವ ಸದಸ್ಯರೂ ಪ್ರಸ್ತಾಪ ಮಾಡಿಲ್ಲ. ಅವರು ತಂದಿರುವ ನಿಲುವಳಿ ಸೂಚನೆಯ ಉದ್ದೇಶ ವಿಫಲವಾಗಿದೆಯೆಂದು ನಾನು ಸಾದರಪಡಿಸುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ನಾವು ಸಾವಿನ ಬಗ್ಗೆ ಮಾತನಾಡಿದ್ದೇವೆ. ನಂತರ ಅವರು ಉಲ್ಲೇಖ ಮಾಡಿರುವ ಅಂಶಗಳ ಮೇಲೆ ಮಾತನಾಡುತ್ತೇವೆ.

**ಶ್ರೀ ಆಯನೂರು ಮಂಜುನಾಥ್ಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ನಾನು ಒಮ್ಮೆಯೂ ಮಧ್ಯೆ ಎದ್ದು ನಿಂತು ಮಾತನಾಡಿಲ್ಲ. ಅವರು ಮಾತನಾಡುವುದಕ್ಕೆ ಮತ್ತೊಮ್ಮೆ ಅವಕಾಶವನ್ನು ತೆಗೆದುಕೊಳ್ಳಲಿ. ನಾನು ಮಾತನಾಡುವಾಗ ಮಧ್ಯೆ ಎದ್ದು ನಿಂತು ಅವರ ಪಾಂಡಿತ್ಯವನ್ನು ಪ್ರದರ್ಶಿಸುವುದು ಬೇಡ. ಪ್ರತ್ಯೇಕವಾಗಿ ಪ್ರದರ್ಶಿಸಲಿ.

**ಶ್ರೀ ಎಂ.ನಾರಾಯಣಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ನಾನು ಪ್ರತ್ಯೇಕವಾಗಿ ಪ್ರದರ್ಶಿಸುವ ಅಗತ್ಯವಿಲ್ಲ.

**ಶ್ರೀ ಆಯನೂರು ಮಂಜುನಾಥ್ಃ–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತನ್ನು ಪ್ರಬುದ್ಧರ ಸಭೆಯನ್ನಾಗಿ ಪರಿಗಣಿಸಿ ನಾನು ಗೌರವಿಸುತ್ತೇನೆ. ಇಲ್ಲಿ ವಿಚಾರ ಮಂಡನೆ ಮಾಡುವಂತಹ ಸಂದರ್ಭದಲ್ಲಿ ನಮ್ಮ ಪಾಂಡಿತ್ಯದ ಪ್ರದರ್ಶನ ಮಾಡಬೇಕೆಂದು ಬಯಸುತ್ತೇನೆ. ಬೇರೆ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಮಧ್ಯೆ ಎದ್ದು ನಿಂತು ಅವರ ಮಾತನ್ನು ಕೆಡಿಸುವಲ್ಲಿ ನಮ್ಮ ಪಾಂಡಿತ್ಯವಿದೆ ಎಂದು ನಾನು ಭಾವಿಸುವುದಿಲ್ಲ. ವಿಧಾನ ಪರಿಷತ್ತಿಗೆ ‘Red Carpet’ ಹಾಸಲಾಗಿದೆ. ರಾಜಸಭೆಯಲ್ಲಿಯೂ ‘Red Carpet’ ಹಾಕಲಾಗಿದೆ. ಇದರ ಅರ್ಥ ರೆಡ್ ಕಾರ್ಪೆಟ್ ಮೇಲೆ ಓಡಾಡುವ ನಾವು ನಮ್ಮ ನಡವಳಿಕೆಗಳನ್ನು ‘Red Carpet’ ಮೇಲೆ ಮೂಡುವ ಹೆಜ್ಜೆ ಗುರುತುಗಳ ರೀತಿಯಲ್ಲಿ ಇಡಬೇಕೇ ಹೊರತು, ಅದು ಮಾಸಬಾರದು. ಅವರು ತಂದಿರುವ ನಿಲುವಳಿ ಸೂಚನೆಯ ಉದ್ದೇಶ ಚರ್ಚೆಯಲ್ಲಿ ಕಂಡು ಬರಲಿಲ್ಲ. ಹಾಗಾಗಿ ನಿಲುವಳಿ ಸೂಚನೆಯನ್ನು ತಂದಿರುವ ಅವರ ಉದ್ದೇಶ ವಿಫಲವಾಗಿದೆ. ಅದರ ಬದಲಾಗಿ ಸರ್ಕಾರದ ದೋಷಗಳನ್ನು ಎತ್ತಿ ತೋರಿಸಿದ್ದರೆ, ನಾವು ಅತ್ಯಂತ ಸಂತೋಷ ಪಡುತ್ತಿದ್ದೆವು. ‘ನಮ್ಮ ವಿರೋಧ ಪಕ್ಷದ ನಾಯಕರು ಇಂತಹ ಅಂಶಗಳ ಮೇಲೆ ಬೆಳಕನ್ನು ಚೆಲ್ಲಿದ್ದಾರೆ, ಈ ರಾಜ್ಯದ ಹಿತದೃಷ್ಟಿಯಿಂದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ರಾಜ್ಯದ ಜನತೆಯನ್ನು ಅವರು ಪ್ರೀತಿಸುತ್ತಾರೆ. ಅವರು ಈ ರಾಜ್ಯದ ಜನತೆಯ ಪ್ರತಿನಿಧಿಗಳು. ಅವರು ಹೇಳಿರುವಂತಹ ಅಂಶಗಳನ್ನು ಆಯವ್ಯಯದಲ್ಲಿ ಅಳವಡಿಸಿಕೊಳ್ಳಿ’ ಎಂದು ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬಹುದಾಗಿತ್ತು. ಆದರೆ, ಈಗ ‘ಮಾನ್ಯ ಮುಖ್ಯಮಂತ್ರಿಗಳೇ, ಮೂರು ಕಡೆಗಳಲ್ಲಿ ಮಾತ್ರ ಕಾನೂನು ಸುವ್ಯವಸ್ಥೆ ಕುಸಿದಿದೆ ಎನ್ನುವ ಚರ್ಚೆಯಾಗಿದೆ. ಅದನ್ನು ಸರಿಪಡಿಸುವುದಕ್ಕೆ ಯಾವ ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳಿ. ಬೇರೆ ಯಾವುದೇ ರೀತಿಯ ಆತಂಕಪಡುವ ಅವಶ್ಯಕತೆ ಇಲ್ಲ. ಅದರಿಂದಾಗಿ ಅಭಿವೃದ್ಧಿ ಕುಂಠಿತಗೊಂಡಿದೆ ಎಂದು ಮಾನ್ಯ ವಿರೋಧ ಪಕ್ಷದ ಸದಸ್ಯರು ಎಲ್ಲಿಯೂ ಕೂಡ ತಮ್ಮ ಭಾವನೆಯನ್ನು ವ್ಯಕ್ತಪಡಿಸಿಲ್ಲ.’ ಎನ್ನುವ ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವಂತಹ ಕೆಲಸವನ್ನು ನಾವು ಮಾಡಬಹುದು.

“ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸನ್ಮಾನ್ಯ ಸಭಾಪತಿಯವರೇ, ಮಂಗಳೂರಿನಲ್ಲಿ ನಡೆದ ಘಟನೆಯ ಬಗ್ಗೆ ನಾವು ಹೇಳಿರುವುದರಲ್ಲಿಯೂ ಸತ್ಯವಿದೆ, ಅವರು ಹೇಳಿರುವುದರಲ್ಲಿಯೂ ಸತ್ಯವಿರಬಹುದು. ನಾವುಗಳು ಪೋಲೀಸರನ್ನು ಬೈಯುವುದಕ್ಕಿಂತ ಹೆಚ್ಚಾಗಿ ಸ್ವಲ್ಪ ತಾಳ್ಮೆಯಿಂದ ಇರಬೇಕಾಗುತ್ತದೆ. ನಮ್ಮ ಭಾವನೆಗಳನ್ನು ಹೇಳುವಂತಹ ವೇದಿಕೆ ಇದು. ಪೋಲೀಸರು ಮಾಡಿರುವುದು ತಪ್ಪು ಎಂದು ನಮಗೆ ಅನಿಸಿದರೆ, ಅದಕ್ಕಿಂತ ಹೆಚ್ಚಾಗಿ ಯಾರದೋ ವೋಟ್ ಬ್ಯಾಂಕ್ ಅನ್ನು ಗಮನದಲ್ಲಿಟ್ಟುಕೊಂಡು ಅದನ್ನು ಬಾಚಿಕೊಳ್ಳುವ ಪ್ರಯತ್ನ ಮಾಡಲಾಗುತ್ತಿದೆಯೇ ವಿನಃ ನ್ಯಾಯ–ಅನ್ಯಾಯದ ಬಗ್ಗೆ ಇಲ್ಲಿ ಚರ್ಚೆ ಮಾಡಲಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ಇವರು ಗೋಲಿಬಾರ್ ಮಾಡಿಸಿರುವುದು.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್ಃ–** ಸನ್ಮಾನ್ಯ ಸಭಾಪತಿಯವರೇ, ಆ ಕಾರಣಕ್ಕಾಗಿಯೇ ಇವರು ನಿಲುವಳಿ ಸೂಚನೆಯನ್ನು ರಾಜಕೀಯ ಪ್ರೇರಿತವಾಗಿ ತಂದಿದ್ದಾರೆ. ನಿಲುವಳಿ ಸೂಚನೆ ನಮ್ಮ ಪರವಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತವಾಗಿಲ್ಲ ಎಂದು ತೋರಿಸಿಕೊಟ್ಟ ಎಲ್ಲ ಸದಸ್ಯರಿಗೂ ನನ್ನ ಪಕ್ಷದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

**ಸಭಾಪತಿಯವರುಃ–** ನಿಯಮ 68ರ ಮೇರೆಗೆ ನಡೆಯುತ್ತಿದ್ದ ಚರ್ಚೆಯು ಇಲ್ಲಿಗೆ ಮುಕ್ತಾಯಗೊಂಡಿದೆ. ನಾಳೆ ಸರ್ಕಾರದಿಂದ ಉತ್ತರ. ಸಭೆಯನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 6 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 20ನೇ ಫೆಬ್ರವರಿ ಮಾಹೆ 2020ರ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~